ಕರ್ನಾಟಕ ಸರ್ಕಾರ

ಬೋಧ ಒಂದೇ ಬ್ರಹ್ಮನಾದ ಒಂದೇ

ಶಿಶುನಾಳ ಷರೀಫರ ಜೀವನ ಮತ್ತು ಸಂದೇಶ

ಡಾ. ಮಂಜುಳಾ ಮಲ್ಹಾರಿ



ಕನ್ನಡ ಪುಸ್ತಕ ಪ್ರಾಧಿಕಾರ

ಬೋಧ ಒಂದೇ ಬ್ರಹ್ಮನಾದ ಒಂದೇ

(ಶಿಶುನಾಳ ಷರೀಫರ ಜೀವನ – ಸಂದೇಶ)

ಡಾ. ಮಂಜುಳಾ ಅಶೋಕ್‌ಕುಮಾರ್ ಮಲ್ಹಾರಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

BHODHAONDE BRAMHANAADA ONDE : By Dr. Manjula Ashokkumar Malhari Published by B.H. Mallikarjuna, Administrative Officer, Kannada Pustaka Pradhikara, Kannada Bhavana, J.C. Road, Bangalore-560 002

First Impression	:	2012
Pages	:	viii + 212
Copies	:	1000
Price	:	120/–

ಮೊದಲನೆಯ ಮುದ್ರಣ	:	೨೦೧೨
ಪುಟಗಳು	:	viii + ೨೧೨
ಪ್ರತಿಗಳು	:	೧೦೦೦
ಬೆಲೆ	:	೧೨೦/–
ಕರಡು ತಿದ್ದಿದವರು	:	ಲೇಖಕರು

ಪ್ರಕಾಶಕರು
ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು–೫೬೦ ೦೦೨

ಮುದ್ರಕರು
ಚೈತ್ರ ಎಂಟರ್‌ಪ್ರೈಸಸ್
ನಂ.೫೮, ೩ನೇ ಮುಖ್ಯರಸ್ತೆ, ಹೊಸ ತರಗುಪೇಟೆ,
ಬೆಂಗಳೂರು–೫೬೦ ೦೦೨.
ದೂರವಾಣಿ:೨೬೭೦೬೪೯೫ ಸಂಚಾರಿ:೯೮೪೪೧ ೪೬೪೬೪

ಅಧ್ಯಕ್ಷರ ನುಡಿ

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿಯೇ ಸ್ಥಾಪಿತವಾದ ಸರ್ಕಾರದ ಅಂಗಸಂಸ್ಥೆಯಾಗಿದೆ. ಕನ್ನಡದ ಅಪರೂಪದ, ಮೌಲಿಕ, ಗಂಭೀರ ಸ್ವರೂಪದ ಪುಸ್ತಕಗಳನ್ನು ಪ್ರಕಟಿಸುವುದು ಪ್ರಾಧಿಕಾರದ ಹಲವು ಯೋಜನೆಗಳಲ್ಲಿ ಒಂದಾಗಿದೆ. ಅಪರೂಪಕ್ಕೆ ಸೃಜನಾತ್ಮಕ ಸಾಹಿತ್ಯದ ಪ್ರಕಟಣಾ ಕಾರ್ಯವನ್ನು ಕೈಗೆತ್ತಿಕೊಳ್ಳುವುದಾದರೂ, ವಿಶೇಷವಾಗಿ ಜನಪ್ರಿಯ ಸಾಹಿತ್ಯ ಪ್ರಕಾರಕ್ಕೆ ಸೇರದ ಕೃತಿಗಳನ್ನೇ ಅಂದರೆ ವೈದ್ಯ, ವಿಜ್ಞಾನ, ಜೀವನ ಚರಿತ್ರೆ, ಸಾಮಾಜಿಕ ಅಧ್ಯಯನ, ಮುಂತಾದ ಪ್ರಕಾರಗಳಿಗೆ ಸೇರಿದ ಕೃತಿಗಳನ್ನೇ ಪ್ರಕಟಿಸುತ್ತಾ ಬಂದಿದೆ.

ಡಾ. ಮಂಜುಳಾ ಮಲ್ಹಾರಿಯವರ ಕೃತಿ 'ಬೋಧ ಒಂದೇ ಬ್ರಹ್ಮನಾದ ಒಂದೇ' ಶಿಶುನಾಳ ಷರೀಫರ ಬಗ್ಗೆ ರಚಿಸಿರುವ ವಿದ್ವತ್‌ಪೂರ್ಣವಾದ ಕೃತಿ. ಕಳೆದ ಮೂರು–ನಾಲ್ಕು ದಶಕಗಳ ಹಿಂದೆ ಉತ್ತರ ಕರ್ನಾಟಕ ಭಾಗದಲ್ಲಿ ಮಾತ್ರ ಪರಿಚಿತವಾಗಿದ್ದ ಷರೀಫರು ಕನ್ನಡದ ಸುಗಮ ಸಂಗೀತಗಾರರು ಇಡೀ ನಾಡಿಗೆ ಪರಿಚಯಿಸಲಾಗಿ ಇಂದು ಇಡೀ ಕರ್ನಾಟಕದಲ್ಲಿ ಪ್ರಸಿದ್ಧರಾಗಿದ್ದಾರೆ. ಮುಸ್ಲಿಮರಾಗಿ ಜನಿಸಿ, ಹಿಂದೂ ಮುಸ್ಲಿಮರಲ್ಲಿ ಭಾವೈಕ್ಯತೆಯನ್ನು ತೋರಿದ ಮಹಾನುಭಾವರು ಷರೀಫರು. ಈ ಕೃತಿಯಲ್ಲಿ ಲೇಖಕಿ ತತ್ವಪದಗಳ ಉಗಮದಿಂದ ಹಿಡಿದು ಅದು ಬೆಳೆದು ಬಂದ ರೀತಿಯನ್ನು ಸಮಗ್ರವಾಗಿ ಕಟ್ಟಿಕೊಟ್ಟಿದ್ದಾರೆ. ಷರೀಫರ ಜೀವನ ಚರಿತ್ರೆಯಲ್ಲದೆ ಅವರ ತತ್ವಪದಗಳಲ್ಲಿರುವ ಧಾರ್ಮಿಕ, ರಾಜಕೀಯ, ವಿಡಂಬನಾ ಪ್ರಜ್ಞೆಯ ಜೊತೆಗೆ ದೇವರು, ಭಕ್ತಿ ಬದುಕುಗಳನ್ನು ಸಮರ್ಥವಾಗಿ ಚಿತ್ರಿಸುವುದರ ಜೊತೆಗೆ ಷರೀಫರ ಕೃತಿಗಳಲ್ಲಿರುವ ಕಾವ್ಯಗುಣಗಳನ್ನು ಪರಿಚಯಿಸಿದ್ದಾರೆ. ಅವರ ಕಾವ್ಯದಲ್ಲಿರುವ ಅಲಂಕಾರ, ಛಂದಸ್ಸು, ಭಾವ, ಭಾಷೆ, ಶೈಲಿ ಹೀಗೆ ಷರೀಫರನ್ನು ಎಲ್ಲ ದಿಕ್ಕಿನಿಂದ ನೋಡುವ ಲೇಖಕಿಯ ಪ್ರಯತ್ನ ಅಭಿನಂದನೀಯ.

ಈ ಕೃತಿಯ ಪ್ರಕಟಣೆಯಲ್ಲಿ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ, ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ

ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಕನ್ನಡ ವಾಚಕ ಲೋಕ ಈ ಕೃತಿಯನ್ನು ತುಂಬು ಹೃದಯದಿಂದ ಸ್ವಾಗತಿಸಲೆಂದು ಹಾರೈಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

ಲೇಖಕರ ನುಡಿ

'ಶಿಶುನಾಳ ಶರೀಫರ ತತ್ತ್ವಪದಗಳು – ಒಂದು ಸಾಂಸಕೃತಿಕ ಅಧ್ಯಯನ' ಈ ಸಂಶೋಧನಾ ಮಹಾಪ್ರಬಂಧದ ಪರ್ಯಾಯ ಶೀರ್ಷಿಕೆಯೇ 'ಬೋಧ ಒಂದೇ ಬ್ರಹ್ಮನಾದ ಒಂದೇ'.

ಉತ್ತರ ಕರ್ನಾಟಕದ ಗಂಡು ಭಾಷೆಯ ದೇಶಿನೆಲೆಗಟ್ಟಿನ ಶರೀಫರ ಪದಗಳ ಮುಖ್ಯವಸ್ತು ಅಧ್ಯಾತ್ಮವೇ ಆಗಿದ್ದರೂ, ಅವು ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಸೌಹಾರ್ದಿಕವಾಗಿ ಸಂಗೀತಾತ್ಮಕವಾಗುವ ವಿಸ್ಮಯವನ್ನು ಹೊಂದಿವೆ.

ಶರೀಫರು ಮುಸ್ಲಿಂ, ಗುರುಬ್ರಾಹ್ಮಣ, ಅಂಕಿತದೈವ ಲಿಂಗಾಯತ ದೇವರು ಬಸವಣ್ಣ. ಈ ಮೂರು ಧರ್ಮಗಳ ಸಂಗಮವಾದ ಶರೀಫರು, ಕವಿ, ಸಂತ ಹಾಗೂ ತತ್ತ್ವಜ್ಞಾನಿಗಿಂತ ಮುಖ್ಯವಾಗಿ ಮಾನವತಾವಾದಿಗಳಾದರು. ವಚನಕಾರರಂತೆ, ಹರಿದಾಸರಂತೆ ಯಾವ ಧಾರ್ಮಿಕ ನೆಲೆಯಲ್ಲಿ ನೆಲೆನಿಲ್ಲದೇ ಧರ್ಮಾತೀತ ಮತ್ತು ಮತಾತೀತರಾದ ಶರೀಫರು ತಮ್ಮ ಪದಗಳಲ್ಲಿ ಎಲ್ಲ ಧರ್ಮಗಳ ಬೋಧೆ ಒಂದೇ, ಅವುಗಳ ಆತ್ಮನಾದ ಒಂದೇ ಎಂದು ಅರಿತು–

"ಬೋಧ ಒಂದೇ ಬ್ರಹ್ಮನಾದ ಒಂದೇ
ಸಾಧನ ಮಾಡುವ ಹಾದಿ ಒಂದೇ
ಆದಿ ಪಥ ಒಂಧೇ
ಬಿಂದು ಒಂದೇ ನಿಜಾ
ನಂದ ಒಂದೇ
ಶಿಶುನಾಳಧೀಶನ ಭಾಷೆ ಒಂದೇ
ಭವನಾಶ ಒಂದೇ..."

ಎಂದು ಹಾಡಿದರು. ಹೀಗೆ ನಿಜಾನಂದದ ಗೂಡಾರ್ಥ ಹೇಳುವ ಶರೀಫರ ಬಗ್ಗೆ, ಅವರ ಪದಗಳ ಬಗ್ಗೆ ಮೊಳಕೆ ಒಡೆದ ಆಸಕ್ತಿಯನ್ನು ಪೋಷಿಸಿ, ಪಾಲಿಸಿ, ಸಂಶೋಧನೆಗೆ ಮಾರ್ಗದರ್ಶಕರನ್ನು ನೀಡಿ, ಈ ಪ್ರಬಂಧ ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿರುವ ಹಂತಕ್ಕೆ ಏರಿಸಿದವರು ಡಾ. ಸಿದ್ಧಲಿಂಗಯ್ಯ ಅವರು. ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು ಮತ್ತು ಕೃತಜ್ಞತೆಗಳು.

ಸಂಶೋಧನಾ ಕ್ಷೇತ್ರದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡಿ, ಸಂಶೋಧನೆ ಮುಗಿಯುವವರೆಗೆ ಸಹಕರಿಸಿದ ಡಾ. ನೀಲಮ್ಮರವರಿಗೆ, ಪುಸ್ತಕ ಹೊರಬರಲು ಸಹಕರಿಸಿದ ಪುಸ್ತಕ ಪ್ರಾಧಿಕಾರದ ಪದಾಧಿಕಾರಿಗಳಿಗೆ ನನ್ನ ನಮನಗಳೊಂದಿಗೆ ಕೃತಜ್ಞತೆಗಳು.

ದೇಶಿ ಪರಿಸರದಲ್ಲಿ ಬೆಳೆದ ನನ್ನ ಬಾಳ ಸಂಗಾತಿ ಶ್ರೀ ಅಶೋಕಕುಮಾರ ಮಲ್ಹಾರಿಯವರು ಶರೀಫರ ಪದಗಳ ಅರ್ಥ, ಆಳಗಳನ್ನು ಅರಿಯಲು ಸಹಕರಿಸಿದ್ದಾರೆ. ಕ್ಷೇತ್ರ ಕಾರ್ಯದಲ್ಲಿ ಸಹಾಯ ಹಸ್ತ ನೀಡಿದ್ದಾರೆ. ಅವರಿಗೆ ನಾನು ಚಿರಋಣಿಯಾಗಿದ್ದೇನೆ.

ಅಧ್ಯಾತ್ಮ ಅಪಾರ ಆಸಕ್ತಿ ಹೊಂದಿರುವ ಮಾತೃಸ್ವರೂಪಿ ನನ್ನತ್ತೆಯವರೊಂದಿಗೆ ಅನೇಕ ವಿಷಯಗಳನ್ನು ಚರ್ಚಿಸಿದ್ದೇನೆ. ಅವರಿಗೆ ನನ್ನ ನಮನಗಳು. ನಿವಾರಿಸಿ, ಹಲವಾರು ಸಲಹೆ, ಸೂಚನೆಗಳನ್ನಿತ್ತು, ಕೊನೆಯ ರೂಪಕ್ಕೆ ತಂದು ಕೊಟ್ಟ ಸಹೃದಯ ಶ್ರೀ ಚಂದ್ರಶೇಖರ ವಸ್ತ್ರದ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಸಂಶೋಧನೆಯ ಆರಂಭದಲ್ಲಿ ಹಿರಿಯಣ್ಣನಂತೆ ಮಾರ್ಗದರ್ಶನ ನೀಡಿದ ಶ್ರೀಯುತ ಚನ್ನಣ್ಣ ವಾಲೀಕಾರರವರಿಗೆ ನಮನಗಳು. ಚೈತನ್ಯದ ಚಿಲುಮೆಯಾದ ಡಾ. ಸಮತಾ ದೇಶಮಾನೆಯವರ ಸಹಾಯಹಸ್ತ ಮತ್ತು ಹಿತನುಡಿಗಳಿಗೆ ಕೃತಜ್ಞಳಾಗಿದ್ದೇನೆ.

ಶರೀಫರ ಸಮಕಾಲೀನರಾದ ನನ್ನ ತಾತ ಶರಣ ಶಿವಬಸಪ್ಪ ಜೇರಗ್ಯಾಳ ಇವರು ಭಜನೆಯಲ್ಲಿ ಹಾಡುತ್ತಿದ್ದ ಶರೀಫರ ಪದಗಳನ್ನು ಅಜ್ಜಿ ಮಾಣಿಕಾಬಾಯಿ ಮತ್ತು ತಾಯಿ ಶ್ಯಾಮಲಾಬಾಯಿ ಪಾಂಡುರಂಗ ಜೇರಗ್ಯಾಳ ಇವರು ಮನೆಯಲ್ಲಿ ಹಾಡುತ್ತಿದ್ದರು. ಶರೀಫರ ಪದಗಳ ಬಗೆಗೆ ನನ್ನಲ್ಲಿ ಮೊಟ್ಟಮೊದಲ ಆಸಕ್ತಿ ಮತ್ತು ಕುತೂಹಲವನ್ನು ಮೂಡಿಸಿದ ಇವರೆಲ್ಲರನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ.

ನನ್ನ ಸಂಶೋಧನಾ ಕೃತಿಯ ಬಗ್ಗೆ ಸದಾ ಆಸಕ್ತಿಯಿಂದ ತೋರಿಸುತ್ತಿದ್ದ ಮಕ್ಕಳಾದ ಕುಮಾರಿ ಅರ್ಚನಾ, ಅನೂಷಾ ಮತ್ತು ದಿವ್ಯಶ್ರೀ, ಸೋದರಿಯರಾದ ರೇಣುಕಾ ಮತ್ತು ಡಾ. ದೇವಿಕಾ, ಸೋದರರಾದ ವಿಜಯಕುಮಾರ, ರಮೇಶ, ರವೀಂದ್ರ ಮತ್ತು ಸಿದ್ಧಾರ್ಥ ಇವರಿಗೆಲ್ಲ ನನ್ನ ಕೃತಜ್ಞತೆಗಳು. ಹಸ್ತ ಪ್ರತಿಯನ್ನು ತಿದ್ದಲು ಸಹಾಯ ಮಾಡಿದ ಗೆಳತಿ ಕಲ್ಪನಾ ಹೆಚ್.ಎಚ್. ಮತ್ತು ನನ್ನ ವಿದ್ಯಾರ್ಥಿಗಳಿಗೆ ಕೃತಜ್ಞತೆಗಳು.

ಈ ಕೃತಿಗೆ ಸುಂದರವಾಗಿ ಮತ್ತು ಅರ್ಥಪೂರ್ಣವಾದ ಮುಖಪುಟ ವಿನ್ಯಾಸ ಮಾಡಿ ಕೊಟ್ಟ ಮುರಳೀಧರ ರಾಥೋಡ ಅವರಿಗೆ ಹಾಗೂ ಪಮಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಮುದ್ರಕರಾದ ಚೈತ್ರ ಪ್ರಿಂಟರ್ಸ್ ಅವರಿಗೆ ನನ್ನ ಕೃತಕ್ಞತೆಗಳು.

ಕೊನೆಯದಾಗಿ ಈ ಪುಸ್ತಕವನ್ನು ನನ್ನ ಇಷ್ಟದೈವ 'ಶ್ರೀ ಸಾಯಿ' ಚರಣಾರವಿಂದಗಳಲ್ಲಿ ನಮ್ರವಾಗಿ ಅರ್ಪಿಸುತ್ತೇನೆ.

–ಡಾ. ಮಂಜುಳಾ ಅಶೋಕ್‌ಕುಮಾರ್ ಮಲ್ಹಾರಿ

ಪರಿವಿಡಿ

ಅಧ್ಯಾಯ ೧

ತತ್ತ್ವಪದಗಳ ಪರಂಪರೆ

೧.೧. ತತ್ತ್ವಪದಗಳ ಉಗಮ ಮತ್ತು ವಿಕಾಸ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಮಹತ್ವ ಪಾತ್ರ ವಹಿಸುವ ಅನುಭಾವಿ ತತ್ತ್ವಪದಗಳಿಗೆ ಕನ್ನಡ ನಾಡಿನಲ್ಲಿ ಸಾವಿರಾರು ವರ್ಷಗಳ ಪರಂಪರೆಯಿದೆ. "ಮೌಖಿಕ ಪರಂಪರೆಯಲ್ಲಿ ತತ್ತ್ವಪದಗಳು ಅಥವಾ ಅನುಭಾವ ಕಾವ್ಯಗಳು ಬಿಡಿ ಬಿಡಿಯಾಗಿಯೇ ಅಂದಂದಿಗೆ ಸೃಷ್ಟಿಯಾಗಿ, ಹಾಡಿಮುದನ್ನು ಕೇಳಿ ನೆನಪಿನಿಂದ ಮತ್ತೆ ಮತ್ತೆ ಹಾಡಿ ಹೀಗೆ ಎಷ್ಟೋ ಕಾಲ ಹಾಡುಗಳ ರಚನೆ ನಡೆದು ಕಂಠಪಾಠವಾಗಿಯೇ ಸಾಗಿ ಬಂದು ಪರಂಪರೆಯಾಯಿತು. ಅದೇ ಹಾಡುಗಬ್ಬ ಪರಂಪರೆ."[1] ಈ ಹಾಡುಗಬ್ಬದ ಒಂದು ಮಹತ್ವದ ಭಾಗ ತತ್ತ್ವಪದಗಳು. ತತ್ತ್ವಪದಗಳಿಗೆ ಮೂಲ ಪ್ರೇರಣೆಯಾದ ಜನಪದ ಹಾಡುಗಳು ಒಂದು ನಾಡಿನಿಂದ, ಒಂದು ಭಾಷೆಯಿಂದ, ಇನ್ನೊಂದು ನಾಡಿಗೆ, ಭಾಷೆಗೆ ಪ್ರಭಾವ ಬೀರುತ್ತ ತನ್ನ ನಾಡಿನ ಭಾಷೆಯ ಸಂಸ್ಕೃತಿಯಲ್ಲಿ ಮಾರ್ಪಾಡು ಹೊಂದಿ ಜನತೆಯ ನಾಲಗೆಯ ಮೇಲೆ ಉಳಿದುಕೊಂಡು ಬಂದವು. ಇವು ಎಲ್ಲಿ, ಯಾವಾಗ, ಎಂದು ರಚನೆಗೊಂಡವು ಎಂದು ಸ್ಪಷ್ಟವಾಗಿ ಹೇಳುವುದು ಆಗುವುದಿಲ್ಲ.

ಭಾರತೀಯ ಭಕ್ತಿಪಂಥಗಳಿಗೆಲ್ಲ ಪ್ರೇರಕವಾಗಿದ್ದ ತಮಿಳು ನಾಯನ್ನಾರ್ ಭಕ್ತಿಪಂಥದ ಶಿವಭಕ್ತರು ೬ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಇದ್ದರು. ಅವರು 'ತೇವಾರಂ'ಗಳನ್ನು ಸುಮಧುರವಾಗಿ ಹಾಡುತ್ತಿದ್ದರು. ಸಂಗೀತಮಯವಾದ ಈ ಭಕ್ತಿಗೀತೆಗಳ ಪ್ರಭಾವ ಕನ್ನಡ ದೇಶೀ ತತ್ತ್ವಪದಗಳ ಮೇಲೆ ಮತ್ತು ಬಸವಪೂರ್ವಯುಗದ ಶರಣರ ಮೇಲಾಯಿತು. ಜನಪದ ತತ್ತ್ವಪದ ಮತ್ತು ಶಿಷ್ಟ ತತ್ತ್ವಪದ ಎಂಬ ಎರಡು ಕವಲಾದವು. ಜನಪದ ತತ್ತ್ವಪದಗಳು ಇಂದಿನ ಭಜನೆಯ, ಅನುಭಾವದ ತತ್ತ್ವಪದಗಳಾಗಿ ಶಿವಶರಣರ ಪೂರ್ವದಲ್ಲಿಯೂ ಇದ್ದವು. ಸಾಮಾನ್ಯ ಜನರ ಮೌಖಿಕ ವಲಯದಲ್ಲಿಯೇ ಅವು ಬದುಕುತ್ತ ಬಂದಿವೆ. ೧೧-೧೨ನೇ ಶತಮಾನದಲ್ಲಿ ಶಿವಶರಣರಿಂದ ಶಿವತತ್ತ್ವಗೀತೆಗಳು ರಚಿತವಾಗಿ

---

೧. ಸಾ.ಶಿ.ಮರುಳಯ್ಯ 'ಅಭಿಜ್ಞ' ಪು. ೧೬೮.

ಲೌಕಿಕ ಮತ್ತು ಪಾರಮಾರ್ಥಿಕ ಚೌಕಟ್ಟಿನಲ್ಲಿ ಪ್ರಕಟವಾಗಿವೆ. ಇವುಗಳನ್ನು ಹಾಡುವುದರಿಂದ[೫] ರೂಪದ ದೃಷ್ಟಿಯಿಂದ ಸ್ವರವಚನಗಳನ್ನು 'ಹಾಡು'ಗಳೆಂದೂ, ವಸ್ತುವಿನ ದೃಷ್ಟಿಯಿಂದ 'ತತ್ತ್ವಪದ'ಗಳೆಂದೂ, ಉದ್ದೇಶಿತ ಅತ್ಯಂತಿಕ ಗುರಿಯ ದೃಷ್ಟಿಯಿಂದ 'ಕೈವಲ್ಯಪದ'ಗಳೆಂದೂ ಕರೆಯುತ್ತಾರೆ. ಶರಣ ಸಂಸ್ಕೃತಿಯ ಪಡಿಯಚ್ಚಿನಲ್ಲಿ ರಚಿತವಾದ ತತ್ತ್ವಪದಗಳಿಗೆ 'ಸ್ವರವಚನ'ಗಳೆಂಬ ಹೆಸರು ರೂಢಿಯಲ್ಲಿ ಬಳಕೆಯಾಗಿದೆ. ವಿಶಾಲ ವ್ಯಾಪ್ತಿಯುಳ್ಳ ಸ್ವರವಚನ ಪರಂಪರೆಯನ್ನು ಈ ರೀತಿಯಾಗಿ ವಿಂಗಡಿಸಬಹುದಾಗಿದೆ.

೧. ಬಸವಪೂರ್ವ ಸ್ವರವಚನಗಳು
೨. ಬಸವಾದಿ ಶರಣರ ಸ್ವರವಚನಗಳು
೩. ನಿಜಗುಣ ಶಿವಯೋಗಿಗಳ ಸ್ವರವಚನಗಳು
೪. ಆಧುನಿಕ ಸ್ವರವಚನಗಳು

ಬಸವಪೂರ್ವ ಕಾಲದಲ್ಲಿ ವೀರಶೈವ ಧರ್ಮ ಅಸ್ತಿತ್ವದಲ್ಲಿದ್ದು, ಅನೇಕ ಜನ ಶರಣ-ಶರಣೆಯರು ವಚನಗಳನ್ನು ರಚನೆ ಮಾಡುತ್ತಿದ್ದರು. ಹಿರಿಯ ಶಿವಶರಣರಾದ ಜೇಡರ ದಾಸಿಮಯ್ಯನು ತನ್ನ ವಚನದಲ್ಲಿ "...ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ" ಎಂದಿದ್ದಾನೆ. ಈ ಸಾಲಿನಿಂದ, ಬಸವಪೂರ್ವ ಯುಗದಲ್ಲಿ ವೀರಶೈವ ಧರ್ಮವು ಪ್ರಭಾವಶಾಲಿಯಾಗಿದ್ದು, ಶಿವಶರಣರು ವಚನ ರಚನೆಗೈಯುವುದರೊಂದಿಗೆ ಶಿವಗೋಷ್ಠಿಗಳನ್ನು ನಡೆಸುತ್ತಿದ್ದರೆಂಬ ವಿಷಯ ತಿಳಿದು ಬರುತ್ತದೆ.

[೬]"ಬಸವಪೂರ್ವ ಕಾಲದಲ್ಲಿ ೨೩ ಜನ ವಚನಕಾರರಿದ್ದರು (೫ ಜನ ಶರಣೆಯರು, ೧೮ ಜನ ಶರಣರು) ಇಬ್ಬರು ಕವಿಗಳಿದ್ದರು ಎಂದು ಶಾಂತರಸರು ಅಭಿಪ್ರಾಯಪಡುತ್ತಾರೆ. ಆದರೆ ಬಸವಪೂರ್ವ ಯುಗದ ಸ್ವರವಚನಗಳು ಲಭ್ಯವಿಲ್ಲ. ಬಸವಣ್ಣನವರ ಹಿರಿಯ ಸಮಕಾಲೀನರಾದ ಜೇಡರ ದಾಸಿಮಯ್ಯ (೧೧೩೦) ಮತ್ತು ಸಕಲೇಶ ಮಾದರಸರ (೧೧೩೦) ಸ್ವರ ವಚನಗಳು ಲಭ್ಯವಿರುವುದರಿಂದ ಇವು ಕನ್ನಡ ಸಾಹಿತ್ಯದ ತತ್ತ್ವಪದ ಪರಂಪರೆಯಲ್ಲಿ ಶಿಷ್ಟ ಸಂಪ್ರದಾಯದ, ವೀರಶೈವ ಧರ್ಮದ ಮೊದಲ ತತ್ತ್ವಪದಗಳಾಗಿವೆ ಎನ್ನಬಹುದು. ಇತರ ವಚನಗಳಿಗಿಂತ ಭಿನ್ನವಾದ, ಸಂಗೀತ ಸಾಮರಸ್ಯವನ್ನು ಹೊಂದಿದ, ಹಾಡಲು ಬರುವ

ಆಧ್ಯಾತ್ಮಗೀತೆಗಳಾದ ಈ ವಚನಗಳೇ ಮೊದಲ ಸ್ವರವಚನಗಳಾಗಿವೆ ಎನ್ನಬಹುದು. ಹಾಗಾಗಿ ಸಕಲೇಶ ಮಾದರಸ ಮತ್ತು ಜೇಡರ ದಾಸಿಮಯ್ಯ ಇವರೇ ಆದ್ಯ ಸ್ವರವಚನಕಾರರು ಎಂಬುದು ತಿಳಿಯಬಹುದಾಗಿದೆ.

೧೨ನೇ ಶತಮಾನದ ಬಸವಣ್ಣನವರ ಕಾಲದಲ್ಲಿ ಶಿವಶರಣರು ಅಪಾರ ಸಂಖ್ಯೆಯಲ್ಲಿ ವಚನಗಳನ್ನು ರಚಿಸಿದರು. ಗದ್ಯ-ಪದ್ಯ ಮಿಶ್ರಿತ ಈ ವಿನೂತನ ಶೈಲಿ ಕನ್ನಡ ಸಾಹಿತ್ಯದಲ್ಲಿ ಅನನ್ಯವಾಗಿದೆ. ಈ ವಿಶಿಷ್ಟವಾದ ವಚನಗಳ ಜೊತೆಗೆ ಕಾವ್ಯಮಯವಾದ ಗೀತೆಗಳನ್ನು ರಚಿಸಿದರು. ರಾಗ-ತಾಳ, ಲಯ ಮಟ್ಟುಗಳಿಂದ ಕೂಡಿದ ಈ ಸ್ವರವಚನಗಳು ಮುಂಬರುವ ಎಲ್ಲ ಸಂಗೀತ ಕೃತಿಗಳಿಗೆ ಬುನಾದಿಯಾದವು.

ಹದಿನಾರನೆಯ ಶತಮಾನದಲ್ಲಿಯ ಹರಿದಾಸ ಸಾಹಿತ್ಯದಲ್ಲಿರುವ ಸಂಗೀತದ ಎಲ್ಲ ಲಕ್ಷಣಗಳನ್ನು ಹೊಂದಿದ್ದ ಸ್ವರವಚನಗಳು ೧೧ನೇ ಶತಮಾನದಲ್ಲಿಯೇ ಶಿವಶರಣರಿಂದ ರಚಿಸಲ್ಪಟ್ಟಿದ್ದವು. ಆದ್ದರಿಂದ ವೀರಶೈವ ಶರಣರೇ ಆದ್ಯ ಸಂಗೀತಕಾರರು ಮತ್ತು ಆದ್ಯ ಸ್ವರವಚನಕಾರರು. ಬಸವಾದಿ ಶರಣರಲ್ಲಿ ಸ್ವರ ವಚನಕಾರರಿದ್ದು, ೩೫೦ಕ್ಕೂ ಹೆಚ್ಚು ಸ್ವರವಚನಗಳನ್ನು ರಚಿಸಿರುವರು. ಜೇಡರ ದಾಸಿಮಯ್ಯ, ಸಕಲೇಶ ಮಾದರಸ, ಬಸವಣ್ಣ, ಸಿದ್ಧರಾಮಯ್ಯ ನೀಲಮ್ಮ, ಬಹುರೂಪಿ ಚೌಡಯ್ಯ, ಬಾಚರಸ, ಅಮುಗಿದೇವಯ್ಯ, ಹಂಪಯ್ಯ, ಹಾವಿನಾಳ ಕಲ್ಲಯ್ಯ, ಆದಯ್ಯ ಮುಂತಾದವರು ರಚಿಸಿದ ಸ್ವರವಚನಗಳು ಸ್ತೋತ್ರವಾಗಿ, ಪ್ರಾರ್ಥನೆಯಾಗಿ, ಸಂದೇಶವಾಗಿ, ಭಕ್ತಿ, ಜ್ಞಾನ, ವೈರಾಗ್ಯದ ಬೋಧನೆಯ ವಿಷಯಗಳನ್ನು ಒಳಗೊಂಡಿವೆ. ವೀರಶೈವ ಮತದ ತತ್ತ್ವಗಳಾದ ಅಷ್ಟಾವರಣ, ಷಟ್‌ಸ್ಥಲ, ಏಕೋತ್ತರ ಷಟ್‌ಸ್ಥಲ, ಮೊದಲಾದ ಧರ್ಮಾಚರಣೆಯ ಪ್ರಕ್ರಿಯೆಯೊಂದಿಗೆ ಲೋಕ ನೀತಿ, ಅನುಭಾವ, ಯೋಗ, ಶರಣಸತಿ ಲಿಂಗಪತಿ, ಕೈವಲ್ಯ ವಿಷಯಗಳನ್ನು ಸ್ವರವಚನಗಳು ಹೊಂದಿವೆ. ವಚನಗಳಲ್ಲಿ ಸರಳೀಕರಣಗೊಂಡ ತತ್ತ್ವ ವೈಚಾರಿಕತೆಯು ನೇರವಾಗಿ ಜನರ ಮನ ಮುಟ್ಟುವಂತೆ, ಸ್ವರ ವಚನಗಳಲ್ಲಡಗಿರುವ ಆಧ್ಯಾತ್ಮ ಜನಸಾಮಾನ್ಯರನ್ನು ತಲುಪಲಿಲ್ಲ. ಇದರಿಂದ ಸ್ವರವಚನಗಳು ಹೆಚ್ಚು ಪ್ರಚಾರವನ್ನು ಪಡೆಯದೇ ವಚನಗಳು ಮಾತ್ರ ಹೆಚ್ಚು ಹೆಚ್ಚು ಜನಪ್ರಿಯವಾದವು.

ಬಸವಣ್ಣನವರ ಕಾಲದಲ್ಲಿ ಸ್ವರವಚನ ಬರೆದ ಕವಿಗಳು ಸಮಾಜದ ವಿವಿಧ ಸ್ತರಗಳಿಂದ ಬಂದವರಾಗಿದ್ದರೂ, ಅವರ ಅನುಭಾವ ಪದಗಳು ವೀರಶೈವ ಧರ್ಮ ಸಿದ್ಧಾಂತಕ್ಕೆ ಮೀಸಲಾದವು. ೧೧-೧೨ನೇ ಶತಮಾನದ ಅನುಭಾವಿಗಳು

ಲೋಕಾನುಭವದ ಮೂಲಕ ಶಿವಾನುಭವವನ್ನು ಸಾಧಿಸಿದ್ದು ವಿಶಿಷ್ಟವಾಗಿದೆ. ಇತರ ಅನುಭಾವಿಗಳು ಲೋಕಾನುಭವವನ್ನು ನಿರ್ಲಕ್ಷಿಸಿದರು. ಆಧ್ಯಾತ್ಮಕ್ಕೆ ಬೆಲೆ ಕೊಟ್ಟರು.

ಕೇವಲ ಭಗವಂತನ ಸಾಕ್ಷಾತ್ಕಾರ ಮಾತ್ರ ಉದ್ದೇಶವಾಗಿರದೇ ತಮ್ಮ ಅರಿವನ್ನು ವಿಸ್ತರಿಸಿಕೊಂಡು ಲೋಕದಲ್ಲಿ ಬಾಳುವುದು, ಆಧ್ಯಾತ್ಮ ಸಾಧಿಸುವುದು ಸ್ವರವಚನಕಾರರ ಸಾಹಿತ್ಯ ಸಂದೇಶವಾಗಿದೆ. ವಚನಗಳು ಮಾನವನ ಕಲ್ಯಾಣಕ್ಕಾಗಿ ದುಡಿದರೆ, ಸ್ವರವಚನಗಳು ವೀರಶೈವ ತತ್ತ್ವಗಳಾದ ಅಷ್ಟಾವರಣ, ಷಟ್‌ಸ್ಥಲ ಲಿಂಗಾಂಗ ಸಾಮರಸ್ಯದಂಥ ಆಧ್ಯಾತ್ಮಿಕ ತತ್ತ್ವಗಳನ್ನು ಒಳಗೊಂಡು ಲಿಂಗಾಯತ ಧರ್ಮ ಪ್ರಸಾರಕ್ಕಾಗಿ ಶ್ರಮಿಸಿದೆ.

೧.೨ ಹದಿನಾರನೆಯ ಶತಮಾನದ ನಿಜಗುಣ ಶಿವಯೋಗಿಗಳ ಕಾಲ

ವಚನಗಳ ರಚನೆ ಕಾಲದಲ್ಲಿ ಇಳಿಮುಖವಾಗಿದ್ದ ಸ್ವರವಚನಗಳು, ವಚನ ರಚನೆಯು ಕುಂಠಿತಗೊಂಡ ಕಾಲದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸೃಷ್ಟಿಯಾಗಿರುವುದನ್ನು ಕಾಣುತ್ತೇವೆ. ಇದಕ್ಕೆ ಮುಖ್ಯ ಕಾರಣ ಬಸವೋತ್ತರ ಯುಗದ ಸ್ವರಚನಗಳು ದೇಶೀ ಸಂಗೀತದ ಪ್ರಭಾವವನ್ನು ಹೊಂದಿ ಜಾನಪದ ಧಾಟಿಯನ್ನು ಅಳವಡಿಸಿಕೊಂಡು ಸರಳೀಕೃತವಾಗಿ ಹೊರಬಂದುದು ಎನ್ನಬಹುದು.

ಜನಪದ ಹಾಡುಗಾರರು ಈ ಹಾಡುಗಬ್ಬದ ಸರಳತೆ, ಗೇಯತೆಯಿಂದಾಗಿ ಭಜನಾ ಮೇಳಗಳಲ್ಲಿ ಹಾಡಿ ಭಜನಾ ಪದವಾಗಿಸಿದರು. ಏಕತಾರಿಯೊಂದಿಗೆ ಹಾಡಿ ಏಕತಾರಿ ಪದವಾಗಿಸಿದರು. ದೇಶೀ ಮತ್ತು ಶಿಷ್ಟ ಎರಡೂ ವಲಯಗಳಲ್ಲಿ, ಬಸವೋತ್ತರ ಕಾಲದ ಈ ತತ್ತ್ವಪದಗಳು ವಿಪುಲವಾಗಿ ಬೆಳೆದವು.

ಬಸವಾದಿ ಪ್ರಮಥರ ಈ ಹಾಡುಗಬ್ಬ ಸಂಪ್ರದಾಯವನ್ನು ಬೆಳೆಸಿದವರು ಹರಿಹರ, ರಾಘವಾಂಕ, ನೂರೊಂದು ವಿರಕ್ತರು, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಬಾಲಲೀಲಾ ಮಹಂತ ಶಿವಯೋಗಿ, ಮೈಲಾರ ಬಸವಲಿಂಗ ಮೊದಲಾದವರು. ಬಸವಾದಿ ಶರಣರ ತರುವಾಯ ಮಠೀಯ ಪರಂಪರೆಯು ಬೆಳೆಯತೊಡಗಿ ಮಠದ ಶಿವಯೋಗಿಗಳು ರಚಿಸಿದ ತತ್ತ್ವಪದಗಳು 'ಕೈವಲ್ಯ ಪದ'ಗಳಾದವು.

ಪರಂಪರೆಯ ಜೀವನಾಡಿಯನ್ನು ಗುರುತಿಸಿ ಲಿಖಿತ ಪರಂಪರೆಯ ಅನುಭಾವ ಸಾಹಿತ್ಯದಲ್ಲಿ ಅದರ ಪ್ರತಿಸೃಷ್ಟಿ ಮಾಡಿದ ಶ್ರೇಯಸ್ಸು ಹಾಡುಗಬ್ಬದ ಶಿಖರ ಪ್ರಾಯ ಕವಿ ನಿಜಗುಣ ಶಿವಯೋಗಿಗಳದು."[೪] ಪರಮ ವೈರಾಗ್ಯದ ಮೂರ್ತಿಯಾದ ನಿಜಗುಣರು ವೈರಾಗ್ಯ ವಿಷಯವನ್ನೇ ತಮ್ಮ ಸ್ವರವಚನಗಳಲ್ಲಿ ತುಂಬಿ ಈ ಲೋಕ ಜಿಜ್ಞಾಸೆಗಿಂತ ಪಾರಮಾರ್ಥಿಕ ಸಾಧನೆಯೇ ಕೈವಲ್ಯದ ಗುರಿಯೆಂದು ಸಾರಿ, ಕೈವಲ್ಯ ಪದಗಳಿಗೆ ಬುನಾದಿ ಹಾಕಿದರು. ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ', ಸರ್ಪಭೂಷಣ ಶಿವಯೋಗಿಗಳ 'ಕೈವಲ್ಯ ಕಲ್ಪವಲ್ಲರಿ', ಬಾಲಲೀಲಾ ಮಹಾಂತ ಶಿವಯೋಗಿಗಳ 'ಕೈವಲ್ಯ ದರ್ಪಣ' ಎಂಬ ಕೈವಲ್ಯ ಕೃತಿಗಳು ಆಯಾ ಶಿವಯೋಗಿಗಳಿಂದ ರಚಿಸಲ್ಪಟ್ಟವು. ಶಿವಯೋಗಿಗಳ ಕೈವಲ್ಯ ಪದಗಳು ವಚನಗಳಿಗಿಂತ ಭಿನ್ನವಾಗಿದ್ದು, ಸರಳವಾದ ಅಧ್ಯಾತ್ಮಗೀತೆಗಳಾದವು. ಗೂಢ, ಗಂಭೀರವಾದ ಸ್ವರವಚನಗಳು ಸರಳ ಸ್ವತಂತ್ರ ಸಾಹಿತ್ಯ ರೂಪವಾಗಿ ತಮ್ಮ ಮೂಲ ತಾತ್ವಿಕ ನೆಲೆಯನ್ನು ಬಿಡದೆ ಭಾಷಾಶೈಲಿಯಲ್ಲಿ ದೇಶಿ ತಾಳ, ಲಯ, ಮಟ್ಟುಗಳನ್ನು ಹೊಂದಿ ಭಜನೆಯಂತಹ ಸಮೂಹ ಮಾಧ್ಯಮದ ಮೂಲಕ ಪ್ರಚಾರಗೊಂಡವು. ತತ್ತ್ವಪದದ ಹೊಸ ಪರಂಪರೆಯೊಂದನ್ನು ಪ್ರಾರಂಭಿಸಿದ ಕೀರ್ತಿ ನಿಜಗುಣ ಶಿವಯೋಗಿಗಳದು. ಈ ಪರಂಪರೆಯು ೧೯ನೇ ಶತಮಾನದವರೆಗೂ ಮುಂದುವರೆಯಿತು. ತಾತ್ತ್ವಿಕ ಚೌಕಟ್ಟಿನಲ್ಲಿ ವೈಚಾರಿಕ ನೆಲೆಗಟ್ಟಿನ ಮೇಲೆ ರಚಿತವಾದ, ಹೊಸ ಶೈಲಿಯ ಕೈವಲ್ಯ ಪದಗಳು ಶಿಷ್ಟ ಸಂಪ್ರದಾಯದ ಜೊತೆಗೆ ದೇಶೀ ಕವಿಗಳನ್ನು, ಹಾಡುಗಾರರನ್ನು ಸೃಷ್ಟಿಸಿತು.

೧.೩ ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ತತ್ತ್ವಪದಕಾರರ ಕಾಲ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುವ ತತ್ತ್ವಪದಗಳು ೧೭, ೧೮ ಮತ್ತು ೧೯ನೇ ಶತಮಾನದಲ್ಲಿ ಸಾಂಪ್ರದಾಯಿಕ ಶಿಷ್ಟ ಸ್ವರೂಪವನ್ನು ಬದಲಿಸಿ, ಅಚ್ಚ ದೇಶೀಯ ಅಭಿವ್ಯಕ್ತಿಗಳಾಗಿ ರೂಪಿತಗೊಂಡವು.

ಶಿಷ್ಟಸಾಹಿತ್ಯವನ್ನು ಪೋಷಿಸಿ, ಬೆಳೆಸಿಕೊಂಡು ಬಂದ ರಾಜಾಶ್ರಯಗಳು, ಮಠ–ಪೀಠಗಳು, ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳಿಂದಾಗಿ ಅತಂತ್ರಗೊಂಡು ತಮ್ಮ ನೆಲೆಗಾಗಿ ಚಡಪಡಿಸುತ್ತಿರುವಾಗ ಶಿಷ್ಟ ಪರಂಪರೆಗೆ ಆಶ್ರಯ ತಪ್ಪಿ ದಿಕ್ಕು ಕಾಣದೆ ಗ್ರಹಣ ಹಿಡಿದಂತಾಗಿ ಪಂಡಿತವರ್ಗದಲ್ಲೆಲ್ಲಾ ಕತ್ತಲಾವರಿಸಿತು. ಸಾಹಿತ್ಯಕ

೪. ಸಾ.ಶಿ. ಮರುಳಯ್ಯ, ಅಭಿಜ್ಞ, ಪು. ೧೩೮. ಗುಲ್ಬರ್ಗಾ ವಿಶ್ವವಿದ್ಯಾಲಯ.

ಇತಿಹಾಸದಲ್ಲಿ ಈ ಕಾಲವನ್ನು 'ಕತ್ತಲಯುಗ', 'ಬರಡುಕಾಲ' ಎಂದು ಪರಿಗಣಿಸುತ್ತಾರೆ. ನಾಡಿನಲ್ಲಿ ವಿಪುಲವಾಗಿ ಬೆಳೆದು ಬಂದಿದ್ದ ಸಾಹಿತ್ಯ ಮತ್ತು ಸಂಸ್ಕೃತಿಯು ಪರಕೀಯರ ಆಕ್ರಮಣ, ಸ್ವದೇಶಿಯರ ಸಂಕುಚಿತತೆ ಸ್ವಾರ್ಥ ಮನೋಭಾವದಿಂದ, ತನ್ನ ಸತ್ತ್ವವನ್ನು ಸೃಜನಶೀಲತೆಯನ್ನು ಕಳೆದುಕೊಂಡು ಆತಂಕಕ್ಕೊಳಗಾಯಿತು. ೧೭ನೇ ಶತಮಾನ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ವಿಪ್ಲವದ ಕಾಲವಾಗಿತ್ತು. ಸಾಮಾನ್ಯ ಜನರು ಬದುಕಿನ ಭದ್ರತೆಯನ್ನು ಕಳೆದುಕೊಂಡು ಅಶಾಂತಿ, ಅಸಮಾಧಾನಗಳಿಂದ ನರಳುತ್ತಿದ್ದರು. ಇಂತಹ ವಿಷಮ ಪರಿಸ್ಥಿತಿಯಲ್ಲಿ ನಾಡಿನ, ಜನತೆಯ, ಸಾಹಿತ್ಯದ, ಸಂಸ್ಕೃತಿಯ ಜೀವನಾಡಿ ಹಿಡಿದು ಶಕ್ತಿ ಸಂಚಲನ ಮಾಡಿದವರು ದೇಶೀ ಸಾಹಿತ್ಯದ ವೈದ್ಯರುಗಳಾದ ಜನಪದ ತತ್ತ್ವಪದಕಾರರು. ಇವರು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ, ರಾಜಕೀಯವಾಗಿ ಅನವರತ ಕಾಲದಿಂದ ನಿರ್ಲಕ್ಷಿಸಲ್ಪಟ್ಟ ಕೆಳವರ್ಗದ ಜನಪದ ಕವಿಗಳು. ಇವರ ತತ್ತ್ವಪದಗಳು ನಿರಕ್ಷರಸ್ಥ ಜನಸಮುದಾಯದಲ್ಲಿ ಮೌಖಿಕ ಪರಂಪರೆಯಲ್ಲಿ ಹಾಡು, ಭಜನೆ, ಏಕತಾರಿಪದ, ಅನುಭವದ ಗೋಷ್ಠಿಗಳ ಮೂಲಕ ಉಳಿದು, ಬೆಳೆದುಕೊಂಡು ಬಂದಿವೆ. ಬಡತನ, ಬರಗಾಲ, ಕಷ್ಟಕಾರ್ಪಣ್ಯದಲ್ಲಿ ಬಳಲುತ್ತಿದ್ದ ಜನರಿಗೆ ಸಾಂತ್ವನ ಹೇಳಿ ಬದುಕನ್ನು ಎದುರಿಸುವ ಮನೋಸ್ಥೈರ್ಯವನ್ನು ನೀಡಿವೆ. ಆಶುಕವಿಗಳಾದ ತತ್ತ್ವಪದಕಾರರು ಶಿಷ್ಟ ಕವಿಗಳಂತೆ ಪದ ರಚಿಸುವ ಉದ್ದೇಶದಿಂದ ತತ್ತ್ವಪದಗಳನ್ನು ರಚಿಸದೆ ಪ್ರಾಸಂಗಿಕವಾಗಿ ಹಾಡಿದ ಅವರ ಗೀತೆಗಳು ಪರಿಸರ ಮತ್ತು ಸಾಮಾಜಿಕ ಘಟನಾವಳಿಯ ನೈಜ ಚಿತ್ರಣವನ್ನು ಕಟ್ಟಿಕೊಡುತ್ತವೆ. ಅಲ್ಲದೆ, ಬದುಕಿನ ಮೌಲ್ಯಗಳನ್ನು ತಿಳಿಸುತ್ತವೆ. ಜಾತಿ ಮತ ಪಂಥದ ಬೇಲಿಯನ್ನು ಕಿತ್ತೊಗೆದು, ಮೇಲು-ಕೀಳೆಂಬ ತಾರತಮ್ಯವನ್ನು ತೊಡೆದು ಸಮಾಜದ ಎಲ್ಲ ವರ್ಗಗಳ ಸಂಸ್ಕೃತಿ ಸಂಪ್ರದಾಯಗಳಿಗೆ ಸ್ಪಂದಿಸಿ ಲೌಕಿಕದಲ್ಲಿಯೇ ಪರಮಾರ್ಥ ಸಿದ್ಧಿಯನ್ನು ಸಾಧಿಸಿದರು. ಭಕ್ತಿಯಿಂದಲೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ಹುಡುಕಿದರು ಮತ್ತು ಅಂತರಾತ್ಮದ ಸಾಕ್ಷಾತ್ಕಾರದ ದರ್ಶನ ಮಾಡಿಸಿದರು.

ಸಾಮಾನ್ಯವಾಗಿ ಜೀವನದ ತತ್ತ್ವ, ಮೌಲ್ಯ ಯಾವ ದೇಶದಲ್ಲಾದರೂ, ಯಾವ ಕಾಲದಲ್ಲಾದರೂ, ಯಾವಾಗಲೂ ಒಂದೇ. ಮೌಲ್ಯ ಯಾವಾಗಲೂ ಮೌಲ್ಯವೇ ಆಗಿರುವಂತೆ ತತ್ತ್ವವು ರೂಪ ಬದಲಾಯಿಸಿದರೂ ತತ್ತ್ವವೇ ಆಗಿರುತ್ತದೆ. ಸ್ವರವಚನ, ಕೀರ್ತನೆ, ತತ್ತ್ವಪದ ಎಂಬ ನಾನಾ ಹೆಸರುಗಳಿಂದ ಪ್ರಸಾರವಾದರೂ ಅವು ಸಾರುವ ತತ್ತ್ವ ಸಂದೇಶ ಒಂದೇ ಆಗಿರುತ್ತದೆ. ಜನಪದ ಅಧ್ಯಾತ್ಮ ಗೀತೆಗಳು ಸ್ವರವಚನದಂತೆಯೇ ತತ್ತ್ವವನ್ನೂ, ಸಂಗೀತವನ್ನೂ, ಹೊಂದಿದ್ದರೂ ಸ್ವರವಚನ

ಮುಂದುವರಿಯದೇ 'ತತ್ತ್ವಪದ'ವೆಂಬ ಹೆಸರಿನಿಂದ ೧೨ನೇ ಶತಮಾನದ ನಂತರ ವಿಪುಲವಾಗಿ ಬೆಳೆಯಿತು ಎನ್ನಬಹುದು.

ತತ್ತ್ವಪದಗಳು ಯಾವ ಧರ್ಮದ ಹಿನ್ನೆಲೆಯನ್ನು ಹೊಂದದೇ, ಜಾತಿ, ಮತ, ಪಂಥದ ಸೀಮಿತಕ್ಕೆ ಒಳಗಾಗದೆ ಬಯಲು ನೆಲದ ಬದುಕನ್ನು ಕುರಿತು ಹಾಡಿನ ಪದಗಳಾಗಿವೆ. ವೀರಶೈವ ಧರ್ಮದ ಸಿದ್ಧಾಂತಕ್ಕೆ ಮೀಸಲಾದ ಸ್ವರವಚನಗಳು ಶರಣರ, ಶಿವಯೋಗಿಗಳ ಸಾಂಸ್ಕೃತಿಕ, ಆಧ್ಯಾತ್ಮಿಕ ಬದುಕಿನ ದರ್ಶನಗಳಾದರೆ, ಕೆಳವರ್ಗದವರ ಆಧ್ಯಾತ್ಮಿಕ ಗೀತೆಗಳಾದ ತತ್ತ್ವಪದಗಳು ಜನಸಾಮಾನ್ಯರ ಅಂತರಂಗದ ಅರಿವಿನ ತೆರೆದ ಬಾಗಿಲದಂತಿವೆ. ಸ್ವರವಚನಗಳಲ್ಲಿ ವೇದ, ಆಗಮ, ಶಾಸ್ತ್ರಗಳಲ್ಲದೆ ಶರಣರ ಶಿಷ್ಟ ಪದ್ಧತಿಯಲ್ಲಿ ನಡೆದ ತತ್ತ್ವಚಿಂತನೆಯಿದೆ. ತತ್ತ್ವಪದಗಳಲ್ಲಿ ದಿನ ನಿತ್ಯದ ನೋವು ನಲಿವಿನ, ಸಂತೆ-ಸಂಭ್ರಮದ, ಜಾತ್ರೆ-ಕ್ಷೇತ್ರದ, ಹಬ್ಬ-ಹುಣ್ಣಿಮೆಯ, ದೇವರು-ದೈವದ ಜೀವನದ ರೀತಿ-ನೀತಿ, ಆಚರಣೆ ಮೊದಲಾದ ಸನ್ನಿವೇಶಗಳ ಹಿನ್ನೆಲೆಯಲ್ಲಿ ಬದುಕನ್ನು ಅರಿಯುವ, ಆಚರಿಸುವ ಕೊನೆಗೆ ದೈವ ಸನ್ನಿಧಿಯಲ್ಲಿ ಸಮರ್ಪಿಸುವ ಮುಗ್ಧ ಭಾವವನ್ನು ಕಾಣುತ್ತೇವೆ. ತತ್ತ್ವಪದಗಳು ಪರಂಪರಾನುಗತವಾದ ಜ್ಞಾನ, ವಿಸ್ತಾರವಾದ ಲೋಕಾನುಭವ, ಬದುಕಿನ ಬಗೆಗಿನ ಸೂಕ್ಷ್ಮ ಚಿಂತನೆ, ಮೌಲ್ಯಗಳ ಹುಡುಕಾಟವನ್ನು ದಿನನಿತ್ಯದ ಅನುಭವದಲ್ಲಿ ಸರಳವಾಗಿ ಕಂಡುಕೊಂಡು, ಆಡುಭಾಷೆಯಲ್ಲಿಯೇ ಪ್ರತಿಪಾದಿಸುವ ಸಹಜ ಗುಣ ಹೊಂದಿವೆ. ತಪ್ಪನ್ನು ತಿದ್ದುವ, ಅನ್ಯಾಯವನ್ನು ಖಂಡಿಸುವ ಮಾನವ ಸಹಜ ಅಭಿವ್ಯಕ್ತಿಗಳಾದ ಆವೇಶ, ರೋಷ, ಮೂದಲಿಕೆ, ಬೈಗುಳ, ನಿಷ್ಠುರತೆ, ಸಾತ್ವಿಕತೆ ಮೊದಲಾದವುಗಳನ್ನು ತಟ್ಟುವ ಆತ್ಮೀಯ ಭಾಷೆ-ಭಾವಗಳನ್ನು ತತ್ತ್ವಪದಗಳಲ್ಲಿ ಕಾಣುತ್ತೇವೆ.

ಸಮನ್ವಯ ಧೋರಣೆಯ, ಜಾತ್ಯತೀತ ಮನೋಭಾವನೆಯ, ಮತಧರ್ಮದ ಹಂಗನ್ನು ಹರಿದು ಸಹಬಾಳ್ವೆಯನ್ನು ನಡೆಸಿ ಮಾನವೀಯತೆಯನ್ನು ಮೆರೆದಿರುವ ತತ್ತ್ವಪದಕಾರರು ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರತಿಪಾದನೆಯಲ್ಲಿ ಮೊದಲಿಗರು. ವೈಷ್ಣವ, ಲಿಂಗಾಯತ ಜೊತೆಗೆ ಸಮಾಜದ ಕೆಳವರ್ಗದ ಜನರೇ ಅಧಿಕ ಸಂಖ್ಯೆಯ ಅನುಭಾವಿಗಳಾದರು. ಮುಸ್ಲಿಮರು, ಕುರುಬರು, ದಲಿತರು ಮೊದಲಾದ ಪಂಗಡಕ್ಕೆ ಸೇರಿದ ಜನರು ತತ್ತ್ವಪದಗಳನ್ನು ರಚಿಸಿದರು. ಹೀಗೆ ತಾರತಮ್ಯವನ್ನು ಮರೆತು ಜನಸಾಮಾನ್ಯರಲ್ಲಿ ಬೆರೆತು ಬದುಕಿನ ಕ್ರಿಯಾಶೀಲತೆಯನ್ನು ಜನತೆಗೆ ಬೋಧಿಸಿದರು. ತಮ್ಮ ಬದುಕಿನ ಅನುಭಾವಗಳನ್ನು ವಸ್ತುನಿಷ್ಠವಾಗಿಸಿಕೊಂಡು ಭಕ್ತಿ, ಜ್ಞಾನ, ವೈರಾಗ್ಯದ ನೆಲೆಯಲ್ಲಿ ಅಭಿವ್ಯಕ್ತಪಡಿಸಿದರು. ಗುರುಭಕ್ತಿ, ಸದಾಚಾರ, ನೈತಿಕತೆ, ಜಾತ್ಯತೀತ, ಭಾವೈಕ್ಯತೆ ಮತ್ತು ವಸಾಹತುಶಾಹಿಯಂತಹ ವಿಷಯಗಳನ್ನು ಕುರಿತು ವಿಶ್ಲೇಷಿಸಿದರು.

ವಸಾಹತುಶಾಹಿಯ ಹಿಡಿತದಿಂದ ಜನಸಾಮಾನ್ಯರ ಬದುಕು ದುಸ್ತರವಾಗಿ ಸಾಂಸ್ಕೃತಿಕ ಏರು-ಪೇರು ಉಂಟಾದಾಗ, ಕೆಳವರ್ಗಕ್ಕೆ ಸೇರಿದ ಬುಡಕಟ್ಟಿನ ಜನರ ಅನುಭಾವಿಕ ನೆಲೆಯ ಪ್ರತಿಭಟನೆ ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆಯಿತು.

ತತ್ತ್ವಪದಕಾರರು ದೇಶೀ ಭಾಷೆಯನ್ನೆ ತಮ್ಮ ಪ್ರತಿಪಾದನೆಗಾಗಿ ವ್ಯಕ್ತಪಡಿಸಿದುದರಿಂದ ತತ್ತ್ವಪದ ಸಾಹಿತ್ಯವು ಭಾಷೆ, ಧರ್ಮ ಮತ್ತು ಸಾಹಿತ್ಯ ಸಮನ್ವಯವನ್ನು ಪಡೆದುಕೊಂಡಿತು. ತತ್ತ್ವಪದಗಳು ಯಾವ ಧರ್ಮವನ್ನು ಪ್ರತಿಪಾದಿಸುವ ರಚನೆಯಾಗದೇ ಆಯಾ ಸಂದರ್ಭದ ರಾಜಕೀಯ, ಸಾಮಾಜಿಕ, ಧಾರ್ಮಿಕ ಒತ್ತಡಗಳನ್ನು ಎದುರಿಸುವ ವ್ಯಕ್ತಿ ಸ್ವಾತಂತ್ರ್ಯದ ಘನತೆ ಮತ್ತು ಪ್ರಭುತ್ವ ವಿರೋಧಿ ಧೋರಣೆಗಳನ್ನು ಎತ್ತಿಹಿಡಿದು ಆಧುನಿಕತೆಗೆ ಸ್ಪಂದಿಸುವ ತಂತ್ರಗಳಾಗಿ ಸಾಂಸ್ಕೃತಿಕ ಪ್ರತೀಕವಾದವು.

ಅಂತರಂಗದ ವಿಕಾಸಕ್ಕೆ ಗಮನ ಕೊಡುವ ತತ್ತ್ವಪದಕಾರರು ಅನುಭಾವವನ್ನು ಅತ್ಯಂತ ಮೌಲಿಕವೆಂದು ಭಾವಿಸಿದರು. ವೈಚಾರಿಕ, ಜಾತ್ಯತೀತ ಮನೋ ಭಾವನೆಯುಳ್ಳ ತತ್ತ್ವಪದಕಾರರು ಪರಮಾತ್ಮನ ಧ್ಯಾನ, ಚಿಂತನೆಯನ್ನು ಗುರಿಯಾಗಿಟ್ಟುಕೊಂಡರು. ಕರ್ನಾಟಕದ ತತ್ತ್ವಪದಕಾರರನ್ನು ಹೈದ್ರಾಬಾದ್ ಕರ್ನಾಟಕ ತತ್ತ್ವಪದಕಾರರು, ಮುಂಬಯಿ ಕರ್ನಾಟಕ ತತ್ತ್ವಪದಕಾರರು, ಮದ್ರಾಸ್ ಕರ್ನಾಟಕ ತತ್ತ್ವಪದಕಾರರು ಮತ್ತು ಮೈಸೂರು ಕರ್ನಾಟಕ ತತ್ತ್ವಪದಕಾರರೆಂದು ವಿಭಾಗೀಯವಾರು ವಿಂಗಡಿಸಬಹುದು.

೧೮-೧೯ನೇ ಶತಮಾನದಲ್ಲಿ ಶಿಷ್ಟರಿಂದ ಜನಪದಕ್ಕೆ ತಿರುಗಿದ್ದ ತತ್ತ್ವಪದ ಸಾಹಿತ್ಯ, ಜಾನಪದದ ಎಲ್ಲ ಮಟ್ಟುಗಳನ್ನು ದುಡಿಸಿಕೊಂಡು ಫಲವತ್ತಾದ ತತ್ತ್ವಪದ ರಾಶಿಯನ್ನು ನೀಡಿತು. ತತ್ತ್ವಪದಕಾರರ ತೌರೂರಾದ ಉತ್ತರ ಕರ್ನಾಟಕದ ಗುಲಬರ್ಗಾ, ರಾಯಚೂರು, ಬೀದರ, ಕೊಪ್ಪಳ, ವಿಜಾಪುರ, ಧಾರವಾಡ ಮೊದಲಾದ ಈ ಭಾಗಗಳಲ್ಲಿಯ ತತ್ತ್ವಪದಕಾರರು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ.

ಇವರೆಲ್ಲ ಉತ್ತರ ಕರ್ನಾಟಕದ ಜನಜೀವನದ ಸಂಸ್ಕೃತಿಯನ್ನು ಎಳೆಎಳೆಯಾಗಿ ಹಿಡಿಸಿ ತತ್ತ್ವಪದಗಳನ್ನು ರಚಿಸಿದ್ದಾರೆ. ಇವರಲ್ಲಿ ಪ್ರಮುಖರಾದವರು ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗ ಶರಣ, ಚೆನ್ನೂರ ಜಲಾಲಸಾಬ, ಮೋಟ್ನಳ್ಳಿ ಹಸನಸಾಬ, ಗೋನುವಾರ ಬಡೇಸಾಬ, ಶಿಶುನಾಳ ಶರೀಫ, ಗುರುಖಾದರಿಪೀರ, ಸಾಹಿಬಣ, ಗುರುಗೋವಿಂದಬಟ್ಟ ಮೊದಲಾದವರು.

ಕಡಕೋಳ ಮಡಿವಾಳಪ್ಪ (೧೭೮೦–೧೮೪೦): ಹೈದ್ರಾಬಾದ್ ಕರ್ನಾಟಕ ಪ್ರದೇಶದ ಮಹತ್ವಕವಿ ತತ್ತ್ವಪದಗಳನ್ನು, ಸ್ವರವಚನಗಳನ್ನು ಬರೆದ ಆಶುಕವಿ. ಮಡಿವಾಳಪ್ಪನು ೧೧೦೦ ತತ್ತ್ವಪದ, ೧೧೦೦ ಮಂಗಳಾರತಿ ಪದ, ೩೩೦ ಸ್ವರವಚನಗಳನ್ನು ರಚಿಸಿದ್ದಾನೆ. 'ಮಹಾಂತೇಶ' ಎಂಬ ಅಂಕಿತವಿರುವ ಮಡಿವಾಳಪ್ಪನ ಪದಗಳನ್ನು ಭಜನಾಮೇಳದಲ್ಲಿ ಹಾಡುತ್ತಾರೆ. 'ನಿಜಲೀಲಾನುಭವ' ಅಂಕಿತದಿಂದ ವಚನ ರಚನೆಯನ್ನು ಮಾಡಿದ್ದಾನೆ. ಪ್ರಾರ್ಥನೆ, ಸಮಾಜ ವಿಡಂಬನೆ, ತತ್ತ್ವಸಿದ್ಧಾಂತ, ಮಂಗಳಾರತಿಯ ವಿಷಯಕ್ಕೆ ಸಂಬಂಧಿಸಿದಂತೆ ಈತನ ತತ್ತ್ವಪದಗಳಿವೆ. ಜಾತಿಬೇಧ, ಮಡಿಮೈಲಿಗೆಗಳನ್ನು ಮಾರ್ಮಿಕವಾಗಿ ವಿಡಂಬಿಸಿ ವಿರೋಧಿಸಿದ್ದಾನೆ. ವೈಚಾರಿಕತೆ, ಸಮತಾ ಮನೋಭಾವವನ್ನು ಇವನ ತತ್ತ್ವಪದಗಳಲ್ಲಿ ಕಾಣುತ್ತೇವೆ. ಜಾನಪದ ಸತ್ವ, ಜಾನಪದ ಧರ್ಮದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಅನುಭಾವಿ ಕವಿ ಮಡಿವಾಳಪ್ಪ ಪಡೆದ ಅನುಭಾವ ವರ್ಣನಾತೀತವಾದದ್ದು.

"ಇನ್ನೇನಿನ್ನೇನೋ। ಇನ್ನೇನಿನ್ನೇನೋ।
ತನ್ನ ತಾ ತಿಳಿದ ಮೇಲೆ ಇನ್ನೇನಿನ್ನೇನೊ।
ತನ್ನಂತೆ ಸರ್ವಜನರ ಮನ್ನಿಸಿ ಮೂಕಾದ ಮ್ಯಾಲೆ।
ಇನ್ನೇನಿನ್ನೇನೋ। ಇನ್ನೇನಿನ್ನೇನೋ।"[೫]

ಇದು ಕವಿಯ ಅನುಭಾವದ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಈ ತತ್ತ್ವಪದದಲ್ಲಿ ವಿಶ್ವಕುಟುಂಬಿಯಾಗುವ ತಾದ್ಯಾತ್ಮತೆ ಅದುವೇ ಜೀವಜೀವದ ಬಲುದೊಡ್ಡ ಸಾಧನೆ ಎಂಬುದು ಮಡಿವಾಳಪ್ಪನ ಒಟ್ಟು ಬದುಕಿನ ಆಶಯವಾಗಿದೆ." ಲಿಂಗಾಯತ ತತ್ತ್ವಪದಕಾರರಾದ ಮಡಿವಾಳಪ್ಪನು ಷಟ್‌ಸ್ಥಲಜ್ಞಾನಿ, ಘನ ವೈರಾಗ್ಯಶಾಲಿ ಆಗಿದ್ದನು. ಹೋರಾಟವನ್ನು ತನ್ನ ಬದುಕೆಂದು ಭಾವಿಸಿದ ಮಡಿವಾಳಪ್ಪನ ಪದಗಳಲ್ಲೆಲ್ಲಾ ಬದುಕನ್ನು ಧೈರ್ಯದಿಂದ ಎದುರಿಸುವ, ಜೀವನದಲ್ಲಿ ತಾನು ಕಂಡುಂಡ ಪಾಡನ್ನು ಮನಮುಟ್ಟುವಂತೆ ಸ್ಪಷ್ಟಪಡಿಸುತ್ತಾರೆ. ಸಮಾಜ ವ್ಯವಸ್ಥೆಯ ವಿರೋಧವನ್ನು ಕಂಡು ನೊಂದಿರುವ ಅವರು ಸಮಾಜ ಬಗೆಗೆ ತನಗಿರುವ ಕಳಕಳಿಯನ್ನು, ಸ್ವರವಚನದಲ್ಲಿ ಹೇಳಿದ್ದಾನೆ. ಮಡಿವಾಳಪ್ಪ ತಾನೊಬ್ಬನೇ ತತ್ತ್ವಪದಕಾರನಾಗಿ ಬೆಳೆಯದೇ ತನ್ನೊಂದಿಗೆ ಅನೇಕ ತತ್ತ್ವ ಪದಕಾರರನ್ನು ಹುಟ್ಟುಹಾಕಿದನು. ತನ್ನ ಪದಗಳ ಮೂಲಕ ಬಾಳನ್ನು ಬದುಕನ್ನು ಹಸನುಗೊಳಿಸುವಲ್ಲಿ ಪ್ರೇರಣೆಯಾದನು.

---

೫. ಡಾ. ಮೀನಾಕ್ಷಿ ಬಾಳಿ, 'ತನ್ನ ತಾನು ತಿಳಿದ ಮೇಲೆ', ವೀರೇಶ್ವರ ಪ್ರಕಾಶನ, ಪು. ೬೮, ೨೦೦೬

ಕೊಡಲೂರ ಬಸವಲಿಂಗ ಶರಣ (೧೭೭೦–೧೮೫೦): ಜಾನಪದ ಪರಂಪರೆಗೆ ಸೇರಿದ ರಾಯಚೂರು ಜಿಲ್ಲೆಯ ಪ್ರಥಮ ತತ್ತ್ವಪದಕಾರ. ಈತನ ಸ್ವರವಚನಗಳು ಪ್ರಾರ್ಥನೆ, ಸ್ತುತಿ, ಗುರುಭಕ್ತಿಯನ್ನು ಸಾರುವ ಪದಗಳಾಗಿವೆ. ಅಲ್ಲದೆ, ಸಾಮಾಜಿಕ ಕಳಕಳಿಯೊಂದಿಗೆ ಮಾನವೀಯ ಮೌಲ್ಯವನ್ನು, ಲೋಕನೀತಿಯ ತತ್ತ್ವವನ್ನು ಬಿಂಬಿಸುತ್ತವೆ. ವಚನಕಾರರ ದಟ್ಟವಾದ ಪ್ರಭಾವ ಇದೆ. ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಂತ್ರದಂತೆ ಕುಲಕಸುಬಿನ ಪ್ರಾಮುಖ್ಯತೆಯನ್ನು, ತತ್ತ್ವಪದದಲ್ಲಿ ತಂದಿದ್ದಾನೆ. ಸತಿಪತಿ ಭಾವದ ಭಕ್ತಿಯೊಂದಿಗೆ ಲಿಂಗಾಂಗ ಸಾಮರಸ್ಯವನ್ನು ಹೊಂದಿದ ಕವಿ ಈತ. ಜಾತೀಯತೆ, ಮೂಢನಂಬಿಕೆಯನ್ನು ತಿರಸ್ಕರಿಸಿ, ಭಾವೈಕ್ಯತೆ, ವೈಚಾರಿಕತೆಯನ್ನು ಪ್ರತಿಪಾದಿಸಿದ ಈತ ಶರಣರ ಮಾನವೀಯ ತತ್ತ್ವವನ್ನು ಎತ್ತಿ ಹಿಡಿದನು. ಈತನ ಅಂಕಿತ 'ಕೊಡಲೂರೇಶ'. ಶಾಂತರಸರ ಪ್ರೀತಿಯ ಕವಿಯಾದ ಕೊಡಲೂರ ಬಸವಲಿಂಗ ಶರಣರ ಬಗ್ಗೆ ಅವರ ಮಾತಲ್ಲಿ ಹೇಳುವುದಾದರೆ, "ಕೊಡಲೂರು ಬಸವಲಿಂಗ ಶರಣರ ಹಾಡುಗಳು ಅನುಭಾವ, ಸತ್ಯಸೌಂದರ್ಯ ಅರ್ಥಗಳ ದೃಷ್ಟಿಯಿಂದ ಬಹಳ ಮೇಲ್ಮಟ್ಟದವುಗಳಾಗಿವೆ. ಜನರ ಆಡುನುಡಿಯಲ್ಲಿ ಆಧ್ಯಾತ್ಮದ ಪರತತ್ತ್ವದ, ಆತ್ಮಾನುಭೂತಿಯ ವಿವರಣೆ ಸಹಜ ಸುಂದರವಾಗಿದೆ. ಜನಜೀವನದಿಂದ ಅತಿಸಾಮಾನ್ಯ ವಿಷಯ ಮತ್ತು ಘಟನೆಗಳನ್ನು ಎತ್ತಿಕೊಂಡು ಅನುಭಾವವನ್ನು ಅಭಿವ್ಯಕ್ತಿಗೊಳಿಸುವಲ್ಲಿ ಅವರು ತೋರಿದ ಪ್ರತಿಭೆ ಮತ್ತು ಜಾಣ್ಮೆಗೆ ನಾವು ಬೆರಗಾಗುತ್ತೇವೆ"[೬] ಎನ್ನುವ ಮಾತುಗಳು ಬಸವಲಿಂಗ ಶರಣರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ ಎನ್ನಬಹುದು.

ಚೆನ್ನೂರ ಜಲಾಲಸಾಹೇಬ: ಕಡಕೋಳ ಮಡಿವಾಳಪ್ಪನ ಸಮಕಾಲೀನ ತತ್ತ್ವಪದಕಾರ ಮತ್ತು ಕಡಕೋಳ ಮಡಿವಾಳಪ್ಪನ ಶಿಷ್ಯ. ಕನ್ನಡದ ಈ ಮೊದಲನೆಯ ಮುಸ್ಲಿಂ ತತ್ತ್ವಪದಕಾರ 'ಗುರು ಮಡಿವಾಳ' ಎಂಬ ಅಂಕಿತದಿಂದ ತತ್ತ್ವಪದಗಳನ್ನು ರಚಿಸಿದ್ದಾನೆ. ಹಿಂದೂ–ಮುಸ್ಲಿಂ ಭಾವೈಕ್ಯತೆಯ ಸಮನ್ವಯತೆಯನ್ನು ಇವರ ಪದಗಳಲ್ಲಿ ಕಾಣುತ್ತೇವೆ. ಕೊಡಲೂರ ಬಸವಲಿಂಗ ಶರಣರನ್ನು ಗುರುವಾಗಿ ಸ್ವೀಕರಿಸಿದ ಈತ ನಂತರದಲ್ಲಿ ಮಡಿವಾಳಪ್ಪನ ಶಿಷ್ಯನಾದ. ಗುರುಗಳ ಪ್ರಭಾವದಿಂದ ಲಿಂಗಾಯತದ ಪ್ರಭಾವ ಹೊಂದಿ ಅನುಭಾವದ ಪದಗಳನ್ನು ರಚಿಸಿದನು. ಕನ್ನಡ ಮತ್ತು ಉರ್ದು ಮಿಶ್ರಿತ ಆಡುನುಡಿಯನ್ನುಳ್ಳ ಇವನ ತತ್ತ್ವಪದಗಳು ಜನಾಕರ್ಷಣೆಯನ್ನು

"ಸಬ್ ಕಹತೆ ಹೈ ಈಶ್ವರ ಅಲ್ಲಾ
ಇದರ ಭೇದ ಯಾರಿಗೆ ತಿಳಿಯಲಿಲ್ಲ
ನಿರಾಕಾರಸೇ ಆಕಾರ ಹುವೇ
ವೇದಶಾಸ್ತ್ರಕ್ಕೆ ನಿಲುಕಿಲ್ಲ
ಹಿಂದೂ-ಮುಸ್ಲಿಂ ಶಾಸ್ತ್ರ ಪಡತೇ ಹೈ
ಗುರುಮನಿ ಕೀಲಿಕೈ ಸಿಗಲಿಲ್ಲ."[೭]

ಮೋಟ್ನಳ್ಳಿ ಹಸನ ಸಾಹೇಬ (೧೮೮೫-೧೮೧೫): ಈತ ಒಬ್ಬ ಶ್ರೇಷ್ಠ ಮುಸ್ಲಿಂ ಅನುಭಾವಿ ತತ್ತ್ವಪದಕಾರ, ಲಿಂಗಾಯತ ಶೈವ ಸಂಸ್ಕೃತಿಯಲ್ಲಿ ಬೆಳೆದು, ಹಿಂದು ಮತ್ತು ಮುಸ್ಲಿಂರ ಸಹಬಾಳ್ವೆಗೆ ಮಹತ್ವವನ್ನು ನೀಡಿದ ಕವಿ. ಲಿಂಗಾಯತ ತತ್ತ್ವ ಸಿದ್ಧಾಂತಗಳಲ್ಲಿ ನಿಷ್ಣಾತನಾದ ಹಸನಸಾಬ, ಒಬ್ಬ ವಿಶಿಷ್ಟ ಶಿವಯೋಗಿ. ಅಪಾರ ಸಂಖ್ಯೆಯಲ್ಲಿ ಲಿಂಗಾಯತ ಶಿಷ್ಯವೃಂದವನ್ನು ಹೊಂದಿದ ಜನಪ್ರಿಯ ಕವಿ ಈತ. ಇವನ ಬಹಳಷ್ಟು ಪದಗಳು ಗುರುವಿನ ಬಗ್ಗೆ ಇದ್ದರೂ ಗುರು ಯಾರೆಂದು ಸ್ಪಷ್ಟವಾಗಿಲ್ಲ. ಗುರುಭಕ್ತಿ, ಗುರುಧ್ಯಾನ, ಗುರುಕೃಪೆ, ಗುರುಮಹಿಮೆಯನ್ನು ತನ್ನ ಪದಗಳಲ್ಲಿ ಕೊಂಡಾಡಿದ್ದಾನೆ. ವಚನಗಳ ಪ್ರಭಾವವನ್ನು ಇವನ ಪದಗಳಲ್ಲಿ ಗುರುತಿಸಬಹುದು. ಸಮಾನತೆ, ಸರ್ವಧರ್ಮ ಸಮನ್ವಯ ಭಾವನೆಗಳು ತತ್ತ್ವಪದಗಳಲ್ಲಿವೆ. ಬಸವಾದಿ ಶರಣರ ಪ್ರಗತಿಪರ ಆಶಯಗಳನ್ನು ಬೆಂಬಲಿಸುತ್ತ ಶಿವನೊಬ್ಬನೇ ದೈವವೆಂದು ಸಾರುವ ಪದಗಳು ಹಳ್ಳಿಗರಲ್ಲಿ ಜನಪ್ರಿಯವಾಗಿವೆ.

ಗೋನುವಾರ ಬಡೇಸಾಬ (೧೮೮೨-೧೯೨೨): ಮುಸ್ಲಿಂ ಮನೆತನಕ್ಕೆ ಸೇರಿದ ಇವನು ಹರಿಹರನನ್ನು ಆರಾಧಿಸಿದ ವಿಶಿಷ್ಟ ಕವಿಯಾಗಿದ್ದಾನೆ. ಹಂಪಿಯ ರಾಮಾವಧೂತ ಗುರುಗಳಲ್ಲಿ ಅಧ್ಯಯನ ಮಾಡಿ 'ರಾಮದಾಸ' ಅಂಕಿತದಲ್ಲಿ ತತ್ತ್ವಪದಗಳನ್ನು, ಕೀರ್ತನೆಗಳನ್ನು, ಶತಾಷ್ಟಕಗಳನ್ನು ರಚಿಸಿದ್ದಾನೆ. ಮುಸ್ಲಿಂ, ವೀರಶೈವ ಮತ್ತು ವೈಷ್ಣವ ಧರ್ಮಗಳ ಸಮನ್ವಯವನ್ನು ಈತನ ಪದಗಳಲ್ಲಿ ಗುರುತಿಸಬಹುದು.

೧೮-೧೯ನೇ ಶತಮಾನದಲ್ಲಿ ನಾಡಿನುದ್ದಕ್ಕೂ ಅವತರಿಸಿದ ತತ್ತ್ವಪದಕಾರರು, ಪರಕೀಯರ ಆಳ್ವಿಕೆ ಮತ್ತು ಅನ್ಯ ಸಂಸ್ಕೃತಿಯನ್ನು ವಿರೋಧಿಸಿದರು. ಆಂತರಿಕ ಸಂಘರ್ಷಗಳಾದ ಮತೀಯ ಕಚ್ಚಾಟವನ್ನು ತತ್ತ್ವಪದಗಳ ಮೂಲಕ ವಿರೋಧಿಸುತ್ತ, ತಮ್ಮ ತಮ್ಮ ಪ್ರಾಂತ್ಯಗಳಲ್ಲಿಯ ಪರಂಪರೆಗಳನ್ನು, ಸಂಸ್ಕೃತಿಯನ್ನು ಉಳಿಸಿಕೊಂಡು, ಬೆಳೆಸಲು ಕ್ಷೇತ್ರಪಾಲಕರಂತೆ ಶ್ರಮಿಸಿದರು.

---

೭. ಶಾಂತರಸ (ಪ್ರ.ಸಂ.), ತತ್ತ್ವಪದಗಳು (ಪ್ರಾತಿನಿಧಿಕ ಸಂಕಲನ), ಕನ್ನಡ ಸಾಹಿತ್ಯ ಅಕಾಡೆಮಿ, ೨೦೦೦, ಪು. ೩೯೫.

೧.೪ ಶಿಶುನಾಳ ಶರೀಫರ ಜೀವನ ಮತ್ತು ಪರಿಸರ

ಮುಂಬಯಿ ಕರ್ನಾಟಕ ಪ್ರಾಂತ್ಯಕ್ಕೆ ಉತ್ತರ ಕರ್ನಾಟಕದ ಧಾರವಾಡ, ಬೆಳಗಾವಿ ಹಾಗೂ ಬಿಜಾಪುರ ಜಿಲ್ಲೆಗಳು ಸೇರಿದ್ದವು. ೧೮೧೮ರ ವರೆಗೆ ಪೇಶ್ವೆಯವರ ಆಡಳಿತಕ್ಕೆ ಇವು ಒಳಪಟ್ಟಿದ್ದವು. ಪೇಶ್ವೆಯವರನ್ನು ಸೋಲಿಸಿದ ಬ್ರಿಟಿಷರು ತಮ್ಮ ಕಂಪನಿ ಸರಕಾರದಿಂದ ಕರ್ನಾಟಕದಲ್ಲಿ ಅನೇಕ ಬದಲಾವಣೆಗಳನ್ನು ತರಲು ಪ್ರಾರಂಭಿಸಿದರು. ಕ್ರಿಶ್ಚಿಯನ್ ಧಾರ್ಮಿಕಶಕ್ತಿಯ ಬಲದೊಂದಿಗೆ, ಕೈಗಾರಿಕಾ ಕ್ರಾಂತಿಯು ನಾಡನ್ನು ಪ್ರವೇಶಿಸಿತು. ಇದರಿಂದಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಈ ಎಲ್ಲ ವಲಯಗಳಲ್ಲಿ ಬದಲಾವಣೆ ಉಂಟಾಗಿ ಒಟ್ಟಾರೆ ನಾಡಿನ ಸಾಂಸ್ಕೃತಿಕ ನೆಲೆಯು ಆತಂಕಕ್ಕೆ ಒಳಗಾಯಿತು. ಇಂಥ ವಿಪ್ಲವ ಕಾಲದಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಶಿಶುವಿನಹಾಳ ಎಂಬ ಚಿಕ್ಕ ಗ್ರಾಮದಲ್ಲಿ ಶರೀಫ ಸಾಹೇಬರು ೧೮೧೯ರಲ್ಲಿ ಹುಟ್ಟಿ ಬಂದರು. ಕರ್ನಾಟಕದ ಭಕ್ತಿಪಂಥಗಳಲ್ಲಿ ಒಂದಾದ ಅನುಭಾವಿ ತತ್ತ್ವಪದಕಾರರ ಪರಂಪರೆಯಲ್ಲಿ ಪ್ರಮುಖ ಕವಿಯಾದರು. ತಮ್ಮ ವಿಶಿಷ್ಟ ವ್ಯಕ್ತಿತ್ವ, ಸಾಧನೆಯಿಂದಾಗಿ ಶಿಶುನಾಳ ಗ್ರಾಮದ ಹೆಸರು ಕರ್ನಾಟಕದಾದ್ಯಂತ ಪ್ರಸಿದ್ಧವಾಗಲು ಕಾರಣರಾದರು. ಶಿಶುನಾಳದ ಎರೆಮಣ್ಣಿನ ಫಲವತ್ತಾದ ಭೂಮಿಯ ಸಾಂಸ್ಕೃತಿಕ ಸತ್ತ್ವವನ್ನು ತಮ್ಮ ಪದಗಳಲ್ಲಿ ಹಾಡಿ ನಾಡಿನ ಜನತೆಗೆಲ್ಲ ತತ್ತ್ವದ ಸವಿಯನ್ನು ಹಂಚಿದರು.

ಮತೀಯ ಸಾಮರಸ್ಯಕ್ಕೆ ಹೆಸರಾದ ಶಿಶುನಾಳದಲ್ಲಿ ಇಂದಿಗೂ ಲಿಂಗಾಯತರು ಮತ್ತು ಮುಸ್ಲಿಮರು ಪ್ರಮುಖ ಜನಾಂಗದವರಾಗಿ, ಗ್ರಾಮದಲ್ಲಿ ನಡೆಯುವ ಯಾವುದೇ ಧಾರ್ಮಿಕ ಸಂಪ್ರದಾಯಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಜಾತಿ ಮತ ಭೇದವಿಲ್ಲದೆ ಒಟ್ಟಾಗಿ ಕಲೆತು ಪಾಲ್ಗೊಳ್ಳುತ್ತಾರೆ. ಲಿಂಗಾಯಿತರು ಆಚರಿಸುವ ಹಿಂದೂ ಹಬ್ಬಗಳಲ್ಲಿ, ಉತ್ಸವಗಳಲ್ಲಿ ಮುಸ್ಲಿಮರು ತಮ್ಮದೇ ಹಬ್ಬಗಳೆಂಬಂತೆ ಭಕ್ತಿ ಭಾವದಿಂದ ದೇವಸ್ಥಾನಗಳಿಗೆ ಹೋಗಿ ಕಾಯಿ, ಕರ್ಪೂರ ಅರ್ಪಿಸಿ ಪೂಜೆ ಸಲ್ಲಿಸುತ್ತಾರೆ. ಸಾಂದರ್ಭಿಕವಾಗಿ ನಡೆಯುವ ಪುರಾಣ, ಪ್ರವಚನಗಳಲ್ಲಿ ಭಾಗವಹಿಸುತ್ತಾರೆ. ಅದರಂತೆ ಲಿಂಗಾಯಿತರು ಮುಸ್ಲಿಮರ ಈದ್ ಮತ್ತು ಉರುಸುಗಳಲ್ಲಿ 'ಚೋಂಗೆ' ಎಂಬ ಸಿಹಿ ಪದಾರ್ಥವನ್ನು ಮಾಡಿ ದರ್ಗಾಗಳಿಗೆ ಹೋಗಿ ನೈವೇದ್ಯ ಮಾಡಿಸಿ ಸಕ್ಕರೆ ಓದಿಸಿಕೊಂಡು ಬರುತ್ತಾರೆ.

ಕೃಷಿ ಪ್ರಧಾನವಾದ ಶಿಸುನಾಳ ಗ್ರಾಮದ ರೈತರು ಬಿಡುವಿನ ವೇಳೆಯಲ್ಲಿ ನಡೆಸುವ ಸಾಂಸ್ಕೃತಿಕ ಚಟುವಟಿಕೆಗಳಾದ ಸಣ್ಣಾಟ, ದೊಡ್ಡಾಟ, ನಾಟಕೋತ್ಸವ ಮತ್ತು ಮೊಹರಮ್ ಹಬ್ಬದ ಹೆಜ್ಜೆ ಮೇಳದಂಥ ಸಾಮೂಹಿಕ ಕಾರ್ಯಕ್ರಮಗಳಲಿ

ಹಿಂದೂ ಮುಸ್ಲಿಂ ಎನ್ನುವ ಭೇದ ಮರೆತು ಎಲ್ಲರೂ ಸೇರಿ ಹಗಲು-ರಾತ್ರಿ ಸಿದ್ಧತೆಯನ್ನು ನಡೆಸಿ, ಕೊನೆಗೊಂದು ದಿನ ಊರಿನ ಬಯಲಲ್ಲಿ ಸೇರಿ ಗ್ರಾಮದ ಜನರಿಗೆ ಮನರಂಜನೆ ನೀಡುವುದು ಶಿಶುನಾಳದ ವೈಶಿಷ್ಟ್ಯವಾಗಿತ್ತು.

ಶಿಶುನಾಳದಲ್ಲಿ ಶರೀಫರ ಗದ್ದುಗೆ ಮತ್ತು ಬಯಲು ಬಸವಣ್ಣನ ಗುಡಿಯನ್ನು ಬಿಟ್ಟರೆ ಯಾವ ಐತಿಹಾಸಿಕ ಸ್ಮಾರಕಗಳಿಲ್ಲ. ಊರ ಅಗಸೆ ಬಾಗಿಲಲ್ಲಿರುವ 'ಗಾಳಿ ಬಸವ' ಅಥವಾ 'ಬಯಲು ಬಸವ'ನ ಗುಡಿಗೆ ಮೇಲ್ಛಾವಣಿ ಇಲ್ಲ. ಗಿಡಮರಗಳೇ ಛಾವಣಿ ಚಾಮರಗಳಾಗಿವೆ. ಸುತ್ತಲೂ ನಾಲ್ಕು ಗೋಡೆಗಳಿದ್ದು, ಮಧ್ಯದಲ್ಲಿ ಒಂದು ಉದ್ದನೆಯ ಶಿಲೆಯ ತುದಿಭಾಗದಲ್ಲಿ ಬಸವಣ್ಣನ ಮೂರ್ತಿ ಇದೆ. ಕಂಬದ ಮೇಲೆ ಬಸವ ಕುಳಿತಂತೆ. ಮುಂದೆ ಏಳು ಪಾವಟಿಗೆಯ ಮೆಟ್ಟಿಲುಗಳಿವೆ. ಬಯಲು ಆಲಯದ ಸ್ತಂಭಮೂರ್ತಿ ಬಸವನನ್ನು ಊರಿನಲ್ಲಿ ಎಲ್ಲರೂ ಸಮಾನ ಮನಸ್ಕರಾಗಿ ಪೂಜಿಸುತ್ತಾರೆ. ಈ ಬಸವನೇ ಶರೀಫರ ಕಾವ್ಯದ ಅಂಕಿತ 'ಶಿಶುನಾಳಧೀಶ'.

ಊರ ಹೊರಗೆ ಶರೀಫರ ಹೊಲದಲ್ಲಿ ಶರೀಫರ ತಂದೆ, ತಾಯಿ ಮತ್ತು ಶರೀಫರ ಸಮಾಧಿಗಳಿವೆ. ಸಮಾಧಿಯ ಹಿಂಭಾಗದಲ್ಲಿ ದೊಡ್ಡ ಹಜಾರಿನ ದೇವಾಲಯವಿದೆ. ಮರಗಿಡಗಳಿಂದ ಸುತ್ತುವರಿದ, ಸುಂದರವಾದ, ಸ್ವಷ್ಟವಾದ ಸೂರ್ಯೋದಯ, ಸೂರ್ಯಾಸ್ತಗಳ ದೃಶ್ಯಗಳಿಂದ, ಪ್ರಶಾಂತ ವಾತಾವರಣದಲ್ಲಿ ಇಂಪಾಗಿ ತೇಲಿಬರುವ ಶರೀಫರ ಪದಗಳ ಧ್ವನಿಸುರುಳಿಯಿಂದ ಈ ಸ್ಥಳವು ಆಧ್ಯಾತ್ಮಿಕ ತಪೋಭೂಮಿಯೆನಿಸುವುದು. ಈ ಕ್ಷೇತ್ರಕ್ಕೆ 'ಶರೀಫಗಿರಿ' ಎಂದು ಕರೆಯುತ್ತಾರೆ.

ಶರೀಫರ ಒಟ್ಟು ಜೀವಿತದ ಕಾಲವನ್ನು ಐದು ಘಟ್ಟಗಳಾಗಿ ವಿಂಗಡಿಸಲಾಗಿದೆ.

೧. ತಂದೆ-ತಾಯಿಯರಿಂದ ಶರೀಫರಿಗೆ ದೊರೆತ ಸಂಸ್ಕಾರ- ಬುನಾದಿ ಮುಖಿ ಘಟ್ಟ
೨. ಶರೀಫರ ವಿದ್ಯಾಭ್ಯಾಸ- ಬೌದ್ಧಿಕಮುಖಿ ಘಟ್ಟ
೩. ಶರೀಫರ ಮದುವೆ, ಮಕ್ಕಳು- ಸಂಸಾರಮುಖಿ ಘಟ್ಟ
೪. ಎಲ್ಲರಿಂದ ಅಗಲಿ ಏಕಾಂಗಿಯಾದ- ಅಂತರ್‌ಮುಖಿ ಘಟ್ಟ
೫. ಗುರುಗೋವಿಂದರ ಸಹಾಯ- ಅಧ್ಯಾತ್ಮಮುಖಿ ಘಟ್ಟ

೧. ಬುನಾದಿ ಮುಖಿ

ಶರೀಫರ ತಂದೆ ಇಮಾಮ್ ಸಾಹೇಬ ದೇವಕಾರ ಮನೆತನದವರು. ತಾಯಿ ಹಜ್ಜೂಮಾ ಗದಗಿನವರು. ಇಮಾಮ್ ಸಾಹೇಬರ ಮುಖ್ಯ ಉದ್ಯೋಗ ಕೃಷಿಯಾಗಿದ್ದರೂ, ನಾಟಿ ವೈದ್ಯಕೀಯ ಕ್ಷೇತ್ರದಲ್ಲಿ ಆಸಕ್ತಿಯಿತ್ತು. ಗಿಡಮೂಲಿಕೆಗಳ

ಉಪಯೋಗವನ್ನು ತಿಳಿದಿದ್ದ ಇಮಾಮ್ ಸಾಹೇಬರು ಶಿಶುನಾಳ ಗ್ರಾಮಕ್ಕೆ ನಾಟಿ ವೈದ್ಯರಾಗಿ ರೋಗಿಗಳಿಗೆ ಉಪಚಾರ ಮಾಡುತ್ತಿದ್ದರು. ಯಾತಾಳೀ ವಿದ್ಯೆಯನ್ನು ತಿಳಿದಿದ್ದರಿಂದ ಜನರ ಭ್ರಮೆ ಸಂಶಯಗಳನ್ನು ತಮ್ಮದೇ ಆದ ವಿಧಾನದಿಂದ ಗುಣಪಡಿಸುತ್ತಿದ್ದರು. ಶಿಶುನಾಳ ಗ್ರಾಮ ಜನರ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುವ ಸಾಮಾಜಿಕ ಕಾರ್ಯದಲ್ಲಿ ಇಮಾಮ್ ಸಾಹೇಬರಿಗೆ ಅಪಾರ ಆಸಕ್ತಿ ಮತ್ತು ಸ್ವಸಂತೋಷವಿತ್ತು. ಈ ವೈದ್ಯಕೀಯ ವೃತ್ತಿಯಿಂದಾಗಿ ಎಲ್ಲ ಜನರೊಡನೆ ಸ್ನೇಹ, ಸೌಹಾರ್ದತೆಯ ಸಂಬಂಧ ಹೊಂದಿದ್ದು, ಜನರಿಂದ ಗೌರವ, ಮನ್ನಣೆಯನ್ನು ಗಳಿಸಿದ್ದರು. ಪತ್ನಿ ಹಜ್ಜೂಮಾ ದೈವಭಕ್ತಳಾಗಿದ್ದು ನೆರೆಹೊರೆಯಲ್ಲಿ ಸಹಾಯ ಹಸ್ತ ನೀಡಿ ಸ್ನೇಹಮಯಿಯಾಗಿದ್ದಳು. ಪತಿ–ಪತ್ನಿಯರು ತಮಗಿದ್ದ ಸಂತಾನ ಕೊರತೆಯನ್ನು ನೀಗಿಸಿಕೊಳ್ಳಲು ಹುಲಗೂರಿನ ಖಾದರಶಾವಲಿ ದರ್ಗಾಕ್ಕೆ ಅನನ್ಯ ಭಕ್ತಿಯಿಂದ ಸೇವೆ ಸಲ್ಲಿಸಿ ಶರೀಫರ ಜನನ ಮತ್ತು ಜೀವನ ದೇವರ ವರ ಪ್ರಸಾದವಾಗಲು ಕಾರಣರಾದರು. ೭-೩-೧೮೧೯ರಲ್ಲಿ ಜನಿಸಿದ ಶರೀಫರು ತಂದೆ–ತಾಯಿಯರ ಧಾರ್ಮಿಕ, ವೈಚಾರಿಕ, ಸೌಹಾರ್ದಯುತ ವಾತಾವರಣದಲ್ಲಿ ಬೆಳೆದು, ಅವರ ಸಾತ್ವಿಕ ಗುಣಗಳನ್ನು ಮೈಗೂಡಿಸಿಕೊಂಡು ತಮ್ಮ ಮುಂದಿನ ಆದರ್ಶ ಬದುಕಿಗೆ ಅರಿವು ಮೂಡಿಸಿಕೊಂಡರು.

೨. ಬೌದ್ಧಿಕಮುಖಿ

ಶರೀಫರು ಬದುಕಿನ ಈ ಘಟ್ಟದಲ್ಲಿ ಧಾರ್ಮಿಕ ಮನೋಭಾವವನ್ನು ಬೆಳೆಸಿಕೊಂಡರು

ಜನ್ಮತಃ ಮುಸ್ಲಿಮರಾದ ಶರೀಫರು ತಂದೆ ಇಮಾಮ್ ಸಾಹೇಬರಿಂದ ಇಸ್ಲಾಂ ಧರ್ಮದ ಆಚಾರ–ವಿಚಾರಗಳನ್ನು, ಪರಂಪರೆಯಾಗಿ ಬೆಳೆದುಬಂದ ಮುಸ್ಲಿಂ ಧರ್ಮ ಸಿದ್ಧಾಂತಗಳ ಸಹಜವಾದ ಪರಿಕಲ್ಪನೆಗಳನ್ನು ಅರಿತರು. ಕುರಾನ್ ಪಠಣ, ನಮಾಜ, ರೋಜಾ ಮೊದಲಾದ ಸಂಸ್ಕಾರಗಳೊಂದಿಗೆ ಮೊಹಮ್ಮದ ಪೈಗಂಬರರ ಜೀವನ ಸಾಧನೆ ಸಂದೇಶಗಳನ್ನು ಅರಿತು ಆರಾಧಿಸುತ್ತಿದ್ದರು.

ಶರೀಫರ ಆರಂಭದ ಶಿಕ್ಷಣ ಲಿಂಗಾಯತ ಪರಿಸರದಲ್ಲಿ ಅಯ್ಯನವರ ಶಾಲೆಯಲ್ಲಿ ನಡೆಯಿತು. ಅಂದಿನ ದೇಶೀ ಶಿಕ್ಷಣ ಪದ್ಧತಿಯಂತೆ ಲಿಂಗಾಯತರ 'ಅಯ್ಯನವರ ಶಾಲೆ'ಗಳಲ್ಲಿ ಮತ್ತು ವೈಷ್ಣವರ 'ವೈದಿಕ ಶಾಲೆ'ಗಳಲ್ಲಿ ತಮ್ಮ ತಮ್ಮ ಮತ ದರ್ಮಕ್ಕೆ ಅನುಸಾರವಾಗಿ ಜ್ಞಾನಾರ್ಜನೆ ನಡೆಯುತ್ತಿತ್ತು. ವೈದಿಕ ಶಾಲೆಗಳಲ್ಲಿ ಪಂಡಿತರು ಸಂಸ್ಕೃತದಲ್ಲಿ ಅಧ್ಯಯನ ಮಾಡಿಸುತಿದ್ದರು. ವೇದ, ಉಪನಿಷತ್,

ತರ್ಕಶಾಸ್ತ್ರ, ತತ್ತ್ವಜ್ಞಾನ, ವ್ಯಾಕರಣ, ಪುರಾಣ, ಕಾವ್ಯಗಳ ಬಗೆಗೆ ವ್ಯಾಸಂಗ ನಡೆಯುತ್ತಿತ್ತು. ಹಾಗೆಯೇ, ಜಂಗಮರ 'ಅಯ್ಯನವರ ಶಾಲೆ'ಗಳಲ್ಲಿ ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ ಬಸವಾದಿ ಪ್ರಮಥರ ವಚನಗಳನ್ನು, ಹಿರಿಯ ಶರಣರ ಪುರಾಣ ಪುಣ್ಯ ಕಥೆಗಳ ವಿಷಯಗಳನ್ನು ಹೇಳಿಕೊಡುತ್ತಿದ್ದರು.

ಶರೀಫರು ಸ್ಥಳೀಯ ಹಿರೇಮಠದ ಸಿದ್ಧರಾಮಯ್ಯ ಅಯ್ಯನವರ ಶಾಲೆಗೆ ಸೇರಿ ವೀರಶೈವ ಧರ್ಮತತ್ತ್ವ, ಶರಣ ಸಾಹಿತ್ಯವನ್ನು ಮತ್ತು ಅದರ ಪರಂಪರೆಯನ್ನು ಪರಿಚಯ ಮಾಡಿಕೊಂಡರು. ವೀರಶೈವ ಶರಣರಾದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮ ಮುಂತಾದವರ ಜೀವನ ಸಾಧನೆಗಳನ್ನು, ಅವರ ವಚನಗಳನ್ನು ಮನನ ಮಾಡಿಕೊಂಡರು. ವೀರಶೈವ ಧರ್ಮತತ್ತ್ವಗಳಾದ ಅಷ್ಟಾವರಣ, ಷಟ್‌ಸ್ಥಲ ಮತ್ತು ಲಿಂಗಾಂಗ ಸಾಮರಸ್ಯದ ಪರಿಕಲ್ಪನೆಯನ್ನು ಅರಿತರು. ಶಕ್ತಿ ವಿಶಿಷ್ಟಾದ್ವೈತ ತತ್ತ್ವದಿಂದ ಪ್ರಭಾವಿತರಾಗಿ ಯೋಗ-ಜ್ಞಾನಗಳ ಸಮನ್ವಯ ಉಪಾಸನೆಯನ್ನು ಮಾಡಿದರು. ಹಿರೇಮಠದ ಸಿದ್ಧರಾಮಯ್ಯನವರು, ಶಿಶುನಾಳದ ವಿಭೂತಿ ಬಸಯ್ಯ, ಫಕೀರಯ್ಯ ಇವರು ವಚನ ಸಾಹಿತ್ಯವನ್ನು ಹಾಗೂ ಲಿಂಗಾಯತ ಸಂಸ್ಕೃತಿಯನ್ನು ಶರೀಫರಿಗೆ ಅಧ್ಯಯನ ಮಾಡಿಸಿದರು.

ಲಿಂಗಾಯತ ಶರಣರಲ್ಲಿ ಬಸವಣ್ಣ ಹಾಗೂ ಅಲ್ಲಮಪ್ರಭುಗಳೆಂದರೆ ಶರೀಫರಿಗೆ ವಿಶೇಷವಾದ ಭಕ್ತಿ, ಗೌರವ. ಬಸವಣ್ಣನವರ ಭಕ್ತಿ ಒಲುಮೆಗೆ, ಪ್ರಭುದೇವರ ಆತ್ಮಾನುಸಂಧಾನಕ್ಕೆ ಮಾರು ಹೋದ ಶರೀಫರು, 'ಬಸವಣ್ಣನಂಥ ಭಕ್ತನಿಲ್ಲ, ಪ್ರಭುದೇವನಂಥ ಪರಮಾತ್ಮನಿಲ್ಲ' ಎಂದು ಉದ್ಗರಿಸಿದ್ದಾರೆ. ವಿಶೇಷ ಸಂದರ್ಭಗಳಲ್ಲಿ ನಡೆಯುವ ಪುರಾಣ-ಪ್ರವಚನಗಳಿಂದ ಲಿಂಗಾಯತ ಧರ್ಮದಲ್ಲಿ ಆದರಾಭಿಮಾನವನ್ನು ಹೊಂದಿದ್ದರು. ಅಯ್ಯನವರ ಶಾಲೆಯಲ್ಲಿ ಮುಲ್ಕಿ ಮುಗಿಸಿದ ಶರೀಫರು, ಊರಿನ ಪ್ರಮುಖರ ಆಶಯದಂತೆ, ಮತ್ತು ಶಿಕ್ಷಕ ವೃತ್ತಿಯಲ್ಲಿನ ವಿಶೇಷ ಆಸಕ್ತಿಯಿಂದಾಗಿ ಶಿಶುನಾಳದ ಚಂದೇಲಿಂಗ ದೇವಾಲಯದಲ್ಲಿ ಗಾವಟಿ ಶಾಲೆಯೊಂದನ್ನು ತೆರೆದು, ಶಿಶುನಾಳ ಗ್ರಾಮದ ಮಕ್ಕಳಿಗೆ ವಿದ್ಯೆಯನ್ನು ದಾನ ಮಾಡಿದರು. ಆನಂತರದ ದಿನಗಳಲ್ಲಿ ಸುತ್ತಲಿನ ಹಳ್ಳಿಗಳಾದ ಬಸನಾಳ, ಮಂಡಿಗನಾಳ, ಕಾರಡಗಿ, ಕಾಲಕೊಂಡ ಮೊದಲಾದ ಊರುಗಳಲ್ಲಿಯೂ ಶಿಕ್ಷಕರಾಗಿ ಸೇವೆ ಸಲ್ಲಿಸಿ 'ಶರೀಫ್ ಮಾಸ್ತರ' ಎಂದು ಹೆಸರು ಗಳಿಸಿದರು.

ಶರೀಫರು ಶಿಕ್ಷಕ ವೃತ್ತಿಯೊಂದಿಗೆ ಶಿಶುನಾಳದಲ್ಲಿ ನಡೆಯುತ್ತಿದ್ದ ಅನೇಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇಡೀ ಗ್ರಾಮವೇ ಒಂದು ಕುಟುಂಬದಂತಿತು. ಶಿಶುನಾಳದಲಿ ಜರುಗುವ ಎಲ ಸಾಮೂಹಿಕ. ಸಾಂಸ ತಿಕ

ಕಾರ್ಯಗಳಲ್ಲಿ ಗ್ರಾಮದವರೆಲ್ಲರೂ ಭಾಗವಹಿಸುತ್ತಿದ್ದರು. ಶರೀಫರು ಬಾಲ್ಯದ ದಿನಗಳಲ್ಲಿ ಬಯಲಾಟಗಳಲ್ಲಿ ಭಾಗವಹಿಸುವುದು, ಮೊಹರಂ, ಶ್ರಾವಣಮಾಸಗಳಲ್ಲಿ ಸಂದರ್ಭಕ್ಕೆ ಅನುಸಾರವಾಗಿ ವೇಷ ಧರಿಸಿ ಜನಮನವನ್ನು ರಂಜಿಸುವುದು ವಾಡಿಕೆಯಾಗಿತ್ತು. ಊರಿನ ಬಸವೇಶ್ವರ ದೇವಾಲಯ, ಗ್ರಾಮದೇವತೆಯ ಗುಡಿಯಲ್ಲಿ ಭಜನಾ ಮೇಳದೊಂದಿಗೆ ಸೇರಿಕೊಂಡು ಭಜನೆ ಮಾಡುವುದು, ಮೊಹರಂ ಹಬ್ಬದಲ್ಲಿ ಹೆಜ್ಜೆ ಮೇಳಗಳಿಗೆ ಸೂಕ್ತ ತರಬೇತಿ ನೀಡಿ ರಿವಾಯತ್ ರಚಿಸಿ ಡಪ್ಪು ಹಿಡಿದು ಮೇಳದೊಂದಿಗೆ ಹಾಡುವುದು, ಕುಣಿಯುವುದು ಅವರ ಹವ್ಯಾಸವಾಗಿತ್ತು. ಆಶುಕವಿಗಳಾಗಿದ್ದ ಶರೀಫರು ಕೋಲಾಟ, ಲಾವಣಿ ಪದಗಳನ್ನು ರಚಿಸಿ, ಆಕರ್ಷಕವಾಗಿ ಹಾಡುತ್ತಿದ್ದರು. ಜಾತ್ರೆ, ಮೌಜುಗಳಲ್ಲಿ ಸರ್ವಜ್ಞ, ಸರ್ಪಭೂಷಣ ಕವಿಗಳ ಕಾವ್ಯ ವಾಚನ ಮಾಡುತ್ತಿದ್ದರು. ದೊಡ್ಡಾಟ, ಸಣ್ಣಾಟಗಳಲ್ಲಿ ಪ್ರಮುಖ ಪಾತ್ರಧಾರಿಯಾಗಿ ಕುಣಿಯುತ್ತಿದ್ದರು. ಕಥೆಗಾರರಾಗಿ ತಾಳ ಹಿಡಿದು ನಿರ್ದೇಶನ ಮಾಡುತ್ತಿದ್ದರು. ಶರೀಫರು ತಮ್ಮ ಕಾವ್ಯಕೃಷಿಯನ್ನು ಆರಂಭ ಮಾಡಿದ್ದು ಮೊಹರಮ್‌ನಲ್ಲಿ ಕುಣಿಯುವ ಹೆಜ್ಜೆಮೇಳದ ಹಾಡುಗಳಾದ ರಿವಾಯತ್ ರಚನೆಗಳ ಮೂಲಕವೇ. "ವಿದ್ವಾಂಸರ ಪ್ರಕಾರ ರಿವಾಯತ್ ರಚನೆಗಳ ಹರಿಕಾರ ಶರೀಫ ಸಾಹೇಬರು"[೭] ಎಂದು ರಿವಾಯತ್‌ಗಳು ಕೇವಲ ಮುಸ್ಲಿಂ ಧರ್ಮದ ವಿಷಯಗಳಿಗಳಲ್ಲದೆ ಹಿಂದೂ–ಮುಸ್ಲಿಂ ಐಕ್ಯತೆಯ ಧ್ವನಿಯಾಗಿವೆ. ಜ್ಞಾನದಾಹಿಯಾದ ಶರೀಫರು ವಚನವಾಙ್ಮಯ, ಪುರಾಣೇತಿಹಾಸ, ಶಾಸ್ತ್ರಗಳ ಜಿಜ್ಞಾಸೆ, ಸಾಹಿತ್ಯ ಸಂಗೀತ, ಕಾವ್ಯ ನಾಟಕಗಳ ಬಗೆಗೆ ಸತ್ಸಂಗದಲ್ಲಿ ಚರ್ಚೆಯ ಮುಖಾಂತರ ತಮ್ಮ ಅರಿವಿನ ಆಳನ್ನು ವಿಸ್ತರಿಸಿಕೊಳ್ಳುತ್ತಿದ್ದರು.

ಶರೀಫರು ಲೋಕಾನುಭವಿಗಳಾಗಿ ಸಂಘ ಜೀವಿಯಾಗಿ, ಸ್ವಯಂ ಶಿಕ್ಷಕರಾಗಿ, ಸತ್ಸಂಗದಿಂದ, ಸನ್ನಡತೆಯಿಂದ ಅಮೂಲ್ಯವಾದ ಲೋಕಜ್ಞಾನವನ್ನು ಪಡೆದು ಕೊಂಡಿದ್ದರೂ, ಆತ್ಮಜ್ಞಾನಕ್ಕೆ ದಾರಿ ತೋರುವ ಸದ್ಗುರುವಿಗಾಗಿ ಅವರ ಮನಸ್ಸು ಹುಡುಕಾಡುತ್ತಿತ್ತು. ತಂದೆ, ಇಮಾಮ್ ಸಾಹೇಬರ ಸ್ನೇಹಿತರಾದ, ತನ್ನ ವೃತ್ತಿ ಬಾಂಧವರೂ ಆದ ಕಳಸದ ಗೋವಿಂದಭಟ್ಟರನ್ನು ಕುಂದಗೋಳದಲ್ಲಿ ಸಂಧಿಸಿ ಅವರ ಶಿಷ್ಯತ್ವವನ್ನು ಬೇಡಿ ಪಡೆದರು.

ಗೋವಿಂದಭಟ್ಟರು ಧಾರವಾಡ ಜಿಲ್ಲೆಯ ಕಳಸ ಎಂಬ ಹಳ್ಳಿಯವರು. ಶಿಶುನಾಳದ ಹತ್ತಿರವಿರುವ ಊರಿನವರಾದ, ಸ್ಮಾರ್ತ ಶಾಕ್ತೇಯ ಬ್ರಾಹ್ಮಣರು,

ವೇದಶಾಸ್ತ್ರಗಳ ಪಾರಂಗತರಾಗಿದ್ದರು. ವಾಕ್ ಸಿದ್ಧಿಯನ್ನು ಹೊಂದಿದ್ದರಿಂದ ಆಡಿದ್ದೆಲ್ಲ ಆಗಿಬಿಡುವುದೆಂದು ಪ್ರತೀತಿ ಹರಡಿತ್ತು. ಬ್ರಾಹ್ಮಣಿಕೆಯ ಕಟ್ಟುನಿಟ್ಟಾದ ಆಚಾರಗಳಿಗೆ ಅಂಟಿಕೊಳ್ಳದೇ, ಗೊಡ್ಡು ಸಂಪ್ರದಾಯಗಳನ್ನು ವಿರೋಧಿಸಿದವರು. ಶಿಷ್ಟಾಚಾರಕ್ಕೆ ಬೆಲೆ ಕೊಡದೇ ವೈಚಾರಿಕತೆಯ ನೆಲೆಯವರಾಗಿದ್ದರು. ಮನುಷ್ಯನ ಬದುಕಿನಲ್ಲಿ ವಿಕಾಸದೆಡೆಗೆ ಹೋಗುವಾಗ ಮಾರ್ಗದರ್ಶಕರೊಬ್ಬರ ಅವಶ್ಯಕತೆಯನ್ನು ಅರಿತಿದ್ದ ಗೋವಿಂದಭಟ್ಟರು ಶಿಷ್ಯನಿಗೆ ಯೋಗ್ಯ ಮಾರ್ಗದರ್ಶನ ನೀಡಿ ದೀಕ್ಷಾ ಗುರುವೂ, ಮೋಕ್ಷಾಗುರುವೂ ಆದರು.

ಶರೀಫ ಮತ್ತು ಗೋವಿಂದ ಭಟ್ಟರ ಗುರು-ಶಿಷ್ಯ ಸಂಬಂಧ ಅಪರೂಪ ವೆನಿಸುವಂತಹುದು. ಇದಕ್ಕೆ ಕಾರಣ ಹಿಂದೂ-ಮುಸ್ಲಿಮರ ಗುರು-ಶಿಷ್ಯ ಪರಂಪರೆಯು ಇದು ೧೪ನೇ ಶತಮಾನದಿಂದಲೂ ಕರ್ನಾಟಕದ ಅನುಭಾವಿ ಪಂಥದಲ್ಲಿತ್ತು ಎನ್ನಬಹುದು. ಈ ಪರಂಪರೆಯವರಿಗೆ ಕೋಮು ಸಮಸ್ಯೆಯಾಗಲಿ, ಭಿನ್ನಮತೀಯರೆಂಬ ಮತೀಯಭಾವನೆಯಾಗಲಿ, ಭಿನ್ನಧರ್ಮಾಚರಣೆ ಎಂಬ ಧಾರ್ಮಿಕ ಭಿನ್ನಾಭಿಪ್ರಾಯವಾಗಲಿ ಸುಳಿಯಲೇ ಇಲ್ಲ. ಹಿಂದೂ-ಮುಸ್ಲಿಂರ ಬೆಸೆಯುವಿಕೆಗೆ ಸೂಫಿ ಪಂಥವೇ ಕಾರಣ. ಸೂಫಿಗಳು ಕರ್ನಾಟಕದಲ್ಲಿ ಅನೇಕ ಹಿಂದೂ ಶಿಷ್ಯರಿಗೆ ಗುರುಗಳಾದರು. ವಿಶೇಷವೆಂದರೆ ಮೊದಲಿನ ಆಧ್ಯಾತ್ಮಿಕ ಗುರು-ಶಿಷ್ಯ ಪರಂಪರೆಯಲ್ಲಿ ಲಿಂಗಾಯತರ ಮತ್ತು ಮುಸ್ಲಿಮರ ಕೂಡಿಕೆ ಇದ್ದರೆ, ಶರೀಫ ಸಾಹೇಬ ಮತ್ತು ಗೋವಿಂದಭಟ್ಟರ ಮುಸ್ಲಿಂ-ಬ್ರಾಹ್ಮಣ ಬೆರಕೆಯು ವಿಸ್ಮಯಕಾರಿಯಾಗಿ ಕಂಡಿದೆ. ವೈದಿಕ ಸಮಾಜವು ಗೋವಿಂದಭಟ್ಟರನ್ನು ಟೀಕಿಸಿದರೆ ಮುಸ್ಲಿಂ ಸಮುದಾಯ ಶರೀಫರನ್ನು ಆಕ್ಷೇಪಿಸಿದೆ. ಬೌದ್ಧಿಕ ಮುಖಿತ್ವವನ್ನು ಮೈಗೂಡಿಸಿಕೊಂಡಿದ್ದ ಶರೀಫರು ಯಾವ ಸಾಂಪ್ರದಾಯಿಕ ಮುಸ್ಲಿಂ ಆಚರಣೆಗಳನ್ನು ಪಾಲಿಸಲಿಲ್ಲ. ಮಸೀದಿಗೆ ಹೋಗುತ್ತಿರಲಿಲ್ಲ. ನಮಾಜು ಮಾಡುತ್ತಿರಲಿಲ್ಲ. ಈ ಕಾರಣಕ್ಕಾಗಿಯೇ ಮುಸ್ಲಿಂ ಧಾರ್ಮಿಕರ ವಿರೋಧವನ್ನು ಎದುರಿಸಬೇಕಾಯಿತು. ತಮ್ಮ ದೇಹವನ್ನು ತೋರಿಸುತ್ತ ಈ ಮಸೀದಿಯಲ್ಲಿ ಯಾವಾಗಲೂ ನಮಾಜು ಮಾಡುತ್ತಿರುವುದಾಗಿ ಹೇಳುತ್ತಿದ್ದರು. ಶರೀಫರಲ್ಲಿದ್ದ ಆಧ್ಯಾತ್ಮಿಕ ಶಕ್ತಿಯ ದಿಟ್ಟತನವೇ ವಿರೋಧಿಗಳನ್ನು ಎದುರಿಸಲು ಗಟ್ಟಿತನ ಕೊಟ್ಟಿತು.

ಸಂಸಾರಮುಖಿ

ಶರೀಫರು ಲೋಕಾನುಭವದಲ್ಲಿ ಕಂಡುಕೊಂಡ ಸತ್ಯಗಳಿಂದಾಗಲಿ, ಗುರುವಿನ ಮಾರ್ಗದರ್ಶನದಲ್ಲಿ ತನ್ನದಾಗಿಸಿಕೊಂಡ ಆಧ್ಯಾತ್ಮ ಸಾಧನೆಯಿಂದಾಗಲಿ, ಸಂಸಾರವನ್ನು ತ್ಯಜಿಸಿ ಹೋಗುವ ಯೋಗಿಯಾಗಿರಲಿಲ್ಲ. ಅಂದರೆ ಸಮಾಜದಿಂದ

ಹೊರಹೋಗಿ ತನ್ನಾತ್ಮ ಕಲ್ಯಾಣದಲ್ಲಿ ಮನಸ್ಸನ್ನು ತೊಡಗಿಸಿ ಉಳಿದೆಲ್ಲವನ್ನು ಮರೆತು ಬಿಡುವ ಋಷಿಮುನಿಗಳಿಗಿಂತ, ಸಮಾಜದಲ್ಲಿಯೇ ಇದ್ದು, ಎಲ್ಲರ ಬದುಕು, ಬಯಕೆ ಬವಣೆಗಳನ್ನು ವೀಕ್ಷಿಸುತ್ತಾ ನಿರಾಶಾವಾದಿಯಾಗದೇ ಬದುಕಿನ ನಾಟಕವನ್ನು ಒಬ್ಬ ಪ್ರೇಕ್ಷಕನಾಗಿ ನೋಡುವ, ಸಂಸಾರಿಯಲ್ಲಿ ಸದ್ಗತಿಯನ್ನು ಭಾವಿಸಿದರು. ಸಂಸಾರದಲ್ಲಿದ್ದು, ಸದ್ಗತಿಯನ್ನು ಸಾಧಿಸಬೇಕೆಂದು ಶರೀಫರು ತಂದೆ–ತಾಯಿ ಒಪ್ಪಿದ ಹೆಣ್ಣಿನೊಂದಿಗೆ ಮದುವೆಯಾದರು. ಕುಂದಗೋಳಗ್ರಾಮದ ಸುಸಂಸ್ಕೃತ ನಾಯಕ ಮನೆತನದ ಶ್ರೀ ಫಕೀರಸಾಹೇಬರ ಮಗಳು ಫಾತಿಮಾಳನ್ನು ಮದುವೆಯಾದರು. ಗಂಡನಿಗೆ ತಕ್ಕ ಹೆಂಡತಿಯಾಗಿ ಫಾತಿಮಾ ಎಲ್ಲರ ಪ್ರೀತಿ, ವಿಶ್ವಾಸಗಳಿಗೆ ಪಾತ್ರಳಾದಳು. ಶರೀಫರ ಚಿಂತನಾ ಲಹರಿಗೆ ಹಲವು ಹತ್ತು ರೀತಿಯಲ್ಲಿ ಸ್ಪಂದಿಸಿದಳು. ಹೆಣ್ಣನ್ನು ದೈವೀಶಕ್ತಿಯ ರೂಪದಲ್ಲಿ ನೋಡುವ ಶರೀಫರ ಸಂಸ್ಕಾರದ ಮನಕ್ಕೆ ಗುಣವತಿಯಾದ ಹೆಂಡತಿ ಫಾತಿಮಾ ಮಗಳಾಗಿ, ಸೊಸೆಯಾಗಿ, ತಾಯಾಗಿ, ಅತ್ತಿಗೆ–ನಾದಿನಿಯಾಗಿ, ಅಕ್ಕನಾಗಿ, ಅಕ್ಕರೆಯ ಸತಿಯಾಗಿ ಕಾಣಿಸಿಕೊಂಡಳು. ಹೆಂಡತಿಯ ಅನನ್ಯ ಪ್ರೀತಿಯನ್ನು ಮನಸಾರೆ ಸವಿದ ಶರೀಫರ ಆಶು ಕವಿ ಹೃದಯ,

"ನನ್ನ ಹೇಣತಿ ನನ್ನ ಹೇಣತಿ
ನಿನ್ನ ಹೆಸರೇನ್ಹೇಳತಿ ಗುಣವಂತಿ
ಮೊದಲಿಗೆ ತಾಯಾದಿ ನನ್ನ ಹೇಣತಿ ಮತ್ತು
ಮನಕೆ ಸೊಸೆಯಾದ ನನ್ನ ಹೇಣತಿ..."

ಎಂದು ಹಾಡಿ ಹೆಂಡತಿಗೆ ಕೃತಜ್ಞತೆ ಸಲ್ಲಿಸಿದರು.

ಈ ಪದಗಳು ಮನತುಂಬಿದ ಮಡದಿಯ ವ್ಯಕ್ತಿತ್ವವನ್ನು ಸಂಕೇತಿಸುತ್ತವೆ. ಮುಂದೆ ಫಾತಿಮಾ ಒಂದು ಹೆಣ್ಣು ಮಗುವಿಗೆ ಜನ್ಮವನ್ನು ನೀಡಿದಳು. ಮಗುವಿಗೆ ಲತ್ತುಮಾ' ಎಂದು ಹೆಸರಿಟ್ಟರು. ವಾತ್ಸಲ್ಯಮಯಿಯಾದ ತಂದೆ–ತಾಯಿಯರು, ಮೋಹದ ಹೆಂಡತಿ, ಮುದ್ದಿನ ಮಗಳು ಇಂತಹ ತೃಪ್ತಿಯ ಕುಟುಂಬದಿಂದಾಗಿ ಎಡತನದಲ್ಲಿಯೂ ಸಂತೃಪ್ತಿಯ ಜೀವನವನ್ನು ಶರೀಫರು ನಡೆಸಿದರು.

ಸಂಸಾರಿಯಾದ ಪ್ರತಿಯೊಬ್ಬ ವ್ಯಕ್ತಿಗೂ ಲೌಕಿಕ ಸೆಳೆತವು ಹೆಜ್ಜೆ ಹೆಜ್ಜೆಗೆ ಎದುರಾಗಿ ಅವನನ್ನು ಸತ್ವಪರೀಕ್ಷೆಗೆ ಗುರಿ ಮಾಡುತ್ತದೆ. ಇಂತಹ ಸಂಘರ್ಷದಲ್ಲಿಯೇ ವ್ಯಕ್ತಿಯ ಸಾತ್ವಿಕತೆಯ ವ್ಯಕ್ತಿತ್ವವು ಗೋಚರಿಸುವುದು. ಮಳೆ, ಬಿರುಗಾಳಿಗಳಿಂದ ಬರುವ ಕಷ್ಟಗಳನ್ನು ಎದುರಿಸಲಿಕ್ಕೆಂದೇ ಮರಗಳು ಬಲಿಷ್ಠವಾಗಿ ಬೆಳೆದು

ಸನ್ನದ್ಧವಾಗಿರುತ್ತವೆ. ಮುಂದೆ ಆ ಮರಗಳು ಉತ್ತಮ ಫಲಗಳನ್ನು ಕೊಡುತ್ತವೆ ಎಂಬುದು ಶರೀಫರ ವ್ಯಕ್ತಿತ್ವದಿಂದ ವ್ಯಕ್ತವಾಗುತ್ತದೆ.

ಅಂತರ್ಮುಖಿ

ವೃದ್ಧಾಪ್ಯದಿಂದುಂಟಾದ ತಂದೆಯ ಸಾವು, ಅದೇ ಕೊರಗಿನಿಂದ ತೀರಿಹೋದ ಇಳಿವಯಸ್ಸಿನ ತಾಯಿಯ ಅಗಲಿಕೆ ಶರೀಫರಿಗೆ ದುಃಖವನ್ನುಂಟುಮಾಡಿತು. ಆದರೂ ವಯಸ್ಸು ಹೆಚ್ಚಾದಂತೆ ಸಾವಿಗೆ ಸಮೀಪವಾಗುವುದು ಸಹಜವೆಂಬ ಪ್ರಕೃತಿ ನಿಯಮವನ್ನು ಒಪ್ಪಿಕೊಂಡು ಸಮಾಧಾನದಿಂದಿದ್ದರು. ಮುದ್ದಿನ ಮಗಳು ಲತ್ತುಮಾ ಕಾಲರಾ ರೋಗಕ್ಕೆ ಬಲಿಯಾದುದು ಮಾತ್ರ ತಂದೆ–ತಾಯಿಗೆ ಭರಿಸಲಾರದಷ್ಟು ದುಃಖವನ್ನುಂಟುಮಾಡಿತು. ಶರೀಫರಿಗೆ ದಿಕ್ಕು ತೋಚದಂತಾಯಿತು. ಫಾತಿಮಾ ಮಗಳ ಸಾವಿನಿಂದ ತೀವ್ರ ಆಘಾತಗೊಂಡು ಮುಂದೆ ಬದುಕಿನಲ್ಲಿ ಚೇತರಿಸಿಕೊಳ್ಳಲಿಲ್ಲ. ಶರೀಫ ಸಾಹೇಬರನ್ನು ಒಬ್ಬಂಟಿಯನ್ನಾಗಿ ಮಾಡಿ ಮಗಳನ್ನು ಸೇರಿದಳು. ಮಡದಿಯ ಸಾವು ಶರೀಫರನ್ನು ಮತ್ತಷ್ಟು ತಲ್ಲಣಗೊಳಿಸಿತು. ದುಃಖ ನಿರಾಶೆಗಳ ಕಾರ್ಗತ್ತಲಿನಿಂದ ಜೀವನದಲ್ಲಿ ಆಸೆ, ಭರವಸೆಗಳ ಜ್ಯೋತಿ ನಂದಿ ಹೋಗಿ ಶರೀಫರಿಗೆ ಬದುಕು ಶೂನ್ಯವಾಯಿತು. ಪ್ರೀತಿಯ ಮಹಾಪೂರವನ್ನು ಹರಿಸಿದ್ದ ಹೆಂಡತಿಯನ್ನು ಮರೆಯುವುದು ಶರೀಫರಿಗೆ ಕಷ್ಟವಾಗುತ್ತದೆ. ಅವಳ ಸದ್ಗುಣಗಳ ನೆನಪು ಒಂಟಿಯಾದ ಶರೀಫರಿಗೆ ಕಾಡಲು ಒಂದೆಡೆ ನೆಲೆ ನಿಲ್ಲಲಾಗದೆ ಮನಃಶಾಂತಿಯನ್ನು ಹುಡುಕಿ ಊರೂರು ಅಲೆದರು. ದಟ್ಟ ವೈರಾಗ್ಯವನ್ನು ಅಪ್ಪುವ ಮುನ್ನ ಕಾಮಲತೆಯನ್ನು ಕಳೆದುಕೊಂಡ ಅಲ್ಲಮನ ಸ್ಥಿತಿಯಂತೆ ಅವರ ಸ್ಥಿತಿ ಆಯಿತು.

ಫಾತಿಮಾಳ ಅಗಲಿಕೆಯ ಆಘಾತ ಶರೀಫರ ಜೀವನದ ಗತಿಯನ್ನೇ ಬದಲಿಸಿ ಬದುಕಿನ ನಶ್ವರತೆಯನ್ನು ನಿಶ್ಚಲಗೊಳಿಸಿತು. ತಂದೆ–ತಾಯಿ, ಗಂಡ–ಹೆಂಡತಿ, ಮದುವೆ–ಮಕ್ಕಳು ಎಲ್ಲವೂ ಕ್ಷಣಿಕವೆಂಬ ಅರಿವು ಗಟ್ಟಿಯಾಯಿತು. ಶರೀಫ ಸಾಹೇಬರ ಸಮಕಾಲೀನರಾದ ನವಲಗುಂದದ ನಾಗಲಿಂಗಸ್ವಾಮಿ ಹಾಗೂ ಗರಗದ ಮಡಿವಾಳೇಶ್ವರರು ಸಂಸಾರಿಕ ಮೋಹ ಮಾಯೆಗೆ ಒಳಪಡದಿರುವುದು ಕಂಡು ಈ ಸಂಸಾರದಾಟ ಸುಳ್ಳು ಎಂದು ಅರಿತು ಅದರಿಂದ ವಿಮುಖರಾಗಿ ವೈರಾಗ್ಯದ ನಿಲುವನ್ನು ತಳೆದರು. ಅವರೇ ಹೇಳುವಂತೆ,

> **"ಯಾತಕ ಯಾರಿಗೆ ಬೇಕು। ಈ ಸಂಸಾರ ಸುಖ ಇನ್ನು ಸಾಕು।**
> **ನೀ ಸತ್ತು ನಾನಿರಬೇಕು। ನಾನೂ ನೀನೂ ಒಂದಾದ ಮೇಲೆ**

ತಸಂವಸ್ಥಲ ಮಹಾಲಿಂಗನೊಳು ಬೆರೆಯಲಿ ಬೇಕು।
ಇಂತಾದ ಮ್ಯಾಲ ಗುರುಗೋವಿಂದನ ಮರಿ ಶರೀಫನ ಗುರುತು ನಿನಗ್ಯಾಕ?""

ಸಿಹೋದರೂ ನೆನಪಾಗುವ ಹೆಂಡತಿಯನ್ನು ತಮ್ಮೊಳಗೇ ಪ್ರಶ್ನಿಸುತ್ತಾ ಾಯೆ ಒಡ್ಡಿದ ಬಲೆಯನ್ನು ಕಿತ್ತು ಹಾಕಿದರು. ಆತ್ಮೋದ್ಧಾರದ ಮಾರ್ಗ ಂದು. ಭವದ ಸಂಕಟದಿಂದ ತಮ್ಮನ್ನು ಪಾರು ಮಾಡಿ ರಕ್ಷಿಸಬೇಕೆಂದು ೇವಿಂದರಲ್ಲಿ ಬೇಡಿಕೊಳ್ಳುತ್ತಾರೆ.

"ಗುರುನಾಥಾ ರಕ್ಷಿಸು ಹೇ
ಕರುಣಾ ಸಾಗರ।

ನರಜೀವಿಗೆ ಈ ದುರಿತ ಭವದ ಭಯ
ಪರಿಹರಿಸೆನುತಲಿ ಮೊರೆಹೊಕ್ಕೆನು।

ಪಾಪಾಂಬುಧಿಯನು ಪಾರುಮಾಡೆನುತಲಿ ಶ್ರೀ
ಪಾದಾಂಬುಜನ ನಂಬಿಕೊಂಡೆ ಪರಮಾತ್ಮ

ವಸುಧೆಯೊಳು ಶಿಶುನಾಳಧೀಶನ ಸೇವಕನ
ವ್ಯಸನಗಳಳಿದು ಸಂತೋಷದಿ ಸಲಹು"

ರುವಿಗೆ ಶರಣಾಗತರಾಗುತ್ತಾರೆ.

-ಮುಖಿ

ನೆ-ತಾಯಿ, ಮಗು-ಮಡದಿಯನ್ನು ಕಳೆದುಕೊಂಡು ಆರ್ತನಾಗಿ ಆಶ್ರಯ ರೀಫರ ವೇದನೆಯನ್ನು ಕಂಡು ಕರುಣಾಮಯರಾದ ಶ್ರೀ ಗೋವಿಂದ ಮನಸ್ಸು ಕರಗುತ್ತದೆ. ಶರೀಫರಿಗೆ ಆಧ್ಯಾತ್ಮಗುರುವಾಗಿ ಮುಕ್ತಿ ಮಾರ್ಗವನ್ನು ಿಲಿಸಿದರು. ಗುರು ತೋರಿದ ಕರುಣೆಯೆ ಮುಂದೆ ಶರೀಫರ ಬದುಕಿನಲ್ಲಿ ಾದ ಅರುಣೋದಯವಾಗಿ ಪರಿಣಮಿಸಿತು. ಶರೀಫರು ಜ್ಯೋತಿ ಮುಟ್ಟಿದ ಂತೆ ಬೆಳಕು ಚೆಲ್ಲುವ ಮಹಾಜ್ಞಾನಿಗಳಾದರು. ಪರಮಾರ್ಥ ಸಾಧನೆಯ ರ್ಗದಲ್ಲಿ ಮುನ್ನಡೆದು ಆತ್ಮೋದ್ಧಾರಕ್ಕೆ ಅನುವು ಮಾಡಿಕೊಂಡರು. ಆ ಯನ್ನು ಅನ್ಯರಿಗೂ ತತ್ತ್ವಪದಗಳ ಮೂಲಕ ಉಣಬಡಿಸಿದರು.

ಗುರುಗೋವಿಂದ ಮತ್ತು ಶಿಷ್ಯ ಶರೀಫರದು ಅವಿನಾಭಾವ ಸಂಬಂಧ. ಜೀವ ಒಂದು ದೇಹವೆರಡು ಎಂಬಂತೆ ಸದಾಕಾಲವೂ ಒಟ್ಟಾಗಿಯೇ ಇರುತ್ತಿದ್ದರು. ಶರೀಫರಲ್ಲಿ ಗುರುಭಕ್ತಿ, ಸನ್ನಡತೆ, ಪರಮಾರ್ಥದ ಹಂಬಲವನ್ನು ಗುರುತಿಸಿದ ಗುರುಗೋವಿಂದರು ಶಿಷ್ಯನಿಗೆ ಬ್ರಹ್ಮೋಪದೇಶ ಮಾಡಿದರು. ಪರಮಾತ್ಮನ ಸ್ವರೂಪ, ಯೋಗದಿಂದ ಪರಮಾತ್ಮನನ್ನು ಕಾಣುವ ವಿಧಿ ವಿಧಾನ, ನಾಮಸ್ಮರಣೆಯ ಮಹತ್ವವನ್ನು ತಿಳಿಸಿಕೊಟ್ಟರು. ಗುರುಗಳ ಮಾರ್ಗದರ್ಶನದಲ್ಲಿ ಶರೀಫರು ತಮ್ಮ ಚೈತನ್ಯ ಶಕ್ತಿಯನ್ನು ಜಾಗೃತಗೊಳಿಸಿ, ಪರಮಾತ್ಮನ ದರ್ಶನದಿಂದ ಬ್ರಹ್ಮಾನಂದ ಪಡೆದರು. ಈ ಬ್ರಹ್ಮಾನಂದದ ಅನುಭವವನ್ನು 'ಚೀಳಿನ ಕಡಿತ'ದ ಪ್ರತೀಕದಲ್ಲಿರಿಸಿ ಪದಕಟ್ಟಿ ಹಾಡಿದರು.

ಬ್ರಹ್ಮಜ್ಞಾನಿಗಳಾದ ಗುರು-ಶಿಷ್ಯರು ಸದಾ ಜೊತೆಯಲ್ಲಿದ್ದು ಆಧ್ಯಾತ್ಮ ಚಿಂತನೆ ಮಾಡುತ್ತ ಹಗಲು-ರಾತ್ರಿಗಳ ಲೆಕ್ಕವಿಲ್ಲದೆ, ಅನ್ನ ಅರಿವೆಯ ಪರಿವೆ ಇಲ್ಲದೆ, ಎಲ್ಲೆಂದರಲ್ಲಿ ಇರುತ್ತಿದ್ದರು. ವಿಶೇಷವಾಗಿ ಯಾರ ಮನೆ-ಮಠಗಳಿಗೆ ಹೋಗಿ ಉಳಿಯುತ್ತಿರಲಿಲ್ಲ. ಹಾಳು ದೇವಾಲಯ, ಸಾರ್ವಜನಿಕರ ಗುಡಿಗಳೇ ಇವರ ವಾಸ ಸ್ಥಾನಗಳಾದವು. ಆಶುಕವಿಗಳಾದ ಗುರು-ಶಿಷ್ಯರು ಆಧ್ಯಾತ್ಮ ಚಿಂತನೆಯ ಜೊತೆಗೆ ಸಮಾಜದಲ್ಲಿ ನಡೆಯುತ್ತಿದ್ದ ಘಟನೆಗಳನ್ನು ಕುರಿತು ತಕ್ಷಣದಲ್ಲಿ ಪದಕಟ್ಟಿ ಹಾಡುತ್ತಿದ್ದರು.

ಗುರುಗೋವಿಂದರು 'ಗುಡಿಪುರ ಕಲ್ಪ' ಅಂಕಿತದಿಂದ ತಮ್ಮೆಲ್ಲ ಬೇಸರ, ನೋವನ್ನು ಹಾಡಾಗಿಸುತ್ತಿದ್ದರು. ದ್ಯಾಮವ್ವ ದೇವತೆಯ ಮಹಿಮೆಯನ್ನು ಕುರಿತು ಗುರುವಿನಂತೆ ಶಿಷ್ಯ ಶರೀಫರು ಸಹ ಅಲ್ಲಿಯೇ ಹಾಡುತ್ತಿದ್ದರು.

"ಹೌದೆ ನಮ್ಮವ್ವ ನೀನು ಹೌದೆ
ಹೌವೆ ಭವದ ಗೊನೆ ಕೊಯ್ದೆ
ಮುಕ್ತಿಯ ಮನೆಗೊಯ್ದೆ ನಮ್ಮವ್ವ ನೀನು ಹೌದೆ"[೧೨]

ಎಂದು ಭಾವಪರವಶರಾಗಿ ಹಾಡುತ್ತಿದ್ದರು.

ಲೌಕಿಕದ ಎಲ್ಲ ಪರಿವೆಯನ್ನು ಹರಿದು ಅಲೌಕಿಕವಾದ ಆನಂದದಲ್ಲಿ ಮುಳುಗಿದ ಇವರು ಸಾಮಾನ್ಯ ಜನರು ಕೊಡುವ ತೊಂದರೆ, ಪರೀಕ್ಷೆಗಳನ್ನು ಕೆಲವೊಮ್ಮೆ ಸವಾಲಾಗಿ ಸ್ವೀಕರಿಸಿ ಚಮತ್ಕಾರಿಕ ರೀತಿಯಲ್ಲಿ ಪರಿಹಾರವನ್ನು ಕೊಡುತ್ತಿದ್ದರು. ಹಾಗಾಗಿ ಸಿದ್ಧಿ ಪುರುಷರ ಸಹಜ ಕ್ರಿಯೆಗಳೂ ಜನಸಾಮಾನ್ಯರಿಗೆ ಪವಾಡಗಳಾಗಿ ತೋರುತ್ತಿದ್ದವು.

---

೧೨. ಶಿಶುನಾಳ ಶರೀಫರ ಗೀತೆಗಳು, ಶಿವಾನಂದ ಗುಬ್ಬಣ್ಣನವರ ಪು.೨೦.

ಬ್ರಾಹ್ಮಣಗುರು-ಮುಸ್ಲಿಂ ಶಿಷ್ಯರಾದ ಇವರನ್ನು ಬ್ರಾಹ್ಮಣರಾಗಲಿ, ಮುಸ್ಲಿಂರಾಗಲಿ ಪುರಸ್ಕರಿಸಲಿಲ್ಲ. ಮುಸ್ಲಿಂ ಶಿಷ್ಯನ ಒಡನಾಟದಿಂದಾಗಿ ಗುರು ಗೋವಿಂದರು ಬ್ರಾಹ್ಮಣ ಸಮಾಜದಿಂದ ಅವಮಾನ, ತಿರಸ್ಕಾರಗಳಿಗೆ ಒಳಗಾದರು. ದಟ್ಟವಾದ ಮಾನವೀಯತೆ, ವೈಚಾರಿಕ, ಆಧ್ಯಾತ್ಮಿಕ ನೆಲೆಯುಳ್ಳ ಗುರುಗಳು ಇತರರ ಸ್ವಾರ್ಥ, ಸಂಕೋಚ, ಕುಹಕ ದುರ್ಬುದ್ಧಿಗೆ ಸೊಪ್ಪು ಹಾಕದೇ ಬದುಕಿನ ಅತ್ಯಂತಿಕ ಗುರಿಯಾದ ಮುಕ್ತಿ ಸಾಧನೆಗೆ ಪೂರಕವಾಗುವ, ಶಿಷ್ಯನನ್ನು ಪರಮಾರ್ಥದ ಪಥದಲ್ಲಿ ಸಫಲಗೊಳಿಸುವ ತಮ್ಮ ನಿಲುವನ್ನು ಸಮರ್ಥಿಸಿಕೊಂಡು ತಮ್ಮ ಬದುಕಿನ ಕೊನೆಯವರೆಗೂ ಶರೀಫರ ಒಡನಾಡಿಯಾಗಿಯೇ ಉಳಿದರು.

"ಸದ್ಗುರು ಸಾಕಿದ ಮದ್ದಾನಿ ಬರುತಿದೆ
ಎದ್ದು ಹೋಗಿರೋ ಇದ್ದ ನಿಂದಕರೆಲ್ಲ..."[೧೩]

ಎಂದು ಶಿಷ್ಯ ಶರೀಫರ ಮೇಲಿನ ಅಪಾರ ಅಭಿಮಾನದ ಮೂಲಕ ಸಮಾಜದ ನಿಂದಕರನ್ನು ಎದುರಿಸಿದರು.

ಮುಸ್ಲಿಂ ಧರ್ಮದ ರೀತಿ ರಿವಾಜುಗಳನ್ನು ಪರಿಪಾಲಿಸದ ಶರೀಫರ ಬಗೆಗೆ ಮುಸ್ಲಿಂ ಮುಖಂಡರು ಪ್ರತಿರೋಧ ಭಾವನೆಯನ್ನು ತಾಳಿದ್ದರು. ಮಸೀದಿಗೆ ಹೋಗದ, ನಮಾಜು ಮಾಡದ ಶರೀಫರನ್ನು ಮುಸ್ಲಿಂ ಸಮುದಾಯ ಪ್ರಶ್ನಿಸುವುದರೊಂದಿಗೆ ಇತರ ಧರ್ಮದ ಅನುಕರಣೆಯನ್ನು ವಿರೋಧಿಸುತ್ತಲೇ ಬಂದರು.

ಲಕ್ಷ್ಮೇಶ್ವರದ ಜುಮ್ಮಾ ಮಸೀದಿಯಲ್ಲಿ ಕಾಯ್ದಿರಿಸಲಾಗಿದ್ದ ಮೊಹಮ್ಮದ್ ಪೈಗಂಬರರ ಕೇಶದ ದರ್ಶನವನ್ನು ಅಲಾವಿ ಹಬ್ಬದ ಆಚರಣೆಯ ದಿನದಂದು ಎಲ್ಲ ಮುಸ್ಲಿಮರು ಪಡೆಯುತ್ತಾರೆ. ಶರೀಫ ಸಾಹೇಬರು ಕೇಶದ ದರ್ಶನ ಪಡೆಯಲು ಹೋದಾಗ ಹಿಂದೂ-ಬ್ರಾಹ್ಮಣನ ಶಿಷ್ಯನಾಗಿ ಧರ್ಮ ವಿರೋಧಿ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದ ಧರ್ಮದ್ರೋಹಿ ಎಂದು ಅಪಮಾನ ಮಾಡಿ ಅಲ್ಲಿಂದ ಹೊರಗಟ್ಟುತ್ತಾರೆ. 'ಈಶ್ವರ ಅಲ್ಲಾ- ನೀನೇ ಎಲ್ಲಾ' ಎಂಬ ತತ್ತ್ವಕ್ಕೆ ನಿಷ್ಠರಾದ ಶರೀಫರು ಎಲ್ಲೆಲ್ಲಿಯೂ ಅಲ್ಲಾಹನ ಇರುವಿಕೆಯ ಅನುಭಾವವನ್ನು ಪಡೆದು ಧನ್ಯರಾಗುತ್ತಾರೆ.

ಶರೀಫರು ಮೊಹರಮ್ ಹಬ್ಬದ ನಿಜವಾದ ಅರ್ಥವನ್ನು, ಸಂಕೇತವನ್ನು ಕರ್ಬಾಲ ಯುದ್ಧದ ಸಂದರ್ಭವನ್ನು ತಮ್ಮ ರಿವಾಯತ್ ಪದಗಳಲ್ಲಿ ತಂದರು. ಸಂತೋಷ ಸಂಭ್ರಮದಿಂದ ಆಚರಿಸುವ ಮೊಹರಮ್ ಹಬ್ಬದ ಆಚರಣೆ ದುಃಖ

ಸನ್ನಿವೇಶದ ಘಟನೆಯಾಗಿದೆ ಎಂದು ರಿವಾಯತ್ ಪದಗಳ ಮೂಲಕ ಹಾಡಿ ಹೇಳಿದರು. ಎಲ್ಲ ಧರ್ಮಗಳಲ್ಲಿ ಆಚರಣೆ ಬೇರೆಯಾಗಿದ್ದರೂ ಅವುಗಳಲ್ಲಿರುವ ತತ್ತ್ವ ಒಂದೇ. ಆ ತತ್ತ್ವವೇ ಮತಭೇದಗಳನ್ನು ಅಲ್ಲಗಳೆದು ಎಲ್ಲರನ್ನು ಒಗ್ಗೂಡಿಸುವ ಐಕ್ಯದ ಮಂತ್ರವಾಗಿದೆ. ಶರೀಫರು ವೀರಶೈವ ಮತ್ತು ವೈದಿಕ ಧರ್ಮದ ಅನುಯಾಯಿಗಳೆಂದು ಮುಸ್ಲಿಂ ಧರ್ಮದವರು ಆಪಾದಿಸಿದರು. ಆ ಧರ್ಮಗಳಲ್ಲಿರುವ ಅನಾಚಾರಗಳನ್ನು ಸಹ ಶರೀಫರು ನಿಷ್ಠುರವಾಗಿ ಖಂಡಿಸಿದ್ದಾರೆ.

ಚರಮೂರ್ತಿಗಳಾದ ಶರೀಫರು ತಮ್ಮ ಆಧ್ಯಾತ್ಮ ಸಾಧನಾ ಮಾರ್ಗದಲ್ಲಿ ಶ್ರೀಕ್ಷೇತ್ರಗಳ ದರ್ಶನ ಪಡೆದು, ಸಿದ್ಧಿ ಪುರುಷರನ್ನು ಸಂಧಿಸಿದ್ದಾರೆ. ಉತ್ತರ ಕರ್ನಾಟಕದ ಭಾಗಗಳಾದ ಧಾರವಾಡ, ಬೆಳಗಾವಿ, ಕಾರವಾರ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಸಂಚರಿಸುತ್ತಾ ಅಲ್ಲಿ ನಡೆಯುತ್ತಿದ್ದ ಜಾತ್ರೆ, ತೇರು, ಉತ್ಸವಗಳಂಥ ಸಾಮೂಹಿಕ ಆಚರಣೆಗಳಲ್ಲಿ ಪಾಲ್ಗೊಂಡು ಜನರ ಭಕ್ತಿ, ಭಾವ ಸಾಮಾಜಿಕ–ಸಾಂಸ್ಕೃತಿಕ, ಆಚಾರ–ವಿಚಾರಗಳನ್ನು ಪ್ರತ್ಯಕ್ಷ ಕಂಡು ಪದಕಟ್ಟಿ ಹಾಡಿದ್ದಾರೆ.

ಶಿಶುನಾಳ ಗ್ರಾಮದ ಸುತ್ತಲಿರುವ ಅತ್ತಿಗೇರಿ, ಹುಲಗೂರು, ಕಳಸ, ಗುಡಗೇರಿ, ಸವದತ್ತಿ, ಎಲ್ಲಮ್ಮನಗುಡ್ಡ, ಬಸನಾಳ, ಕ್ಯಾಲಕೊಂಡ, ಎರಿಬೂದ್ಯಾಳ, ಸಂಶಿ, ಮಾಗಡಿ, ಶಿರಹಟ್ಟಿ, ಹಾವೇರಿ, ಹುಬ್ಬಳ್ಳಿ ಹೀಗೆ ಅಂದಿನ ಅಖಂಡ ಧಾರವಾಡ ಜಿಲ್ಲೆಗೆ ಒಳಪಡಿಸುವ ಎಲ್ಲ ಊರುಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ ಶರೀಫರು ಅಡ್ಡಾಡಿದಾರೆ. ಸ್ಥಳೀಯ ದೇವರ ದರ್ಶನಗಳಿಂದ ಭಾವ ಪರವಶರಾಗಿ ಗ್ರಾಮದೇವತೆಗಳ ಮೇಲೆ, ಲಿಂಗಾಯತ ದೈವಗಳ ಮೇಲೆ, ವೈದಿಕರ ದೇವರುಗಳ ಕುರಿತು ಸ್ತುತಿ, ದಂಡಕ, ಮಂಗಳಾರತಿ ಪದಗಳನ್ನು ರಚಿಸಿ, ಕರ್ಣಾನಂದಕರವಾಗಿ ಹಾಡಿದ್ದಾರೆ.

ಶರೀಫರ ಸಮಕಾಲೀನ ಸಿದ್ಧಿ ಪುರುಷರಾದ ನವಲಗುಂದದ ನಾಗಲಿಂಗ ಸ್ವಾಮಿ, ಗರಗದ ಮಡಿವಾಳಪ್ಪ, ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿ, ಗದುಗಿನ ಶಿವಾನಂದ ಸ್ವಾಮಿ, ಗುಡಗೇರಿಯ ಸಂಗಮೇಶ್ವರಸ್ವಾಮಿ, ಅಗಡಿಯ ಶೇಷಾಚಲಸ್ವಾಮಿ, ಗುರ್ಲಹೊಸೂರಿನ ಶ್ರೀ ಚಿದಂಬರ ದೀಕ್ಷಿತ, ಶರೀಫರ ಗುರುಗಳಾದ ಗುರುಗೋವಿಂದಭಟ್ಟ, ವಿಶ್ವಕರ್ಮದ ಶ್ರೀ ಪ್ರಭುಸ್ವಾಮಿ, ಅವರಾದಿಯ ಶ್ರೀ ಫಲಾಹಾರಸ್ವಾಮಿ ಮತ್ತು ಶರೀಫರಿಗಿಂತ ಚಿಕ್ಕವರಾದ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿಗಳು– ಈ ಮೊದಲಾದವರ ಒಡನಾಡ ಶರೀಫ ಸಾಹೇಬರಿಗಿತ್ತು. ಅವರ ಪ್ರಭಾವಕ್ಕೆ ಶರೀಫರು ಒಳಗಾಗಿದ್ದರು.

ಇವರೆಲ್ಲರಲ್ಲಿ ನವಲಗುಂದದ 'ನಾಗಲಿಂಗಸ್ವಾಮಿ, ಗರಗದ ಮಡಿವಾಳಪ್ಪ, ಇವರು ಶರೀಫರೊಂದಿಗೆ ತುಂಬಾ ಆತ್ಮೀಯವಾಗಿದ್ದು, ಇವರೆಲ್ಲರು ಬೆಳಗಾವಿ ಜಿಲ್ಲೆಯ ಮುರಗೋಡ ಗ್ರಾಮದ ಸಮೀಪ ಇರುವ ಸಿದ್ಧರ ಗವಿಯಲ್ಲಿ ಸಮಯ ಕಳೆಯುತ್ತಿದ್ದರು.

ಶರೀಫರು ಪವಾಡಗಳನ್ನು ಮಾಡಿರುವ ಬಗ್ಗೆ ಪ್ರತೀತಿ ಇದೆ. ಆದರೆ ಸಣ್ಣಪುಟ್ಟ ಸಂದರ್ಭಗಳನ್ನು ಒಳಗೊಂಡಂತೆ ನೂರಾರು ಕವಿತೆಗಳನ್ನು ರಚಿಸಿರುವ ಶರೀಫರು ತಮ್ಮ ಪವಾಡಗಳನ್ನು ಕುರಿತು ಒಂದು ಪದವನ್ನೂ ಹಾಡಿಲ್ಲ.

ಶರೀಫರು ಸಿದ್ಧಿಪುರುಷರಾದರೂ ಜನರನ್ನು ಮರುಳುಗೊಳಿಸುವ, ಜನಾಕರ್ಷಣೆಯನ್ನು ಪಡೆಯುವ ಪವಾಡಗಳ ಮೋಡಿಯ ತಂತ್ರ ಕಲೆಯ ಬಗೆಗೆ ಅವರಿಗೆ ಆಸಕ್ತಿ ಇರಲಿಲ್ಲ. ಸಾಮಾನ್ಯರೊಂದಿಗೆ ಸಾಮಾನ್ಯರಾಗಿದ್ದು 'ಭಕ್ತಿ' ಎಂಬ ಪವಾಡದಿಂದ ನೀತಿ, ಮೌಲ್ಯ, ಆಧ್ಯಾತ್ಮ, ಪರಮಾರ್ಥದಂಥ ಸಿದ್ಧಿಯನ್ನು ಸಾಧಿಸುವುದು ಸುಲಭ ಸಾಧ್ಯವೆಂದು ಅರಿತಿದ್ದರು.

ಶರೀಫರ ಪದಗಳೇ ಪವಾಡಗಳು. ಅವರ ಜೀವನದ ಎಲ್ಲ ಒಳ ಹೊಳಹುಗಳನ್ನು ಬಿಚ್ಚಿ ಹೇಳುವ ಪದಗಳು ಅವರ ಜೀವನದ ಸ್ಪಷ್ಟ ಪರಿಚಯವನ್ನು ಮಾಡಿಕೊಡುತ್ತವೆ. ಆಡುನುಡಿಯ, ಗ್ರಾಮೀಣ ಪರಿಸರದ, ದಿನನಿತ್ಯದ ಲೌಕಿಕ ಘಟನೆಗಳಿಗೆ ಆಧ್ಯಾತ್ಮದ ಏಣಿ ಹತ್ತಿಸಿ ಪಾರಮಾರ್ಥದಲ್ಲಿ ನೆಲೆಗೊಳಿಸುವ ಅವರ ಪದಗಳು, ಎಂಥ ಪವಾಡಗಳನ್ನೂ ಮೀರಿ ನಿಲ್ಲುವ ಶಕ್ತಿ ಹೊಂದಿವೆ. ನೇರವಾಗಿ ಜನಮನದಲ್ಲಿ ಸ್ಥಾಯಿಯಾಗಿ ಅಂತರಂಗದ ಕದವನ್ನು ತಟ್ಟುತ್ತವೆ. ಲೋಕಕಲ್ಯಾಣ ಪಥದಲ್ಲಿ ಪರ್ಯಾವಸನಗೊಳ್ಳುವ ಶರೀಫರ ಪದಗಳು ಸದಾ ಕಾಲಕ್ಕೂ ಪವಾಡಗಳಾಗಿ ಜನಸಾಮಾನ್ಯರ ಬದುಕಿನಲ್ಲಿ ಹಾಸುಹೊಕ್ಕಾಗಿರುತ್ತವೆ ಎನ್ನುವುದು ಮಾತ್ರ ಸತ್ಯ ಸಂಗತಿ. ಶರೀಫರ ಪದಗಳನ್ನು ಮೆಚ್ಚಿ ಮಂಡಿಗವಾಡದ ಗುರುಪಾದಪ್ಪನು, ಶರೀಫರ ಜೊತೆಗಾರನಾಗಿ ಅವರೊಂದಿಗೆ ಊರೂರು ತಿರುಗುತ್ತಿದ್ದನು. ಶರೀಫರ ಎಷ್ಟೋ ಪದಗಳನ್ನು ಕಂಠಪಾಠ ಮಾಡಿ ಹಾಡುತ್ತಿದ್ದನು. ಕೊನೆಗೆ ಶರೀಫರ ಶಿಷ್ಯನಾಗಿ ಅವರ ತತ್ತ್ವಗಳನ್ನು, ಹಾಡುಗಳನ್ನು ಪ್ರಚಾರ ಮಾಡಿದನು. ಮುಂದೆ ಮಂಡಿಗನಾಳದಿಂದ ಚಿಕ್ಕನರ್ತಿಗೆ ಬಂದು ನೆಲಸಿದನು. ಗುರುಪಾದಪ್ಪನಿಗೆ ದೇವಿರಪ್ಪನು ಶಿಷ್ಯನಾಗಿ ಗುರುವಿನಂತೆಯೇ ಶರೀಫರ ತತ್ತ್ವಪದಗಳನ್ನು ಪ್ರಚಾರ ಮಾಡಿದನು. ಇವರ ಗದ್ದುಗೆಗಳು ಇಂದಿಗೂ ಚಿಕ್ಕನರ್ತಿಯಲ್ಲಿವೆ, ಗುರುಪಾದಪ್ಪನ ಗದ್ದುಗೆಯ ಪಕ್ಕದಲ್ಲಿ ಶರೀಫರದೊಂದು ಚಿಕ್ಕಗದ್ದುಗೆಯನ್ನು ನಿರ್ಮಿಸಿದ್ದಾರೆ. ದೇವಸ್ಥಾನದ ಮುಂಭಾಗದಲ್ಲಿ ದೇವಿರಪ್ಪನ ಸಮಾಧಿಯಿರುವುದನು ಕಾಣಬಹುದು.

ಗುರುಗೋವಿಂದ, ಶರೀಫ, ಗುರುಪಾದಪ್ಪ, ದೇವಿರಪ್ಪರಾದಿಯಾಗಿ ಗುರು–ಶಿಷ್ಯರ ಪರಂಪರೆಯು ಬೆಳೆಯಿತು. ಆದರೆ ಶರೀಫರ ಮತ್ತು ಗುಡಗೇರಿ ಮುದುಕಪ್ಪನವರ ಸಂಬಂಧ ಮಾತ್ರ ಅನ್ಯೋನ್ಯತೆಯಿಂದ ಕೂಡಿತ್ತು ಎನ್ನಬಹುದು.

ಜನಾನುಭವದ ದಟ್ಟ ಸಾಂಸ್ಕೃತಿಕತೆಯ, ಸಮಾಜೋದ್ಧಾರದ ಗುರಿ ಹೊಂದಿರುವ ಶರೀಫರ ಪದಗಳನ್ನು ಗುಡಗೇರಿಯ ಮುದುಕಪ್ಪನು ಬರೆದಿಡುತ್ತಿದ್ದನು.

ಆನಂದಲಹರಿಯಲ್ಲಿ ನಾದಬ್ರಹ್ಮನಲ್ಲಿ ಏಕನಾಗಿ ದೇವೋನ್ಮಾದದಲ್ಲಿ ಮೈಮರೆತು ಹಾಡುವುದು ಶರೀಫರ ಗುಂಗಾಗಿತ್ತು. ಆ ಗುಂಗಿನಲ್ಲಿ ಸದಮಲಜ್ಞಾನದ ಕುದಿ ಉಕ್ಕಿ ಬರುವಾಗ ಲಿಖಿತರೂಪದಲ್ಲಿ ಬರೆದುಕೊಳ್ಳುತ್ತಾ, ಆ ಬ್ರಹ್ಮಾನಂದ ಲಹರಿಗೆ ಅಡಚಣೆ ಮಾಡುವುದು ಸಾಧ್ಯವಿರಲಿಲ್ಲ. ಅಷ್ಟೊಂದು ತನ್ಮಯತೆ ಶರೀಫರಿಗೆ ಇದ್ದುದರಿಂದಲೇ ತಮ್ಮ ಜೀವನದ, ಸುತ್ತಲಿನ ಸಮಾಜದ ಬಹುತೇಕ ಘಟನೆಗಳ ಬಗ್ಗೆ ಇದ್ದಕ್ಕಿದ್ದ ಹಾಗೆಯೇ ನೂರಾರು ಪದಗಳನ್ನು ಕಟ್ಟಿ ಹಾಡಲು ಸಾಧ್ಯವಾಯಿತು. ಬರೆದಿಡುವುದಕ್ಕಿಂತ ಹಾಡುವುದರಿಂದಲೇ ಶರೀಫರಿಗೆ ಸಂತೋಷ ಸಿಗುತ್ತಿತ್ತು. ಅದಕ್ಕಾಗಿಯೇ ಕುಂಬಾರ ಮುದುಕಪ್ಪನಿಗೆ 'ಬರಕೋ ಪದ ಬರಕೊ' ಎಂದು ಹೇಳುತ್ತಾನೆ.

ಬರಕೋ ಪದ ಬರಕೋ
ಇದರನ್ವಯ ತಿಳಿಕೋ

ಸದಮಲಜ್ಞಾನದಿ ಕುದಿ ಉಕ್ಕಿಬರುವಾಗ
ನದರಿಟ್ಟು ನಿನ್ನೊಳು ಸದಮಲ ತತ್ತ್ವದಿ ಬರಕೋ॥[೧೪]

ಎಂದು ಹಾಡಿದರು. ಶರೀಫರಂಥ ವೈಚಾರಿಕರಿಗೆ ಜ್ಞಾನಿಗಳ ಅನುಯಾಯಿಯಾಗಿ ಸೇವೆ ಸಲ್ಲಿಸಿದ ಗುಡಗೇರಿಯ ಕುಂಬಾರ ಮುದುಕಪ್ಪನು ಸಜ್ಜನನು, ಶೀಲವಂತನು. ತತ್ತ್ವಪದಗಳ ಬಗೆಗೆ ಆಸಕ್ತಿಯನ್ನುಳ್ಳವನಾಗಿದ್ದನು. ಶರೀಫರ ಆಶುಕವಿತ್ವದ ಪದಗಳನ್ನು ಮುದುಕಪ್ಪನು ಅಗಾಧ ಸ್ಮರಣ ಶಕ್ತಿಯಿಂದ ನೆನಪಿನಲ್ಲಿಟ್ಟುಕೊಂಡು ನಂತರ ಲಿಖಿತ ರೂಪಕ್ಕೆ ತಂದುದು ಮಾತ್ರ ಸ್ಮರಣೀಯವಾದುದು. ಮುಂದಿನ ಜನಾಂಗಕ್ಕೆ ಶರೀಫರ ಚಿಂತನೆಗಳು ಪ್ರೇರಣೆಯಾದುದಕ್ಕೆ ಕಾರಣವಾಗಿದ್ದಾನೆ.

ಮುದಕಪ್ಪನ ಮಗಳು ಬಸಮ್ಮ ನಿರಕ್ಷರಿಯಾಗಿದ್ದರೂ ತಂದೆಯಂತೆ ಸಂಗೀತ ಪ್ರೇಮಿಯಾಗಿರಬೇಕು. ಶರೀಫರ ಹಾಡುಗಳನ್ನು, ತಂದೆಯಿಂದ ಕಲಿತು ತಾನೇ

---

೧೪. ಬರಕೋ ಪದಾ ಬರಕೋ. ಸಂ. ಡಾ.ಶಿವಾನಂದ ಗುಬ್ಬಣ್ಣನವರ ಕನ್ನಡ ಸಾಹಿತ್ಯ ಪರಿಷತ್ತು, ೧೯೮೧. ಪು.೧೫೭

ರಾಗ ಸಂಯೋಜನೆ ಮಾಡಿ ಇಂಪಾಗಿ ಹಾಡುತ್ತಿದ್ದಳು. ಶರೀಫರೇ ಒಂದೊಂದು ಸಲ ಬಸಮ್ಮನನ್ನು 'ಗುಂಡಿ ಬಾ ಇಲ್ಲಿ' ಎಂದು ಕರೆದು ತಮ್ಮ ಪದಗಳನ್ನು ಹಾಡಿಸುವುದರ ಮೂಲಕ ಸಂತೋಷ ಪಡುತ್ತಿದ್ದರು.

"ಪದವ ಬ್ಯಾಗನೇ ಕಲಿ ಕಲಿ ಶಿವ
ಭಕ್ತಿಯ ಹೃದಯದಿ ಬೆಳ ಬೆಳ॥

ಆಡಿಗನ ಪ್ರಾಸಕೆ ದೊರಕದ ಪದವು
ನುಡಿ ಶಬ್ದಕೆ ನಿಜ ನಿಲುಕದ ಪದವು॥
ಕೂಡು ಬಟ್ಟಿನ ಕೈ ತಾಳ ಮಾತ್ರೆಯ
ಬಡಿವಾರಕೆ ಬೈಲಾಗದ ಬ್ರಹ್ಮನ ಪದವು॥

ಗಾನ ನೇಮದ ಗುಣಗೆಡಿಸುವ ಪದವು
ತುಣುಕು ಶಾಸ್ತ್ರಕೆ ಮಣಿಯದ ಪದವು॥
ಗುಣಿಸಿಕೊಳದ ಸಂಗೀತ ಸ್ವರಗಳು
ಎಣಿಸಿ ಒಳಗೆ ಕುಣಿಸ್ಯಾಡುವ ಪದವು॥

ಲಯ ಪ್ರಳಯಕೆ ಒಳಗಾಗದ ಪದವು
ನಿಲಯದೊಳಗೆ ನಿಜ ನಿಲಿಸುವ ಪದವು॥
ಒಲುಮೆಯಿಂದ ಶಿಶುನಾಳಧೀಶನು
ಸುಲಭಕೆ ಎದೆಯೊಳು ಬಿತ್ತಿದ ಪದವು॥"[೧೫]

ಈ ರೀತಿಯಲ್ಲಿ ಪದಗಳನ್ನು ಹಾಡಿ ಬಸಮ್ಮಳಿಗೆ ಹಾಡು ಕಲಿಯಲು ಪ್ರೋತ್ಸಾಹಿಸುತ್ತಿದ್ದನು.

ತಮ್ಮ ಬದುಕನ್ನೆ ಹಾಡಾಗಿಸಿ ಜನಮನವನ್ನು ತಣಿಸಿ ಬಾಳಿನ ದಾರಿಗೆ ಬುನಾದಿಯಾಗಿದ್ದ ಶರೀಫರ ಲೌಕಿಕ ಬದುಕು ಬಡತನದಿಂದ ಕೂಡಿತ್ತು. ಬಡತನದಲ್ಲಿ ಬೆಂದು ಬಳಲಿದರೂ ಯಾರ ಮನೆಗೂ ಸಹಾಯ ಬೇಡಿ ಹೋಗುತ್ತಿರಲಿಲ್ಲ. ಗುಡಗೇರಿ ಕುಲಕರ್ಣಿಯವರು ಆಗಾಗ ದವಸಧಾನ್ಯವನ್ನು ನೀಡುವುದರ ಮೂಲಕ ಇವರಿಗೆ ನೆರವಾಗುತ್ತಿದ್ದರು. ಕುಂದಗೋಳದ ನಾಡಿಗೇರವರ ಮನೆಯಲ್ಲಿ ಮಾತ್ರ ಶರೀಫರ ಮನಬಿಚ್ಚಿ ಮಾತಾಡಿ ಒಳ್ಳೆಯ ಸಲುಗೆಯಿಂದ ಊಟ-ವಸತಿ ಮಾಡುತ್ತಿದ್ದರು. ಕುಂಬಾರ ಮುದುಕಪ್ಪನ ಮನೆಯಲ್ಲಿ ತಂದೆ, ಮಗಳ ಸೇವೆಯನ್ನು ಮನಸಾರೆ ಸ್ವೀಕರಿಸುತ್ತಿದ್ದರು. ತನ್ನ ಮನೆಯಂತೆಯೇ ಸಂಕೋಚವಿಲ್ಲದೆ ಸಲೀಸಾಗಿ

---

೧೫. ಶಿಶುನಾಳ ಶರೀಫ ಗೀತೆಗಳು, ಸಂ.ಡಾ. ಶಿವಾನಂದ ಗುಬ್ಬಣ್ಣವರ ಅಕ್ಷಯ ಪ್ರಕಾಶನ.

ಇರುತ್ತಿದ್ದರು. ಯಾರಾದರೂ ಪ್ರೀತಿಯಿಂದ ಊಟಕ್ಕೆ ಕರೆದರೆ ಪ್ರಸಾದವೆಂದು ಸ್ವೀಕರಿಸುತ್ತಿದ್ದರು. ಕೆಲವು ಸಲ ಅನ್ನದ ಋಣದಲ್ಲಿ ಇರಬಾರದೆಂದು ಊಟವಿಲ್ಲದೆ ಉಪವಾಸದಿಂದಿರುತ್ತಿದ್ದರು. ಮಾಡಿದ ಸಾಲದ ಹೊರೆಯು ದಿನದಿನಕ್ಕೆ ಹೆಚ್ಚಾಗುತ್ತಿತ್ತು. ಸಾಲದಿಂದ ಋಣ ಮುಕ್ತರಾಗಲು ತಮ್ಮಲ್ಲಿದ್ದ ಆಸ್ತಿಯನ್ನೆಲ್ಲಾ ಮಾರಿದರು. ರೆವಿನ್ಯೂ ಸರ್ವೆ ನಂಬರ್ ೨೪೨, ೨೪೩/೨-೨೦ ಎಕರೆ ೨೪ ಗುಂಟೆ ಆಸ್ತಿಯನ್ನು ೨೦೦ ರೂ.ಗಳಿಗೆ ಕ್ರಿ.ಶ. ೧೮೮೮ ಆಗಸ್ಟ್ ತಿಂಗಳಲ್ಲಿ ಮಾರಾಟ ಮಾಡಿದರು ಎಂದು ಡಾ. ಎಂ.ಎನ್. ಸಿಂದಗಿ ಅವರು ಹೇಳುತ್ತಾರೆ.

ಶ್ರೀ ಶರೀಫರು ತಮ್ಮ ೭೦ನೇ ವರ್ಷದಲ್ಲಿ ಅಂದರೆ ಕ್ರಿ.ಶ. ೧೮೮೯ ಮಾರ್ಚ್ ೭ರಂದು ವಿಧಿವಶರಾದರು. ತಮ್ಮ ಅನುಭವ ಸಿದ್ಧಿಯಿಂದ ತಮ್ಮ ಮರಣದ ಕಾಲವನ್ನು ಮೊದಲೇ ತಿಳಿದಿದ್ದರು. ಈ ಜ್ಞಾನದಿಂದಾಗಿ ಕೊನೆಕೊನೆಗೆ ದೇವೋನ್ಮಾನದ ನಿಬ್ಬೆರಗಿನಲ್ಲಿ ದೇಹದ ಮೇಲಿನ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದ್ದರು. ಆ ಸ್ಥಿತಿಯಲ್ಲಿಯೇ ತಮ್ಮ ಕೊನೆಯ ಪದವನ್ನು ಹಾಡಿರುವುದನ್ನು ಈ ಕೆಳಗಿನ ತತ್ತ್ವಪದದಲ್ಲಿ ಗುರುತಿಸಬಹುದು.

"ಬಿಡತೇನೀ ದೇಹಾ ಬಿಡತೇನಿ।
ಬಿಡತೇನಿ ದೇಹವ ಕೊಡತೇನಿ ಭೂಮಿಗೆ
ಇಡತೇನಿ ಮಹಿಮರ ನಡತಿಯ ಹಿಡಿದು।
ಕರುಣದಿ ಕರ್ಮದ ದುರಿತವ ಕಳೆದು
ಮರಣವಳಿದು ಮಾಯಾ ಪರವಶನಾಗದೆ।
ಪಾವಕಗಾಹುತಿ ಜೀವದನುವು ಬ್ಯಾರೆ
ಭಾವದಿ ಬಯಲು ಬ್ರಹ್ಮದೊಳು ನಾನಾಡುತ।
ಅವನಿಯೊಳು ಶಿಶುನಾಳಧೀಶನೇ ಗತಿಯೆಂದು
ಜವನಬಾಧೆಯ ಗೆದ್ದು ಶಿವಲೋಕದೊಳಗ ನಾ। ಬಿಡತೇನಿ ದೇಹ..."[೧೬]

ಸತ್ಯ ನಿಷ್ಠ ಶರಣಂಗೆ, ಯೋಗಿಗಳಿಗೆ ಇರುವ ಅಗಾಧ ಆತ್ಮವಿಶ್ವಾಸ, ಬಲವನ್ನು ಈ ಪದ್ಯ ಹೇಳುತ್ತವೆ. ಯಮನ ಯಾತನೆಯಿಂದ ಪಾರಾಗಿದ್ದೇನೆಂಬ ಆತ್ಮವಿಶ್ವಾಸ ಅವರಿಗಿತ್ತು. ಆ ಕಾರಣಕ್ಕಾಗಿಯೇ ದೇಹವನ್ನು ತ್ಯಜಿಸಿ ಶಿವಲೋಕ ಸೇರುತ್ತೇನೆ ಎಂದು ಘಂಟಾಘೋಷವಾಗಿ ಹಾಡಿದರು.

ಗುರುಗೋವಿಂದರಿಂದ ಜನಿವಾರವನ್ನು ಹಾಕಿಸಿಕೊಂಡು, ಬದುಕಿನುದ್ದಕ್ಕೂ

---

೧೬ ಶಿಶುನಾಳ ಶರೀಫ ಗೀತೆಗಳು, ಸಂ.ಡಾ. ಶಿವಾನಂದ ಗುಬ್ಬಣ್ಣನವರ ಅಕ್ಷಯ ಪ್ರಕಾಶನ, ಧಾರವಾಡ, ೨೦೦೨, ಪು. ೧೬೬

ಲಿಂಗಾಯತ ಧರ್ಮದ ಸಂಸ್ಕಾರವನ್ನು ಪಡೆದು ಶಿವಶರಣರ ಪ್ರಭಾವಕ್ಕೆ ಒಳಗಾಗಿದ್ದ ಶರೀಫ ವಿಭೂತಿ-ವೀಳ್ಯ-ಪತ್ರಿ ಸಂಪ್ರದಾಯದಿಂದ ದೇಹ ತ್ಯಾಗ ಮಾಡಲು ನಿಶ್ಚಯಿಸಿದರು. ಆ ವಿಧಾನದಲ್ಲಿ ಜಂಗಮನ ಪಾದಪೂಜೆ ಮಾಡಿ, ಜಂಗಮನ ಪಾದವನ್ನು ತಲೆಯ ಮೇಲಿಟ್ಟುಕೊಂಡು ದೇಹತ್ಯಾಗ ಮಾಡಿ ತನ್ನ ಅಂತ್ಯ ಸಂಸ್ಕಾರವಾಗಬೇಕು ಎಂದು ಹೇಳಿದರು. ಆದರೆ ಶರೀಫರಂಥ ಮಹಾನುಭಾವಿಗಳಿಂದ ಪಾದಪೂಜೆ ಮಾಡಿಸಿಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಶಿಶುನಾಳದ ಹಿರೇಮಠದ ಗುರುಬಸಯ್ಯನವರು ಇಂಥ ಶರಣನ ಮಸ್ತಕದ ಮೇಲೆ ಪಾದವಿಡಲು ನಿರಾಕರಿಸಿದರು. ಶರೀಫರ ಕೊನೆ ಆಸೆಯನ್ನು ಈಡೇರಿಸಬೇಕೆಂದು ಹಿಂದು-ಮುಸ್ಲಿಂ ಎರಡೂ ಧರ್ಮದವರು ನಿರ್ಧರಿಸಿದರು. ಹಿರೇಮಠದ ಕರಿಬಸಯ್ಯನವರನ್ನು ಪರಿಪರಿಯಾಗಿ ಕೇಳಿಕೊಂಡರು. ತಮ್ಮ ಸಾಮರ್ಥ್ಯದ ಅರಿವಿದ್ದು, ಎಲ್ಲ ಹೊಣೆಯನ್ನು ಶರೀಫರ ಮೇಲೆ ಹಾಕಿ ವಿಭೂತಿ ವೀಳ್ಯದ ಪೂಜೆಗೆ ಒಪ್ಪಿಕೊಂಡರು. ಶರೀಫರ ಶಿರದ ಮೇಲೆ ಪಾದವನ್ನಿಟ್ಟು ಲಿಂಗಾಯತ ಸಂಪ್ರದಾಯದಂತೆ ಮಂತ್ರಪಠಣೆಯೊಂದಿಗೆ ಅವರ ಕೊನೆಯ ಆಸೆಯನ್ನು ನೆರವೇರಿಸಿದರು. ಶರೀಫರು ಶಿವಧ್ಯಾನದಲ್ಲಿ ಓಂಕಾರವನ್ನು ಜಪಿಸುತ್ತ ದೇಹತ್ಯಾಗ ಮಾಡಿದರು.

ಹಿಂದೂ-ಮುಸ್ಲಿಮರು ಶರೀಫರ ಪಾರ್ಥಿವ ಶರೀರವನ್ನು ಮೆರವಣಿಗೆ ಮಾಡುತ್ತ ತಮ್ಮ ತಮ್ಮ ಮತದ ಘೋಷಣೆಗಳೊಂದಿಗೆ ಅವರ ಮನೆತನಕ್ಕೆ ಸೇರಿದ ಹೊಲದಲ್ಲಿ, ಶರೀಫರ ತಂದೆ-ತಾಯಿಯರ ಸಮಾಧಿಗಳ ಮಧ್ಯೆ ಶರೀಫರ ಅಂತ್ಯಕ್ರಿಯೆಯನ್ನು ನೆರವೇರಿಸಿದರು. ಕಾಲಾಂತರದಲ್ಲ ಶರೀಫರ ಅನುಯಾಯಿ ಬಸನಾಳದ ಮಂಟಗಾನೀ ದಾನಪ್ಪನ ಸಹಕಾರದಿಂದ ಶರೀಫ ಗದ್ದಿಗೆಯು ನಿರ್ಮಾಣವಾಯಿತು. ಇಂದಿಗೂ ಪ್ರತಿ ಅಮಾವಾಸ್ಯೆ, ಶ್ರಾವಣ ಸೋಮವಾರ, ಜಾತ್ರೆ ಹಾಗೂ ವಿಶೇಷ ದಿನಗಳಲ್ಲಿ ಭಕ್ತಾದಿಗಳು ಅಪಾರ ಸಂಖ್ಯೆಯಲ್ಲಿ ನೆರೆದು ಪೂಜೆ ಸಲ್ಲಿಸಿ ಶರೀಫರ ಪದಗಳ ಭಜನೆಯನ್ನು ರಾತ್ರಿಯೆಲ್ಲಾ ಭಕ್ತಿ-ಭಾವಗಳಿಂದ ಹಾಡುತ್ತಾರೆ.

ಶರೀಫರ ಜಾತಿ ಮತ ಪಂಗಡಗಳನ್ನು ಮೀರಿ ಬೆಳೆದ ಜಾತ್ಯತೀತರಾಗಿದ್ದಾರೆ. ಇಸ್ಲಾಂ ಧರ್ಮದಲ್ಲಿ ಜನಿಸಿ ಪೈಗಂಬರರನ್ನು ಸಾಕ್ಷಾತ್ಕರಿಸಿಕೊಂಡು, ಲಿಂಗಾಯತ ದೇವರಾದ ಶಿಶುನಾಳದ ಬಸವಣ್ಣನನ್ನು ಆರಾಧ್ಯದೈವನಾಗಿ ಪೂಜಿಸಿ, "ಶಿಶುನಾಳಧೀಶ"ನೆಂಬ ಹೆಸರನ್ನು ತಮ್ಮ ಕಾವ್ಯದಲ್ಲಿ ಅಂಕಿತ ಮಾಡಿಕೊಂಡರು. ಸ್ಮಾರ್ತ ಬ್ರಾಹ್ಮಣ ಗುರುಗೋವಿಂದ ಭಟ್ಟರನ್ನು ಆಧ್ಯಾತ್ಮ ಗುರುವನ್ನಾಗಿ ಸ್ವೀಕರಿಸಿ ಧರ್ಮಾತೀತವಾಗಿ ಬಾಳಿದರು.

ಇಂಥ ಶ್ರೇಷ್ಠ ವ್ಯಕ್ತಿತ್ವದ ಆಧ್ಯಾತ್ಮ ಚಿಂತಕನ ಗದ್ದಿಗೆಯು ಯಾವುದೇ ಧರ್ಮದ ಮಾದರಿಯಲ್ಲಿ ಇರದೇ ವಿಶಾಲವಾದ ಚೌಕಾಕಾರದ ಕಟ್ಟೆಯಾಗಿದೆ. ಶರೀಫರೇ ಬೆಳೆಸಿದ ಬೇವಿನಮರ ಮತ್ತು ಮಲ್ಲಿಗೆ ಬಳ್ಳಿಯು ಒಂದಕ್ಕೊಂದು ಅಂಟಿಕ್ಕೊಂಡು, ಲೌಕಿಕದ ಕಹಿಬದುಕಿನಲ್ಲಿ ಮಧುರವಾದ, ಶುಭ್ರವಾದ ಪರಮಾರ್ಥದ ಮಲ್ಲಿಗೆಯನ್ನು ಅರಳಿಸುವುದೇ ಶರೀಫರ ಜೀವನದ ಸಂದೇಶವಾಗಿದೆ. ಗದ್ದಿಗೆಯ ಎಡಭಾಗದಲ್ಲಿ ಮುಸ್ಲಿಮರು ನಮಾಜು ಮಾಡಿ ಸಕ್ಕರೆ ಓದಿಸಿದರೆ, ಬಲಭಾಗದಲ್ಲಿ ಹಿಂದುಗಳು ಪ್ರಾರ್ಥನೆ ಮಾಡಿ ಹಣ್ಣು-ಕಾಯಿ-ಕರ್ಪೂರ ಅರ್ಪಿಸುತ್ತಾರೆ. ಗದ್ದಿಗೆಯ ಆವರಣದಲ್ಲಿ ಮತೀಯ ಭಾವನೆಗೆ ಅವಕಾಶವಿಲ್ಲ. ಶರೀಫರು ಒಂದು ಕೋಮಿಗೆ ಅಥವಾ ಧರ್ಮಕ್ಕೆ ಸೇರಿದ ವ್ಯಕ್ತಿಯಾಗಿರದೇ ಸರ್ವಾಂತರ್ಯಾಮಿ ಶಕ್ತಿಯಾಗಿರುವುದೇ ಇದಕ್ಕೆ ಕಾರಣವಾಗಿದೆ.

ಶರೀಫರು ಕವಿ, ಸಂತ, ತತ್ತ್ವಜ್ಞಾನಿಯಾಗುವುದಕ್ಕಿಂತ ಪೂರ್ವದಲ್ಲಿ ಜಾತಿ-ಮತ ಮೀರಿ ನಿಂತ ಶುದ್ಧ ಮಾನವತಾ ಶಕ್ತಿಯಾಗಿದ್ದಾರೆ. ಅವರ ಪದಗಳಲ್ಲಿ ಬದುಕಿನ ಮೌಲ್ಯವನ್ನು ಅರಳಿಸುವ ಮಾನವೀಯ ಅನುಕಂಪವನ್ನು ಕಾಣುತ್ತೇವೆ.

ದೇಶಿ ಮತ್ತು ಪ್ರಾದೇಶಿಕ ನೆಲೆಗಟ್ಟಿನ ಮೇಲೆ ಹರಿದಾಡಿದ ಅವರ ತತ್ತ್ವಪದಗಳಲ್ಲಿ ಜೀವನದ ಎಲ್ಲಾ ಕ್ಷೇತ್ರಗಳಲ್ಲಯೂ ಸಂಚರಿಸಿ ಪಡೆದ ಅನುಭವಗಳಿವೆ. ಅವು ವ್ಯಕ್ತಿ ಚಿಂತನದ ಅಭಿಪ್ರಾಯವಾಗಿರದೇ ಸಾಮೂಹಿಕ ಸಾಂಸ್ಕೃತಿಕ ಸಮನ್ವಯತೆಗೆ ಸಾಕ್ಷಿಯಾಗಿವೆ. ಪದಗಳ ಮುಖ್ಯ ಆಶಯ ಆಧ್ಯಾತ್ಮವೇ ಆದರೂ ಸಮಾಜೋದ್ಧಾರದ ಕಳಕಳಿ, ಸಾಮಾಜಿಕ ಪ್ರಜ್ಞೆ, ವಾಸ್ತವ್ಯದ ಸ್ಪಂದನವನ್ನು ಅವರ ಹಾಡುಗಳಲ್ಲಿ ಕಾಣುತ್ತೇವೆ. ವೈಜ್ಞಾನಿಕ ಮನೋಭಾವ, ಜಾತ್ಯತೀತ ಮನೋಭಾವ, ಪರಮಾತ್ಮನ ಧ್ಯಾನ, ಚಿಂತನೆ ಈ ಎಲ್ಲಾ ಅಂಶಗಳ ಅಂದಿನ ಸಮಾಜ ಸಂಸ್ಕೃತಿಯನ್ನು ಬಿಂಬಿಸುತ್ತವೆ. ದೇಶೀ ನೆಲೆಯ ಸಾಹಿತ್ಯ ಶಕ್ತಿಯು ಸೂಕ್ಷ್ಮಾನುಸೂಕ್ಷ್ಮ ಆವರಣಗಳನ್ನೆಲ್ಲಾ ಇವರ ಪದಗಳು ಅನಾವರಣಗೊಳಿಸಿವೆ. ವ್ಯಕ್ತಿಯ ಲೋಕಾನುಭವದ ಆಧ್ಯಾತ್ಮಿಕ ಚಿಂತನಗಳು, ಸಾಮೂಹಿಕ ಚಿಂತನೆಯ ಅಭಿವ್ಯಕ್ತಿಯಾಗಿ ಸತ್ಯ ಬಿಂಬಿಸುವ ನೆಲೆಯಾಗಿವೆ.

* * * *

ಅಧ್ಯಾಯ ೨

ಶರೀಫರ ತತ್ತ್ವಪದಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು

ಕವಿಯಾಗಲಿ, ದಾರ್ಶನಿಕನಾಗಲಿ, ಸಂತನಾಗಲಿ, ಶರೀಫನಾಗಲಿ ತನ್ನ ಕಾಲದ ಸಮಾಜದ ಚೌಕಟ್ಟನ್ನು ಮೀರಿ ಚಿಂತನೆಯನ್ನು ಮಾಡಲಾರ. ಎಲ್ಲ ಕಾಲಕ್ಕೂ ನಿಲ್ಲುವ ಯುಗಧರ್ಮದ ತತ್ತ್ವಗಳನ್ನು, ಸತ್ಯಗಳನ್ನು, ಮೌಲ್ಯಗಳನ್ನೇ ಪ್ರತಿಪಾದಿಸಿದರೂ, ಆ ಪ್ರತಿಪಾದನೆಯು ಆತನ ಜೀವಿತಕಾಲದ ಅನುಭವವಾಗಿರುತ್ತದೆ. ಕಾಲಕಾಲಕ್ಕೆ ಬದಲಾಗುವ ಸಮಾಜದ ವೈವಿಧ್ಯತೆಯು ಮಾನವನ ಚಿಂತನೆಯಿಂದ ಕಂಡುಕೊಳ್ಳುವ ಸರ್ವಕಾಲಿಕ ತತ್ತ್ವಗಳಿಗೆ ಅಡ್ಡಿ ಬರುವುದಿಲ್ಲ. ಸತ್ಯದ ದರ್ಶನವಾಗುವುದು ಸಮಾಜದಲ್ಲಿಯೇ.

ಈ ರೀತಿಯಲ್ಲಿ ಶರೀಫರ ತತ್ತ್ವಪದಗಳು ಅಂದಿನ ಸಮಾಜದ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಶಿಶುನಾಳದಲ್ಲಿ ಹುಟ್ಟಿ ಬಾಳಿ ಬೆಳಗಿದ ಶರೀಫರು ಅಲ್ಲಿನ ಸ್ಥಳೀಯ ಸಾಮಾಜಿಕ ಆಗು–ಹೋಗುಗಳಿಗೆ, ಸಾಂಸ್ಕೃತಿಕ ಸಂವೇದನೆಗಳಿಗೆ ತೀವ್ರವಾಗಿ ಸ್ಪಂದಿಸುತ್ತ, ತಮ್ಮ ಅನುಭವಗಳನ್ನು ತತ್ತ್ವಪದಗಳಲ್ಲಿ ಪಡಿ ಮೂಡಿಸಿದ್ದಾರೆ. ಶರೀಫರ ಪದಗಳು ಅಂದಿನ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳ ಆಗರವಾಗಿವೆ. ಭಕ್ತಿಯ ಜೊತೆಗೆ ಸಾಮಾಜಿಕ ಚಿಂತನೆಯನ್ನುಳ್ಳ ಶರೀಫರ ತತ್ತ್ವಪದಗಳು ಸಮಕಾಲೀನ ಜೀವನ ಮೌಲ್ಯವನ್ನು ಪ್ರತಿಪಾದಿಸುವುದರ ಮೂಲಕ ಜನರ ಬದುಕಿಗೆ ಅತ್ಯಂತ ಹತ್ತಿರವಾಗಿವೆ. ಅಲ್ಲದೆ, ಸರ್ವಕಾಲೀನ ಆಶಯವನ್ನು ದರ್ಶಿಸಿವೆ. ತಮ್ಮ ಜೀವಿತಾವಧಿಯಲ್ಲಿ ಕಂಡುಕೊಂಡ ಜೀವನ ಸಿದ್ಧಾಂತವೇ ಶರೀಫರ ತತ್ತ್ವಪದಗಳ ಮುಖ್ಯ ಪ್ರತಿಪಾದನೆಯಾಗಿದೆ. ಭಕ್ತಿಯ ನೆಲೆಯಲ್ಲಿ ಸಾಮಾಜಿಕ ಚಿಂತನೆಯನ್ನು ಮಾಡಿದ ಶರೀಫರಿಗೆ ಲೌಕಿಕ ಹಾಗೂ ಅಲೌಕಿಕ ಬದುಕು ಬೇರೆಬೇರೆಯಾಗಿರದೆ

ಎಂದು ಭಾವಿಸಿದರು. ಧರ್ಮದ ದೇವರ ಹೆಸರಿನಲ್ಲಿ ರೂಢಮೂಲವಾಗಿದ್ದ ಅನಿಷ್ಟಗಳನ್ನು ಖಂಡಿಸಿ, ವ್ಯಕ್ತಿ, ಧರ್ಮ ಮತ್ತು ಸಮಾಜದ ಶುದ್ಧೀಕರಣವನ್ನು ತಮ್ಮ ಪದಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ಶರೀಫರ ಪದಗಳಲ್ಲಿ ಸಮಾಜದರ್ಶನದ ಜೊತೆಗೆ ಸಾಮಾಜಿಕ ಕಾರ್ಯವು ಒಟ್ಟೊಟ್ಟಿಗೆ ನಡೆದಿರುವುದನ್ನು ಕಾಣುತ್ತೇವೆ. ಸಮಾಜ ದರ್ಶನದಲ್ಲಿ ಅನೇಕ ಸಮುದಾಯಗಳ ಬಗ್ಗೆ, ಆಯಾ ಸಮುದಾಯದ ಜನ ಜೀವನದ ಬಗ್ಗೆ ಕುರಿತು ಸಾಂದರ್ಭಿಕವಾದಂಥ ಪ್ರಸ್ತಾಪ ಮತ್ತು ವಿವರಣೆಗಳಿವೆ. ಅನೇಕ ಜಾತಿ, ಮತ, ಪಂಥ, ಧರ್ಮಗಳು, ಬಡವ-ಶ್ರೀಮಂತ ವರ್ಗಗಳು, ವ್ಯಕ್ತಿ-ವ್ಯಕ್ತಿಗಳ ಸಂಬಂಧ, ವ್ಯಕ್ತಿ ಸಮಾಜದೊಂದಿಗಿನ ಸಂಬಂಧ, ಸಮುದಾಯಗಳ ನಡುವೆ ಕೊಡು-ಕೊಳ್ಳುವಿಕೆಗಳನ್ನು ಕಾಣುತ್ತೇವೆ. ಒಟ್ಟಿನಲ್ಲಿ ಸಾಮಾಜಿಕ ವಾತಾವರಣದಲ್ಲಿ ಜನರ ಧಾರ್ಮಿಕ, ನೈತಿಕ, ಮಾನಸಿಕ ವ್ಯವಹಾರದೊಂದಿಗೆ ಜನರ ಆರ್ಥಿಕ, ರಾಜಕೀಯ, ಸ್ವರೂಪ ಒಳಗೊಂಡಿರುವುದನ್ನು ಶರೀಫರ ಪದಗಳಲ್ಲಿ ಕಾಣುತ್ತೇವೆ.

ಸಮಾಜ ಕಾರ್ಯದಲ್ಲಿ ಸ್ವಾರ್ಥಪರವಾದ ಸಾಮಾಜಿಕ ವ್ಯವಸ್ಥೆಯ ವಿರೋಧ, ಜನ ಜೀವನದಲ್ಲಿ ಹಾಸುಹೊಕ್ಕಾದ ಅನ್ಯಾಯ, ಅನೀತಿ, ಡಂಭಾಚಾರ, ಶೋಷಣೆ, ಮೋಸ, ಮೂಢನಂಬಿಕೆ ಮತ್ತು ಅಂಧಶ್ರದ್ಧೆಯಂತಹ ಸಾಮಾಜಿಕ ವಿಕಾರಗಳನ್ನು ತಮ್ಮ ತತ್ತ್ವಪದಗಳ ಮೂಲಕ ವಿಡಂಬಿಸಿದ್ದಾರೆ.

ಬದುಕಿನ ಎಲ್ಲ ವಲಯಗಳನ್ನು ಆವರಿಸಿಕೊಳ್ಳುತ್ತ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಅಂಶಗಳಿಂದ ಗಟ್ಟಿಯಾಗಿ ಹುರಿಗೊಂಡ ಶರೀಫರ ಪದಗಳನ್ನು ಸೀಮಿತ ವಲಯಕ್ಕೆ ನಿಶ್ಚಿತವಾಗಿ ಸೇರಿಸುವುದು ಕಷ್ಟದ ಕೆಲಸ. ಆದರೂ ಆಯಾಯ ವಲಯಗಳ ಪ್ರಭಾವ, ಪ್ರೇರಣೆಯ ಹಿನ್ನೆಲೆಯನ್ನು ತಿಳಿಯುವ ಪ್ರಯತ್ನದಿಂದ ಶರೀಫರ ಪದಗಳನ್ನು ಸಾಮಾಜಿಕ ಪದಗಳು, ಸಾಂಸ್ಕೃತಿಕ ಪದಗಳು, ಧಾರ್ಮಿಕ ಪ್ರಭಾವದ ಪದಗಳು, ರಾಜಕೀಯ ಸ್ಥಿತಿಯನ್ನು ಬಿಂಬಿಸುವ ಪದಗಳು ಮತ್ತು ಆಧುನಿಕತೆಯ ಸ್ಪರ್ಶಕ್ಕೆ ಸ್ಪಂದಿಸಿದ ಪದಗಳೆಂದು ವಿಂಗಡಿಸಲಾಗಿದೆ.

೨.೧ ಶರೀಫರ ಪದಗಳಲ್ಲಿ ಗ್ರಾಮೀಣ ಮತ್ತು ಸಾಮಾಜಿಕ ಜೀವನ

ಶರೀಫರ ಪದಗಳೆಲ್ಲ ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿಯೇ ರಚಿತವಾಗಿವೆ. ಸಾಮಾಜಿಕ ಪದಗಳಲ್ಲಿ ಗ್ರಾಮೀಣ ಪರಿಸರದ ಜನಜೀವನದ ಚಿತ್ರಣದ ಎಳೆ-ಎಳೆಯ ಸಂಕೀರ್ಣತೆಯು ಕಣ್ಣಿಗೆ ಕಟ್ಟಿದಂತೆ ನೈಜವಾಗಿ ಚಿತ್ರಿತವಾಗಿದೆ. ನಗರದ ನಾಗರೀಕತೆಯ, ಯಂತ್ರಗಳ ಆಧುನಿಕತೆಯ ಗಾಳಿ ತಾಗದ ಶಿಶುನಾಳ ಮತ್ತು

ಸುತ್ತಲಿನ ಹಳ್ಳಿಗಳ ಜನರ ಬದುಕಿನ ಒಳ–ಹೊರಗುಗಳನ್ನು, ಗ್ರಾಮೀಣ ಸಾಮಾಜಿಕ ವ್ಯವಸ್ಥೆಯನ್ನು, ನೈಸರ್ಗಿಕ ಕೋಪ–ತಾಪಗಳ ಪರಿಣಾಮವನ್ನು, ವ್ಯಕ್ತಿಗತವಾದ ಸ್ವಭಾವ–ನಡತೆಯನ್ನು ಘಟನಾತ್ಮಕವಾಗಿ ತಮ್ಮ ಪದಗಳಲ್ಲಿ ಹಾಡಿದ್ದಾರೆ. ಆಶುಕವಿಯಾದ ಶರೀಫರು ಗ್ರಾಮೀಣ ಪರಿಸರದ ನಿತ್ಯಘಟನೆಗಳ ಸತ್ಯತೆಯನ್ನು ಪದದ ವಸ್ತುವಾಗಿಸಿಕೊಂಡಿದ್ದಾರೆ. ವ್ಯಕ್ತಿಯ ಬದುಕಿನಲ್ಲಿ ಬರಬಹುದಾದ ಎಲ್ಲ ಘಟನೆಗಳ, ಅನುಭವಗಳ ಸಾರವನ್ನು ಅವರ ಪದಗಳಲ್ಲಿ ಕಾಣಬಹುದಾಗಿದೆ.

ಕೃಷಿ ಸಂಬಂಧಿತ ಪದಗಳು:

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯೇ ಪ್ರಧಾನವಾಗಿರುವುದರಿಂದ ಶರೀಫರ ಅನೇಕ ಪದಗಳು, ಬೇಸಾಯಕ್ಕೆ ಸಂಬಂಧಪಟ್ಟದವುಗಳಾಗಿವೆ. ಮಳೆ–ಬೆಳೆಗಳ ಪದ, ಸುಗ್ಗಿ ಪದ, ಹತ್ತಿ ಬಿಡಿಸುವ ಪದ, ಚೆರಗಾ ಚೆಲ್ಲುವ ಪದ, ಭೂಮಿಪೂಜೆ ಪದ, ಬರಗಾಲದ ಪದ, ಕವಣಿ ಹೊಡೆದು ಹೊಲ ಕಾಯುವ ಪದಾದಿಯಾಗಿ ಅನೇಕ ಗೀತೆಗಳವೆ.

ಹೊಲದಲ್ಲಿ ಹತ್ತಿ ಬಿಡಿಸುವ, ಸುಗ್ಗಿ ಮಾಡುವ ಚಿತ್ರಣವನ್ನು–

"ಬಾಲೆ ವಿಲಾಯತಿ ಹತ್ತಿ ಬಿಡಿಸಲಿಕ್ಕೆ
ಆಲಸ್ಯವನು ಮಾಡದೆ ಹೋಗೋಣ ಬಾರವ್ವ ಗೆಳತಿ
...ಎಲ್ಲೆಲ್ಲಿ ನೋಡಿ–
ದರೆ ಹೆಬ್ಬಿನ ಧಡೇಗಲ್ಲ ಮೂವತ್ತು
ಸೇರು ತಕ್ಕಡಿದಾರ ವಂಡಿಗೆ ಭಾರಿ ತೂಗುವರು ಬ್ಯಾರೆ
ಬಾರಿ ಬಾರಿ ಜಡಿ ಜಡಿದು ತೂಕ ಒಂದಕೆ
ಮೂದುವರೆ ದುಡ್ಡುಗಳ ಕೊಡುತಿತರು..."[7]

ಈ ಪದದಲ್ಲಿ ಹೊಲದಲ್ಲಿ ಕೂಲಿ ಮಾಡುವವರ ಬದುಕಿನ ವಿವರಣೆಯಿದೆ. ಶ್ರೀಮಂತರ ಹಂಗಿನಲ್ಲಿ ಬದುಕು ಸಾಗಿಸುವವರ ಅನಿವಾರ್ಯತೆಯನ್ನು ಅಲ್ಲಿದೆ ಕೃಷಿ ವ್ಯವಸ್ಥೆಯಲ್ಲಿನ ಶೋಷಣೆಯನ್ನು ಶರೀಫರ ಈ ಪದದಲ್ಲಿ ಕಾಣುತ್ತೇವೆ.

"ಸುಗ್ಗಿ ಮಾಡೋಣ ಬಾರವ್ವ ಗೆಳತಿ
ಸುಮ್ಮನ್ಯಾಕ ಕುಳತಿ

ಅಗ್ಗದ ಫಲಗಳ ಕೊಯ್ಯಲಿಕ್ಕೆ ಹೊಲದವ
ರೊಗ್ಗಿಲೆ ಕರೆದರೆ ಹಿಗ್ಗಿಲಿ ಹೋಗಿ
ಹೊಲದವ ಕರೆದರೆ ಹೋಗಲಿ ಬೇಕು"[೨]

ಉತ್ತರ ಕರ್ನಾಟಕದಲ್ಲಿ ಬೆಳೆಯುವ ಅನೇಕ ಮುಂಗಾರು ಬೆಳೆಗಳಲ್ಲಿ ಜೋಳ ಮತ್ತು ತೊಗರಿ ಬೆಳೆಗಳಿಗೆ ಕೋಲಿಯನ್ನು ಉಳಿಸಿ ಬೆಳೆಯನ್ನು ತೆಗೆದುಕೊಳ್ಳುತ್ತಾರೆ. ಬೆಳೆದ ಬೆಳೆಯನ್ನು ಬೇರುಸಮೇತ ಕಿತ್ತಿ ತೆಗೆಯದೇ ಭೂಮಿಯ ಮೇಲೆ ನಾಲ್ಕೈದು ಅಂಗುಲದಷ್ಟು ಬಿಟ್ಟು ಮೇಲಿನ ಭಾಗವನ್ನು ಮಾತ್ರ ಕತ್ತರಿಸಿ ತೆಗೆಯುತ್ತಾರೆ. ಬೇರು ಸಮೇತವಾಗಿ ಭೂಮಿಯಲ್ಲಿ ಉಳಿದ ಈ ಚಿಕ್ಕ ಭಾಗವನ್ನು 'ಕೋಲಿದಂಟ' ಎನ್ನುತ್ತಾರೆ. ಇದು ತುಂಬಾ ಹರಿತವಾಗಿದ್ದು, ಹೊಲಗಳಲ್ಲಿ ಎಚ್ಚರ ತಪ್ಪಿ ನಡೆದವರಿಗೆ ಪಾದಗಳನ್ನು ಸೀಳಿ ತೀವ್ರ ಗಾಯಗೊಳಿಸುತ್ತದೆ. 'ಕೋಲಿ'ಯಂತಹ ಕೃಷಿ ಪದಗಳನ್ನು ಹೇಳುವುದರ ಮೂಲಕ ಬೇಸಾಯದ ಅನಿವಾರ್ಯತೆಯನ್ನು ಈ ಪದದಲ್ಲಿ ವಿವರಿಸಿದ್ದಾರೆ.

ಹೊಲದಲ್ಲಿ ಬೆಳೆದ ಬೆಳೆಯ ತೆನೆಯಲ್ಲಿರುವ ಕಾಳನ್ನು ತಿನ್ನಲು ಹಕ್ಕಿಗಳು ತಂಡೋಪತಂಡವಾಗಿ ಬರುತ್ತವೆ. ಹಕ್ಕಿಗಳನ್ನು ಹೊಲದವರು ಕವಣೆ ಬೀಸಿ ಕಲ್ಲು ಹೊಡೆದು ಹೆದರಿಸಿ ಓಡಿಸುವರು. ಹೊಲದ ಮಧ್ಯದಲ್ಲಿ ಸ್ವಲ್ಪ ಎತ್ತರವಾದ ಸ್ಥಳಾವಕಾಶ ಮಾಡಿಕೊಂಡು, ಉದ್ದನೆಯ ಹಗ್ಗದ ಮಧ್ಯದಲ್ಲಿ ಕೊಕ್ಕೆಯನ್ನು ಹೆಣೆದು ಅದನ್ನು ಮುಂಗೈಗೆ ಸುತ್ತಿಕೊಳ್ಳುತ್ತಾರೆ, ಹಗ್ಗದ ಗಂಟಿಗೆ ಮಣ್ಣಿನ ಹೆಂಟೆಯನ್ನು ಕಟ್ಟಿ ಬೀಸಿ ಎಸೆದರೆ ಹಕ್ಕಿಗಳಿಗೆ ಮಣ್ಣು ತಾಗಿ ಹಾರಿಹೋಗುತ್ತವೆ. ಹಕ್ಕಿ ಹೊಡೆಯುವ ಕೃಷಿ ವಲಯದಲ್ಲಿಯ ಸಾಮಾನ್ಯ ಘಟನೆಯನ್ನು ಶರೀಫರು ಹಾಡಿರುವುದು ಕೃಷಿಪರವಾದ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.

"ಎಷ್ಟ ಕಾಡತಾವ ಕಬ್ಬಕ್ಕಿ ನಾ
ಹೊಲದಾಗಿರುವೇನು ಒಬ್ಬಾಕಿ
ಆ ಕಡೆಯಿಂದ ಬರತಾವ ಮೂರು ಪಕ್ಕಿ
ಅವನ್ನ ಕಾದು ಕಾದು ನನಗ ಬ್ಯಾಸರಕಿ
ಕಬ್ಬಕ್ಕಿ ಬರತಾವ ಸರಿಬೆರಕಿ
ಕವಣಿ ಬೀಸಿ ಬೀಸಿ ಬಂತೆನಗ ಬ್ಯಾಸರಿಕಿ..."[೩]

೨. ಶಿವಾನಂದ ಗುಬ್ಬಣ್ಣನವರ ಶಿಶುನಾಳ ಶರೀಫ ಗೀತೆಗಳು, ಅಕ್ಷರ ಪ್ರಕಾಶನ, ೨೦೦೨, ಪು. ೧೨೭

೩. ಅದೇ ಪುಸ್ತಕ, ಪು. ೨೦೨.

ಈ ಕೆಳಗಿನ ಪದ್ಯದಲ್ಲಿ ಮಣ್ಣಿನ ಸತ್ವದ ವಿಶ್ಲೇಷಣೆಯಿದೆ. ಎರೆಮಣ್ಣಿನ ಭೂಮಿಯಾದ ಶಿಶುನಾಳದಲ್ಲಿ ಮಳೆ ಬಂದರೆ ಯಾವುದಕ್ಕೂ ಕಷ್ಟವಿಲ್ಲ. ದುಡಿಯಲು ಅವಕಾಶವಿದ್ದು, ಉಣ್ಣಲು, ಉಡಲು ಸಾಕಾಗುವಷ್ಟು ಫಲ ಕೊಡುವ ಪ್ರದೇಶವಾಗಿದೆ. ಆದರೆ ಒಮ್ಮೆ ಮಳೆ ಬಾರದೇ ಬರ ಬಂದಾಗ ಜನರ ಕಷ್ಟ, ಊರಿನ ಬವಣೆ ಹೇಳ ತೀರದು. ಕೈಗೆ ಕೆಲಸವಿಲ್ಲದೆ, ಹೊಟ್ಟೆಗೆ ಹಿಟ್ಟಿಲ್ಲದೇ ಜನರ ಕಷ್ಟಗಳ ಕಾರ್ಮೋಡಗಳು ಮುಗಿಲು ಮುಟ್ಟುತ್ತವೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಎಲ್ಲರ ಮನೆಗಳಲ್ಲೂ ದನಕರುಗಳು, ಸಾಕುಪ್ರಾಣಿಗಳು ಇದ್ದೇ ಇರುತ್ತವೆ. ದನಕರುಗಳಿಗೆ ಮೇವು ಇಲ್ಲದೆ ಹಸಿವಿನಿಂದ ಸಾಯುತ್ತವೆ. ಇಂಥ ಬರದ ತಾಪವು ೧೮೭೭ರಲ್ಲಿ ಶಿಶುನಾಳ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದ ಹಳ್ಳಿಗಳನ್ನು ಆವರಿಸಿತು. ಬರ ಬಡತನದಿಂದ ಜನರು ಹಾಹಾಕಾರ ಪಡುವುದನ್ನು ಶರೀಫರು ಕಂಡು ಕನಲಿ ಹಾಡಿದರು.

"ಕರುಣೆ ಬಾರದೇನೋ ಸದಾಶಿವ
ಕರುಣೆ ಬಾರದೇನೋ
ಧರಣಿ ಜನರೀ ಪರಿ ಮರಗೂದ ಕಂಡು...

ಕಡೆಗಣ್ಣಿಲೆ ನೋಡಿದ್ಯಾ ಈ ದಕ್ಷಿಣ
ಕಡೆ ಬಾಗಿಲ ಕಾಯ್ಯಾ
ದಡದ ಪೊಡವಿ ಸ್ಥಳಕೆ ಈ ಬರ ಹುಟ್ಟಿ
ಕಡು ಹರುಷವಿ
ಸುಡುಗಾಡು ಸೇರಿದ್ಯಾ ಸಾಂಬಾ

ತುಸು ದಯವಿರದೇಕೋ ಈ ಮನುಜರ
ಹಸನಾಗಿ ಸಲಹುದಕೆ..."

ಎಂಬ ಹಾಡಿನಲ್ಲಿ ಅಂದಿನ ಬರದ ತೀವ್ರತೆಯನ್ನು ಅರಿಯಬಹುದು. ಗ್ರಾಮೀಣ ಪ್ರದೇಶದಲ್ಲಿ ಜೀವನವನ್ನು ಸಾಗಿಸಲು ಬೇರೆ ಮಾರ್ಗ ಕಾಣದೇ ಮಳೆಗಾಗಿಯೇ ಕೈಚಾಚಿ ಕುಳಿತುಕೊಳ್ಳುವ ಜನರ ಜೀವನದ ಚಿತ್ರಣ ದರ್ಶನ ಮಾಡಿದ್ದಾರೆ.

"ತುಸು ದಯವಿರಬೇಕೋ ಈ ಮನುಜರ ಹಸನಾಗಿ ಸಲಹುದಕೆ" ಎಂದು ದೇವರಲ್ಲಿ ಹೇಳಿಕೊಳ್ಳುವ ಶರೀಫರ ಮಾತಲ್ಲಿ ಹತಾಶೆ, ಬೇಡಿಕೆ ಮತ್ತು ಕಳಕಳಿಯಿದೆ. ಜನರ ಬವಣೆಯ ದಾರುಣ ಸ್ಥಿತಿಯ ದೃಶ್ಯವು ಅಲಾವಿ ಪದದಲ್ಲಿ ಹೀಗೆ ವ್ಯಕ್ತವಾಗಿದೆ.

"...ನೊಂದಿತು ಬಹುಮಂದಿ
ಗಂಜಿ ಕುಡಿ ಕುಡಿದು ಹೋದರು ಕುಂದಿ
ಮಂದಿ ಕೆಡಿಸಿ ಹನ್ನೊಂದು ಜಿಲ್ಲೆಯೊಳು
ಹೆಂಡಿರು ಮಕ್ಕಳು ಮಾರಿಕೊಂಡು ಒಳೆ
ದಂಡಿನ ಪಡಿಪಾಟ ಏಸುರದಿ
ಆಲಾವಿ ಬಲುದಾಟ..."[5]

ಈ ಮೂಲಕ ಬರಗಾಲದ ಬವಣೆಗೆ ಸಿಕ್ಕು ಹೆಂಡತಿ ಮತ್ತು ಮಕ್ಕಳನ್ನು ಮಾರಿಕೊಳ್ಳುವ ದಾರುಣವಾದ ಸ್ಥಿತಿಯನ್ನು ಪರಿಚಯಿಸುತ್ತಾರೆ.

ಬೆಳೆ ಬೆಳೆಸುವ ಮೊದಲು ಭೂಮಿಯನ್ನು ಹದ ಮಾಡುವ ಅವಶ್ಯವಿರುವುದು. ರಂಟೆ, ಕುಂಟೆಗಳನ್ನು ಹೂಡಿ ಹೊಲ ಹದ ಮಾಡುವುದರ ಮೂಲಕ ಸುಜ್ಞಾನದ ತಿಳಿವಳಿಕೆಯನ್ನು ವಿವರಿಸಲಾಗಿದೆ.

"ಕುಂಟ ಕುರಡರೆಂಟು ಮಂದಿ. ರಂಟೆ ಹೊಡೆಯಲೋ
ಸುಂಟರಗಾಳಿಗೆ ಸಿಗದೆ ಈ ಲೋಕದ ರಂಟೆ ಹೊಡೆಯಲೋ
ಸುಜ್ಞಾನವೆಂಬವ ಕುಂಟೆಯ ಹಿಡಿದು ರಂಟೆ ಹೊಡೆಯಲೋ
ಪ್ರಜ್ಞಾನವೆಂಬವ ಕೂರಿಗೆ ಹೂಡಿ ಬೀಜ ಬಿತ್ತಲೋ
ಕರಿಯ ಬೀಜ ಬಿಳಿಯ ಬೀಜ ಬೀಜ ಹಿಡಿಯಲೋ..."[6]

'ಕುಂಟೆ' ಎಂದರೆ ಹೊಲವನ್ನು ಸ್ವಚ್ಛಗೊಳಿಸುವುದು. 'ರಂಟೆ' ಎಂದರೆ ನೇಗಿಲ ಹೂಡುವುದು, ಇದು ಕೆಳಗಿನ ಮಣ್ಣನ್ನು ಮೇಲೆ ಎತ್ತಿ ಹಾಕುವುದು. 'ಕೂರಿಗೆ' ಎಂದರೆ ಬೀಜ ಬಿತ್ತುವುದು. ಕರಿ–ಬಿಳಿ ಎನ್ನುವುದು ಹಗಲು–ರಾತ್ರಿಯನ್ನು ಸೂಚಿಸುವುದು. ಹೀಗೆ ಅಲೌಕಿಕದ ಬದುಕನ್ನು ದೇಶೀಯ ವ್ಯವಸಾಯದ ಉಪಕರಣಗಳ ವಿಶಿಷ್ಟತೆಯನ್ನು ಶರೀಫರ ಪದಗಳಲ್ಲಿ ಕಾಣಬಹುದು.

ಸಾಮಾಜಿಕ ಘಟನಾತ್ಮಕ ಪದಗಳು

ವಾರದಲ್ಲಿ ನಡೆಯುವ ಸಂತೆಗಾಗಿ ಅಂದಿನ ಕಾಲದಲ್ಲಿ ಕಾಲ್ನಡಿಗೆಯಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವುದು ಸಾಮಾನ್ಯವಾಗಿತ್ತು. ಇಂಥ ಗ್ರಾಮೀಣ ಸನ್ನಿವೇಶಗಳಲ್ಲಿ ಅವರ ಬದುಕಿನ ಹಿನ್ನೆಲೆಯನ್ನು ಕಾಣಬಹುದು.

---

೫. ಅದೇ ಪುಸ್ತಕ, ಪು. ೩೬೭

೬ ಅದೇ ಪುಸ್ತಕ, ಪು. ೧೮೫.

ಮನರಂಜನೆಗಾಗಿ ಸಮಯ ಸಾಧನಗಳಿಲ್ಲದ ಅಂದಿನ ಪರಿಸರದಲ್ಲಿ ಕೆಲಸದೊಂದಿಗೆ ಮನರಂಜನೆ ಪಡೆಯುವ ಮನೋಭಾವವು ಹಳ್ಳಿಗರಲ್ಲಿತ್ತು. ಲಘುವಾದ ಹಾಸ್ಯ, ಹುಡುಗಾಟ, ಸಲುಗೆಗಳು ಶರೀಫರ ಪದಗಳಲ್ಲಿ ಸೇರಿ ಗ್ರಾಮೀಣ ಪರಿಸರದ ರಸಿಕತೆಯ ಚಿತ್ರಣವನ್ನು ಕಟ್ಟಿಕೊಡುತ್ತವೆ. ಹೆಣ್ಣಿನ ಸಹಜ ಆಸಕ್ತಿಯಾದ ಅಲಂಕಾರ ಉಡುಗೆ–ತೊಡಿಗೆಗಳು ಸಂದರ್ಭಕ್ಕನುಸಾರವಾಗಿ ಶರೀಫರ ಪದಗಳಲ್ಲಿ ಬಳಕೆಯಾಗಿವೆ.

ಚಿಕ್ಕ ಚಿಕ್ಕ ಗ್ರಾಮಗಳಲ್ಲಿ ದಿನನಿತ್ಯದ ವಸ್ತುಗಳು ಸಿಗುತ್ತಿರಲಿಲ್ಲ. ಆದ್ದರಿಂದ ಅಂದಿನ ಸಮಾಜದಲ್ಲಿ ಸಾಧಾರಣ ಊರಲ್ಲಿ ವಾರಕ್ಕೊಮ್ಮೆ ಸಂತೆಯು ನಡೆಯುತ್ತಿತ್ತು. ಈ ಸಂತೆಗೆ ಸುತ್ತಲಿನ ಹಳ್ಳಿಗರು ತಮ್ಮ ತಮ್ಮ ವಸ್ತುಗಳನ್ನು ಮಾರಲು, ಅಗತ್ಯದ ವಸ್ತುಗಳನ್ನು ಕೊಂಡುಕೊಳ್ಳಲು ಬರುತ್ತಿದ್ದರು. ವಾರಕ್ಕೊಮ್ಮೆ ಮಾತ್ರ ಸಂತೆ ನಡೆಯುವುದರಿಂದ ವಾರಕ್ಕೆ ಬೇಕಾಗುವ ಎಲ್ಲ ಪಡಿ–ಪದಾರ್ಥಗಳನ್ನು ಕೊಂಡು ಕೊಳ್ಳಬೇಕಾಗಿತ್ತು. ಆದ್ದರಿಂದ ಗ್ರಾಮೀಣ ಮಹಿಳೆಯರು ಚೀಲಗಳ ಬದಲು ದೊಡ್ಡ ಹಳೆಯ ಸೀರೆಯನ್ನು ಬುಟ್ಟಿಯಲ್ಲಿಟ್ಟುಕೊಂಡು ಸಂತೆಗೆ ಹೋಗುತ್ತಿದ್ದರು. ಅಗಲವಾದ ಸೀರೆಯ ಒಂದೊಂದು ಭಾಗದಲ್ಲಿ ಬೇಕಾದ ಪದಾರ್ಥ, ವಸ್ತುಗಳನ್ನು ಬೇರೆ ಬೇರೆಯಾಗಿ ಕಟ್ಟಿಕೊಂಡು ಬುಟ್ಟಿಯಲ್ಲಿಟ್ಟು ತಲೆಯ ಮೇಲೆ ಹೊತ್ತು ತಮ್ಮ ಗ್ರಾಮಕ್ಕೆ ಹಿಂತಿರುಗುತ್ತಿದ್ದರು.

ಶಿಶುನಾಳದ ಸುತ್ತಲೆಲ್ಲಾ 'ಹುಲಗೂರು' ಗ್ರಾಮವು ಸಂತೆ ನಡೆಯುವ ಕೇಂದ್ರವಾಗಿದ್ದರಿಂದ ಅಲ್ಲಿನ ವೈಶಿಷ್ಟ್ಯವನ್ನು ಸಂತೆ ಮಾಡುವ ಹಳ್ಳಿಗರ ಶೈಲಿಯನ್ನು ತಮ್ಮ 'ಬಿದ್ದಿಯಬ್ಬೆ ಮುದುಕಿ' ಮತ್ತು 'ನೋಡೋಣ ಬಾ ಗೆಳತಿ, ನಾಡೊಳು ಹುಲಗೂರು ಸಂತಿ' ಎಂಬ ಪದ್ಯಗಳಲ್ಲಿ ಚಿತ್ರಿಸಿದ್ದಾರೆ. ಸಂತೆಗೆ ಬಂದ ಮುದುಕಿಗೆ ಅವಳ ವಸ್ತುಗಳ ಬಗ್ಗೆ, ಹಣದ ಬಗ್ಗೆ ಎಚ್ಚರದಿಂದ ಇರಬೇಕೆಂಬ ಸೂಚನೆಯನ್ನು ಈ ಪದದಲ್ಲಿ ಶರೀಫರು ವ್ಯಕ್ತಪಡಿಸಿದ್ದಾರೆ.

"...ಬಿದ್ದಿಯಬ್ಬೆ ಮುದುಕಿ ನೀನು
ಬಿದ್ದಿಯಬ್ಬೆ ಮುದುಕಿ
ಸದ್ಯಕಿದು ಹುಲಗೂರ ಸಂತಿ
ಗದ್ದಲದೊಳಗ್ಯಾತಕ ನಿಂತಿ
ಬುಟ್ಟಿಯೊಳಗ ಪಟ್ಟೇವನಿಕ್ಕಿ
ಉಟ್ಟರದನ ಚೀಲ ಜೋಕಿ

ಕಿಟ್ಟುಗಂಟೀ ಚೌಡೇರು ಬಂದು
ಉಟ್ಟರದಂದ ಕದ್ದಾರ ಜೋಕಿ''[೭]

'ಉಟ್ಟರ' ಎಂದರೆ, ಹಳ್ಳಿಯ ಹೆಂಗಸರು ಸೀರೆಯ ನಿರಿಗೆಗಳನ್ನು ಮಾಡಿ ಹೊಟ್ಟೆಯ ಮೇಲೆ ಕಟ್ಟಿದ ಸೀರೆಯ ಹೊರಭಾಗದಲ್ಲಿ ಬಾಳೆಹಣ್ಣಿನ ಆಕಾರದಲ್ಲಿ ಸುತ್ತಿಕೊಳ್ಳುವುದು. ಇದಕ್ಕೆ 'ಉಟ್ಟರ' ಎಂದು ಕರೆಯುತ್ತಾರೆ. ಹಣದ ಚೀಲವನ್ನು ಈ ಉಟ್ಟರದಲ್ಲಿಯೇ ಇಟ್ಟುಕೊಳ್ಳುತ್ತಾರೆ. ಕಳ್ಳತನಕ್ಕೆ ಆಸ್ಪದವಿರುವುದಿಲ್ಲ. ಆದರೆ ಗಂಟೀ ಚೌಡೇರು ಉಟ್ಟರನ್ನೇ ಕತ್ತರಿಸಬಹುದೆಂಬ ವಾಸ್ತವ ಸ್ಥಿತಿಯನ್ನು ಶರೀಫರು ಹೇಳುತ್ತಾರೆ. 'ಗಂಟು ಚೋರ'ರು ಅಸಾಮಾನ್ಯ ಕಳ್ಳರಾಗಿದ್ದು ಇವರನ್ನು ಗ್ರಾಮೀಣ ಭಾಷೆಯಲ್ಲಿ 'ಗಂಟೀ ಚೌಡೇರು' ಎಂದು ಕರೆಯುತ್ತಾರೆ. ಇವರು ತಾವು ಕಣ್ಣಿಟ್ಟ ವಸ್ತುವನ್ನು ಹೇಗಾದರೂ ಮಾಡಿ ಕದ್ದೇ ಕದಿಯುತ್ತಾರೆ ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ.

ಗ್ರಾಮೀಣ ಮಹಿಳೆಯರು ಶ್ರಮಜೀವಿಗಳು ಶರೀಫರ ಪದಗಳಲ್ಲಿ ಪುರುಷರು ಮಾಡುವ ಕೆಲಸಕ್ಕಿಂತ ಹೆಚ್ಚು ಸ್ತ್ರೀಯರೇ ಮಾಡುವುದು ಕಾಣುತ್ತೇವೆ. ಅಡಿಗೆ ಮಾಡುವುದು, ನೀರು ಹೊತ್ತು ತರುವುದು, ಸಂತೆಗೆ ಹೋಗಿ ಬೇಕಾದ ಸಾಮಾನು ತರುವುದು, ಮನೆಯಲ್ಲಿ ದನಕರುಗಳ ಯೋಗಕ್ಷೇಮ, ನಸುಕಿನಲ್ಲಿ ಎದ್ದು ಬೀಸೋ ಕಲ್ಲಿನಿಂದ ಜೋಳ ಬೀಸುವುದು, ಮೊಸರು ಕಡೆದು ಬೆಣ್ಣೆ ತೆಗೆಯುವುದು ಇವುಗಳ ಜೊತೆಗೆ ಪುರುಷರಿಗೆ ಸರಿಸಮಾನವಾಗಿ ನಿಂತು ಹೊಲಗಳಲ್ಲಿ ಹತ್ತಿ ಬಿಡಿಸುವುದು, ಸುಗ್ಗಿ ಮಾಡುವುದು, ಕವಣಿ ಹೊಡೆಯುವ ಕೆಲಸಗಳನ್ನೂ ಸ್ತ್ರೀಯರು ಮಾಡುತ್ತಾರೆ.

ಉತ್ತರ ಕರ್ನಾಟಕದ ಆಹಾರ ಪದಾರ್ಥಗಳಲ್ಲಿ ಜೋಳದ ರೊಟ್ಟಿಯು ಮುಖ್ಯವಾದುದು. ದಿನವೂ ಮಧ್ಯಾಹ್ನ ಮತ್ತು ರಾತ್ರಿ ಊಟಕ್ಕೆ ಜೋಳದ ರೊಟ್ಟಿಯು ಇರಲೇಬೇಕು. ಬೀಸುವ ಗಿರಣಿಗಳಿಲ್ಲದ ಅಂದಿನ ಗ್ರಾಮೀಣ ಪ್ರದೇಶಗಳಲ್ಲಿ ಹೆಂಗಸರು ನಿತ್ಯವೂ ಜೋಳವನ್ನು ಬೀಸುತ್ತಿದ್ದರು. ನಸುಕಿನ ಸಮಯದಲ್ಲಿ ಎದ್ದು ಜೋಳವನ್ನು ಬೀಸುವುದರಿಂದ ನಿದ್ದೆ ಬರದಿರಲು, ಬೇಸರ ಕಳೆಯಲು ಇಂಪಾದ ಧ್ವನಿಯಲ್ಲಿ ತಮ್ಮಷ್ಟಕ್ಕೆ ತಾವೇ ಹಾಡುಗಳನ್ನು ಹೇಳುತ್ತಿದ್ದರು. ಈ ಹಾಡುಗಳು ಬೀಸೋ ಕಲ್ಲಿನ ಹಾಡುಗಳಾಗಿವೆ.

''ಘಸೂರ ತಿರಿಗಿದರೂ ಬೀಸೋದು ಬಿಡದವ್ವಾ
ಬೀಸೋಣ ಬರ್ರೆವ್ವ ಹಾಡ್ಯಾಡಿ''[೮]

---

೭. ಶಿಶುನಾಳ ಶರೀಫ ಗೀತೆಗಳು, ಡಾ. ಶಿವಾನಂದ ಗುಬ್ಬಣ್ಣನವರ ಪು. ೧೪೨.
೮. ಶಿಶುನಾಳ ಶರೀಫ ಗೀತೆಗಳು, ಡಾ. ಶಿವಾನಂದ ಗುಬ್ಬಣ್ಣನವರ ಪು. ೧೩೬

"ನಾದಾರದಮ್ಮ
ಲಗುದಿಗಿ ಸುಮ್ಮನೆ ಬೀಸಮ್ಮ

ಚಕ್ರದಿ ಕರಿಯಕಲ್ಲು
ಶುಕ್ರದಿ ಮಾಕ್ಯವ ಕಲ್ಲು
ವತ್ತರಿಸಿ ಮುಕ್ಕನ್ನಾಕಮ್ಮಾ

ತೆಗೆದು ಹಿಟ್ಟಿನ ರಾಶಿ
ಬಿಗಿದ ಪುಟ್ಟಿಯೊಳು ಸೋಸಮ್ಮ–"[೯]

ಎಂದು ಹೇಳುತ್ತ ಬೀಸುವ ಕೆಲಸ ಪವಿತ್ರವಾಗಿದ್ದು, ಸಂತೋಷದಿಂದ ಬೀಸಬೇಕೆಂದು ಕಿವಿಮಾತನ್ನು ಹೇಳುವುದರ ಮೂಲಕ ಗ್ರಾಮೀಣ ಸಂಸ್ಕೃತಿಯನ್ನು ಎತ್ತಿ ಹಿಡಿದಿದ್ದಾರೆ.

ವೃತ್ತಿಪರ ಪದಗಳು

ಯಂತ್ರ ಪರಿಚಯವಿಲ್ಲದ ಅಂದರೆ ಆಧುನಿಕ ಯಾಂತ್ರಿಕತೆಯಿಂದ ದೂರವಿರುವ ಗ್ರಾಮೀಣ ಪರಿಸರದಲ್ಲಿ ಬೀಸುವುದು, ಕುಟ್ಟುವುದು ಸಹಜವಾದುದಾದರೆ, ವೃತ್ತಿಪರ ಕೆಲಸಗಳಾದ ನೂಲುವುದು, ಮಡಿಕೆ ಮಾಡುವುದು, ಕುರಿ ಕಾಯುವುದು, ಶಕುನ ಹೇಳುವುದು ಮುಂತಾದ ಸಾಮಾಜಿಕವಾಗಿ ಅವಶ್ಯವಿರುವ ಉದ್ಯೋಗಗಳನ್ನು ಸಹ ಶರೀಫರು ಪರಿಚಯ ಮಾಡಿಕೊಡುತ್ತಾರೆ. ಹತ್ತಿಯನ್ನು ಹೊಲದಿಂದ ಬಿಡಿಸಿ ತಂದು ಸಂಸ್ಕರಿಸಿ ಬಟ್ಟೆ ನೇಯುವ ವೃತ್ತಿಯು ಶರೀಫರ ಕಾವ್ಯದಲ್ಲಿ ಸ್ಥಾನ ಪಡೆದಿದೆ. ಪತ್ತಿಯನ್ನು ಹಿಂಜಿ ಬಟ್ಟೆ ನೇಯುವ ನೇಕಾರರ ವೃತ್ತಿಯು ದೇಶೀಯ ನೆಲೆಯ ಬದುಕಿನ ಚಿತ್ರಣವನ್ನು ಪ್ರತಿಬಿಂಬಿಸುತ್ತದೆ.

"ಆರಗೊಡವಿನ್ನೇನು ಮಗಳೆ
ಮುನ್ನೋಡಿ ಹಂಜಿ ನೂಲಮ್ಮಾ...

ಜ್ಞಾನವೆಂಬ ಕದರನ್ನಿಟ್ಟು
ಮಾನವ ಧರ್ಮದ ಹಂಜಿಯ ಹಿಡಿದು
ಅನುಭವವೆಂಬುವ ಎಳೆಗಳ ತೆಗೆದು
ಅನುವಿಲೆ ಸುಮ್ಮನೇ ನೂಲಮ್ಮಾ..."[೧೦]

ಎಂದು ಅರ್ಥಗರ್ಭಿತವಾಗಿ ಹಾಡಿರುವ ಶರೀಫರ ಪದಗಳಲ್ಲಿ ಅನೇಕ ಕುಲ ವೃತ್ತಿಗಳ ವಿವರಣೆಯನ್ನು ನೀಡುವುದರ ಮೂಲಕ ಆಧ್ಯಾತ್ಮಿಕ ಸಂಕೇತಕ್ಕೆ ತಳಕು ಹಾಕಿಕೊಂಡಿರುವುದು ವ್ಯಕ್ತವಾಗುತ್ತದೆ.

> "ಕುಂಬಾರಕಿ ಈಕಿ ಕುಂಬಾರಕಿ
> ಬ್ರಹ್ಮಾಂಡವನ್ನೆಲ್ಲ ತುಂಬಿಕೊಂಡಿರುವಾಕಿ..."[೧೧]

ಎನ್ನುವ ಪದದಲ್ಲಿ ಸೂಸು ಮಣ್ಣನ್ನು ತಂದು, ನೀರ ಹಣಿಸಿ, ಹುದಲನ್ನು ಕಲಿಸಿ, ಸೂರನ್ನು ಹಾಕಿ, ತಿಗರಿಯ ಮಾಡಿ, ಬಡಿಗೆಯ ಊರಿ, ತಿರುಗಿಸಿ, ಮಗಿ, ಗಡಿಗೆಯನ್ನು ತಯಾರಿಸಿ ಅದನ್ನು ಸುಟ್ಟು ಗಟ್ಟಿಮಾಡಿ ಸಂತೆಗೆ ಹೋಗಿ ಮಾರುವ ವರೆಗಿನ ಪೂರ್ಣ ವಿವರವಿದೆ. ಶರೀಫರ ದೃಷ್ಟಿಯಲ್ಲಿ ಅದು ಸಾಮಾನ್ಯ ಮಗಿಯಲ್ಲ. 'ಜ್ಞಾನದ ಮಗಿ'ಯಾಗಿ ಕಾಣುತ್ತದೆ.

"ಕುರುಬರೋ ನಾವು ಕುರುಬರೋ"[೧೨] ಎಂಬ ಪದದಲ್ಲಿ ಕುರಿ ಕಾಯುವ ವೃತ್ತಿಯ ಬಗ್ಗೆ ಹೇಳುತ್ತಿದ್ದರೂ ಅದು ಮುಕ್ತಿ ಸಾಧನೆಯ ಆಧ್ಯಾತ್ಮ ಗೀತೆಯೇ ಆಗಿದೆ. ಕುರಿಗಳನ್ನು ಮೇಯಿಸಿ, ತೋಳ, ನರಿಗಳು ಅವುಗಳನ್ನು ಕೊಂದು ತಿನ್ನದಂತೆ ಬೇಲಿಯನ್ನು ಗಟ್ಟಿಯಾಗಿ ಕಟ್ಟಿ, ಬಾಗಿಲನ್ನು ಭದ್ರವಾಗಿ ಹಾಕಿ, ನಾಯಿಗಳನ್ನು ಕಾವಲಿಗಿಟ್ಟು, ಕುರಿಯನ್ನು ಕಾಯುವ ಕುರುಬರ ವೃತ್ತಿ ಗ್ರಾಮೀಣ ಸಮಾಜದಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

ಶರೀಫರ ಕವನದಲ್ಲಿ 'ಕವದಿ' ಅಥವಾ 'ಕೌದಿ' ಎಂಬ ಹೊದಿಕೆಯ ವಸ್ತ್ರದ ಪ್ರಸ್ತಾಪ ಬರುತ್ತದೆ. ಹಳ್ಳಿಗಳಲ್ಲಿ ಇದರ ಅವಶ್ಯಕತೆ ಸಾಮಾನ್ಯವಾಗಿರುತ್ತದೆ. ಒಂದೊಂದು ಮನೆಯಲ್ಲೂ ಐದಾರು ಕೌದಿಗಳಿದ್ದು ಅವುಗಳನ್ನು ಕಂಬಳಿಯಂತೆ ಬಳಸುತ್ತಾರೆ. ಹೊಸ ಮತ್ತು ಹಳೆಯ ಬಟ್ಟೆಯ ತುಂಡುಗಳನ್ನು ಜೋಡಿಸಿ, ಕಲಾತ್ಮಕವಾಗಿ ಕೈಯಿಂದ ಹೊಲಿದ ಕೌದಿಯು ದಪ್ಪದಾಗಿರುತ್ತದೆ. ಚಳಿಗಾಲದಲ್ಲಿ ಬೆಚ್ಚಗಿರುವ ಇದು ಬೇಸಿಗೆಯಲ್ಲಿ ತಂಪಾಗಿರುತ್ತದೆ. ಬಿಡುವಿನ ವೇಳೆಯಲ್ಲಿ ಸ್ತ್ರೀಯರು, ಹೊರಗೆ ಕೆಲಸ ಮಾಡಲು ಅಶಕ್ತರಾದ, ವಯಸ್ಸಾದ ಹೆಂಗಸರು ಈ ಕೌದಿನ್ನು ಹೊಲಿಯುತ್ತಾರೆ. ಈ ಕೌದಿಯನ್ನು ಸಿಂಪಿಗರು ಮಾತ್ರ ಹೊಲಿಯದೇ ಎಲ್ಲ ಜಾತಿ, ಮತ, ಕುಲದವರು ಕೈಯಿಂದಲೇ ಹೊಲಿಯುತ್ತಾರೆ.

---

೧೧. ಶಿಶುನಾಳ ಶರೀಫ ಗೀತೆಗಳು, ಡಾ. ಶಿವಾನಂದ ಗುಬ್ಬಣ್ಣನವರ ಪು. ೧೩೯.
೧೨. ಶಿಶುನಾಳ ಶರೀಫ ಗೀತೆಗಳು, ಡಾ. ಶಿವಾನಂದ ಗುಬ್ಬಣ್ಣನವರ ಪು. ೧೪೩

ಗುಡಿಗಾರಿಕೆಯ ಸಂಸ್ಕೃತಿಯ ಬಗೆಗಿನ ಕಳಕಳಿ ಶರೀಫರ ಪದಗಳಲ್ಲಿ ಹೀಗೆ ವ್ಯಕ್ತವಾಗಿದೆ. ಗ್ರಾಮೀಣ ಪ್ರದೇಶದಲ್ಲಿ 'ಬುಡುಬುಡಿಕ್ಯಾ'ಗಳು ಸಾಮಾನ್ಯವಾಗಿ ವೃತ್ತಿ ಕಸುಬನ್ನು ಮಾಡಿಕೊಂಡು ಜೀವಿಸುತ್ತಾರೆ. 'ಬುಡುಬುಡು' ಎಂದು ಶಬ್ದ ಮಾಡುವ ಸಾಧನದಿಂದ 'ಬುಡುಬುಡಿಕ್ಯಾ' ಎಂದು ಕರೆಯಲ್ಪಡುವವರು. 'ಹಾಲು ಹಕ್ಕಿ' ಶಕುನಗಾರರು. ಆ ಪ್ರದೇಶದ ಆಗು–ಹೋಗುಗಳ ಜೊತೆಗೆ ಓಣಿ–ಓಣಿಯ, ಕೆಲವೊಮ್ಮೆ ಮನೆ–ಮನೆಗಳ ಭವಿಷ್ಯವನ್ನು ಹೇಳುತ್ತಾರೆ. ಹಕ್ಕಿಯ ಭಾಷೆ ತಿಳಿದಿದೆ ಎಂದು ಹೇಳಿಕೊಳ್ಳುವ ಇವರು ಹಾಲುಹಕ್ಕಿ ಬೆಳಗಿನ ಜಾವದಲ್ಲಿ ನುಡಿಯುವ ಮಾತು ಕೇಳಿ ತಿಳಿದುಕೊಂಡು ಬುಡುಬುಡು ಸದ್ದು ಮಾಡುವ ಚರ್ಮವಾದ್ಯ ಸಾಧನದಿಂದ ಬಾರಿಸುತ್ತ, ರಾಗವಾಗಿ ಶಕುನವನ್ನು ನುಡಿಯುತ್ತಾ ಬೆಳಗಿನ ಜಾವದಲ್ಲಿ ಅಡ್ಡಾಡುವರು. ಪ್ರಶಾಂತವಾದ ವಾತಾವರಣದಲ್ಲಿ ಅವರು ಸಾರುವ ರಾಗದ ಏರಿಳಿತದಿಂದ ಎಂಥ ನಿದ್ದೆಯಿದ್ದರೂ ಜನರಿಗೆ ಎಚ್ಚರವಾಗುತ್ತದೆ. ಅವರ ಶಕುನವು ಸ್ಪಷ್ಟವಾಗಿ ಕೇಳಿಸುತ್ತದೆ. ಭವಿಷ್ಯದ ಬಗ್ಗೆ ಆತಂಕಗೊಳ್ಳುವ ಜನಸಾಮಾನ್ಯರಿಗೆ ಬುಡುಬುಡಿಕ್ಯಾ ಎಂದರೆ ಭಯ ಮತ್ತು ಕುತೂಹಲ ಉಂಟಾಗುತ್ತದೆ. ಇವರೂ ಒಂದು ರೀತಿಯಲ್ಲಿ ಕಾಲಜ್ಞಾನಿಗಳಿದ್ದಂತೆ ಎಂದು ಜನರು ಭಾವಿಸುತ್ತಾರೆ.

'ಬುಡು ಬುಡಕ್ಯಾ' ಪದದ ನೆಪದಲ್ಲಿ ಭೂತ, ಭವಿಷ್ಯ ಅರಿತ ಶರೀಫರೇ ಬುಡುಬುಡಿಕ್ಯಾ ಆಗಿ ದೇಶಕ್ಕೆ ಮುಂದೊದಗುವ ವಿಪತ್ತಿನ ಬಗ್ಗೆ ಬ್ರಿಟಿಷರ ಆಳ್ವಿಕೆಯ ಭವಿಷ್ಯವನ್ನು ಬುಡುಬುಡಿಕ್ಯಾ ಶೈಲಿಯಲ್ಲಿಯೆ ಹೇಳಿದ್ದಾರೆ.

"ಕಾಲಜ್ಞಾನದ ಪುರುಷನು ನಾನು
ಮೇಲುಜ್ಞಾನವನು ಹೇಳಲು ಬಂದೆ
ಕಾಲ ಸೂಚನೆಗಳು ಬಂದಾವಮ್ಮಾ
ಹಾಲುಹಕ್ಕಿ ಒಂದು ನುಡಿತೈತಿ ತಾಯಿ

ದೇವದೇವರ ದೇವನ ಮಗನ
ದೇವಲೋಕದ ಬುಡುಬುಡುಕ್ಯಾ ನಾ
ದೇವಗೋವಿಂದನ ಭಕ್ತನಮ್ಮ
ಸಂತರ ಸೇವೆಗೆ ನಿಂತಿತೆನಮ್ಮಾ
ಓಂ ಜಯ ಜಯವಾಗಲೆಮ್ಮ"[೨]

ಎಂದು ಸಾರುವ ನಾಲ್ಕು–ನಾಲ್ಕು ಸಾಲುಗಳುಳ್ಳ ನಲವತ್ತಾರು ಚರಣಗಳ ಪದವನ್ನು ಹಾಡಿದ್ದಾರೆ. ಹಳೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಪೂರ್ವದಿಂದ

ನಡೆಸಿಕೊಂಡು ಬರುವ ಅವರ ವೃತ್ತಿಗಳಿಗೆ ಅನುಗುಣವಾಗಿ ಅವರನ್ನು ಅದೇ ವೃತ್ತಿ ಹೆಸರಿನಿಂದ ಕರೆಯುವುದು ರೂಢಿಗತವಾಗಿದೆ. ಶರೀಫರ ಪದಗಳಲ್ಲಿ ಗೌಡ, ಜಾಡ, ಪಿಂಜಾರ, ಪೊಲೀಸ, ಪೊಲೀಸಗೌಡ, ಬಣಜಿಗರು, ಬಾಗವಾನರು, ಶಾನುಭೋಗರು– ಇವರೆಲ್ಲರ ವೃತ್ತಿಗಳನ್ನು ಪದಗಳಲ್ಲಿ ತಂದಿದ್ದಾರೆ. ಆ ಮೂಲಕ ಆಯಾಯ ಸಮುದಾಯದ ಸಂಸ್ಕೃತಿಯನ್ನು, ಸಾಮಾಜಿಕ ನೆಲೆಯನ್ನು ದರ್ಶನ ಮಾಡಿಸಿದ್ದಾರೆ.

ಸಮಾಜದಲ್ಲಿ ಬಡವ ಶ್ರೀಮಂತ ಎಂಬ ವರ್ಗತಾರತಮ್ಯ, ಜಾತಿಮತ ಪಂಥಗಳಲ್ಲಿ ಬೇಧ ಭಾವಗಳಿಂದಾಗಿ ಶೋಷಣೆ, ಘರ್ಷಣೆ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣೆದುಕೊಂಡಿದೆ. ವ್ಯಕ್ತಿಗತವಾದ ಭಾವನೆಗಳಲ್ಲಿ ಮೂಢತೆ, ಡಾಂಭಿಕತೆ, ಅನಾಚಾರ, ಅಜ್ಞಾನ, ಚಂಚಲತೆ, ದುರಭ್ಯಾಸಗಳು, ಮೋಸಗಾರಿಕೆ, ಅಹಂಕಾರ ಮುಂತಾದ ವ್ಯಕ್ತಿಸಂಬಂಧ ಭಾವನೆಗಳಿಂದ ಸಮಾಜದಲ್ಲಿ ವ್ಯಕ್ತಿ–ವ್ಯಕ್ತಿಗಳಲ್ಲಿ, ವ್ಯಕ್ತಿ ಸಮಾಜದಲ್ಲಿ ಅನೇಕ ಭಿನ್ನಾಭಿಪ್ರಾಯಗಳು ತಲೆದೋರಿ ದ್ವೇಷ, ರೋಷಕ್ಕೆ ಪ್ರೇರಣೆಯಾಗಿ ಮಾನವೀಯತೆಯು ಕಳೆದು ಹೋಗುತ್ತಿದೆ. ವಿಕಾರ ಭಾವನೆಗಳಿಂದ ಮನುಷ್ಯ–ಮನುಷ್ಯನ ಸಂಬಂಧ ಅರಿಯದೇ ವಿವೇಕಹೀನವಾಗಿ ವರ್ತಿಸುವುದನ್ನು ಶರೀಫರ ಹಲವಾರು ಪದಗಳಲ್ಲಿ ಕಾಣುತ್ತವೆ. ಸಾಮಾಜಿಕ ಅಸ್ವಸ್ಥತೆಯೊಂದಿಗೆ ನೈಸರ್ಗಿಕ ವಿಕೋಪವೂ ಸೇರಿದಾಗ ಸಾಮಾನ್ಯ ವ್ಯಕ್ತಿಗಳಿಗೆ ದಿಕ್ಕು ತೋಚದಂತಾಗುತ್ತದೆ. ಪರಿಸ್ಥಿತಿಯು ಕೈಗೊಂಬೆಯಾಗಿ ಮಾನಸಿಕವಾಗಿ ನರಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಸ್ವತಃ ಶರೀಫರಿಗೂ ಇಂಥ ಪರಿಸ್ಥಿತಿಗಳಿಂದ ಪಾರಾಗಲು ಸಾಧ್ಯವಾಗಲಿಲ್ಲ. ಸಾಮಾಜಿಕ ಅಂತಸ್ತುಗಳಲ್ಲಿ ಶೋಷಣೆಗೆ ಗುರಿಯಾಗುವ, ಅಸಮಾನತೆ, ಕೀಳರಿಮೆಯನ್ನು ಅನುಭವಿಸುವ ನೈಜತೆಯ ಚಿತ್ರಗಳನ್ನು ತಮ್ಮ ಪದಗಳಲ್ಲಿ ವಿಶ್ಲೇಷಿಸಿದ್ದಾರೆ.

ಶರೀಫರಿಗೆ ಇಪ್ಪತ್ತು ಎಕರೆ ಜಮೀನು ಇದ್ದರೂ ಮಳೆ ಬಾರದೆ ಅದು ಬಂಜರು ಭೂಮಿಯಾಗಿತ್ತು. ಇದರಿಂದಾಗಿ ಮನೆಯಲ್ಲಿ ಹೆಂಡತಿ–ಮಕ್ಕಳು ಉಪವಾಸದಿಂದ ಬಳಲುವುದನ್ನು ನೋಡಲಾಗದೇ ಎಲ್ಲರಂತೆ ಇವರಿಗೂ ದಿಕ್ಕು ತೋಚದಂತಾಗುತ್ತದೆ. ಗುಡಗೇರಿಯ ಕುಲಕರ್ಣಿ ಭೀಮರಾಯರು ಯಾವಾಗಲೂ ಶರೀಫರ ಯೋಗಕ್ಷೇಮವನ್ನು ವಿಚಾರಿಸಿ ಆಗಾಗ ದವಸ–ಧಾನ್ಯ, ಹಣ ಕೊಡುತ್ತಿದ್ದರು. ಆ ಹಳೆಯ ಸ್ನೇಹವನ್ನು, ಸಲಿಗೆಯನ್ನು ನೆನಪಿಸಿಕೊಂಡು ಅವರ ಸಹಾಯ

ಕೇಳಲು ಹೋಗುತ್ತಾರೆ. ಆದರೆ ಭೀಮರಾಯರ ಮಗ ಶರೀಫರನ್ನು ತಿರಸ್ಕಾರದಿಂದ ನೋಡುತ್ತಾನೆ. ಅರೆಪಾವು ಜೋಳ ಕೊಡುತ್ತಾನೆ. ಅವನ ವರ್ತನೆಯಿಂದ ಕುಗ್ಗಿ ಹೋದ ಶರೀಫರು ಅಸಹಾಯಕತೆಯಿಂದ, ಅವಮಾನದಿಂದ, ಸಂಕಟದಿಂದ ಚಡಪಡಿಸುತ್ತಾರೆ. ಹೆಂಡತಿ–ಮಕ್ಕಳನ್ನು ಸಾಕಲಾಗದ ಈ ಸಂಸಾರದಿಂದ ಇಂಥ ದೀನಸ್ಥಿತಿಯು ತನಗೆ ಬಂದಿತೆಂದು ಸಂಸಾರವನ್ನು ಚಪ್ಪಲಿಯ ಅಟ್ಟಗೆ ಹೋಲಿಸುತ್ತಾರೆ.

> "ಕರಣಿಕರು ಕೊಟ್ಟ ಅರಪಾವ ಜೋಳದಿಂದ
> ಹೊಟ್ಟೆ ಬರ ಹಿಂಗುವದ್ಹ್ಯಾಂಗಲೋ ಮನಸೇ
> ಸ್ಥಿರವಲ್ಲ ಸಂಸಾರ ಕೆರವಿನಟ್ಟೆಯ ಸರಿ
> ಬರಿದೆ ಆಸೆಕ ಬಿದ್ದೆಲ್ಲೋ ಮನಸೇ..."[೧೨]

ಎಂದು ಸಂಕಟ ಪಡುವರು. ಜಮೀನುದಾರರಾದ ಭೀಮರಾಯ ಕುಲಕರ್ಣಿಯವರು ಒಮ್ಮೆ ಶರೀಫರಿಗೆ ಕೇವಲ ನಾಲ್ಕಾಣೆ (೨೫ ಪೈಸೆ) ಕೊಟ್ಟಾಗ, ಈ ರೀತಿ ಬೇಡುವ, ಅವರು ಕೊಟ್ಟಷ್ಟೇ ತೆಗೆದುಕೊಳ್ಳುವ ಹೀನಸ್ಥಿತಿಗೆ ಸಿಲುಕಿದಾಗ ಶರೀಫರು ತುಂಬಾ ನೊಂದುಕೊಂಡಿದ್ದಾರೆ. ಬಡತನದ ಬಗ್ಗೆ; ಸಂಸಾರದ ಬಗ್ಗೆ ಜಿಗುಪ್ಸೆ ಭಾವವನ್ನು ತಳೆದಿದ್ದಾರೆ.

> "ಕುಲಕರ್ಣಿ ಕೊಟ್ಟ ಪಾವಲಿ ರೊಕ್ಕದಿಂದ
> ಬ್ರಹ್ಮನೆಲೆಗಾಣಬಿದ್ಹ್ಯಾಂಗ ಪೇಳಲೋ ಮನಸೇ..."[೧೩]

ಬರಗಾಲದ ಬಡತನ ಘಟನೆಗಳಿಂದಾಗಿ ಬಡವರು ಶ್ರೀಮಂತರಿಂದ ಶೋಷಿಸಲ್ಪಡುವುದು ಹಳ್ಳಿಗಳಲ್ಲಿ ಸಾಮಾನ್ಯವಾಗಿತ್ತು.

ಬಡವರ ಜೀವನ ನಿರ್ವಹಣೆಗಾಗಿ ಸಹಾಯ ಕೇಳುವ ಅಥವಾ ಬೇಡಿ ಪಡೆಯುವ ಸಂಪ್ರದಾಯ ಸಮಾಜದ ವ್ಯವಸ್ಥೆಯಲ್ಲಿ ರೂಢಿಗತವಾಗಿತ್ತು. ಗೌಡರು, ಪಟೇಲರು, ಜಮೀನುದಾರರಿಂದ ದಾನ ಪಡೆಯುವವರಿಗೆ ಹಳ್ಳಿಗಳಲ್ಲಿ 'ವತನದಾರರು' ಎನ್ನುತ್ತಾರೆ. ಈ ದಾನವು ಹಣವೇ ಆಗಿರಬೇಕೆಂದೇನು ಇಲ್ಲ. ದವಸ ಧಾನ್ಯವು ಆಗಿರುತ್ತಿತ್ತು. ಶ್ರೀಮಂತರು ಬಡವರಿಗೆ ಸಹಾಯ ಮಾಡುವ ಬದಲು ನಿಕೃಷ್ಟವಾಗಿ ಕಾಣುತ್ತಿದ್ದರು. ನಾಲ್ಕಾಣೆಯಷ್ಟು ಹಣವನ್ನು ಕೊಡುವುದು, ಒಂದು ರೀತಿಯಲ್ಲಿ ಶೋಷಣೆಯಾಗಿತ್ತು. ಮಹಾತ್ಮನಿರಲಿ, ಸಾಧು–ಸಂತನಿರಲಿ ಮೂಲತಃ ಮನುಷ್ಯನೇ

ಆಗಿರುವುದರಿಂದ ಸಮಾಜದ ವ್ಯವಸ್ಥೆಯಲ್ಲಿಯೇ ಬಾಳುವುದರಿಂದ ಇಂಥ ಅನುಭವಗಳನ್ನು ಅನುಭವಿಸುವುದು ಸಹಜವಾಗಿತ್ತು.

ಜಾತಿ–ಮತಗಳೇ ಮಡಿ–ಮೈಲಿಗಳೆಂದು ವಾದಿಸುವ ಜನರು ಶರೀಫ ಮತ್ತು ಗೋವಿಂದ ಭಟ್ಟರ ಐಕ್ಯ ಭಾವನೆ, ಸಹಜೀವನ, ಸಾಮರಸ್ಯ, ತತ್ವನಿಷ್ಠೆ, ಸುಜ್ಞಾನ, ವಾಕ್‌ಸಿದ್ಧಿ, ತಪಃಶಕ್ತಿಗಳನ್ನು ಆಳವಾಗಿ ನೋಡುವ, ಅರಿಯುವ ಗೋಜಿಗೆ ಹೋಗದೇ ಅವರನ್ನು ಟೀಕಿಸುತ್ತಿದ್ದರು. ಸಮಾಜದಲ್ಲಿ ಮುಸ್ಲಿಂ ಮತ್ತು ಬ್ರಾಹ್ಮಣರಲ್ಲಿ ಯಾವ ಸಾಮ್ಯವನ್ನು ಕಾಣದ ವೈದಿಕ ಗುರುವಿಗೆ ಮುಸ್ಲಿಂ ಶಿಷ್ಯನಾಗಿರುವುದನ್ನು ಸಹಿಸಲಾರದೆ ಅನೇಕ ಆಪಾದನೆಗಳನ್ನು ಹೊರಿಸಿ, ಅವಮಾನಗೊಳಿಸಿ ಮಾನಸಿಕ ನೋವಿಗೆ ಗುರಿಮಾಡುತ್ತಿದ್ದರು. ಸಮಾಜದ ಕಟುಟೀಕೆಗೆ ಒಳಗಾದ, ಧರ್ಮಾತೀತರಾದ ಗುರುಶಿಷ್ಯರು ಇಂತಹ ಸಾಮಾಜಿಕ ಸ್ಥಿತಿಯಲ್ಲಿ ಮನಸ್ಸನ್ನು ಗಟ್ಟಿ ಮಾಡಿಕೊಂಡು ತಮ್ಮ ಮನಸ್ಸಿನ ಅಳಲನ್ನು ದೇವರಿಗೆ ನಿವೇದಿಸಿದ್ದಾರೆ. ಅಂತಹ ಘಟನೆಗಳ ಚಿತ್ರಣವನ್ನು ಶರೀಫರ ಹಲವಾರು ಪದಗಳಲ್ಲಿ ಕಾಣುತ್ತೇವೆ.

"ಮಾನಪಮಾನ ನಿನ್ನಪಮ್ಮ ಎನಗೇನು
ಶ್ವಾನನಂತೆ ಬೊಗಳುತಿಹರು ಹೀನ ಜನರೆಲ್ಲರಿವರು
ಸದಾ ನಿನ್ನ ಧ್ಯಾನದೊಳಿರಲು
ಮದಾ ಬಂದಿಂತೆಂಬುವರಿವರು
ಕದನವ ಮಾಡುವರಿವರು
ನಿಧಾನವ ತಿಳಿಯದವರು"[೨೩]

ಅತ್ತಿಗೇರಿ ಹಿರೇಮಠದಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಬ್ರಹ್ಮೋತ್ತರಕಾಂಡ ಪುರಾಣವನ್ನು ಅರ್ಥೈಸುವುದರ ಬಗ್ಗೆ ತಿಳಿದ ಶರೀಫರು ಜ್ಞಾನದಾಹಿಯಾಗಿ ಮಠಕ್ಕೆ ಬಂದರು. ಪುರಾಣವನ್ನು ಓದುತ್ತಿದ್ದ ವ್ಯಕ್ತಿಯು ಮುಸ್ಲಿಂ ಶರೀಫರನ್ನು ಕಂಡು ಕಸಿವಿಸಿಯಾಗಿ ಕುಡುಕ, ಜಾತಿ, ನೀತಿ ಇಲ್ಲದವರು, ಅನಾಚಾರಿ ಎಂದು ಹೀನವಾಗಿ ಮೂದಲಿಸಿದನು. ಅಲ್ಲಿಂದ ಹೊರಹೋಗುವಂತೆ ತಿಳಿಸಿದನು. ಮನನೊಂದು ಶರೀಫರು ಸಾತ್ವಿಕ ಕೋಪದಿಂದ ಕೆರಳಿ–

"ಎದ್ದು ಹೋಗತೀನಿ ತಾಳಲೋ! ಛೀ ಬುದ್ಧಿಗೇಡಿ
ಎದ್ದು ಹೋಗತೀನಿ ತಾಳಲೋ

ಇದ್ದು ಇಲ್ಲೆ ಭವಕ ಬೀಳೋ
ಸದ್ಯ ಸದ್ಗುರು ಶಾಪ ನಿನಗೆ

ಸಿದ್ಧಲಿಂಗನ ಪಾದಸಾಕ್ಷಿ...
ಹುಟದಿ ನಮ್ಮನ್ಯಾಕ ನೋಡತಿ! ಒಣ
ಕಟಗಿಯಂತೆ ಸಿಡಿದುಕೊಂಡು ಮಾತನಾಡುತಿ
ಚುಟುಕ ಹೊಡೆದು ಬಿಟ್ಟ ಕುಣಿಸಿ
ಕಠಿಣ ಕಲಹ ಗುಣ ಗುಣಗಳೆಣಿಸಿ
ಕುಟುಕ ದೋಷವು ತಟ್ಟತೋ
ಮಠದ ಪಾದಸಾಕ್ಷಿ ಇದಕೆ"[೧೭]

ಎಂದು ಸಿಟ್ಟಿನಿಂದ ಶಾಪ ಕೊಡುವರು. ಇಂಥ ಸಾಮಾಜಿಕ ಅವಮಾನವು ಅನೇಕ ಸಲ ಅವರ ಜಾತಿಯ ಕಾರಣದಿಂದ ಆಗಿರುವುದನ್ನು ಕಾಣಬಹುದು.

ಯಾರಿಗೂ ಯಾವ ತರದ ತೊಂದರೆಯನ್ನು ಕೊಡದ ಶರೀಫ ಸಾಹೇಬರನ್ನು ಕೆಲವರು ಕೊಲ್ಲಲು ಸಹ ಪ್ರಯತ್ನಿಸಿದರು. ನ್ಯಾಯ ನಿಷ್ಠುರಿಯಾದ ಶರೀಫರು ಜನರ ಅಂಕು ಡೊಂಕುಗಳನ್ನು ತಿದ್ದಿ ಸನ್ಮಾರ್ಗದಲ್ಲಿರುವಂತೆ ಸೂಚಿಸುತ್ತಿದ್ದರು. ಸಮಾಜದಲ್ಲಿ ಮನೆ ಮಾಡಿರುವ ಡಾಂಭಿಕತೆ, ಅನ್ಯಾಯ, ಮೋಸ, ಭೇದ, ಭಾವ ಮತ್ತು ಸ್ವಾರ್ಥ ಜೀವನವನ್ನು ನಡೆಸುತ್ತಿದ್ದ ಜನರಿಗೆ ಶರೀಫರು ವ್ಯಕ್ತಿತ್ವ ಮತ್ತು ಚಿಂತನೆಗಳು ಅಡ್ಡಿಯಾಗಿದ್ದವು. ಆದ್ದರಿಂದ ಅವರನ್ನು ಕೊಲ್ಲುವ ಪ್ರಯತ್ನವು ನಡೆಯಿತು. ದತ್ತೂರಿ ಬೀಜವನ್ನು ಶರೀಫರ ಚಿಲುಮೆಯಲ್ಲಿ ಹಾಕಿದುದು ತಿಳಿದು ಹೀಗೆ ಹಾಡುತ್ತಾರೆ–

"ದತ್ತೂರಿ ಕೊಟ್ಟವನು ಸತ್ತು ಹೋಗಲಿ ಸಾಂಬಾ
ಮತ್ತವಗೆ ಮರಣ ಮೂರು ತಿಂಗಳಿಗೆ
ಚಿತ್ತದೊಳು ಮಹೇಶಮಂತ್ರ ಜಪದೋಳಿರಲು
ಮೃತ್ಯುವಿನ ಭಯವ್ಯಾಕೆ ಮನಸಿನೊಳು ಸಾಂಬಾ"[೧೮]

ಈ ಪದ್ಯದಲ್ಲಿ ತಾವು ಸಮಾಜದ ದುಷ್ಟ ಶಕ್ತಿಗಳ, ಕ್ರೂರ ಕೃತ್ಯಗಳಿಂದ ನಲುಗುವ ಸರಳ ಸಾತ್ವಿಕ ಜನರ ಪ್ರತಿನಿಧಿಯಾಗಿ ಅನುಭವಿಸಿದ ನೋವನ್ನು ಹಾಡಿದ್ದಾರೆ.

೨.೨ ಶರೀಫರ ಪದಗಳಲ್ಲಿ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣಾ ವಿಶೇಷಗಳು

ಶರೀಫರ ತತ್ತ್ವಪದಗಳಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳ ವಿಶೇಷವೇನೆಂದರೆ ಅನೇಕ ಧರ್ಮಗಳ ಮತ್ತು ಆಯಾ ಧಾರ್ಮಿಕ ಸಂಸ್ಕೃತಿಗಳ ಸಮ್ಮಿಲನದ ಸಂದರ್ಭವನ್ನು ಕಾಣುತ್ತೇವೆ.

ಧರ್ಮಾತೀತರಾದ ಶರೀಫರಿಗೆ ಎಲ್ಲ ದೈವಗಳು, ದೇವರುಗಳು ಒಂದೇ ಆಗಿದ್ದವು. ಧರ್ಮದ ಉದ್ದೇಶ ಮಾನವ ಕಲ್ಯಾಣವಾಗಿರುವುದರಿಂದ ಧರ್ಮಗಳಲ್ಲಿಯ ಆಚರಣೆ, ನಂಬಿಕೆ, ಸಂಪ್ರದಾಯಗಳು ಇತ್ಯಾದಿ ಬದುಕಿನ ಸಫಲತೆಯ ಮಾರ್ಗಗಳು ಹಲವಾದರೂ ಅವು ಹೊಂದುವ ಗುರಿ ಮಾತ್ರ ಎಲ್ಲ ಧರ್ಮಗಳಲ್ಲಿ ಒಂದೇ ಆಗಿತ್ತು. ಶರೀಫರು ಆ ಗುರಿಯನ್ನು ಹೊಂದುವ ಧರ್ಮಾಚರಣೆಯ ತತ್ತ್ವಕ್ಕೆ ಬದ್ಧರಾಗಿದ್ದರು.

ಮುಸ್ಲಿಂ, ವೀರಶೈವ, ವೈದಿಕ ಧರ್ಮಗಳ ಪರಿಸರದಲ್ಲಿ ಬಾಳಿದ ಶರೀಫರ ಪದಗಳಲ್ಲಿ ಈ ಮೂರು ಧರ್ಮದೇವತೆಗಳ ಸ್ತುತಿಗಾನವನ್ನು ಮಾಡಿದ್ದಾರೆ. ಜೊತೆಗೆ ಆಯಾ ಧರ್ಮಗಳ ಆಚರಣೆ, ಸಂಸ್ಕೃತಿಯನ್ನೊಳಗೊಂಡ ಪದಗಳನ್ನು ಹಾಡಿದ್ದಾರೆ. ವಿವಿಧತೆಯಲ್ಲಿ ಏಕತೆಯ ಪರಿಕಲ್ಪನೆಯನ್ನು ಶರೀಫರ ಪದಗಳು ವ್ಯಕ್ತಪಡಿಸುತ್ತವೆ.

ವೀರಶೈವ ಧರ್ಮದ ದೈವಗಳಾದ ಶಿವ, ಪಾರ್ವತಿ, ಮೈಲಾರ, ಮಹಾದೇವ, ಗುಡಿಪುರದ ಅಪ್ಪಯ್ಯ, ಆದಿ ಬಸವಣ್ಣ, ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿಗ್ಗಲಿ ನೀಲಕಂಠ, ಜಗದಂಬೆ, ದ್ಯಾಮವ್ವ, ಎಲ್ಲಮ್ಮ, ಫಕೀರೇಶ್ವರಗಳಾದರೆ, ವೈದಿಕ ಧರ್ಮದ ದೇವರುಗಳಾದ ಕೃಷ್ಣ, ರಾಮ, ಹನುಮಂತ, ಶಾಕಾಂಬರಿ, ಪ್ರಮೀಳೆಯರನ್ನು ಸ್ಮರಿಸಿದ್ದಾರೆ. ಮುಸ್ಲಿಂ ದೈವಗಳಾದ ಮಹಮ್ಮದ್ ಪೈಗಂಬರ್, ಖಾದಿರಿಷಾರನ್ನು ಕುರಿತು ಹಾಡಿದ್ದಾರೆ.

ಶರೀಫರ ಬದುಕು ವಿಶಿಷ್ಟವಾಗಿದೆ. ಮುಸಲ್ಮಾನ ಧರ್ಮದಲ್ಲಿ ಹುಟ್ಟಿ ಲಿಂಗಾಯತ ಧರ್ಮದ ವಾತಾವರಣದಲ್ಲಿ ಬೆಳೆದು, ವೈದಿಕ ಧರ್ಮದ ಗುರು ಗೋವಿಂದರನ್ನು ಗುರುಗಳನ್ನಾಗಿ ಪಡೆದದ್ದು ನಿಜಕ್ಕೂ ಆಶ್ಚರ್ಯದ ಸಂಗತಿಯಾಗಿದೆ. ಎಲ್ಲರಿಗೂ ಅಂತಹ ಬದುಕು ಸಿಗುವುದಿಲ್ಲ. ಆ ಕಾರಣಕ್ಕಾಗಿಯೇ ಶರೀಫರು ಮಹಾ ಮಾನವತಾವಾದಿ ಎನಿಸುವರು.

ಈ ಮೂರು ಧರ್ಮಗಳ ಸಾರವನ್ನು ಅರಿತುಕೊಂಡು ಅವುಗಳ ಆಚಾರ–ವಿಚಾರ, ನಂಬಿಕೆ, ಸಂಪ್ರದಾಯ, ಹಬ್ಬ–ಹರಿದಿನ, ಜಾತ್ರೆ–ಉತ್ಸವ, ಕೋಲಾಟ, ಬಯಲಾಟ ಹೆಜ್ಜೆಮೇಳಗಳಂಥ ಸಾಂಸ್ಕೃತಿಕ ಚಟುವಟಿಕೆಗಳನ್ನು ವಿಭಿನ್ನ ನೆಲೆಯಲ್ಲಿ ನೋಡಿ, ಬೇಧ ಭಾವವಿಲ್ಲದಂತೆ ಅವುಗಳಲ್ಲಿ ಒಂದಾಗಿ, ಮೂರೂ ಧರ್ಮಗಳ ಸಾಂಸ್ಕೃತಿಕ ವ್ಯಕ್ತಿಯಾಗಿ ಬೆಳೆದರು. ಅವರ ಪದಗಳಲ್ಲಿ ಆಯಾಯ ಧರ್ಮಗಳ ಘಟನಾತ್ಮಕ ಸನ್ನಿವೇಶವನ್ನು ಕಾಣಬಹುದಾಗಿದೆ.

ಕೂಲೀಮಠದ ವಿದ್ಯಾಭ್ಯಾಸ ಮತ್ತು ಸುತ್ತಲಿನ ಲಿಂಗಾಯತ ಧರ್ಮದ ಪರಿಸರ ಪ್ರಭಾವಕ್ಕೆ ಒಳಗಾಗಿದ್ದ ಶರೀಫರು ಬಸವಣ್ಣ, ಚೆನ್ನಬಸವಣ್ಣ ಮತ್ತು ಅಲ್ಲಮಪ್ರಭು ಅವರ ಮೇಲೆ ವಿಶೇಷ ಭಕ್ತಿ ಭಾವವನ್ನು ಹೊಂದಿರುವುದನ್ನು ಅವರ ಪದಗಳಲ್ಲಿ ಕಾಣುತ್ತೇವೆ.

'ಶ್ರೀ ಬಸವೇಶ್ವರ ದಂಡಕ'[19] ಮತ್ತು 'ಉಳವಿ ಜಾತ್ರೆಗೆ ಹೋಗೋಣ'[20] ಎಂಬ ಪದಗಳು ಬಸವಣ್ಣ ಮತ್ತು ಚೆನ್ನಬಸವಣ್ಣನ ಮೇಲಿನ ಆದರಾಭಿಮಾನವನ್ನು ತೋರಿಸುತ್ತವೆ. "ಚಾರುತರದ ವೃಷಭನ ಮಂತ್ರವಿರಲು ನರರ ಹಂಗಿನ್ನೇನಲೆ ಮನಸೇ..."[21] ಈ ಪದದಲ್ಲಿ ಶಿಶುನಾಳದ ಗ್ರಾಮದೇವತೆಯಾದ ಬಯಲು ಬಸವಣ್ಣನೇ ಶಿಶುನಾಳಧೀಶನಾಗಿ ಶರೀಫರ ಅಂಕಿತವಾಗಿರುವುದು ಅವರ ಮೇಲಿನ ಲಿಂಗಾಯತ ಧರ್ಮದ ಪ್ರಭಾವವನ್ನು ತೋರಿಸುತ್ತದೆ.

ವೀರಶೈವ ಧರ್ಮದ ಶೂನ್ಯಪೀಠದ ಅಧ್ಯಕ್ಷರಾಗಿದ್ದ ಅಲ್ಲಮಪ್ರಭುವಿನ ಮೇಲೆ ಶರೀಫರಿಗೆ ಅಪಾರ ಗೌರವ, ಭಕ್ತಿ, ಅಲ್ಲಮಪ್ರಭುವನ್ನು ದೇವರೆಂದೇ ಆರಾಧಿಸುವ ಶರೀಫರು "ಬಸವಣ್ಣನಂಥ ಭಕ್ತನಿಲ್ಲ, ಪ್ರಭುದೇವರಂಥ ಪರಮಾತ್ಮನಿಲ್ಲವೆಂದು" ಉದ್ಗಾರ ತೆಗೆದಿದ್ದಾರೆ.

ಚಾಮರಸನ ಕಾವ್ಯ 'ಪ್ರಭುಲಿಂಗ ಲೀಲೆ'ಯನ್ನು ತಾವೇ ಸ್ವತಃ ಪ್ರತಿ ಮಾಡಿ ಕೊಂಡಿದ್ದರು. ಶರೀಫರು ಎಲ್ಲಿ ಹೋದರೂ ಅದನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂಬುದಕ್ಕೆ "ಆರು ಶಾಸ್ತ್ರ, ಹದಿನೆಂಟು ಪುರಾಣ ನನ್ನ ಬಗಲಾಗ, ಪ್ರಭುಲಿಂಗಲೀಲೆ ನನ್ನ ತಲಿಮ್ಯಾಲ" ಎಂದು ಭಾವ ತುಂಬಿ ಹೇಳಿರುವುದೆ ಸಾಕ್ಷಿಯಾಗಿದೆ.

"ಎಚ್ಚರವಿರಬೇಕು ಪ್ರಭುಲಿಂಗ ಲೀಲೆ ಓದುವವನಿಗ"[22] ಎಂದು ಎಚ್ಚರಿಸುವಲ್ಲಿ, "ಪಾದಪೂಜೆಯಾದುದೇನಿದು ಪ್ರಭುವರನ ಕಾಣದೇ"[23] ಎಂಬ ಪದಗಳಲ್ಲಿ ಶರಣರ ಮತ್ತು ವೀರಶೈವ ಧರ್ಮದ ಪ್ರಭಾವವನ್ನು ಕಾಣುತ್ತೇವೆ. ಲಿಂಗಾಯತ ಧರ್ಮದ ಗ್ರಾಮದೇವತೆಗಳನ್ನು ತಮ್ಮ ಪದಗಳಲ್ಲಿ ಸ್ಮರಿಸಿದ್ದಾರೆ.

"ಅಯ್ಯಪ್ಪನ ಪಾದಾ ಕಂಡೆ"[೨೪] ಎಂದು ಗೂಡಗೇರಿ ಸಂಗಮೇಶ್ವರನನ್ನು ಕುರಿತು ಹಾಡಿದಂತೆಯೆ, ಅಂಕಲಗಿ ಅಡವಿ ಸ್ವಾಮಿಯನ್ನು ಕುರಿತು,

"ಹೋಗೋಣ ನಡಿಯೋ ಬೇಗನೆ ಎದ್ದು..."[೨೫]

ಎಂದು

ಯೋಗಿಯ ಕಂಡೆನು ಹುಚ್ಚೇಂದ್ರ ಯೋಗಿಯ..."[೨೬]

ಮತ್ತು

"ಮುತ್ತು ರತ್ನದ ಕಿಡಿಯು ಉದುರಿತು..."[೨೭]

ಎಂದು ಹುಬ್ಬಳ್ಳಿಯ ಮೂರು ಸಾವಿರ ಮಠದ ಅಂದಿನ ಜಗದ್ಗುರುಗಳನ್ನು ಕುರಿತೂ ಹಾಡಿಹೊಗಳಿದ್ದಾರೆ.

ಶರೀಫರ ಪದಗಳಲ್ಲಿ ಉತ್ತರ ಕರ್ನಾಟಕದ ಜನಪದ ಸೊಗಡು ತುಂಬಿದೆ. ಧಾರ್ಮಿಕ ಸಾಂಸ್ಕೃತಿಕ ಅಂಶಗಳನ್ನು ಅವರ ಜಾತ್ರೆ-ಕ್ಷೇತ್ರ ದರ್ಶನಗಳ ಪದಗಳಲ್ಲಿ, ಹಬ್ಬ ಹರಿದಿನಗಳ ಪದಗಳಲ್ಲಿ, ಸಾಂಪ್ರದಾಯಿಕ ಆಚರಣೆಗಳಾದ, ಭೂಮಿ ಪೂಜೆ, ಅರಳೆ ಬಸವನ ಪೂಜೆ, ಶರಣರ ಪಾದಪೂಜೆ, ಶಿವಯೋಗಿಗಳ ಪೂಜೆ, ಪ್ರವಚನ, ನಾಮಕರಣ ಸಮಾರಂಭ, ಏಕಾದಶಿವ್ರತ, ಕೋಲಾಟ, ಬಯಲಾಟ, ಹೆಜ್ಜೆಮೇಳ, ಆರತಿ ಸಮಾರಂಭಗಳ ಪದಗಳಲ್ಲಿ ಕಾಣಬಹುದಾಗಿದೆ.

ಕ್ಷೇತ್ರದರ್ಶನ ಮತ್ತು ಜಾತ್ರೆಗಳ ಪದಗಳು

ಕ್ಷೇತ್ರ ದರ್ಶನಕ್ಕಾಗಿ ಶರೀಫರು ಹುಲಗೂರು, ಗುಡಿಪುರ, ಶಿಗ್ಗಲಿ, ಮೈಲಾರ, ಪಶುಪತಿಹಾಳ, ಗುಡಗೇರಿ, ಸವದತ್ತಿ, ಅಂಕಲಗಿ, ಶಿಶುನಾಳ, ಶಿರಹಟ್ಟಿ, ಅಣ್ಣಿಗೇರಿ, ಅತ್ತಿಗೇರಿ, ಉಗರಗೋಳ, ಉಳವಿ, ಕಡಕೋಳ, ಕರಡೀ ಗುಡ್ಡ, ಕಳಸ, ಕಾರಡಗಿ, ಗುಲಗಂಜಿಕೊಪ್ಪ, ಚಾಕಲಬ್ಬಿ, ಚಿಗಹಳ್ಳಿ, ತಿಳವಳ್ಳಿ, ನೆಲಗುಡ್ಡ, ಬಂಕಾಪುರ, ಬಾತಿ, ಬೂದಿಹಾಳ, ಮಂಡಿಗನಾಳ, ಯಮನೂರು, ಯಳವತ್ತಿ, ಲಕ್ಷ್ಮೇಶ್ವರ, ಸಂಗೂರ, ಶೀಗಿಹಳ್ಳಿ, ಸೊರಟೂರ, ಹಂಪಿ, ಹೀರೆಹಡಗಲಿ, ಹುಬ್ಬಳ್ಳಿ ಮೊದಲಾದ ಸ್ಥಳಗಳಲ್ಲಿ ಓಡಾಡಿದ್ದಾರೆ.

---

೨೪. ಅದೇ. ಪು. ೧೮.
೨೫. ಅದೇ. ಪು. ೩೩.
೨೬. ಅದೇ. ಪು. ೭೯.
೨೭. ಅದೇ. ಪು. ೧೧೯.

ತೀರ್ಥಕ್ಷೇತ್ರದರ್ಶನದ ಜೊತೆಗೆ ಸಾಧು, ಸತ್ಪುರುಷರ, ಶರಣರ, ದರ್ಶನ, ಮಾರ್ಗದರ್ಶನಕ್ಕಾಗಿ ಅನೇಕ ಸ್ಥಳಗಳನ್ನು ಸಂದರ್ಶಿಸಿದ್ದಾರೆ. ಹುಲಗೂರು ಖಾದಿರಿಷಾರವರ ವರಪ್ರಸಾದದಿಂದ ಜನಿಸಿದ ಶರೀಫರು ತಮ್ಮ ಬದುಕಿನುದ್ದಕ್ಕೂ ಖಾದರಿಯವರಿಗೆ ಸೇವೆ ಸಲ್ಲಿಸಿದ್ದಾರೆ. ಬೆಳಗಿನ ಜಾವ ಯಾರಿಗೂ ಕಾಣಿಸಿಕೊಳ್ಳದಂತೆ ಮೌನವಾಗಿ ಶಿಶುನಾಳದಿಂದ ಹುಲಗೂರದ ಖಾದರಿಯವರ ದರ್ಗಾಕ್ಕೆ ಹೋಗಿ ಬರುತ್ತಿದ್ದರಂತೆ.

"ನಡೆಯೋ ದೇವರ ಚಾಕರಿಗೆ ಮುಕ್ತಿ
ಗೊಡೆಯ ಖಾದರಲಿಂಗ ನೆಲಸಿರ್ಪ ಗಿರಿಗೆ"[೨೫]

ಮತ್ತು

"ಖಾದರಿ ಸದಾವರಿ
ನಿತ್ಯ ನಿರಂಜನಾವರಿ
ಪಂಚ ಪ್ರಣವ ಘೋಷನಾದ
ಮುಂಚೆ ಮೌನ ಖಾದರಿ
ಸಂಚಿತಾರ್ಥ ವಿಷಯ ಕರ್ಮವಿದು
ಪ್ರಪಂಚ ದೂರ ಖಾದರಿ

ಆದಿನಾದ ಮೋದನಾದ
ಹುಮ್ಮನಳಿದ ಖಾದರಿ
ಮೇದಿನಿ ಸ್ಥಳದಿ ಶಿಶುನಾಳ
ಪಸಾದ ಹದರೇಶಾ ಖಾದರಿ"[೨೬]

ಎಂದು ಅನೇಕ ಪದಗಳನ್ನು ಭಕ್ತಿಯಿಂದ ಹಾಡಿದ್ದಾರೆ.

ಇಂದಿನ ಗುಡುಗೇರಿಯೇ ಶರೀಫರ ಪದದಲ್ಲಿಯ ಗುಡಿಪುರ. ಗುಡಿಪುರದ ದ್ಯಾಮನ್ನನಲ್ಲಿ ಶರೀಫರಿಗೆ ಅಪಾರ ಭಕ್ತಿ, ಗುರುಗೋವಿಂದ ಭಟ್ಟರೊಂದಿಗೆ ಶರೀಫರು ದ್ಯಾಮವ್ವದೇವಿಯ ಪವಳಿಯಲ್ಲಿ ರಾತ್ರಿಯನ್ನು, ತೂರ್ಯಾವಸ್ಥೆಯಲ್ಲಿ ಕಳೆಯುತ್ತಿದ್ದರು. ಗುರು-ಶಿಷ್ಯರ ಅಪಾರ ಭಕ್ತಿಗೊಲಿದ ದೇವಿ ತನ್ನ ಮುತ್ತಿನ ಮೂಗುತಿ ಕೊಟ್ಟ ಪ್ರತೀತಿ ಇದೆ. ತಾಯಿ ಸ್ವರೂಪಳಾದ ದೇವಿ ದ್ಯಾಮವ್ವನ ದರ್ಶನವನ್ನು ಹಲವು ಸಂದರ್ಭಗಳಲ್ಲಿ ಪಡೆದಿದ್ದಾರೆ. ಗುಡಿಗೇರಿಯು ಶರೀಫರಿಗೆ ಪವಿತ್ರ ಸ್ಥಳವಾಗಿತ್ತು. ಇದರಂತೆ ಕಲಕದ ಸಂಗಮೇಶರ ಸ್ವಾಮಿಯನು. ಕುರಿತು-

**"ನೋಡುನು ಬಾ ಗುರುನಾಥ ಸಖಿ
ನೋಡುನು ಬಾ ಮುಕ್ತಿ ಬೇಡುನು ಬಾರೆ
ಕಾಮಿತ ಫಲವ ಪ್ರೇಮದಿ ಕೊಡುವ
ನಾಮ ರೂಪ ಸಂಜೀವನ ಸಖಿ ನೋಡುನು ಬಾ..."[೨೦]**

ಎಂದು ಹಾಡಿದ್ದಾರೆ.

ಗುರು ಗೋವಿಂದಭಟ್ಟರು ಸಂಗಮೇಶ್ವರ ಕಲ್ಮಠ ದೇವಸ್ಥಾನದಲ್ಲಿ ವೈದಿಕ ಪಾಠಶಾಲೆಯನ್ನು ನಡೆಸುತ್ತಿದ್ದರು. ಇದರಿಂದಾಗಿಯೂ ಶರೀಫರಿಗೆ ಗುಡಿಗೇರಿಯು ಗುರು-ದೈವಗಳಿಂದ ಕೂಡಿದ ಪಾವನ ಕ್ಷೇತ್ರವಾಗಿತ್ತು.

ಪರಿಸರಕ್ಕೆ, ಪ್ರದೇಶಕ್ಕೆ ಅನುಗುಣವಾಗಿ ಕೆಲವು ರೂಢಿಗಳು, ನಂಬಿಕೆಗಳು, ಆಚರಣೆಗಳು ಸಂಪ್ರದಾಯಗಳಾಗಿ ಪರಂಪರಾಗತವಾಗುವುವು. ಇಂಥ ಸಾಮೂಹಿಕ ಒಪ್ಪಂದಗಳು ಧರ್ಮಧರ್ಮಗಳಲ್ಲಿ ಬೇರೆ ಬೇರೆಯಾಗಿದ್ದು ಆಯಾ ಸಮುದಾಯದವರು ಅದನ್ನು ಹಾಗೆಯೇ ಮುಂದುವರಿಸಿಕೊಂಡು ಬರುತ್ತಾರೆ. ಒಂದೇ ಪ್ರದೇಶದಲ್ಲಿನ ಆಯಾ ಧರ್ಮಗಳ ಧರ್ಮಾಚರಣೆಗಳು ಆ ಪ್ರದೇಶದ ಜನ ಜೀವನದ ಮೇಲೆ ಪ್ರಭಾವ ಬೀರುತ್ತವೆ.

ಶರೀಫರ ಪದಗಳಲ್ಲಿ ಮೂರು ಧರ್ಮಗಳ ಸಂಸ್ಕೃತಿಯನ್ನು ಒಟ್ಟಾಗಿ ಕಾಣಬಹುದಾಗಿದೆ. ಗ್ರಾಮೀಣರ ನಂಬಿಕೆ, ಆಚರಣೆಗಳನ್ನು ಮೂಢನಂಬಿಕೆ ಎಂದು, ಅರ್ಥವಿಲ್ಲದ ಸಂಪ್ರದಾಯಗಳೆಂದು ಶರೀಫರು ಅಲ್ಲಗಳೆದಿಲ್ಲ. ಆಚಾರ, ಸಂಪ್ರದಾಯಗಳ ಹಿಂದಿರುವ ಸಂಸ್ಕೃತಿಯನ್ನು ತಿಳಿದುಕೊಂಡು ಭಕ್ತಿ ಶ್ರದ್ಧೆಯಿಂದ ಗ್ರಾಮೀಣ ಸಂಸ್ಕೃತಿಗೆ ಮಾರು ಹೋಗಿ ಅದರ ತಿರುಳನ್ನು, ಉದ್ದೇಶವನ್ನು ತಿಳಿದು ಪುಳಕಿತರಾಗಿ ಹಾಡಿದ್ದಾರೆ.

ಗ್ರಾಮದಲ್ಲಿ ನಡೆಯುವ ಜಾತ್ರೆ, ಉರುಸ್‌ಗಳನ್ನು ಹಬ್ಬ-ಹರಿದಿನಗಳನ್ನು ಅನೇಕ ಧಾರ್ಮಿಕ ಆಚರಣೆಗಳನ್ನು, ಸಾಂಸ್ಕೃತಿಕ ಚಟುವಟಿಕೆಗಳನ್ನು ತೆರೆದ ಕಣ್ಣಿಂದ ನೋಡಿ ಅದರಲ್ಲಿ ತಾವೂ ಒಂದಾಗಿ ಆಚರಿಸಿದ್ದಾರೆ. ಅಲೆಮಾರಿಯಾದ ಶರೀಫರು ಭಕ್ತಿ ಭಾವದವರಾದುದರಿಂದ ಶಿಶುನಾಳದ ಸುತ್ತಮುತ್ತಲಿನ ಪ್ರದೇಶದಲ್ಲೆಲ್ಲಾ ಸಂಚರಿಸಿ, ಅನೇಕ ಧರ್ಮಕ್ಷೇತ್ರ, ದೇವಾಲಯಗಳನ್ನು ಕಂಡು ಭಕ್ತಿ ಭಾವದಿಂದ ಹಾಡಿದ್ದಾರೆ.

---

೨೦. ಅದೇ, ಪು. ೩೯.

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಶಿಗ್ಗಲಿ ಗ್ರಾಮವು ಪ್ರೇಕ್ಷಣೀಯ ಸ್ಥಳವಾಗಿದೆ. ಅಲ್ಲಿಯ ನೀಲಕಂಠ ಮತ್ತು ರಾಮಲಿಂಗ ದೇವಸ್ಥಾನಗಳು ಶರೀಫರ ಕ್ಷೇತ್ರ ದರ್ಶನಕ್ಕೆ ಕಾರಣವಾಗಿದ್ದವು.

"ನೀಲಕಂಠನ ದಿವ್ಯ ಆಲಯದೊಳು ಬಂದು
ಶಾಲಿಟ್ಟು ಸಾಧು ಸಮ್ಮುಖ ನೋಡಿದ್ಯಾ
ಕಾಲಾನುಕಾಲನ ಕಾಲವಂದನೆ ಗೆದ್ದು
ಮೇಲಾದ ಮಹಿಮೆ ನೋಡಿದ್ಯಾ..."[೨೧]

"ರಾಮಲಿಂಗಮೂರ್ತಿ ಸದ್ಗುರು
ಸ್ವಾಮಿ ನಿನ್ನ ಕೀರ್ತಿ
ನೇಮದಿ ನಿನ್ನಯ ನಾಮದ ಸ್ಮರಿಸುವೆ
ಆ ಮಹಾ ಶಿಗ್ಗಲಿ ಗ್ರಾಮದೊಳಗೆ... ಶ್ರೀ
ಚಂದದಿ ನಾ ಬಂದು..."[೨೨]

ದಾವಣಗೆರೆಯ ಹೂವಿನ ಹಡಗಲಿ ತಾಲ್ಲೂಕಿನ ಮೈಲಾರ ಮಹದೇವ ದೇವಸ್ಥಾನ ಯಾತ್ರಾ ಸ್ಥಳವಾಗಿದೆ. ಮೈಲಾರಲಿಂಗನ ಮಹಿಮೆಯಿಂದ ಪ್ರಭಾವಿತರಾದ ಶರೀಫರು ಆ ಕ್ಷೇತ್ರದರ್ಶನ ಮಾಡಿ, ಹಾಡಿದ್ದಾರೆ.

"ಮೈಲಾರ ಮಹದೇವ ಕೈಲಾಸ ಪತಿಯೆ
ನಯ ಭಯದಲಿ ಮೈಬಿಕ್ಕದೆ ಚರಣಕೆ
ಕೈ ಮುಗಿದೆರಗುವೆ ಸೈ ಸದ್ಗುರು ರಾಯ

ಸುಂದರ ಮೂರುತಿ ಬಂಧುರ ಕೀರುತಿ
ಚಂದಾಸುರನ ವಧಮಾಡಿ ಜಗಕೆ
ಆನಂದ ಬೀರಿದೆ ಮೈಲಾರಲಿಂಗ"[೨೩]

ಉತ್ತರ ಕರ್ನಾಟಕದಲ್ಲೆಲ್ಲಾ ಸವದತ್ತಿ ಎಲ್ಲಮ್ಮ ದೇವಿ ಅತ್ಯಂತ ಪ್ರಸಿದ್ಧ ದೇವತೆ. ಮಹಿಮಾವಂತೆಯಾದ ದೇವಿಯನ್ನು ಅತ್ಯಂತ ಭಯಭಕ್ತಿಯಿಂದ ಎಲ್ಲರೂ ಆರಾಧಿಸುತ್ತಾರೆ. ಪ್ರತಿ ಹುಣ್ಣಿಮೆಯಲ್ಲೂ ದೇವರ ಸನ್ನಿಧಿಯಲ್ಲಿ ಜಾತ್ರೆಯಂತೆಯೇ ಭಕ್ತರು ಸೇರಿ ಸೇವೆಗೈಯುತ್ತಾರೆ. ಚೈತ್ರ ಶುದ್ಧ ಪೂರ್ಣಿಮೆಯ ದಿನದಂದು "ಮುತ್ತೈದಿ

ಹುಣ್ಣಿಮೆ"ಯಾಗಿ ಅಲ್ಲಿ ಜಾತ್ರೆ ನಡೆಯುತ್ತವೆ. ಶಕ್ತಿ ದೇವತೆಯ ಪುರಾಣದ ಬಗ್ಗೆಯೂ ತಿಳಿದಿದ್ದ ಶರೀಫರು ಕ್ಷೇತ್ರದರ್ಶನದ ಮತ್ತು ಆ ಜಾತ್ರೆಯ ಬಗ್ಗೆಯೂ ಪದ ಕಟ್ಟಿ ಹಾಡಿದ್ದಾರೆ.

"ಸರಿಗಾಣೆನು ಧರಣಿಯೊಳಗಮ್ಮ ಕರುಣೆ ಎಲ್ಲಮ್ಮ
ಏನು ಹೇಳಲಿ ನಿನ್ನ ಕೌತುಕವ ನೀನಾದಿಯಲ್ಲಿ ತುಂಬಿ ತುಳುಕಿದಿ
ಏಕೆಂಬ ಭಾವ........."[೩೯]

ಹೀಗೆ ಶರೀಫರು ತಮ್ಮ ಜೀವನದುದ್ದಕ್ಕೂ ಹತ್ತು ಹಲವಾರು ಊರುಗಳಲ್ಲಿ ಸಂಚರಿಸಿ ಎಲ್ಲ ಧರ್ಮದ ಸಾಂಸ್ಕೃತಿಕತೆಯನ್ನು ಮೈಗೂಡಿಸಿಕೊಂಡರು. ಹಳ್ಳಿಗಳಲ್ಲಿ ಕಾಲ್ನಡಿಗೆಯಲ್ಲಿ, ಎತ್ತಿನ ಬಂಡಿಯಲ್ಲಿ ದೇವಸ್ಥಾನದಲ್ಲಿ ಹೋಗುವುದು ಸಾಮಾನ್ಯವಾಗಿತ್ತು. ಸುತ್ತಲಿನ ಊರುಗಳಲ್ಲಿ ಜಾತ್ರೆ ಉತ್ಸವವಿದ್ದರೆ ಜನರು ಗುಂಪು ಗುಂಪಾಗಿ ಮನೆಗೊಂದು ಎತ್ತಿನ ಗಾಡಿಯನ್ನು ಕಟ್ಟಿಕೊಂಡು ಹೊರಟು ಮೂರು-ನಾಲ್ಕು ದಿನಗಳವರೆಗೆ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದರು.

ಪ್ರಸಿದ್ಧ ದೇವಸ್ಥಾನಗಳಲ್ಲಿ ವರ್ಷಕೊಮ್ಮೆ ನಡೆಯುವ ರಥೋತ್ಸವವು ಅಲ್ಲಿಯ ಮುಖ್ಯ ಸಾಂಸ್ಕೃತಿಕ ಚಟುವಟಿಕೆಯ ಆಕರ್ಷಣೆಯ ಕೇಂದ್ರವಾಗಿರುತಿತ್ತು. ನಾಲ್ಕು ಗಾಲಿಯ ದೊಡ್ಡ ರಥವು ಕಟ್ಟಿಗೆಯದಾಗಿದ್ದು ಕಲಾತ್ಮಕತೆಯಿಂದ ಕೂಡಿರುತ್ತಿತ್ತು. ಗರ್ಭಗುಡಿಯಲ್ಲಿರುವ ದೇವರನ್ನು ರಥದಲ್ಲಿರಿಸುವುದರಿಂದ ವೈಭವಪೂರಿತವಾದ ಮೆರವಣಿಗೆ ನಡೆಯುತ್ತಿದ್ದು, ಗಟ್ಟಿಯಾದ ಹಗ್ಗಗಳನ್ನು ತೇರಿಗೆ ಕಟ್ಟಿ ಜಾತ್ರೆಗೆ ಬಂದವರೆಲ್ಲ ಆ ಹಗ್ಗಗಳನ್ನು ಎಳೆಯುತ್ತಾ ತೇರು ಚಲಿಸುವಂತೆ ಮಾಡುತ್ತಿದ್ದರು. ಜಾತ್ರೆಯಲ್ಲಿ ತೇರು ಎಳೆಯುವ ಸಂಭ್ರಮದ ನೋಟಕ್ಕಾಗಿ ಜನರು ಕಾದಿರುತ್ತಿದ್ದರು. ಅದಕ್ಕಾಗಿಯೇ ಜನರು ಜಾತ್ರೆಗೆ ಬರುತ್ತಿದ್ದರು.

ಶರೀಫರು ಕ್ಷೇತ್ರದರ್ಶನದ ಜೊತೆಗೆ ತೇರನ್ನು ಎಳೆಯುವ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಿದ್ದುದು, ಅವರಲ್ಲಿದ್ದ ಸಾಂಸ್ಕೃತಿಕ ಅಭಿರುಚಿಯನ್ನು 'ತೇರು ಸಾಗುವುದು ನೋಡಲೆ ನೀರೆ' ಮತ್ತು 'ತೇರನೇಳಿತಾರೆ ತಂಗಿ' ಪದಗಳಲ್ಲಿ ಕಾಣುತ್ತೇವೆ.

"ತೇರು ಸಾಗುವದು ನೋಡಲೆ ನೀರೆ
ಸರುಜ ಮುಖಿಯೆ ದಾರೆ...
ಶಿಶುನಾಳಧೀಶನ ಹೊಸ ರಥವಿದು ತಿಳಿ
ರಸಿಕರಾಜ ಗೋವಿಂದನ ಸೇವಕ

ಪಸರಿಃ ನೋಡಲು ಜಸವಡದಿರುವದು
ಆಸಮಾಕ್ಷನು ಮೇಲೇರಿ ಕುಳಿತಿರುವ..."[೩೩]

ಎಂದು ಸಾಗುವ ತೇರನ್ನು ಕುರಿತು ಹಾಡಿದ್ದಾರೆ.

"ತೇರನೆಳೆಯುತಾರೆ ತಂಗಿ
ನೋಡಲಿಕ್ಕೆ ಹೋಗೋನು ದಾರೆ
ನಾಲ್ಕು ಗಾಲಿಗೆ ಒಂದೇ ಜೋಡಿ
ಆಶಾ ಎಂಜೋ ಅಚ್ಚು ಮಾಡಿ
ಎಂಟು ಕಂಬದ ಮಂಟಪ ಕಟ್ಟಿ
ಬಂಟರು ಅವರು ಇವರು ಕೂಡಿ..."[೩೪]

ಹೀಗೆ ತೇರನ್ನೆಳೆಯುವ ಧಾರ್ಮಿಕ ಆಚರಣೆಯ ಸಾಂಸ್ಕೃತಿಕ ಅಂಶವನ್ನು ಈ ಪದಗಳಲ್ಲಿ ಕಾಣುತ್ತೇವೆ. ಜಾತ್ರೆ, ಉತ್ಸವಗಳಲ್ಲಿ ತೇರು ಎಳೆಯುವುದು ಸಾಂಸ್ಕೃತಿಕ ನೆಲೆಯಿಂದ ವಿಶಿಷ್ಟವಾಗಿದೆ. ದೇವರ ಉತ್ಸವಮೂರ್ತಿಯನ್ನು ಸಿಂಗರಿಸಿದ ತೇರಿನಲ್ಲಿಟ್ಟು, ಭಾರವಾದ ನಾಲ್ಕು ಗಾಲಿಯ ರಥಕ್ಕೆ ದಪ್ಪ ಹಗ್ಗವನ್ನು ಕಟ್ಟಿ ಭಕ್ತರು ಹಗ್ಗದಿಂದ ಎಳೆಯುತ್ತಾ ತೇರನ್ನು ಸಾಗಿಸುವರು. ಎಳೆಯುವ ತೇರನ್ನು ನೋಡಲೆಂದೇ ಬಹಳಷ್ಟು ಜನ ಜಾತ್ರೆಯಲ್ಲಿ ಸೇರಿರುತ್ತಾರೆ. ನೇರವಾಗಿ ದೇವರ ದರ್ಶನ ಸಾರ್ವಜನಿಕರಿಗೆ ದೊರಕಲೆಂದೇ ತೇರೆಳೆಯುವ ವ್ಯವಸ್ಥೆಯಾಗಿದೆ.

ಗ್ರಾಮೀಣ ಪರಿಸರದಲ್ಲಿ ನಡೆಯುವ ಧಾರ್ಮಿಕ ಆಚರಣೆಗಳನ್ನು ಕವಿ ಶರೀಫರು ನೋಡುವ ದೃಷ್ಟಿ ಬಹಳ ವಿಶಾಲವಾದುದು. ಶರೀಫರಿಗೆ ಸಾಂಸ್ಕೃತಿಕ ಚಟುವಟಿಕೆಯಲ್ಲಿರುವ ಆಸಕ್ತಿ ಅವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ತಾದ್ಯಾತ್ಮತೆಯನ್ನು ಕಾಣುತ್ತೇವೆ.

ವೀರಶೈವ ಧರ್ಮದ ಧರ್ಮಾಚರಣೆ ಮತ್ತು ಸಂಸ್ಕೃತಿಯನ್ನು ಶರೀಫರ ಪದಗಳಲ್ಲಿ ಕಾಣುತ್ತೇವೆ.

"ಅಲ್ಲಿಕೇರಿಗೆ ಹೋಗುನು ಬರ್ರಿರೇನ್ರೇ ನೀವು
ಒಲ್ಲದಿದ್ದರೆ ಇಲ್ಲೇ ಇರತೀರೇನ್ರೇ..............
ಮೂರು ಗಿರಿಯ ಮರೆಯೊಳಿರುವ
ನೀರು ತರುವ ಕೆರೆಯ ಬದಿಯೊಳು

ಜಾರುತರದ ಬಾರುಜನೊಳು ಬಾಜಾರ ಹೂರ್ತ್ರೇ ಮುಂದೆ
ವಾರುಗಾಣಾವಂಥ ಸುಸರಿ ತಂದು ಇರ್ತ್ರೇ..."[೩೭]

'ಅಲ್ಲಿಕೇರಿ' ಹಬ್ಬ ಎಂದರೆ 'ಅರಳಿ ಬಸವನ ಪೂಜೆ' ಮತ್ತು ಮಣ್ಣು ಪೂಜೆಯ ಹಬ್ಬವಾಗಿದೆ. ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಆಷಾಢ ಬಹುಳ ಅಮಾವಾಸ್ಯೆಯಂದು ಆಚರಿಸುವ ಸಂಪ್ರದಾಯವಿದು. ಊರ ಹೊರಗಿನ ಕೆರೆ ಅಥವಾ ಜಲಾಶಯದ ಪಕ್ಕದ ಪ್ರಸ್ಥವಾದ ಸ್ಥಳ ಹುಡುಕಿ ಸ್ವಚ್ಛಗೊಳಿಸಿ ಮೂರು ಕಲ್ಲಿಗೆ ಸುಣ್ಣ ಬಳಿದು ಪೂಜಿಸಿ ತಂದ ಪದಾರ್ಥವನ್ನೆಲ್ಲ ನೈವೇದ್ಯ ಮಾಡಿ, ಓರಗೆಯ ಹೆಣ್ಣುಮಕ್ಕಳು, ಚಿಕ್ಕಮಕ್ಕಳು ಸೇರಿ ಉಂಡು, ಹಾಡಿ, ನಕ್ಕು, ನಲಿದು ಆಚರಿಸುವ ಸಮಾರಂಭವಾಗಿದೆ.

ಶೀಗೆಹುಣ್ಣಿಮೆಯ ದಿನ ಕೂಡ ಇದೇ ರೀತಿಯಲ್ಲಿ ಭೂಮಿಪೂಜೆ ಮಾಡುತ್ತಾರೆ. ಆದರೆ ಅಂದು ಕೆರೆ ಹೊಂಡಗಳಿಗೆ ಹೋಗದೆ, ಹಬ್ಬದಡಿಗೆಯನ್ನು ಬುಟ್ಟಿಯಲ್ಲಿ ಹೊತ್ತುಕೊಂಡು ತಮ್ಮ ತಮ್ಮ ಹೊಲಗಳಿಗೆ ಹೋಗಿ, ಭೂಮಿ ಪೂಜೆ ಮಾಡಿ, ತಂದಿರುವ ಎಲ್ಲ ಅಡಿಗೆಯ ಸ್ವಲ್ಪ ಭಾಗವನ್ನು ತೆಗೆದುಕೊಂಡು ಹೊಲದ ತುಂಬೆಲ್ಲಾ ಅಲ್ಲಲ್ಲಿ ಚೆಲ್ಲುವರು ಇದಕ್ಕೆ 'ಚರಗಾ ಚೆಲ್ಲುವುದು' ಎಂದು ಕರೆಯುತ್ತಾರೆ. ಈ ರೀತಿಯ ಪೂಜೆಯ ನಂತರ ಇತರರನ್ನು ಕರೆದು ಎಲ್ಲರೂ ಸೇರಿ ಊಟ ಮಾಡುತ್ತಾರೆ.

"ಶೀಗೆ ಹುಣ್ಣಿಮಿ ದಿನ ಉಣ್ಣಲಿಕ್ಕೆ ಕರೆಯುವರೆಲ್ಲ
ಕರೆದರ ಹೋಗದೆ ಬಿಡಲಿಲ್ಲ
ಹುರಕ್ಕಿ ಹೋಳಿಗೆ ಹೂರಣಗಡಬು
ಕಡಲೀ ಪಚ್ಚಡಿ ಕಟ್ಟಿನಾಂಬರ
ಉಂಡಗಡಬು ಪುಂಡಿಯ ಪಲ್ಲೆ
ಬುಟ್ಟಿಯೊಳಿಟ್ಟೆಲ್ಲ......................."[೩೮]

ಎಂದು ಅಂದಿನ ಚಟುವಟಿಕೆಗಳ ವಿವರದಿಂದ ಶೀಗೆ ಹುಣ್ಣಿಮೆ ಆಚರಿಸುವ ಪರಿಯನ್ನು ಪದದಲ್ಲಿ ಹಾಡಿದ್ದಾರೆ. ಶರೀಫರ ಸೀಗೆ ಹುಣ್ಣಿಮೆ, ಪಂಚಮಿ, ಅಲ್ಲಿಕೇರಿ ಪದಗಳಲ್ಲಿ ಸಂಪ್ರದಾಯಗಳ ಆಚರಣಾ ವಿಧಿ ನಿಯಮಗಳ ವರ್ಣನೆ ಮಾತ್ರವಲ್ಲದೆ ಉತ್ತರ ಕರ್ನಾಟಕದ ಮತ್ತು ಶಿಶುನಾಳದ ಪ್ರಾದೇಶಿಕ ಅಡಿಗೆಗಳು, ಭಕ್ಷ್ಯಗಳ ವಿವರಣೆಯೂ ರಸವತ್ತಾಗಿದೆ. ಹುರಕ್ಕಿ ಹೋಳಿಗೆ, ಹೂರಣಗಡುಬು,

---

೩೭. ಅದೇ, ಪು. ೫೫.
೩೮. ಅದೇ, ಪು. ೧೪೫.

ಹೂರಣಹೋಳಿಗೆ, ತುಪ್ಪ ಅರಳಿಟ್ಟು, ತಂಬಿಟ್ಟು, ಒಬ್ಬಟ್ಟು, ಕೊಬ್ಬರಿ ತಂಬಿಟ್ಟು, ಚಿರೋಟಿ, ಸಣ್ಣ ಶಾವಿಗೆ, ಗಾರಿಗಿ ಇವು ಸಿಹಿ ಪದಾರ್ಥಗಳಾಗಿದ್ದು, ಹಬ್ಬಗಳಲ್ಲಿ, ಶುಭ ಸಮಾರಂಭಗಳಲ್ಲಿ ಮಾಡುವ ವಿಶೇಷ ಭಕ್ಷ್ಯಗಳಾಗಿವೆ. ಇದರ ಜೊತೆಗೆ ಆಂಬ್ರ, ಕಟ್ಟಿನಾಂಬ್ರ, ಹೆಸುನಾಂಬ್ರ ಇವು ರಸ ಪದಾರ್ಥಗಳು. ಇದರ ಜೊತೆಗೆ ನೆಂಜಿಕೊಳ್ಳಲು ಉಪ್ಪಿನಕಾಯಿ, ಕಡಲಿ ಪಚಡಿ ವಡೆ, ಪಲ್ಯ-ಪಚಡಿ, ಹಪ್ಪಳ-ಸಂಡಿಗೆಗಳು ಮೊದಲಾದವುಗಳು ಇರುತ್ತವೆ.

ದಿನನಿತ್ಯದ ಊಟಕ್ಕೆ ರೊಟ್ಟಿ, ಮೊಸರು, ಪುಂಡಿಪಲ್ಯ, ಅಡವಿಪಲ್ಯ, ಅನ್ನ, ಅಂಬಲಿ, ಗಂಜಿ, ಉಸಳಿ ಮೊದಲಾದ ತಿಂಡಿ, ತಿನಿಸು, ಭಕ್ಷ್ಯ ಭೋಜನಗಳು ಸೋಬಾನೆ ಪದಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯನ್ನು ಬಿಂಬಿಸಿವೆ.

'ಆಷಾಢ ನಿಬ್ಬಣ' ಎಂಬ ಸಂಪ್ರದಾಯ ಮದುವೆಯಾದ ಹೆಣ್ಣುಮಕ್ಕಳಿಗೆ ಗಂಡನ ಮನೆಗೆ ಕಳಿಸುವ ಮೊದಲು ಮಾಡುವ ಕ್ರಿಯೆಯಾಗಿದೆ. ಗಂಡನ ಮನೆಯವರು ಮದುವೆಯಾದ ಹೆಣ್ಣಿಗೆ ತಂದ ವಸ್ತ್ರ, ಆಭರಣಗಳನ್ನು ತೊಡಿಸಿ ಮುತ್ತೈದೆಯರಿಂದ ಆರತಿ ಮಾಡಿಸಿ ಶುಭ ಕೋರುವ ಶಾಸ್ತ್ರವಾಗಿದೆ.

"ಆಷಾಢ ನಿಬ್ಬಣ ಸೂಸ್ತಾಡಿ ಬಂತು
ಲೇಸಾದ ತಾಯಿ ಮನಿಯಾಸೆ ಬಿಟ್ಟು
ಈಶಗುರು ಗಂಡನ ವಾಸವಾಗವ್ವ

ಮುತ್ತೈದಿ ಮಂದಿ ಕೂಡಿ ಗೊತ್ತಿಟ್ಟು ಮುದ್ದಾಡಿ
ನಿತ್ಯ ನಿರಂಜನ ತೋರಮ್ಮಾ
ಹಾದಿಯೆಲ್ಲ ಓಡಿದು ಮೇದಿನಿಯೊಳು ಬಂದು
ಮೋಹದ ಮದುವೆ ಮಾಡಿಕೊಂಡೆವ್ವ..."[೨೪]

'ಮದುವೆ'ಯೆನ್ನುವ ಕ್ರಿಯೆಯು ಮನುಷ್ಯನ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ತುಂಬಾ ಪ್ರಭಾವ ಬೀರುವ ಅಂಶವಾಗಿದೆ. ಮದುವೆಯಿಂದ ಕುಟುಂಬ ರಕ್ಷಣೆಯಾಗುತ್ತದೆ. ಸುಭದ್ರ ಕುಟುಂಬಗಳಿಂದ ಆದರ್ಶವಾದ ಬಲಿಷ್ಠವಾದ ಸಮಾಜವನ್ನು ಕಟ್ಟಬಹುದು. ಮದುವೆಯಿಂದ ಸಾಮಾಜಿಕ, ಸಾಂಸ್ಕೃತಿಕ ಬಂಧನಕ್ಕೆ ಒಳಗಾಗುವ ವ್ಯಕ್ತಿಯು ಹಿರಿಯರಿಂದ ಮಾನಸಿಕ ಸ್ಥೈರ್ಯ, ಧೈರ್ಯವನ್ನು ಪಡೆದುಕೊಂಡು ಸಮಾಜದಲಿ ಮಾನವಂತನಾಗಿ, ಸಂಸ್ಕೃತಿಯಲಿ ಆದರ್ಶ

ಶರೀಫರ ಪದದಲ್ಲಿ 'ಅಳಬೇಡ ತಂಗಿ ಅಳಬೇಡ' ಎಂಬ ಪದ್ಯದಲ್ಲಿ ಮದುವೆಯಾದ ಹೆಣ್ಣನ್ನು ಗಂಡನ ಮನೆಗೆ ಕಳಿಸುವಾಗಿನ ವಾಸ್ತವ ಸನ್ನಿವೇಶದ ಚಿತ್ರಣವನ್ನು ಮನ ಕರಗುವಂತೆ ಹೇಳಿದ್ದಾರೆ:

"ಅಳಬೇಡ ತಂಗಿ ಅಳಬೇಡ ನಿನ್ನ
ಕಳುಹ ಬಂದವರೆಲ್ಲ ಉಳುಹಿಕೊಂಬುವರಿಲ್ಲ

ಅಡಕೀಲೆ ಉಡಿಯಕ್ಕಿ ಹಾಕಿದರವ್ವ ಒಳ್ಳೆ
ದುಡಿಕೀಲೆ ಮುಂದಕ ನೂಕಿದರವ್ವ

ರಂಗಿಲೆ ಉಟ್ಟಿವ್ವ ರೇಶ್ಮಿ ದಡಿಸೀರಿ ಮತ್ತ
ಹಂಗಸೂಲಿನ ಪರವಿ ಮರತೆವ್ವ ನಾರಿ
ಮಂಗಳ ಮೂರುತಿ ಶಿಬನಾಳಧೀಶನ
ಅಂಗಳಕೆ ನೀ ಹೊರತಾದೆದ್ದ.ಗೌರಿ"[೪೮]

ಮೊದಲ ಬಾರಿ ಗಂಡನ ಮನೆಗೆ ಕಳುಹಿಸುವಾಗ ಹೆಣ್ಣಿಗೆ ತೌರಿನವರು ರೇಷ್ಮೆ ಸೀರೆ ಉಡಿಸಿ, ಅಡಿಕೆ, ಎಲೆ, ಉಡಕ್ಕಿ ಸಾಮಾನಿನಿಂದ ಅವಳ ಉಡಿ ತುಂಬಿ ಅವಳಿಗೆ ಆಶೀರ್ವದಿಸಿ ಸ್ವಲ್ಪ ದೂರದವರೆಗೆ ಕಳುಹಿಸಿ ಬರುವುದು ಸಂಪ್ರದಾಯ. ಆಚರಣೆಯನ್ನು ಈ ಪದದಲ್ಲಿ ಕಾಣುತ್ತೇವೆ.

ವೀರಶೈವ ಧರ್ಮದವರಲ್ಲಿ ಗಂಡುಮಕ್ಕಳ ಮದುವೆಯಲ್ಲಿ 'ಗುಗ್ಗಳ' ಹೊರಡಿಸುವ ಸಂಪ್ರದಾವಿದೆ.

'ಗುಗ್ಗಳ ಎಂದರೆ, ಧೂಪ–ಸಾಂಬ್ರಾಣಿ ಹಾಕಿ ಉರಿಸಿ ಉಗಿ ಎಬ್ಬಿಸುವುದು. ಮದುವೆಯ ಒಂದೆರಡು ದಿನ ಮೊದಲು ಕುಂಬಾರರಿಂದ ನಾಲ್ಕು ಕುಂಭಗಳನ್ನು ತರುತ್ತಾರೆ. ತಂದು ಅವ್ರಗಳ ತಳವನ್ನು ಮಾತ್ರ ಎಚ್ಚರಿಕೆಯಿಂದ ತೆಗೆದು ಕುಂಭಗಳನ್ನು ತಿರುವಿಟ್ಟು ಅವುಗಳಲ್ಲಿ ಆವಿಗೆಯಲ್ಲಿರುವ ಬೂದಿ ಹಾಕಿ ಮಧ್ಯದಲ್ಲಿ ಗಂಧದ ಕೊರಟನಿಟ್ಟು ಅದಕ್ಕೆ ಹೊಸಬಟ್ಟೆಯನ್ನು ಸುತ್ತುತ್ತಾರೆ. ನಿಗದಿತ ದಿನ ಪುರವಂತರು ಗಂಧದ ಕಟ್ಟಿಗೆಗೆ ಸುತ್ತಿದ ಬಟ್ಟೆಗೆ ಎಣ್ಣೆ ಹಾಕಿ ದೀಪ ಹೊತ್ತಿಸುತ್ತಾರೆ. ಉಗಿ ಹೊತ್ತಿದೊಡನೆ ಪುರವಂತರು ತಮ್ಮ ಬಾಯಲ್ಲಿ ಶಸ್ತ್ರವನ್ನು ಚುಚ್ಚಿಕೊಳ್ಳುತ್ತಾರೆ. ಮೆರವಣಿಗೆಯೊಂದಿಗೆ ಗುಗ್ಗಳವನ್ನು ವೀರಭದ್ರ ದೇವಸ್ಥಾನಕ್ಕೆ ಕೊಂಡೊಯ್ಯುತ್ತಾರೆ. ದಾರಿಯುದ್ದಕ್ಕೂ ಪುರವಂತರು ಕತ್ತಿ ಹಿಡಿದು ಗುಗ್ಗಳದ ಸುತ್ತಲೂ ನರ್ತಿಸುತ್ತ ವೀರಾವೇಶದಿಂದ 'ಏಡೇ ಏಡೇ ಮಹಾರುದ್ರ' ಎಂದು ಉಗ್ಗಡಿಸುತ್ತ ವೀರಭದ್ರ

---

೪೮. ಅದೇ, ಪು. ೧೩೪.

ದೇವರ ಮೇಲಿನ ಒಡಪುಗಳನ್ನು ಹೇಳುತ್ತಾ ದೇವಸ್ಥಾನಕ್ಕೆ ಹೋಗಿ, ಅಲ್ಲಿ ಪೂಜೆ ಮಾಡಿದ ಮೇಲೆ ಗುಗ್ಗಳವನ್ನು ನಂದಿಸುವುದಕ್ಕೆ ನದಿ ಅಥವಾ ಹಳ್ಳಕ್ಕೆ ಒಯ್ಯುತ್ತಾರೆ. ಅಲ್ಲಿ ಗುಗ್ಗಳವನ್ನು ಆರಿಸಲು ಹಾಲು ತುಪ್ಪ ಸುರಿಯುತ್ತಾರೆ.

ಪುರವಂತರನ್ನು ತುಂಬಾ ಗೌರವದಿಂದ ಭಯದಿಂದ ಕಾಣುತ್ತಾರೆ. ಏಕೆಂದರೆ ಅಕಸ್ಮಾತ್ತಾಗಿ ದಾರಿಯಲ್ಲಿ ಗುಗ್ಗಳ ಆರಿದರೆ ಪುರವಂತರು ತಮ್ಮ ಮಂತ್ರಶಕ್ತಿಯಿಂದ ಪುನಃ ಹೊತ್ತಿಸುತ್ತಾರೆ ಎಂಬ ನಂಬಿಕೆ ಇದೆ. ಗುಗ್ಗಳ ಆರದಂತೆ ನೋಡಿಕೊಳ್ಳುವುದು ಈ ಸಂಪ್ರದಾಯದ ಎಚ್ಚರಿಕೆಯ ಕ್ರಮವಾಗಿದೆ. ಈ ಗುಗ್ಗಳ ಕಾರ್ಯ ಮುಗಿದ ಮೇಲೆಯೇ ಮದುವೆಯ ಇತರ ಕೆಲಸಗಳು ಪ್ರಾರಂಭಗೊಳ್ಳುವವು. ಮಡಿ-ಮೈಲಿಗೆ, ನಿಯಮಗಳು ಕಟ್ಟುನಿಟ್ಟಾಗಿರುವ ಈ ಸಂಪ್ರದಾಯದ ಬಗ್ಗೆ ಶರೀಫರು

"ಗುಗ್ಗಳ ಹೊರಟತಮ್ಮ ಈ ಊರೊಳು
ಗುಗ್ಗಳ ಹೊರಟತಮ್ಮ
ಗುಗ್ಗಳ ಹೊರಟಿತು
ವೆಗ್ಗಳಾಯಿತು ಮ್ಯಾಳ
ಸಗ್ಗದೊಳಿರುವ ಶ್ರೀ ರುದ್ರನರಿಯನಾಗಿ
ಭೂತ ಪಂಚಕ ರೂಪದ ಪುರಂತರು
ಆತುಕೊಂಡಿರುತಿಹರು"[೯೯]

ಎಂದು ಹಾಡಿದ್ದಾರೆ.

ವೀರಶೈವ ಮಠಗಳಲ್ಲಿ ಆಗಾಗ ನಡೆಯುವ ಪಾದಪೂಜೆ, ಪುರಾಣ ಹೇಳುವಂತಹ ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪುರಾತನರ ಪಾದಪೂಜೆಯ ಸನ್ನಿವೇಶದ ಘಟನೆಯನ್ನು ಶರೀಫರ 'ಪಾದಪೂಜೆಯಾದುದೇನಿದು' ಎಂಬ ಪದದಲ್ಲಿ ಕಾಣುತ್ತೇವೆ.

"ಪಾದ ಪೂಜೆಯಾದುದೇನಿದು
ಪ್ರಭುವರನ ಕಾಣದೆ
ಭೂಮಿಯೊಳು ನಿಸ್ಸೀಮ ಪ್ರೌಢರು ಈ
ಗ್ರಾಮದೊಳುದ್ದಾಮ ಶ್ಯಾನುಭೋಗ ಗೌಡರು ಬಹು
ನಾಮವಿಡಿದು ಪಣೆ ಜನರು ಸು
ಪ್ರೇಮ ರೈತರು ಸಮಸ್ತರು

ಕಾಮಿತಾರ್ಥ ಫಲವ ಬೇಡಿ
ನೇಮ ಹಿಡಿದು ನಿಜಕೆ ನಿಲುಕದೆ"[೪೨]

ಊರ ಸಮಸ್ತರೆಲ್ಲರೂ ಸೇರಿ ಅರವತ್ತನಾಲ್ಕು ಪುರಾತನರ ಪಾದಪೂಜೆಯ ಸಮಾರಂಭವು ಧಾರ್ಮಿಕ ಪ್ರಸಾರ, ಧಾರ್ಮಿಕಾಚರಣೆಯು ಅಂದಿನ ಸಂಸ್ಕೃತಿಯ ಪ್ರತೀಕವಾಗಿದೆ.

ಪಾದಪೂಜಾ ಸಮಾರಂಭದಂತೆಯೇ ವೀರಶೈವ ಮಠಗಳಲ್ಲಿ ಅಮಾವಾಸ್ಯೆ ಮತ್ತು ಶುಭ ದಿನಗಳಲ್ಲಿ ಪ್ರವಚನ, ಪುರಾಣ ಅಥವಾ ಬ್ರಹ್ಮೋತ್ತರಕಾಂಡ ಪಠಣವನ್ನು ನಡೆಸುತ್ತಿದ್ದರು. ಸಾಯಂಕಾಲದಿಂದ ರಾತ್ರಿಯವರೆಗೆ ನಡೆಯುವ ಈ ಕಾರ್ಯಕ್ರಮಗಳಿಗೆ ಸಾರ್ವಜನಿಕರೆಲ್ಲ ಭಾಗವಹಿಸುವಂತಿದ್ದರು.

"ಮಂಡಲಕ ಮಹಿಮಾಸಾಗರ ಬ್ರಹ್ಮೋತ್ತರಕಾಂಡ
ಪಂಡಿತರಿಗೆ ಪದ ಪದಾರ್ಥದಾಗರ..."[೪೩]

ಇಂಥ ಸನ್ನಿವೇಶವು ಭಿನ್ನಾಭಿಪ್ರಾಯದಿಂದ ಕೂಡಿದ್ದರೂ, ಇಂತಹ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದವು ಎನ್ನುವುದನ್ನು ಈ ಪದದಲ್ಲಿ ಕಾಣಬಹುದಾಗಿದೆ.

ಶರಣರ ಮಹಿಮೆಯನ್ನು, ವೀರಶೈವ ಧರ್ಮ ತತ್ತ್ವಗಳನ್ನು ಹಳ್ಳಿಯ ಜನಸಾಮಾನ್ಯರಿಗೆ ತಿಳಿಸಲು ಮಠಗಳು, ಲಿಂಗಯತ ದೇವಸ್ಥಾನಗಳು ಪ್ರಮುಖ ಕೇಂದ್ರಗಳಾಗಿದ್ದವು. ಚಾಮರಸ ಬರೆದ 'ಪ್ರಭುಲಿಂಗ ಲೀಲೆ'ಯನ್ನು ಹಾಡಿ, ವಿವರಿಸುವ ಸಂಪ್ರದಾಯಗಳಿವೆ. ಆಸಕ್ತಿಯಿಂದ ಪ್ರಭುಲಿಂಗ ಲೀಲೆಯನ್ನು ಆಲಿಸಲು ಹೋದ ಶರೀಫರು, ಆ ಸಂದರ್ಭದಲ್ಲಿ ಹಾಡಿದ ಪದವು

"...ಭಕ್ತಿ ಭೂಮಿಯ ಬೆಳೆಯ ಬೆಳೆದವರಿಗೆ ಬಹು
ಯುಕ್ತಿಯಿಂದಲಿ ಮುಕ್ತಿ ಲಲನೆಯ ಒಲಿಸಿ ತಿಳಿದವರಿಗೆ
ವ್ಯಕ್ತವಾದ ವಿರಕ್ತಮಾರ್ಗದಿ
ತತ್ತ್ವಜ್ಞಾನದಿಂದ ಮೆರೆವ ಮಹಿಮರಿಗೆ
ಐಕ್ಯವುಳ್ಳ ಶಿವೈಕ್ಯ ಭಾವದಿ"[೪೪]

ಎಂದು ಹಾಡುತ್ತ ಇಂಥ ಧಾರ್ಮಿಕ ಆಚರಣೆಗಳಿಂದ ಜನರ ಮನಸ್ಸು ನೆಮ್ಮದಿ ಹೊಂದುವುದು ಎಂದಿದ್ದಾರೆ. ಹಳ್ಳಿಯ ಪರಿಸರದಲ್ಲಿ ಯಾರ ಮನೆಯಲ್ಲಾದರೂ ಒಂದು ಸಮಾರಂಭ ನಡೆದರೆ ಊರಿನಲ್ಲಿ ಪ್ರತಿಷ್ಠಿತರಿಗೆ,

---

೪೨. ಅದೇ, ಪು. ೧೦೮.
೪೩. ಅದೇ, ಪು. ೧೬೬
೪೪. ಅದೇ, ಪು. ೧೧೪.

ನೆರೆಹೊರೆಯವರಿಗೆ. ಜಾತಿ ಬಂಧಗಳಿಗೆ ಆಮಂತ್ರಿಸುವುದು ಸಾಮಾನ್ಯವಾದ ರೂಢಿಯಾಗಿರುತ್ತದೆ. ಇಂಥ ಆಚರಣೆಗಳ ಪರಿಚಯವನ್ನು ಕಳಸದ ಸೀನಪ್ಪ ಗೌಡರ ಮನೆಯಲ್ಲಿನ ಪ್ರಸ್ತದ ಪ್ರಸಂಗದಲ್ಲಿ ಕಾಣುತ್ತೇವೆ. ಪ್ರಸ್ತಕ್ಕೆ ಆಮಂತ್ರಿಸುವುದನ್ನು 'ಚಿನ್ನಹ ಮಾಡುವುದು' ಎನ್ನುತ್ತಾರೆ.

"ಗುರುವರನ ಗಣರಿಗೆರಗಿ
ಎರಗಿ ವಿನ್ನಹ ಮಾಡಮ್ಹೋವರ್‍ಕೈ
ಹರಶಾಸ್ತ್ರದ ವರ ಪ್ರಸ್ತಕೆ

ಆರ್ಥಿಯಲಿ ಚಿತ್ತೈಸಿರಿ ಇದನರಿತು
ಮತ್ತೆ ಕಳಸದ ಗ್ರಾಮಕೆ
ಪ್ರಸ್ತವಾಯಿತೊ ಭಕ್ತಿಯಲಿ"[೧೯]

ಇಲ್ಲಿ ಜನರ ಮನೋಭಾವನೆಯನ್ನು ಬಿಟ್ಟು ಸಾಂಸ್ಕೃತಿಕ ದೃಷ್ಟಿಯಿಂದ ಪ್ರಸ್ತದ ಸನ್ನಿವೇಶವನ್ನು ಗಮನಿಸಲಾಗಿದೆ.

ಗ್ರಾಮೀಣಾ ಪ್ರದೇಶದ 'ಕರಿಹರಿಯುವ' ಸಂಪ್ರದಾಯವನ್ನು ಶರೀಫರು 'ಕುರುವರಿಯ ಕುಂಬಾರಗ ಹೇಳಲು' ಎಂಬ ಪದದಲ್ಲಿ ತಿಳಿಸಿದ್ದಾರೆ. ಕಾರಹುಣ್ಣಿಮೆಯಂದು ಕರಿಯನ್ನು ಹರಿಯುತ್ತಾರೆ. ಈ ಕರಿಯನ್ನು ಹೋಳಿ ಹುಣ್ಣಿಮೆಯ ಮರುದಿನ ಕಟ್ಟಿರುತ್ತಾರೆ. ಈ ಧಾನ್ಯರಾಶಿಗೆ ಯಾವುದೇ ಬಗೆಯ ಹಾನಿ ಉಂಟಾಗಬಾರದೆಂದು ಹೋಳಿ ಹುಣ್ಣಿಮೆಯಂದು ಸುಟ್ಟ ಕಾಮನ ಬೂದಿಯಿಂದ ಊರ ಸುತ್ತಲೂ ಕರಿ ಕಟ್ಟುತ್ತಾರೆ. ಮಳೆಗಾಲ ಬರುವ ಸಮಯದಲ್ಲಿ ಧಾನ್ಯವನ್ನು ತೆಗೆದು ಹೊಲದಲ್ಲಿ ಬಿತ್ತುತ್ತಾರೆ. ಅದನ್ನು ತೆಗೆದು ಸಾಗಿಸುವ ಮೊದಲು ಈ ಕರಿ ಹರಿಯುವ ಸಂಪ್ರದಾಯವನ್ನು ಆಚರಿಸುತ್ತಾರೆ. ಊರ ಅಗಸೆ ಬಾಗಿಲಿಗೆ ಕಟ್ಟಿದ ಬೇವಿನ ತೋರಣವನ್ನು ಎತ್ತುಗಳು ಹರಿದು ಓಡಿ ಹೋಗುವುದೇ ಕರಿ ಹರಿಯುವದು. ಈ ಕರಿ ಹರಿಯುವ ಪರಿಯನ್ನು ಶರೀಫರ ಹಾಡಲ್ಲಿ–

"...................................

ಕಾರಹುಣ್ಣಿಮೆಯ ದಿನ ಕೋರಿಯ ಹೊತಗೊಂಡು
ಬೋರಗಲ್ಲಿಗೆ ಬಡದೀರಿ ಬಣ್ಣ
ಹುರಿಕಟ್ಟಿದ ಹೋರಿಗೆ ಗೊಟ್ಟದ ಹಾಕಲು
ಕುಟ್ಟಿ ಉಪ್ಪು ಎಣ್ಣೆ ಅರಿಷಿಣ"[೨೦]

ಹೀಗೆ ಕರಿಹರಿಯುವುದು ಗ್ರಾಮೀಣ ಸಂಸ್ಕೃತಿ ಆಚರಣೆಯಾಗಿದೆ.

ಗ್ರಾಮೀಣ ಮಹಿಳೆಯ ಜನಪದದ ಜೋಗುಳ ಹಾಡುಗಳು ರಸ ಪೂರ್ಣವಾಗಿದ್ದು ಮಗುವಿನ ಲಾಲನೆ ಪಾಲನೆ ಮತ್ತು ನಾಮಕರಣ ಸಮಾರಂಭದಲ್ಲಿ ಹಾಡುವರು. ಸ್ತ್ರೀಯರು ಪಟ್ಟೆ, ಪೀತಾಂಬರ, ಸೀರೆಗಳನ್ನುಟ್ಟು, ಆಭರಣಗಳನ್ನು ತೊಟ್ಟು, ತೊಟ್ಟಿಲನ್ನು ತೂಗುತ್ತ ತೊಟ್ಟಿಲೊಳಗೆ ಮಲಗಿದ್ದ ಮಗುವನ್ನು ಮುದ್ದಿಸುತ್ತ ಅದರ ಅಂದ–ಚೆಂದ ಬಣ್ಣಿಸುತ್ತ ಜೋಗುಳ ಹಾಡಿ ವಿಲಾಸದಿಂದ ಸಂಭ್ರಮಿಸುವರು.

"ಜೋಗುಳ ಹಾಡಿರಮ್ಮ ಜಲಜಾಕ್ಷಿಯರೆಲ್ಲ
ಜೋಗುಳ ಹಾಡಿರಮ್ಮ
ಜೋಗುಳ ಹಾಡಿರಿ ಶ್ರೀಗುರು ಎನುತಲಿ
ಯೋಗ ಮಂದಿರದೊಳು ತೂಗುವ ಕಂದನ..."[೪೭]

ಇದು ಶರೀಫರ ಜೋಗುಳದ ಪದವಾಗಿದೆ.

ವೈದಿಕ ಧರ್ಮದ ಗೋವಿಂದಭಟ್ಟರನ್ನು ಗುರುಗಳನ್ನಾಗಿ ಪಡೆದ ಶರೀಫರು ವೈದಿಕ ಧರ್ಮಾಚರಣೆಗಳನ್ನು ಗುರುಪ್ರೇರಣೆಯಿಂದ ಅರಿತರು. ಅಲ್ಲದೆ ಗುರುವಿನಿಂದ ಬ್ರಹ್ಮೋಪದೇಶವನ್ನು ಪಡೆದು ಬ್ರಹ್ಮೋಪವೀತವನ್ನು ಧರಿಸಿ ಸಂಧ್ಯಾವಂದನೆ ಆಚರಿಸಿದನ್ನು ಕುರಿತು ಹೀಗೆ ಹಾಡಿದ್ದಾರೆ;

"ಹಾಕಿದ ಜನಿವಾರವ ಸದ್ಗುರುನಾಥಾ
ಹಾಕಿದ ಜನಿವಾರವ

ಹಾಕಿದ ಜನಿವಾರ ನೂಕಿದ ಭವಭಾರ
ಬೇಕೆನುತಲಿ ಬ್ರಹ್ಮಜ್ಞಾನ ಉಚ್ಚರಿಸಲೆಂದು
ಸಂಧ್ಯಾವಂದನೆ ಕಲಿಸಿ, ಆನಂದದಿ
ಬಿಂದುವರ್ಗದಿ ನಿಲಿಸಿ
ಹೊಂದಿಸಿ ಯಮುನಾ ತೀರದಿ ಮಧ್ಯನಿಂದು
ಎಂದೆಂದಿಗೂ ಯಮದುಂಮುಗವಳಿಯೆಂದು"[೪೮]

ಹಾಡಿನ ಮೂಲಕ ಗುರುವಿಗೆ ವಂದಿಸಿದ್ದಾರೆ. ಜನ್ಮದಿಂದ ಮುಸ್ಲಿಮರಾದ ಶರೀಫರು ಸಂಧ್ಯಾವಂದನೆಯ ಆಚರಣೆಯು ಅವರಲ್ಲಿದ್ದ ಸಮನ್ವಯ ಮನೋಧರ್ಮವನ್ನು ವ್ಯಕ್ತಪಡಿಸುತ್ತದೆ.

---

೪೭. ಅದೇ, ಪು. ೧೪೬
೪೮. ಅದೇ, ಪು. ೩೯.

ಹಾಗೆಯೇ ಬ್ರಾಹ್ಮಣರಲ್ಲಿ ಆಚರಿಸುವ ಏಕಾದಶಿ ವ್ರತವನ್ನು ಸಹ ಶರೀಫರು ಮಾಡುತ್ತಿದ್ದರು.

ಪ್ರತಿಪಕ್ಷದಲ್ಲಿ ಬರುವ ಏಕಾದಶಿ ತಿಥಿಯಂದು ಉಪವಾಸ ವ್ರತ ಮಾಡುವುದೇ ಏಕಾದಶಿ ವ್ರತವಾಗಿದೆ. 'ಆಷಾಢ ಶುದ್ಧ ಏಕಾದಶಿ' ಮತ್ತು 'ಕಾರ್ತಿಕ ಶುದ್ಧ ಏಕಾದಶಿ' ಅತ್ಯಂತ ಪವಿತ್ರ ದಿನಗಳಾಗಿದ್ದು, ಅಂದು ದೇವಸ್ಥಾನಗಳಿಗೆ ಹೋಗಿ ದೇವರ ಪೂಜೆ ಮಾಡಿ ಲಘು ಉಪಹಾರ ಎಂದರೆ ಹಾಲು-ಹಣ್ಣುಗಳನ್ನು ಸೇವಿಸುತ್ತಿದ್ದರು. ಶರೀಫರು ಏಕಾದಶಿ ವ್ರತವನ್ನು ಆಚರಿಸಿದ ತಮ್ಮ ಅನುಭವವನ್ನು ಈ ಪದ್ಯದಲ್ಲಿ ಹಾಡಿದ್ದಾರೆ.

"ಇಂದು ಏಕಾದಶಿ ವ್ರತವ ತೀರಿಸಿದೆ ಗೋ-
ವಿಂದ ಶ್ರೀ ಗುರುನಾಥನುಪದೇಶ ಬಲದಿಂದ
ಹೊಂದಿದೆನು ಅದ್ವೈತ ಸಂಧ್ಯಾವಂದನೆಯ ಕಾಲದಿ
ಬಂಧುರ ಬಯಲು ಬ್ರಹ್ಮಾನಂದದಿ

....

ನೀಟಾದ ವೃಂದಾವನ ವಿವಾಹ ದ್ವಾದಶಿ ನಾಳೆ
ನೋಟ ತ್ರಿಕೂಟದ ಜ್ಯೋತಿ ಬೆಳಕಿನೊಳು ಶುಭದಿ_"[೯]

'ರಾಮಾಯಣ' ಮತ್ತು 'ಮಹಾಭಾರತ' ಕಾವ್ಯಗಳು ಶರೀಫರ ಮೇಲೆ ಸಾಕಷ್ಟು ಪ್ರಭಾವ ಬೀರಿದವು. ರಾಮನ ಭಕ್ತನಾದ ಹನುಮಂತನನ್ನು ಸ್ಮರಿಸುತ್ತಾ 'ಶ್ರೀ ಹನುಮಂತ ದೇವರ ದಂಡಕ'ವನ್ನು ಹಾಡಿದ್ದಾರೆ. ಸೀತೆಯನ್ನು ಬಿಡಿಸಿಕೊಂಡು ಬಂದು ರಾಮನಿಗೊಪ್ಪಿಸುವ ಸಾಹಸವನ್ನು, ಸ್ವಾಮಿಭಕ್ತಿಯನ್ನು ಕೊಂಡಾಡಿದ್ದಾರೆ. ಮಹಾಭಾರತದ ಸೂತ್ರಧಾರನಾದ ಶ್ರೀಕೃಷ್ಣನ ಮಹತ್ವವನ್ನು 'ಶ್ರೀ ಕೃಷ್ಣ ದಂಡಕ'ದಲ್ಲಿ ವಿವರಿಸಿದ್ದಾರೆ. ಇಲ್ಲಿ ಶರೀಫರ ಮೇಲಾದ ವೈದಿಕ ಧರ್ಮದ ಪ್ರಭಾವ ಸಮಕಾಲೀನ ಪ್ರಜ್ಞೆಯ ಹಿನ್ನೆಲೆಯಲ್ಲಿ ಅವರ ಪದಗಳಲ್ಲಿ ಕಾಣುತ್ತೇವೆ. ಪೌರಾಣಿಕ ವ್ಯಕ್ತಿಗಳನ್ನು, ಪೌರಾಣಿಕ ಸನ್ನಿವೇಶಗಳನ್ನು, ಮೊಹರಮ್ ಹಬ್ಬದ ವ್ಯಕ್ತಿ ಮತ್ತು ಸನ್ನಿವೇಶಕ್ಕೆ ಹೋಲಿಸಿದ್ದಾರೆ.

ಮುಸ್ಲಿಂ ಮೂಲಧರ್ಮರಾದ ಶರೀಫರು ಇಸ್ಲಾಂ ಮತದಿಂದ ಪ್ರಭಾವಿತರಾದುದು ಸಹಜವಾಗಿದೆ. 'ಕುರಾನ್' ಅಧ್ಯಯನದಿಂದ ತಮ್ಮ ಧರ್ಮದ ತತ್ತ್ವಗಳನ್ನು ತಿಳಿದುಕೊಂಡು ಮುಸ್ಲಿಂ ಧರ್ಮ ಪ್ರವರ್ತಕರಾದ ಮೊಹಮ್ಮದ್

ಪೈಗಂಬರ ಬಗೆಗೆ ಆದರಾಭಿಮಾನ ಹೊಂದಿದ್ದರು. ಮೊಹಮ್ಮದ್ ಪೈಗಂಬರ ಸಾಕ್ಷಾತ್ ದರ್ಶನವನ್ನು ಕುರಿತು ಹಾಡಿದ್ದಾರೆ.

ಶರೀಫರ ಪದಗಳಲ್ಲಿ ಹಬ್ಬಗಳು

ಉತ್ತರ ಕರ್ನಾಟಕದಲ್ಲಿ ಹಬ್ಬಹರಿದಿನಗಳ, ಆಚರಣೆಯ ಪ್ರಾದೇಶಿಕ ಹಿನ್ನೆಲೆಯಲ್ಲಿ ಭಿನ್ನ ಭಿನ್ನವಾಗಿರುತ್ತವೆ. ಶರೀಫರ ಪದಗಳಲ್ಲಿ ಪಂಚಮಿ ಹಬ್ಬ, ಗೌರಿಹಬ್ಬ, ಹೋಳಿಹಬ್ಬ ಮತ್ತು ಮೊಹರಮ್ ಹಬ್ಬಗಳ ಆಚರಣೆಗಳ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಬಹುದು.

ಶ್ರಾವಣ ತಿಂಗಳಲ್ಲಿ ಬರುವ ನಾಗರಪಂಚಮಿ ಹಬ್ಬಕ್ಕೆ ವಿಶೇಷ ಮಹತ್ವದ ಜೊತೆಗೆ ಆಕರ್ಷಣೆಯಿದೆ. ಈ ಹಬ್ಬವು ಹೆಣ್ಣುಮಕ್ಕಳ ಹಬ್ಬವಾದ್ದರಿಂದ ಮದುವೆಯಾಗಿ ಗಂಡನ ಮನೆಯಲ್ಲಿರುವ ಹೆಣ್ಣುಮಗಳಿಗೆ ತೌರಿಗೆ ಬರಲು ಸದಾವಕಾಶವಾಗಿದೆ. ಅಣ್ಣನೇ ಅವಳ ಗಂಡನ ಮನೆಯಿಂದ ಸೋದರಿಯನ್ನು ಕರೆದುಕೊಂಡು ಬರಬೇಕು. ತೌರಿಗೆ ಬಂದ ಹೆಣ್ಣು ಮನೆಯವರೊಂದಿಗೆ ಸೇರಿ ನಕ್ಕು ನಲಿಯುವಳು. ಹಬ್ಬದ ವಿಶೇಷ ತಿಂಡಿ ಪದಾರ್ಥಗಳಾದ ಅರಳಿಟ್ಟು, ತಂಬಿಟ್ಟು, ಉಂಡೆಗಳನ್ನು ತಯಾರಿಸುವರು. ಮಣ್ಣಿನ ನಾಗಮೂರ್ತಿಯನ್ನು ಮಾಡಿ ಪೂಜಿಸಿ ಅದಕ್ಕೆ ಹಾಲೆರೆಯುವರು. ಹೆಣ್ಣು ತೌರಿನಲ್ಲಿ ಸಂತೋಷದಿಂದ ಹಬ್ಬವನ್ನಾಚರಿಸುತ್ತಿದ್ದರೂ ಗಂಡನ ಮನೆಯನ್ನು ಮರೆಯಲು ಅವಳಿಗೆ ಆಗುವುದಿಲ್ಲ. ಹಾಲೆರೆಯುತ್ತಲೇ ತೌರಿನವರಿಗೂ ಗಂಡನ ಮನೆಯವರಿಗೂ ಶುಭ ಕೋರುತ್ತ ದೇವರ ಆಶೀರ್ವಾದವನ್ನು ಬೇಡುತ್ತಾರೆ. ನಾಗರಪಂಚಮಿಗೂ ಹೆಣ್ಣಿನ ವಾತ್ಸಲ್ಯಮಯ ಭಾವನೆಗೂ ಇರುವ ಸಂಬಂಧವನ್ನು ಶರೀಫರು ಪಂಚಮಿ ಹಬ್ಬದ ಹಾಡುಗಳಲ್ಲಿ ವಿವರಿಸಿದ್ದಾರೆ.

"ಪಂಚಮಿ ಹಬ್ಬ ಬಂದಿತು ಗೆಳತಿ ಇನ್ನಾರಿಗ್ಹೇಳಲಿ?
ಅವ್ವಕ್ಕ ನಾರಿ ಜೋಕಾಲಿ ಏರಿ ಕೈಬೀಸಿ ಕರೆಯಲು

ಕೊಬ್ಬರಿ ತಂಬಿಟ್ಟು ಅರಳಿಟ್ಟು ಮುಡಪಿಟ್ಟು
ನಾಗಪ್ಪನ ಹಾಲು ಹೊಯ್ಯಾಲಿ
ಅಣ್ಣನ ಪಾಲು ತಮ್ಮನ ಪಾಲು ಅಕ್ಕನ ಪಾಲು ಮುತ್ತಾಗಲಿ
ಮಾವನ ಪಾಲು ಮೈದುನ ಪಾಲು ಗಂಡನಪಾಲು ಮನದಲಿ
ಊರ ಪಾಲು ದೇವರಪಾಲು ಗುರುವಿನ ಪಾಲು ಆತ್ಮದಲಿ
ವಸುಧೆಯೊಳು ಶಿಶುನಾಳಧೀಶನ ಪಾಲು ಬಸವಗೆ ಮುಟ್ಟಲಿ..."[೫೦]

೫೦. ಅದೇ, ಪು. ೧೨೯.

ಎಂದು ಹೇಳುವಲ್ಲಿ ಹಾಲೆರೆಯುವ ಹೆಣ್ಣುಮಗಳ ಮನದಲ್ಲಿಯ ಪ್ರೀತಿ, ಭಕ್ತಿ, ಸಂಸ್ಕೃತಿಯ ಚಿತ್ರಣವನ್ನು ಕಾಣುತ್ತೇವೆ.

ಗೌರಿ ಹುಣ್ಣಿಮೆಯ ದಿನದಿಂದ ಐದು ದಿನಗಳವರೆಗೆ ಗೌರಿಯನ್ನು ಕೂಡಿಸಿ ಪೂಜಿಸುವ ಸಂಪ್ರದಾಯ ಗ್ರಾಮೀಣ ಪರಿಸರದಲ್ಲಿದೆ. ಮಣ್ಣಿನ ಗೌರಿಯನ್ನು ತಂದು ದೇವರ ಗೂಡಲ್ಲಿ ಇಟ್ಟು ಬಾಲಕಿಯರು ಸಂಜೆಯಾಗುತ್ತಿದ್ದಂತೆ ಸೇರಿ ಶಿವ, ಗೌರಿ, ಗಂಗೆಯರ ಬಗೆಗೆ ಕೋಲಿನ ಹಾಡುಗಳನ್ನು ಹಾಡುತ್ತ ಉಲ್ಲಾಸದಿಂದ ಹಬ್ಬವನ್ನು ಆಚರಿಸುತ್ತಾರೆ.

"ಕೋಲು ಕೋಲಿನ ಕೋಲು
ಮೇಲು ಮುತ್ತಿನ ಕೋಲು

ಕಾಲಕರ್ಮವನು ತಿಳಿದು ವಿಲಾಸದಿ
ಬಾಲಕಿಯರಾಡುವ ಬಯಲು ಬ್ರಹ್ಮದ ಕೋಲು
ಗೌರಿಹುಣ್ಣಿಮೆಯ ದಿನ ಗೌರಿ ಗೋಪಿಯರು
ಮೂರು ಹೆಜ್ಜೆ ಮೆಟ್ಟ ಸಾರುತ
ಹಾರುತ ಪರುಷವಿ ಸುವರ್ಣದ ಕೋಲು"[೫]

ಗ್ರಾಮೀಣ ಮಹಿಳೆಯರಿಗೆ ಜನಪದ ಹಾಡುಗಳಾದ ಜೋಗುಳ ಹಾಡು, ಕೋಲಾಟದ ಹಾಡು, ಮಂಗಳಾರತಿ ಪದ, ಸೋಬಾನೆ ಪದ, ಬೀಸೋ ಕಲ್ಲಿನ ಪದಗಳಲ್ಲಿ ವಿಶೇಷ ಆಸಕ್ತಿ ಇದ್ದು, ಹಬ್ಬ ಹರಿದಿನಗಳಲ್ಲಿ, ಪೂಜೆ, ಸಮಾರಂಭಗಳಲ್ಲಿ ನಾಲ್ಕೈದು ಜನ ಒಟ್ಟಿಗೆ ಸೇರಿ ಹಾಡುತ್ತಾರೆ. ಮುಖ್ಯ ಗಾಯಕಿಯಾಗಿ ಒಬ್ಬರಿಬ್ಬರು ಹಾಡಿದರೆ ಅವರ ಧ್ವನಿಗೆ ಜೊತೆಗೂಡಿಸಿ 'ಸೋ' ಎಂದು ಉಳಿದವರು ಹಾಡಿ, ಹಾಡಿನ ಸೊಬಗನ್ನು ಹೆಚ್ಚಿಸುತ್ತಾರೆ.

ಪಾಲ್ಗುಣ ಮಾಸದಲ್ಲಿ ಬರುವ ಹುಣ್ಣಿಮೆಯನ್ನು 'ಹೋಳಿ ಹುಣ್ಣಿಮೆ-ಹಬ್ಬ' ಎಂದು ಆಚರಿಸುತ್ತಾರೆ. ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಹೋಳಿ ಹಬ್ಬವು ಸಾಂಸ್ಕೃತಿಕ ಪ್ರತೀಕವಾಗಿದೆ. ಊರಿನ ಬಾಲಕ ಯುವಕರಿಗೆಲ್ಲ ಇದು ಉತ್ಸಾಹ ಹಾಗೂ ಮನೋರಂಜನೆಯ ಹಬ್ಬವಾಗಿದೆ. ಮನೆ ಮನೆಯಿಂದ ಕಟ್ಟಿಗೆ, ಬೆರಣಿಗಳನ್ನು ಕೇಳಿ ತರುವರು. ಕೆಲವು ಸಲ ಕಳ್ಳತನದಿಂದಲೂ ತಂದು ಸಮೀಪದ ಬಯಲಲ್ಲಿ ರಾಶಿ ಹಾಕಿ, ರಾತ್ರಿಯಲ್ಲೆಲ್ಲಾ ಅಲ್ಲಿಯೇ ಉಳಿದು ಹಾಡಿ ಕುಣಿದು, ಪೂಜಿಸಿದ ಕಾಮಣ್ಣನ ಮೂರ್ತಿಯನ್ನು ಕಟ್ಟಿಗೆ, ಬೆರಣಿ

ರಾಶಿಯಲ್ಲಿಟ್ಟು ಬೆಳಗಾಗುವುದರೊಳಗೆ ಸುಟ್ಟು ಆ ಬೂದಿಯಿಂದಲೇ ಮೊದಲು ಓಕುಳಿಯಾಡುವರು. ನಂತರ ಬಣ್ಣಗಳಿಂದ ಓಕುಳಿಯಾಡುತ್ತ ಊರಿನವರನ್ನೆಲ್ಲಾ ರಂಗಾಯಿಸುವರು.

ಶಿವನ ತಪಸ್ಸನ್ನು ಭಂಗ ಮಾಡಿದ ಕಾಮನನ್ನು ಉರಿಗಣ್ಣಿನಿಂದ ಶಿವನು ಸುಟ್ಟು ಹಾಕುವ ಪೌರಾಣಿಕ ಹಿನ್ನೆಲೆಯುಳ್ಳ ಕಥೆಯು ಕಾಮನ ಹಬ್ಬ ಅಥವಾ ಹೋಳಿ ಹಬ್ಬವಾಗಿದೆ. ಇದರಿಂದ ಪ್ರಭಾವಿತರಾದ ಶರೀಫರು ಎರಡು ಹೋಳಿ ಪದಗಳನ್ನು ರಚಿಸಿದ್ದಾರೆ. ಅವು 'ಮೈಲಾರ ಲಿಂಗನ ಹೋಳಿ ಪದ' ಮತ್ತು 'ಪ್ರಮೀಲೆಯ ಹೋಳಿ ಪದ'ಗಳು.

ಶಿವನು ಭೈರವ ರೂಪ ತಾಳಿ, ದುಷ್ಟ ಶಕ್ತಿಯಿಂದ ಕೂಡಿದ ಮಣಿ–ಮಲ್ಲಾಸುರನನ್ನು ಸಂಹರಿಸಿದ ಕಥೆಯು ಮೈಲಾರಲಿಂಗನ ಹೋಳಿ ಪದವಾಗಿದೆ.

ಪ್ರಮಿಳೆಯ ಹೋಳಿ ಪದದಲ್ಲಿ ಪ್ರಮಿಳೆಯೊಡನೆ ಅರ್ಜುನನು ವಿವಾಹವಾದ ಸಂದರ್ಭದ ಕಥೆಯನ್ನು ವಿವರಿಸುತ್ತಾರೆ.

ಮುಸ್ಲಿಮರ ಪವಿತ್ರ ಹಬ್ಬ ಮೊಹರಮ್ ಬಗ್ಗೆ ಶರೀಫರಿಗೆ ತುಂಬಾ ಆಸಕ್ತಿ. ಮೊಹಮ್ಮದ್ ಪೈಗಂಬರ್ ಗತಿಸಿದ ನಂತರ ಉತ್ತರಾಧಿಕಾರಕ್ಕಾಗಿ ನಡೆದ ಧರ್ಮಯುದ್ಧದ ಮಾಸವೇ ಮೊಹರಮ್ ಹಬ್ಬದ ತಿಂಗಳಾಗಿದೆ. ಈ ಧರ್ಮಯುದ್ಧವು ಕರ್ಬಲಾದಲ್ಲಿ ನಡೆದಿದೆ. ಮೋಸದಿಂದ ಹತ್ಯೆಗೀಡಾದ ಮೊಹಮ್ಮದ್ ಪೈಗಂಬರರ ಮೊಮ್ಮಗ ಇಮಾಮ್ ಹಸನ ಮತ್ತು ಸಂಗಡಿಗರನ್ನು ಕುರಿತು ಮೊಹರಮ್ ದಿನಗಳಲ್ಲಿ ಶೋಕಗೀತೆಗಳನ್ನು ಹಾಡುತ್ತಾರೆ. ಶರೀಫರು ಈ ಹಬ್ಬವನ್ನು ಕುರಿತು ಅಲಾವಿ ಹಾಡು, ಕರ್ಬಲಾ ಹಾಡು, ಸವಾಲ್–ಜವಾಬ್ ಪದಗಳು ಮುಂತಾದ 'ರಿವಾಯತ್' ಪದಗಳನ್ನು ರಚಿಸಿದ್ದಾರೆ. ರಿವಾಯತ್ ಪದಗಳಲ್ಲಿ ಇಸ್ಲಾಂ ಧರ್ಮದ ಅರ್ಥ, ಸಂಪ್ರದಾಯ, ಕಥೆ, ಘಟನೆಗಳ ವಿವರಗಳಿವೆ.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಇದ್ದ ಶರೀಫರು ತಮ್ಮ ಚಿಕ್ಕ ಚಿಕ್ಕ ಅಲಾವಿ ಪದಗಳಿಗೆ ಹೆಜ್ಜೆಮೇಳವನ್ನು ಹಾಕುತ್ತಿದ್ದರು. ಸ್ವತಃ ತಾವೇ ಕಾಲಿಗೆ ಗೆಜ್ಜೆ ಕಟ್ಟಿ ಪದಗಳನ್ನು ಹೇಳುತ್ತ ಕುಣಿಯುವುದಕ್ಕೆ 'ಹೆಜ್ಜೆ ಮೇಳ' ಎನ್ನುತ್ತಾರೆ. ವಸ್ತು ಗೌಣವಾಗಿ ಕುಣಿತ ಪ್ರಧಾನವಾಗುತ್ತದೆ. ಶರೀಫರ ಕರ್ಬಲಾ ಪದಗಳು ಪೂರ್ಣಕಥಾನಕಗಳಾಗಿರದೇ ದುರಂತದ ಚಿತ್ರಣ ಕೊಡುವ ಚಿಕ್ಕ ಪದಗಳಾಗಿವೆ. ಕರ್ಬಲಾ ಕಾಳಗದ ಕೇಂದ್ರ ವ್ಯಕ್ತಿ ಹಜರತ್, ಇಮಾಮ್ ಹುಸೇನ, ಅವರ ಮಕ್ಕಳು

ಮತ್ತು ಸಂಬಂಧಿಗಳು ರಣರಂಗದಲ್ಲಿ ಹುತಾತ್ಮರಾದ ಘಟನೆಗಳು ಕೆಲ ರಿವಾಯತ್‌ಗಳಲ್ಲಿವೆ.

"ದುಃಖದಲಾವಿ ಏಸುರ ಪೇಳುವೆ ಸುದ್ದಿ
ಮಕ್ಕಾಮದೀನ ವಿಸ್ತಾರ
ಲಕ್ಷವಿಟ್ಟು ಕಥೆಗಳ ಕೇಳಿರಿ ಸರ್ವರು..."[illegible]

ಎಂದು ಪೀಠಿಕೆ ಹಾಕುತ್ತ ಹಜರತ್ ಇಮಾಮ್ ಹುಸೇನರು ಹತರಾದ ಘಟನೆಯನ್ನು ಹೇಳುತ್ತಾ ಹೋಗುತ್ತಾರೆ.

"ಎಂಥಾ ಕೆಡಕು ಯಜೀದ
ಪಂಥ ಹ್ಯಾವ ಬಹಳ ಪಿತೂರಿ ನಡಸಿದ
ಅಂತರಂಗದಿ ಪತ್ರ ಬರೆದು ಬೇಗನೆ ಕಳಿಸಿ
ತಂತ್ರ ತಿಳಿಯದೇ ಜನ್ಮ ಕೊಲಿಸ್ಯಾನು ಕ್ಷಣದಲಿ"[illegible]

ಎಂದು ನಡೆದ ಇತಿಹಾಸವನ್ನು ವಿವರಿಸುವರು.

ಪುರಾಣ ಪ್ರಜ್ಞೆಯುಳ್ಳ ಶರೀಫರು ಹಿಂದೂ-ಮುಸ್ಲಿಂ ಎರಡು ಧರ್ಮ ಸಾಂಸ್ಕೃತಿಗಳ ಸಂಪರ್ಕ ಹೊಂದಿದ್ದರಿಂದ ಅವರ ಮೊಹರಮ್ ಹಬ್ಬದ ಅನೇಕ ಹಾಡುಗಳು ಹಿಂದೂ ಪುರಾಣಗಳಿಂದ ಕೂಡಿವೆ. ಮಹಾಭಾರತ, ಘಟನೆಗಳು ಕರ್ಬಲಾ ಕದನದೊಂದಿಗೆ ಸಮೀಕರಣಗೊಂಡಿವೆ.

"ಅಂಬಾರ್ವಲಾವಿಗೆ ಶಾಂಭವಿ
ಶಂಭು ನಿಶಂಭರ ಸಂಹಾರ ಮಾಡಿದ
ತಂದಿದ ಶಾರ ಮದೀನದೊಳಗ

ಕಾತೂನ ದೂಧಿಯೊಳು ಬೆಳೆದಳು
ಪ್ರೀತಿಯಿಂದ ಭೂತಳಕೆ ಇಳಿದು
ಜಗನ್ಮಾತೆ ಮೊರಮ ಹಬ್ಬದೊಳಗೆ
ಅಸುರಾಧಿಪತಿಗಳ ಕೊಂದಳು..."[illegible]

ಬ್ರಹ್ಮನಿಂದ ವರ ಪಡೆದು ದೇವತೆಗಳಿಗೆ ಕಂಟಕಪ್ರಾಯವಾಗಿದ್ದ ಶಂಭು-ನಿಶುಂಭರು ರಾಕ್ಷಸರನ್ನು ಜಗನ್ಮಾತೆ ಸಂಹರಿಸಿದ ಸಂದರ್ಭವನ್ನು ಕರ್ಬಲಾ ಕದನವನ್ನು ದುಷ್ಟಶಕ್ತಿಯನ್ನು ಮೆಟ್ಟಿ ಹಾಕಿದ ಸನ್ನಿವೇಶಕ್ಕೆ ತಳಕು ಹಾಕಿದ್ದಾರೆ.

ಮೊಹರಮ್ ಹಬ್ಬದಲ್ಲಿ ರಂಗು ರಂಗಿನ ಕಾಗದಗಳಿಂದ ತಾಬೂತ ಮಾಡುತ್ತಾರೆ. ಕೋಲಾಟ, ಹುಲಿವೇಷ, ಹಲಿಗೆ-ಹೆಜ್ಜೆ ಮೇಳಗಳ ಪ್ರದರ್ಶನ, ರಿವಾಯತ್ ಪದಗಳ ಜೊತೆಗೆ ಕುಣಿತ, ಸವಾಲ್-ಜವಾಬ್ ಹಾಡುಗಾರಿಕೆ, ಹಬ್ಬದ ವಿವಿಧ ಪ್ರಕ್ರಿಯೆಯನ್ನು ಬಿಚ್ಚಿಡುವ, ವಸ್ತು ವಿಷಯವನ್ನು ಒಳಗೊಂಡ ವೈವಿಧ್ಯಪೂರ್ಣ ಸಾಂಸ್ಕೃತಿಕ ಹಬ್ಬವಾಗಿರುವುದರಿಂದ ಶರೀಫರ ಮೊಹರಮ್ ಹಬ್ಬದ ಪದಗಳು ಚಾರಿತ್ರಿಕ ಮತ್ತು ಪೌರಾಣಿಕ ದೃಷ್ಟಿಯಿಂದ ಮತ್ತು ಆಚರಣಾ ವಿವರಗಳ ದೃಷ್ಟಿಯಿಂದ ವಿಶೇಷ ಗಮನ ಸೆಳೆಯುತ್ತವೆ.

ಶರೀಫರ ಪದಗಳಲ್ಲಿ ಅನೇಕ ಸಮುದಾಯಗಳ, ಧರ್ಮಗಳ, ಧರ್ಮಾನುಸಾರ ಸಂಸ್ಕೃತಿಗಳ ಸಂಗಮವನ್ನು ಕಾಣುತ್ತೇವೆ. ಅವು ವ್ಯಕ್ತಿ ಚಿಂತನದ ಅಭಿಪ್ರಾಯ ವಾಗಿರದೇ ಸಾಮೂಹಿಕ ಸಾಂಸ್ಕೃತಿಕ ಅಂಶಗಳನ್ನು ಹೊಂದಿದೆ. ಸಂಸ್ಕೃತಿಯ ಸಂಕೇತಗಳಾದ ಜನ ಜೀವನದ ರೀತಿ, ನೀತಿ, ಭಕ್ತಿ, ಸಂಪ್ರದಾಯ, ಆಚಾರ, ವಿಚಾರ, ಸಮನ್ವಯ, ಭಾವೈಕ್ಯತೆಗಳ ಸಹಜ ಸಂಸ್ಕೃತಿಯನ್ನು ಕಾಣುತ್ತೇವೆ. ಮುಸ್ಲಿಂ, ವೀರಶೈವ, ವೈದಿಕ ಧರ್ಮಗಳ ಭಾವೈಕ್ಯತೆಯನ್ನು ಹೊಂದಿದ ಶರೀಫರ ಪದಗಳಲ್ಲಿ ಸಾಂಸ್ಕೃತಿಕ ಭಾವೈಕ್ಯತೆ, ಭಾಷಾ ಬಾಂಧವ್ಯ, ಅನ್ಯಮತ ಸಮಾನತೆಯ ಪದಗಳನ್ನು ಕಾಣುತ್ತೇವೆ. ಧಾರ್ಮಿಕ ಸೌಹಾರ್ದತೆ, ಮಾನವೀಯತೆಯೇ ಶರೀಫರ ಪದಗಳ ಪರಿಕಲ್ಪನೆಯಾಗಿದೆ.

ಸಾಮಾಜಿಕ ಚಿಂತನೆಯ ವಿಷಯವನ್ನು ಒಳಗೊಂಡ ಪದಗಳು ಸಮಾಜ ದರ್ಶನದೊಂದಿಗೆ ಸಮಾಜ ದಾರ್ಶನಿಕತೆಯನ್ನು ತೋರಿಸುತ್ತವೆ. ಶರೀಫರ ಪದಗಳು ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಎಲ್ಲ ನೆಲೆಗಳನ್ನು ಆವರಿಸಿಕೊಳ್ಳುತ್ತಲೇ ಬೆಳೆಯುತ್ತವೆ. ಒಂದೇ ಅಂಶ, ವಸ್ತು, ವಿಷಯ, ಸನ್ನಿವೇಶ ಹೊಂದಿದ ತತ್ತ್ವಪದಗಳು ಎಲ್ಲ ನೆಲೆಗಳನ್ನು ಪ್ರವೇಶಿಸುವುದರಿಂದ ಶರೀಫರ ತತ್ತ್ವಪದಗಳನ್ನು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಎಂದು ವಿಂಗಡಿಸಲು ಸಾಧ್ಯವಾಗದೇ ಸಾಂದರ್ಭಿಕವಾಗಿ ತೆಗೆದುಕೊಂಡ ತತ್ತ್ವಪದಗಳು ಪುನರಾವರ್ತನೆ ಗೊಳ್ಳುವುದು ಅನಿವಾರ್ಯವಾಗಿದೆ. ಕೆಲವು ಪದಗಳಲ್ಲಿ ವಸ್ತು ವಿಷಯ ಒಂದೇ ಆಗಿ ಪುನರಾವರ್ತನೆಯೇ ಎಂದೆನಿಸಿದರೂ ಒಂದೇ ವಿಷಯವನ್ನು ಭಿನ್ನ ಭಿನ್ನ ದೃಷ್ಟಿಕೋನದಿಂದ ನೋಡುವ ಚಿಂತನಶೀಲ ಕವಿಯ ಮನಸ್ಸನ್ನು ಕಾಣುತ್ತೇವೆ.

ಮೂರು ಧರ್ಮಗಳನ್ನು, ಸಂಸ್ಕೃತಿ ಮತ್ತು ಸಾಮಾಜಿಕ ಕಳಕಳಿಯನ್ನು ಅವರ ತತ್ತ್ವಪದಗಳಲ್ಲಿ ಕಾಣಬಹುದಾಗಿದೆ.

೨.೩ ಶರೀಫರ ಪದಗಳಲ್ಲಿ ರಾಜಕೀಯ ಪ್ರಜ್ಞೆ

ಶರೀಫರು ಒಬ್ಬ ಸಾಮಾಜಿಕ ಕಳಕಳಿಯುಳ್ಳ ತತ್ತ್ವಪ್ರಕಾರರಾಗಿದ್ದು ಸಾಮಾಜಿಕ ನೆಲೆಗಟ್ಟಿನಲ್ಲಿಯೇ ಅವರ ತತ್ತ್ವಪದಗಳು ಪ್ರತಿಬಿಂಬಿತವಾಗಿವೆ. ಒಂದು ಪ್ರದೇಶದ ಧಾರ್ಮಿಕ, ರಾಜಕೀಯ, ಆರ್ಥಿಕ ಸ್ಥಿತಿಗತಿಗಳು ಸಾಮಾಜಿಕ ವಲಯದಲ್ಲಿ ತರುವ ಬದಲಾವಣೆಗಳನ್ನು ತೆರೆದ ಕಣ್ಣುಗಳಿಂದ ಪೂರ್ವಾಗ್ರಹವಿಲ್ಲದೆ ಸ್ಪಷ್ಟಪಡಿಸಿದ್ದಾರೆ. ಅವರ ಅರಿವನ್ನು ಮತ್ತು ಪರಿಣಾಮಗಳನ್ನು ತಮ್ಮ ಪದಗಳಲ್ಲಿ ತಿಳಿಸಿದ್ದಾರೆ.

ಒಂದು ಸಮಾಜವು ವ್ಯವಸ್ಥಿತವಾಗಿ ಸುಖ, ನೆಮ್ಮದಿ, ಪ್ರಗತಿಯತ್ತ ಸಾಗಬೇಕಾದರೆ ಅದಕ್ಕೆ ರಾಜಕೀಯ ಬೆಂಬಲ ಅವಶ್ಯವಾಗಿ ಬೇಕಾಗುತ್ತದೆ. ರಾಜ್ಯದಲ್ಲಿ ರಾಜಕೀಯ ಸ್ಥಿತಿ ಸುಭದ್ರವಾಗಿದ್ದರೆ ಮಾತ್ರ ಶಾಂತಿ, ಅಭಿವೃದ್ಧಿಯತ್ತ ಸಮಾಜವು ಚಲಿಸಿ ಮಾನವಕಲ್ಯಾಣ ಮತ್ತು ಲೋಕಕಲ್ಯಾಣವಾಗುತ್ತದೆ. ರಾಜಕೀಯ ಕ್ಷೇತ್ರವು ಸಾಮಾಜಿಕ ಬೆಳವಣಿಗೆಯ ಅಂಗವಾಗಿದೆ.

ಶರೀಫರು ತಮ್ಮ ಕಾಲದ ರಾಜಕೀಯ ಅಸ್ಥಿರತೆಯಿಂದ ಸಾಮಾಜಿಕ ಬದುಕಿನಲ್ಲಿ ಉಂಟಾದ ಗೊಂದಲ, ಆತಂಕ, ಅಶಾಂತಿ, ಅನ್ಯಾಯ, ಶೋಷಣೆಗಳನ್ನು ಕಣ್ಣಾರೆ ಕಂಡು ಅವುಗಳನ್ನು ತಮ್ಮ ಪದದ ವಸ್ತುವನ್ನಾಗಿಸಿಕೊಂಡು ಹಾಡಿದ್ದಾರೆ.

ಶರೀಫರ ಜೀವಿತದ ಕಾಲ ಹದಿನೆಂಟನೆಯ ಶತಮಾನ. ಅವರಿದ್ದ ಪ್ರದೇಶವು ಅಂದು ಮುಂಬೈ ಕರ್ನಾಟಕ ಪ್ರಾಂತಕ್ಕೆ ಸೇರಿತ್ತು. ಶರೀಫರು ತಮ್ಮ ಕಾಲದಲ್ಲಿ ಎರಡು ಪ್ರಮುಖ ರಾಜಕೀಯ ಆಡಳಿತ ವೈಖರಿಯನ್ನು ಕಂಡಿದ್ದಾರೆ.

೧೬೦೦ರಲ್ಲಿ ಬ್ರಿಟಿಷರು ವ್ಯಾಪಾರ ಮನೋಭಾವನೆಯಿಂದ ಭಾರತಕ್ಕೆ ಬಂದು ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿದರು. ಅನ್ಯ ದೇಶೀಯರನ್ನು ಸೋಲಿಸಿ ಇಡೀ ಭಾರತವನ್ನು ಸ್ವಾಧೀನಪಡಿಸಿಕೊಂಡರು. ಶರೀಫರು ಕಂಪನಿ ಸರ್ಕಾರದ ಆಡಳಿತವನ್ನು ಕೃಷ್ಣನ ಕುಶಲತೆಯ ರಾಜನೀತಿಯ ತತ್ತ್ವಕ್ಕೆ ಹೋಲಿಸಿ ಹಾಡಿದ್ದಾರೆ.

"ಕುಶಲಗಾರ ಕಂಪನಿಯವರಮ್ಮಾ
ಮುಶಾರಿರಲಿ ಮನದೊಳು ತಾಯಿ

ಒಳ ಹೊರದಾರಿ ಹುಳಿವ ಸೂಕ್ಷ್ಮದಾರಿ
ಪರಮಾಣದಲಿ ಮಾಡುವರಮ್ಮ
ದೊರೆಗಳನ್ನೆಲ್ಲ ಮುರಿದವು ತಂಗಿ
ಪರಮ ಪುರುಷ ಫಿರಂಗಿಯವರು..."

ಒಡೆದು ಆಳುವ ಕುಶಲ ರಾಜನೀತಿಯಿಂದ ಬ್ರಿಟೀಷರು ದೇಶಿ ಅರಸರನ್ನು ಮೋಸದಿಂದ ಸೋಲಿಸಿ ಭಾರತ ದೇಶದಲ್ಲೆಲ್ಲಾ ಹರಡಿ ನಿಂತು ಆಡಳಿತವನ್ನು ವಿಸ್ತರಿಸಿದರು.

ಕೃಷಿಯ ಮೇಲೆ ರಾಜಕೀಯ ಪ್ರಭಾವ

ಬ್ರಿಟಿಷರು ಎಲ್ಲ ರೀತಿಯಿಂದಲೂ ನಮ್ಮನ್ನು ಶೋಷಣೆಗೈದರು. ಹಳ್ಳಿಗಳ ನ್ನೊಳಗೊಂಡ ಬೃಹತ್ ದೇಶವಾದ ಭಾರತದಲ್ಲಿ ವ್ಯವಸಾಯವೇ ಪ್ರಧಾನ ಉದ್ಯೋಗವಾಗಿತ್ತು. ಸರ್ಕಾರದ ಆದಾಯದ ಪ್ರಮುಖ ಮೂಲ ಭೂಕಂದಾಯ ವಾಗಿತ್ತು. ಕೃಷಿ ಕ್ಷೇತ್ರದಲ್ಲಿ ಆಹಾರ ಧಾನ್ಯಕ್ಕಿಂತ ವಾಣಿಜ್ಯ ಬೆಳೆಗಳನ್ನು ಹೆಚ್ಚು ಬೆಳೆಯಲಾಗುತ್ತಿತ್ತು. ಆದರೆ ಭೂಕಂದಾಯವನ್ನು ಮಾತ್ರ ರೈತರು ಬ್ರಿಟಿಷರಿಗೆ ನಗದು ರೂಪದಲ್ಲಿ ಕೊಡಬೇಕಾಗಿತ್ತು. ತೆರಿಗೆಯನ್ನು ಭರಿಸುವ ಬಡ ರೈತರ ಕಷ್ಟವನ್ನು ಶರೀಫರ "ರಾಜನೀತಿಯಲ್ಲಿ ಜಯವು" ಎಂಬ ಪದ್ಯದಲ್ಲಿ ಕಾಣ ಬಹುದಾಗಿದೆ.

"ಹಿಂದೂಸ್ಥಾನಕ ಬಂತು ಶೋಕ
ಮಂದಿಗಾಯ್ತು ಅತಿದುಃಖ
ಹಣದ ತೆರಿಗೆಯು ತಲೆಗೆ ಏಳು
ಎಣಿಸಿ ಹಡಗ ತುಂಬಿ ಹವಳವ
ಹೂಣಾದ ದೇಶಕೆಲ್ಲ ಇದು
ಕುಣಿದು ಕುಣಿದು ದಣಿವು ಆದಿತು"[೫೬]

'ತಲೆಗೆ ಏಳು ಎಣಿಸಿ' ಎಂಬ ಶಬ್ದಗಳಲ್ಲಿ ಆದಾಯಕ್ಕಿಂತ ತೆರಿಗೆಯನ್ನು ಹೆಚ್ಚು ಕೊಡಬೇಕಾದ ಪರಿಸ್ಥಿತಿಯನ್ನು ಜನ ಅನುಭವಿಸಿದನ್ನು ಹೇಳಿದ್ದಾರೆ. ಈ ಹಣದಿಂದ ಫಿರಂಗಿಯವರು ಐಷಾರಾಮ ಜೀವನ ಸಾಗಿಸುವುದರ ಜೊತೆಗೆ ಐಶ್ವರ್ಯವನ್ನು ಶೇಖರಿಸಿ ಶೇಖರಿಸಿ ದಣಿದರೆಂದು ಅಂದಿನ ರಾಜಕೀಯ ಸ್ಥಿತಿಯನ್ನು ಕುರಿತು ತಮ್ಮ ಪದದಲ್ಲಿ ಅನುಭವಿಸಿ ಹಾಡಿದ್ದಾರೆ.

ಕೈಗಾರಿಕಾ ಕ್ರಾಂತಿ

ಬ್ರಿಟಿಷರು ಭಾರತದಲ್ಲಿ ಜಾರಿಗೆ ತಂದ ಆರ್ಥಿಕ ನೀತಿಗಳು ಭಾರತೀಯರ ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ವಿರುದ್ಧವಾಗಿದ್ದವು. ಆ ಮೂಲಕ ಭಾರತೀಯರನ್ನು

೫೬. ಅದೇ, ಪು. ೧೫೦.

ಶೋಷಿಸಿದರು. ಭಾರತದಲ್ಲಿ ಗಟ್ಟಿಯಾಗಿ ನೆಲೆಯೂರಿದ ಈಸ್ಟ್ ಇಂಡಿಯಾ ಕಂಪನಿ, ತನ್ನ ಅಧಿಕಾರವನ್ನು ಚಲಾಯಿಸಿ ಭಾರತದ ಕೈಗಾರಿಕೆ ಮತ್ತು ಕರಕುಶಲ ಕಲೆಯನ್ನು ನಾಶಪಡಿಸಿ, ಆಮದು ಆಗುವ ವಸ್ತುಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿದರು. ಬ್ರಿಟಿಷರು ತಮ್ಮ ಸಿದ್ಧವಸ್ತುಗಳನ್ನು ಭಾರತಕ್ಕೆ ತರುವುದರಿಂದ ಮತ್ತು ಆಮದು ವಸ್ತುಗಳಿಗೆ ತೆರಿಗೆ ವಿಧಿಸದೆ ಭಾರತೀಯ ವ್ಯಾಪಾರವನ್ನು ಹಾಗೂ ಭಾರತೀಯ ಹತ್ತಿ ಬಟ್ಟೆ ಉತ್ಪಾದನೆಯನ್ನು ನಾಶಪಡಿಸಿದರು.

ಬ್ರಿಟಿಷರು ಭಾರತದ ಕಚ್ಚಾವಸ್ತುಗಳನ್ನು ಕಡಿಮೆ ಬೆಲೆಗೆ ಕೊಂಡು ತಮ್ಮ ಕೈಗಾರಿಕೆಗಳಿಗೆ ರವಾನಿಸಿ, ಇಂಗ್ಲೆಂಡಿನಲ್ಲಿ ಸಿದ್ಧವಾದ ವಸ್ತುಗಳಿಗೆ ಭಾರತದಲ್ಲಿ ಹೆಚ್ಚಿನ ಬೆಲೆಗೆ ಮಾರುವ ತಂತ್ರದಿಂದಾಗಿ ಗ್ರಾಮೀಣ ಗೃಹ ಕೈಗಾರಿಕೆಗಳು ಅವನತಿ ಹೊಂದಿದವು. ಇದನ್ನು ಗಮನಿಸಿದ ಶರೀಫರು ತಮ್ಮ ಪದ್ಯದ ಮೂಲಕ

"ಸೂಜಿಯೇ ನೀನು ಸೂಜಿಯೇ ಈ
ರಾಜ್ಯದೊಳಗೆಲ್ಲ ತೇಜ ಕಾಣಿಸುವಂಥ...
...ತಂಪುಳ್ಳ ಉಕ್ಕಿನೊಳು ಹುಟ್ಟಿದ ಸೂಜಿಯೇ
ಶಿಂಪಿಗರಣ್ಣಗೆ ಬಲವಾದ ಸೂಜಿಯೇ
ಇಂಪುಳ್ಳದಾರಕೆ ಸೊಂಪುಗೂಡಿಸುವಂಥ
ಕಂಪನಿ ಸರಕಾರ ವಶವಾದ ಸೂಜಿಯೇ"[೫]

ಎಂದು ಹಾಡಿ ಇಂಗ್ಲೆಂಡ್ ದೇಶದ ಉಡುಪುಗಳು, ಹಿಂದೂಸ್ಥಾನದಲ್ಲಿ ದೊಡ್ಡ ಪ್ರಮಾಣದಲ್ಲಿ ಮಾರಾಟವಾಗಿ ಹೆಚ್ಚು ಲಾಭ ಗಳಿಸಬೇಕೆಂಬ ದುರುದ್ದೇಶದಿಂದ, ಕಂಪನಿ ಸರ್ಕಾರ ಸ್ವದೇಶಿ ಉಡುಪುಗಳ ಬೆಲೆ ಇಳಿಸುವ ಮೂಲಕ ಸಿದ್ಧ ಉಡುಪುಗಳ ಉದ್ಯೋಗ ಆಂಗ್ಲರ ವಶವಾದುದನ್ನು 'ಕಂಪನಿ ಸರಕಾರದ ವಶವಾದ ಸೂಜಿಯೇ" ಎಂದು ಅಂದಿನ ರಾಜಕೀಯ ಸ್ಥಿತಿಯಿಂದಾದ ಪರಿಣಾಮವನ್ನು ಹೇಳಿದ್ದಾರೆ.

ಆಧುನಿಕ ಸಾರಿಗೆ ಸಂಪರ್ಕದ ಪ್ರಭಾವ

ಸಾರಿಗೆ ಸಂಪರ್ಕದ ವ್ಯವಸ್ಥೆ ಇಲ್ಲದ ಭಾರತ ದೇಶದಲ್ಲಿ ಬ್ರಿಟಿಷರು ರೈಲನ್ನು ಪರಿಚಯಿಸಿದರು. ಭಾರತದಿಂದ ಕಚ್ಚಾವಸ್ತುಗಳನ್ನು ಹಡಗಿನ ಮೂಲಕ ಬಂದಿರುವ ಜಾಗಕ್ಕೆ ಸಾಗಿಸಲು, ಇಂಗ್ಲೆಂಡಿನಿಂದ ತಂದ ಸಿದ್ಧವಸ್ತುಗಳನ್ನು ದೇಶದಲ್ಲೆಲ್ಲಾ ವ್ಯಾಪಾರ ಮಾಡಲು, ಯುದ್ಧದ ಸಾಮಗ್ರಿಗಳನ್ನು ತರಲು ರೈಲನ್ನು ಅಭಿವೃದ್ಧಿಪಡಿಸಿದರು.

ಬ್ರಿಟಿಷರ ಸೂಕ್ಷ್ಮ ವಿಚಾರಗಳನ್ನು ತಿಳಿದುಕೊಂಡು ದೇಶದಲ್ಲಿ ರೈಲು ಸಂಚಾರದ ಪ್ರಾರಂಭವನ್ನು ಗಮನಿಸಿ, ಮದೀನಾದಿಂದ ಹೊರಟ ಅಗ್ಗಿನ ಗಾಡಿ ಭಾರತದ ರಾಣಿ ಸರಕಾರದವರೆಗೆ ಸಂಚರಿಸಿದ ಬಗೆಯನ್ನು ಹಾಡಿದ್ದಾರೆ.

> **"ಭೂಪಾರದೊಳಗೆ ಮದೀನ ಶಹರದೊಳು**
> **ವ್ಯಾಪಾರ ಮಾಡುವ ಆಗೀನ ಬಂಡಿಯು**
>
> **ಮದೀನ ಶಹರದೊಳು ವ್ಯಾಪಾರ ಮಾಡುವ**
> **ಕಾಸೀಮ ಸಾಹೇಬರ ಸಮರದಿ ಮದ್ದು**
> **ಹೇರಿಸುವ ಆಗೀನ ಗಾಡಿಯು"**[೫೮]

ಗೊಬ್ಬರ ಹೇರುವ, ಕರ್ಬಲಾದೊಳಗೆ ಕಟಕಿ ಹಾಕಿ ಬರುವ ಪಾಣಿ, ಅಲಗು, ಸಮಸ್ತ ಆಯುಧ ಬಿಲ್ಲು ಬಾಣಗಳಿಡಿಸಿ, ಬೇಗನೆ ರಾಣಿ ಸರಕಾರದ ಸದರಿಯೊಳು ಬರುವ, ಅಗ್ಗಿನ ಗಾಡಿಯು ದೇಶದೊಳಗೆಲ್ಲ ಅರಳಿ ಹೇರಿಸುವ 'ಆಗೀನ ಗಾಡಿ'ಯಾಗುತ್ತದೆ. ಜನರು ರೈಲುಗಾಡಿಯನ್ನು 'ಉಗಿಬಂಡಿ' ಅಥವಾ 'ಅಗ್ಗಿನ ಗಾಡಿ' ಎಂದು ಕರೆಯುತ್ತಿದ್ದರು. ಅಗ್ಗಿನ ಗಾಡಿ ಗ್ರಾಮೀಣ ಭಾಷೆಯಲ್ಲಿ 'ಆಗೀನ ಗಾಡಿ'ಯಾಗಿದೆ.

ಹೀಗೆ ಶರೀಫರು ರಾಜಕೀಯವನ್ನು, ಆಧುನಿಕತೆಯನ್ನು, ಅವು ಜನರ ಮೇಲೆ ಬೀರಿದ ಪರಿಣಾಮವನ್ನು ವಾಸ್ತವದ ನೆಲೆಯಲ್ಲಿ ನೋಡಿದರು. ಹುಬ್ಬಳ್ಳಿ ಶಹರದ ವಾಣಿಜ್ಯ ವ್ಯವಹಾರ, ಹೊಸತಾದ ನೂಲಿನ ಗಿರಣಿ, ಸರ್ಕಾರಿ ಶಾಲೆ, ಸೂಜಿ, ರೈಲು ಮುಂತಾದವುಗಳು ಯಂತ್ರಕ್ರಾಂತಿಯ ಆಧುನಿಕತೆಯನ್ನು ತೋರಿಸಿದರೆ, ಪ್ಲೇಗು, ಮಹಾಯುದ್ಧ, ತೆರಿಗೆ ವಸೂಲಾತಿಯಂಥ ವಿಷಯಗಳು, ಶರೀಫರ ಕಾಲಜ್ಞಾನವನ್ನು ತೋರಿಸುತ್ತವೆ. ಒಂದು ಕಡೆ ಆಧುನಿಕತೆ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಗಾಢವಾಗಿ ಹರಡಿಕೊಳ್ಳುತ್ತಲೇ ರಾಜ್ಯದಲ್ಲಿ ತೀವ್ರ ಬಡತನ, ಕಷ್ಟ ಕಾರ್ಪಣ್ಯ ಬರ ಇವುಗಳ ಚಿತ್ರಣವನ್ನು ಅವರ ಪದಗಳಲ್ಲಿ ಕಾಣುತ್ತೇವೆ. ಕನ್ನಡದ ಬದುಕು ಆಧುನಿಕತೆಗೆ ಮುಖ ಮಾಡುತ್ತಿರುವಾಗ ವಾಸ್ತವಿಕ ಬದಲಾವಣೆಗೆ ಶರೀಫರು ತೀವ್ರವಾಗಿ ಸ್ಪಂದಿಸಿದ್ದಾರೆ.

೨.೪ ಶರೀಫರ ಪದಗಳಲ್ಲಿ ಸಾಮಾಜಿಕ ವಿಡಂಬನೆ ಮತ್ತು ವಿಡಂಬನಾ ತಂತ್ರ

ವಿಡಂಬನೆಗೆ ಸಾಹಿತ್ಯದಲ್ಲಿ ವಿಶೇಷ ಸ್ಥಾನವಿದೆ. ಸಾಹಿತ್ಯದ ಉದ್ದೇಶ ಕಲೆ ಮತ್ತು ಸಾಮಾಜಿಕ ಕಾಳಜಿಯಾಗಿದ್ದು, ಈ ಅವಶ್ಯಕತೆಗಳನ್ನು ವಿಡಂಬನೆ ಪೂರೈಸುತ್ತದೆ.

---

೫೮. ಅದೇ, ಪು. ೩೬೮.

ಕಲೆಯು ಸೃಜನಾತ್ಮಕವಾಗಿದ್ದು ಸಹೃದಯರನ್ನು ಸೃಷ್ಟಿಸುತ್ತದೆ. ಕಲೆಯ ಕಾಳಜಿ ಮಾನವ ಹಿತಕ್ಕಾಗಿ, ಸಮಾಜ ಸುಧಾರಣೆಗಾಗಿ, ಲೋಕ ಕಲ್ಯಾಣಕ್ಕಾಗಿ ಕ್ರಿಯಾತ್ಮಕವಾಗಿರುತ್ತದೆ. ವಿಡಂಬನೆಯು ಸಾಹಿತ್ಯದ ಕಲೆಯಾಗಿ ಸಮಷ್ಟಿಯ ಕಾಳಜಿಯನ್ನು ನಿರೂಪಿಸುತ್ತದೆ.ಸಮಷ್ಟಿಯ ಹಿತಕ್ಕೆ ಧಕ್ಕೆ ತರುವ ವಿಷಯ ವಿಡಂಬನೆಗೆ ವಸ್ತುವಾಗುತ್ತದೆ. ಸರಳವಲ್ಲದ, ಸತ್ಯವಲ್ಲದ, ಪ್ರಾಮಾಣಿಕವಲ್ಲದ, ಡಾಂಭಿಕತನದ, ಸೋಗಲಾಡಿತನದ, ದ್ವಂದ್ವ ಮನೋಭಾವದ ಸಮಯ ಸಾಧಕತನದ ಪ್ರವೃತ್ತಿಗಳಿಗೆ ಚಾಟಿ ಏಟನಂತಿರುವ ವಿಡಂಬನೆಯ ಪಾತ್ರ ಪ್ರಮುಖವಾಗಿರುತ್ತದೆ. ಚಾಟಿ ಏಟನಂತೆ ಬೀಸಿ ಹೊಡೆಯುವ ವಿಡಂಬನಾ ತಂತ್ರವು ಜಡ್ಡುಗಟ್ಟಿದ ವಿಷಯಗಳಿಗೆ ಮದ್ದಾಗಿ ಪರಿಣಮಿಸುತ್ತದೆ.

ವಿಡಂಬನೆಯು ವ್ಯಂಗ್ಯವಾಗಿದ್ದು ಹಾಸ್ಯದ ಮುಖೇನ ದೋಷವನ್ನು ಎತ್ತಿ ಹಿಡಿಯುತ್ತದೆ. ವಿಡಂಬನೆಯಲ್ಲಿ ಹರಿತವೂ ಅಪಹಾಸ್ಯವು ಜೊತೆ ಜೊತೆಯಲ್ಲಿಯೇ ಇರುತ್ತದೆ. ನೈತಿಕ ಜವಾಬ್ದಾರಿಯನ್ನು ಹೊತ್ತ ವಿಡಂಬನೆಯು ಅಂತಃಕರಣವನ್ನು ತಟ್ಟಿ ಅಂತಸತ್ವವನ್ನು ಬಡಿದೆಬ್ಬಿಸುವ ಸಾಮರ್ಥ್ಯವನ್ನು ಹೊಂದಿದೆ. ವ್ಯಂಗ್ಯ ವಿಡಂಬನೆಗಳು ವಿವರವಾಗಿರದೇ ವಿಷಯದ ಮೇಲೆ ಕೇಂದ್ರೀಕೃತವಾಗಿರುತ್ತವೆ.

ವಿಡಂಬನೆಯಲ್ಲಿ ಸ್ವ-ವಿಡಂಬನೆ ಮತ್ತು ಸಾಮಾಜಿಕ ವಿಡಂಬನೆ ಎಂದು ಎರಡು ಮುಖ್ಯ ಭಾಗವಿದ್ದು ಸಾಮಾಜಿಕ ವಿಡಂಬನೆಯಲ್ಲಿ ವ್ಯಕ್ತಿ ವಿಡಂಬನೆ, ಧರ್ಮ ವಿಡಂಬನೆ, ಸಂಸ್ಕೃತಿ ವಿಡಂಬನೆಗಳು ಸೇರಿದಂತೆ ಸಾಮಾಜಿಕ ವಲಯದ ಇನ್ನಿತರ ಸಂಕೀರ್ಣ ವಿಷಯಗಳು ಸೇರಿವೆ.

ಶರೀಫರ ತತ್ತ್ವಪದಗಳಲ್ಲಿ ಸಾಮಾಜಿಕ ಕಳಕಳಿ ಇರುವುದರಿಂದ ಅವರ ವಿಡಂಬನೆ ಸಾತ್ವಿಕ ರೂಪ ತಾಳಿದೆ. ಸಾಮಾಜಿಕ ಅನಿಷ್ಟಗಳಾದ ಜಾತಿಯತೆ, ಮಡಿ ಮೈಲಿಗೆ, ಢಾಂಬಿಕತೆ, ಅನ್ಯಾಯ, ಅಂತಸ್ತಿನ ತಾರತಮ್ಯ, ಪುರೋಹಿತ ವರ್ಗದವರಿಂದ ಮುಗ್ಧ ಜನರ ಶೋಷಣೆ, ಧಾರ್ಮಿಕ ಅಂಧಶ್ರದ್ಧೆ ಮತ್ತು ಗೊಡ್ಡು ಸಂಪ್ರದಾಯಗಳ ವಿರುದ್ಧ ತಮ್ಮ ಪದಗಳಲ್ಲಿ ವಿಡಂಬಿಸಿದ್ದಾರೆ. ಸಾಮಾಜಿಕ ವಿಡಂಬನೆಯ ಜೊತೆಗೆ ವ್ಯಕ್ತಿಗತವಾದ ಸ್ವಭಾವಗಳನ್ನು ತೀಕ್ಷ್ಣವಾಗಿ ವಿಡಂಬಿಸಿದ್ದಾರೆ. ಉತ್ತಮ ನಡೆ-ನುಡಿ ಸ್ವಾಭಿಮಾನದ ವ್ಯಕ್ತಿತ್ವ ಮತ್ತು ಮಾನವೀಯ ಗುಣಗಳನ್ನು ಶರೀಫರು ಹೊಂದಿದ್ದರೂ, ಪರಿಸ್ಥಿತಿಯ ಒತ್ತಾಯಕ್ಕೆ ಸಿಲುಕಿದಾಗ ತಮ್ಮನ್ನೇ ವಸ್ತುನಿಷ್ಠವಾಗಿಸಿಕೊಂಡು ವಿಡಂಬಿಸಿಕೊಂಡಿದ್ದಾರೆ. ತನ್ನನ್ನೇ ವಿಡಂಬಿಸಿಕೊಳ್ಳುವ ವ್ಯಕ್ತಿಯು, ಸಮಾಜದ ನೈತಿಕ ಹೊಣೆ ಹೊತ್ತು ವ್ಯಕ್ತಿ ಮತ್ತು ವ್ಯವಸ್ಥೆಯನ್ನು ಶುದ್ಧಗೊಳಿಸುವ ಸಮಾಜಮುಖಿ ಕಾರ್ಯ ಮಾಡುತ್ತಾನೆ. ಈ ಕಾರಣಕಾಗಿಯೇ ಶರೀಫರು ವಿಡಂಬನೆಯನ್ನು ಒಂದು

ಶರೀಫರು ನ್ಯಾಯನಿಷ್ಠುರರು, ಯಾವ ದಾಕ್ಷಿಣ್ಯಕ್ಕೂ ಒಳಗಾಗದೇ ತಮ್ಮ ಆತ್ಮಸಾಕ್ಷಿಯನ್ನು ಮುಂದಿಟ್ಟುಕೊಂಡು ಬದುಕಿನ ಅಂಕುಡೊಂಕುಗಳನ್ನು ಸುತ್ತಲಿನ ಲೋಪದೋಷಗಳನ್ನು ಕಂಡಂತೆ ಹೇಳಿ, ಅದರ ಪರಿಣಾಮದಿಂದಾಗುವ ಕೆಡಕನ್ನು, ಹಾನಿಯನ್ನು ಸೂಚಿಸಿ, ನೀತಿಯತ್ತ ಜನರನ್ನು ಸಾಗಿಸಲು ಪ್ರಯತ್ನಿಸುತ್ತಿದ್ದರು. ಮೂಲತಃ ಭಕ್ತರಾದ ಶರೀಫರು ಸೋಗು ಹಾಕುವ ಡಂಭಾಚಾರ ಭಕ್ತರನ್ನು ಕಂಡಲ್ಲಿ ಕನಲಿ ವಿಡಂಬಿಸಿದ್ದಾರೆ.

ಭಕ್ತಿಮಾರ್ಗವನ್ನು ತಿಳಿಯದೇ, ಕೈಲಾಸದಿಂದ ತಪಸ್ಸು ಮಾಡಿ ಬಂದವರಂತೆ ಗಡ್ಡ, ಮೀಸೆ ಜಡೆಗಳಿಂದ ಕೂಡಿದ್ದು ನಿಲುವಂಗಿ ತೊಟ್ಟು ಜ್ಞಾನಿಗಳಂತೆ ಸೋಗು ಹಾಕಿಕೊಂಡು ತಿರುಗುವ ಭೈರಾಗಿಗಳ ನಿಜಸ್ಥಿತಿಯು ಜ್ಞಾನಿಗಳಿಗಿಂತ ವ್ಯತಿರಿಕ್ತವಾಗಿದ್ದು ಗಾಂಜಾ, ಶೆರೆ, ಶೇಂಧಿಯ ದಾಸರಾಗಿರುವುದನ್ನು ವಿಡಂಬಿಸಿದ್ದಾರೆ.

ಸಾಮಾಜಿಕ ವಿಡಂಬನೆ

ಜಾತಿ, ಮತ ಭೇದಗಳಿಂದ ಮನುಷ್ಯ ಮನುಷ್ಯತ್ವವನ್ನೇ ಮರೆತು ದ್ವೇಷ, ತಿರಸ್ಕಾರ ಭಾವನೆಗಳಿಂದ ಅಮೂಲ್ಯವಾದ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಾನೆ. ಮೂಲಭೂತವಾಗಿ ಮನುಷ್ಯ-ಮನುಷ್ಯರಲ್ಲಿ ಯಾವ ವ್ಯತ್ಯಾಸವೂ ಇಲ್ಲದೆ ಹುಟ್ಟಿ ಬೆಳೆದ ರೀತಿ-ನೀತಿ ಎಲ್ಲರಲ್ಲೂ ಒಂದೇ ಆಗಿದೆ. ತನ್ನ ಸ್ವಾರ್ಥ ಸಾಧನೆಗಾಗಿ ಗುಂಪುಗಳನ್ನಾಗಿ ಮಾಡಿ ಮನುಷ್ಯ ಮನುಷ್ಯರ ನಡುವೆ ಮತ, ಧರ್ಮ, ಕುಲ, ಜಾತಿಗಳ ಅಡ್ಡಗೋಡೆಯನ್ನು ಕಟ್ಟಿ ಸಮಾಜವನ್ನು ಹದಗೆಡಿಸುತ್ತಾರೆ. ಮಡಿ, ಮೈಲಿಗೆ, ಶೀಲವೆಂದು ಮುಟ್ಟದೇ ದೂರ ಸರಿಯುವ ಜನರಿಗೆ ಅರ್ಥವಾಗುವಂತೆ ವಿಡಂಬಿಸಿರುವುದು ಈ ಪದ್ಯದಲ್ಲಿ ವ್ಯಕ್ತವಾಗಿದೆ.

"ತೊಗಲ ಮಲಿಯ ಹಾಲು ಕುಡಿದು ದೊಡ್ಡವರಾಗಿ
ಶೀಲ ಮಾಡತೀರಿ ನಾಡೆಲ್ಲ
ನಾ ಆದರೇನು ನೀ ಆದರೇನು
ಅರಸ ಪ್ರಧಾನಿಗಳು ಆದರೋ ತೊಗಲು
ತೊಗಲ ತೊಳೆಯುದಕ ನೀರಮಡಿಯ ಮಾಡಿ
ಗುಂಡಿಯಂತಾದ್ಯೋ ಬಿಕನಾಶಿ
ಗಂಧ ವಿಭೂತಿ ತೊಗಲಿಗೆ ಧರಿಸಿ
ಜ್ಯಾತಿ ಜ್ಯಾತಿ ಬ್ಯಾರೆನಿಸಿ"[೫]

ರಾಜ, ಮಂತ್ರಿಯಂತಹ ದೊಡ್ಡ ವ್ಯಕ್ತಿಗಳೂ ಸಹ ತೊಗಲ ಮೊಲೆಯಿಂದಲೇ ಹಾಲು ಕುಡಿದಿರುವವರು. ಅಧಿಕಾರ, ಅಂತಸ್ತುಗಳು ಕೇವಲ ಭ್ರಮೆಗಳು. ಮನುಷ್ಯ ಮನುಷ್ಯನನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗಿದೆ. ಈ ದೇಹಕ್ಕೆ ಎಷ್ಟೇ ಮಡಿ, ಶೀಲ ಮಾಡಿ ಶುದ್ಧಗೊಳಿಸಿದರೂ ಇದು 'ಗುಂಡಿಯಂತಿರುವುದು ಬಿಕನಾಶಿ' ಎಂದು ದೇಹದ ನಶ್ವರತೆ ಬಗ್ಗೆ ಎಚ್ಚರಿಸಿ ಮಾನವಧರ್ಮ ಮುಖ್ಯ ಎಂದು ಶರೀಫರು ಹೇಳುತ್ತಾರೆ.

> "ದೋಣಿಯೊಳಗ ಮೂರು ಲೋಕ ಹುಟ್ಟಿತು
> ಆ ಕುಲ ಈ ಕುಲ ಎಲ್ಲಿತ್ತು?
> ಜೋಕಿಲೆ ಹದಿನೆಂಟು ಜಾತಿಗೆ ಹೇಳತೀನಿ
> ಏಕಮುಂಡಗಿ ಮಾತಿದು ಗೊತ್ತು..."[೮]

ಲೋಕಸೃಷ್ಟಿಯ ಮಾನವರೆಲ್ಲ ಒಂದೇ. ಯಾವುದು ಕುಲಜಾತಿಗಳು ಹುಟ್ಟಿನಿಂದ ಬರುವುದಿಲ್ಲ. ಅವು ಮಾನವ ನಿರ್ಮಿತ ಪೊಳ್ಳು ಪ್ರತಿಷ್ಠೆಗಳೆಂದು ವಿಡಂಬಿಸಿ ಮಾನವೀಯ ಮೌಲ್ಯಗಳನ್ನು ಸಾರಿದರು.

ಮನುಷ್ಯನು ಸ್ವಾಭಿಮಾನದಿಂದ ಬದುಕನ್ನು ನಡೆಸಬೇಕೆ ಹೊರತು ಸೋಮಾರಿಯಂತೆ ದರಿದ್ರ ಜೀವನ ನಡೆಸುವುದು ಸಲ್ಲದು ಎಂದು ಕಾಯಕದ ಅರ್ಥವನ್ನು ತಿಳಿಸುತ್ತಾರೆ.

> "...ಕುಡಗೋಲ ಹಿಡಿದು ಕೂಲಿಮಾಡಿ
> ತುಂಬಿಸಬೇಕು ಈ ಚೀಲ
> ಒಂದರಘಳಿಗಿ ಅನ್ನವಿಲ್ಲದಿರೆ
> ಸೈಲ ಬೀಳತೈತೋ ತೊಗಲು"[೯]

ಶರೀಫರು ಬ್ರಾಹ್ಮಣ ಗುರುವಿನೊಡನೆ ಇರುವ ಸಲಿಗೆಯನ್ನು ಕಂಡು ಅಪಹಾಸ್ಯ ಮತ್ತು ನಿಂದೆಯನ್ನು ಮಾಡಿದ ಜನರನ್ನು ಸಾತ್ವಿಕ ಕೋಪದಿಂದ ಖಂಡಿಸಿದರು.

> "ಗುರುವರನ ಗಣರಿಗೆರಗಿ
> ಎರಗಿ ಬಿನ್ನಹ ಮಾಡದ್ವೋದರ್ನೆ

ನರಗುರಿಗಳು ಪರಿಹಾಸ್ಯದಿ
ಜರೆದು ನಮ್ಮನ್ನು ಕರೆಸದಲೆ"[೬೨]

ತಾವು ಮಾಡುವ ಉದ್ದೇಶವನ್ನು ಮರೆತು 'ಬಿನ್ನಹ'ಕ್ಕೆ ಗೋವಿಂದಭಟ್ಟರ ಜೊತೆ ಬಂದ ಶರೀಫರನ್ನು ಜಾತಿ ಬಾಹಿರನೆಂದು ಅವಮಾನಿಸುವವರನ್ನು ನರಕುರಿಗಳೆಂದು ವಿಡಂಬನಿಸಿದ್ದಾರೆ.

ದುರ್ಗುಣ, ದುರ್ವ್ಯಸನ, ಆಸೆಬುರುಕತನ, ಅಜ್ಞಾನ, ಅಹಂಕಾರ, ಜಾರತನ, ಸೂಳೆಗಾರಿಕೆಗಳಂಥ ಸಮಾಜ ಬಾಹಿರ, ಜ್ಞಾನಬಾಹಿರ ಚಟುವಟಿಕೆಗಳನ್ನು ಪ್ರಶ್ನಿಸಿ ವಿಂಡನೆಗೈದಿದ್ದಾರೆ.

ಸೆರೆ, ಶೇಂದಿ, ಗಾಂಜಾ ಮುಂತಾದ ಮಾದಕ ಪೇಯ ಸೇವನೆಗಳಿಂದ ಮನುಷ್ಯ ತಾನು ಹಾಳಾಗುವುದಲ್ಲದೆ ತನ್ನನ್ನು ಅವಲಂಬಿಸಿದ ಕುಟುಂಬದವರ ಅವನತಿ ಹಾಗೂ ಸಮಾಜದ ಮೂದಲಿಕೆಗೆ ಒಳಗಾಗುತ್ತಾನೆಂದು ತಿಳಿಸಿದ್ದಾರೆ.

"ಹ್ಯಾಂಗ ಬಳಕಿ ಮಾಡಬೇಕಣ್ಣಾ
ಹಿಂಗಾದ ಮ್ಯಾಲಿನ್ನ ಹ್ಯಾಂಗ ಬಳಕಿ ಮಾಡಬೇಕಣ್ಣಾ।
ಹಡೆದ ತಾಯಿ ತಂದೆ ಯಾರಣ್ಣಾ
ದುಡಿ ದುಡಿದು ಸತ್ತರೆ
ಮಡದಿ ಮಕ್ಕಳ ಪರಿವೆ ಇಲ್ಲಣ್ಣಾ
ಬಿಡದೆ ಶೆರೆಯ ಸೇಂದಿ ತಂದು
ಒಡದ ಬೀಳುದ್ದಾಂಗ ಕುಡಿದ ಮೇಲೆ..."[೬೩]

ಎಂದು ಕುಡಿತದ ದುಷ್ಪರಿಣಾಮವನ್ನು ಹಾಡಿದ್ದಾರೆ.

"ಬಿದ್ದಿಯಬ್ಬೆ ಮುದುಕಿ
ಬಿದ್ದಿಯಬ್ಬೆ
ಸದ್ಯಕಿದು ಹುಲಗೂರ ಸಂತಿ
ಗದ್ದಲದೊಳಗ್ಯಾತಕ ನಿಂತಿ
ಬಿದ್ದು ಇಲ್ಲಿ ಒದ್ದಾಡಿದರ
ಎದ್ದು ಹ್ಯಾಂಗ ಹಿಂದಕ ಬರತಿ
ಬುದ್ದಿಗೇಡಿ ಮುದುಕಿ ನೀನು
ಬಿದ್ದಿಯಬ್ಬೆ..."[೬೪]

---

೬೨. ಅದೇ, ಪು. ೧೦೭
೬೩. ಅದೇ, ಪು. ೨೩೭
೬೪. ಅದೇ, ಪು. ೧೪೨.

ನಾಲ್ಕು ದಿನದ ಬದುಕಿನ ಸಂತೆಗಾಗಿ ಬರುವ ಮನುಷ್ಯ ಜೀವವು ಸಂತೆಯ ಜಂಜಾಟದಲ್ಲಿಯೇ ಬಿದ್ದು ಒದ್ದಾಡುತ್ತದೆ. ಎಲ್ಲವನ್ನೂ ಕಳೆದುಕೊಂಡು ಅಸಹಾಯಕವಾಗಿ ಬಿದ್ದಾಗ, ಮರಳಿ ಹೋಗಲು ಸಾಧ್ಯವಾಗದೇ ತನ್ನ ಕರ್ಮಫಲದಲ್ಲಿ ಬಂಧಿತವಾಗುವ ಜೀವವನ್ನು ಶರೀಫರು ಹೃದಯಸ್ಪರ್ಶಿಯಾಗಿ ವಿಡಂಬಿಸಿದ್ದಾರೆ. ಬದುಕಿನ ಸಂತೆ ಕ್ಷಣಿಕವಾದದ್ದೆಂದು ವಿಡಂಬಿಸಿ ಬದುಕನ್ನು ಹಸನುಗೊಳಿಸಿ ಈ ಸಂತೆಯಿಂದ ಮುಕ್ತಿ ಹೊಂದಬೇಕೆಂದಿದ್ದಾರೆ. 'ಮುದುಕಿ' ಎನ್ನುವ ಪದವು ವಿಡಂಬನೆಯ ಮೂಲ ಪದವಾಗಿದೆ. ಬದುಕಿನ ಸಂತೆಯಲ್ಲಿಯೇ ಮುದುಕಿಯಾದರೂ ಮುಕ್ತಿಯ ಪಥವನ್ನು ಕಾಣದ 'ಪಿಸುರ ಪಿಚ್ಚುಗಣ್ಣಿ' ಅಜ್ಞಾನದ ಸಂಕೇತವಾಗಿದೆ.

ಬದುಕಿನ ತಂಬೂರಿಯನ್ನು ಬಾಳಬಲ್ಲವರು ಮಾತ್ರ ನುಡಿಸಬೇಕು. ಬದುಕಿನ ತಾಳ ಅರಿಯದ ತಿಳಗೇಡಿಗಳಿಗೆ ಈ ತಂಬೂರಿ ಸಲ್ಲದೆಂದು ಹೇಳಿದ್ದಾರೆ. ಬದುಕಿನ ತಾಳದ ಜ್ಞಾನ ಅರಿಯದವನನ್ನು ಕತ್ತೆಗೆ ಹೋಲಿಸಿದ್ದಾರೆ.

"ಬಾಳ ಬಲ್ಲವರಿಗೆ ತಂಬೂರಿ ದೇವ
ಭಾಳಕ್ಷ ರಚಿಸಿದ ತಂಬೂರಿ
ಹೇಳಲಿ ಏನಿದರ ಹಂಚಿಕೆ ಅರಿಯದ
ತಾಳಗೇಡಿಗೆ ಸಲ್ಲ ತಂಬೂರಿ

ಸತ್ಯ ಸುಗುಣರಿಗೆ ತಂಬೂರಿ ಇದ
ನಿತ್ಯ ಉತ್ತಮವಾಡುವ ತಂಬೂರಿ
ಬತ್ತೀಸರಾಗದ ಬಗೆಯನರಿಯರಿದಂತ
ಕತ್ತೀಗಿನ್ಯಾತಕೆ ತಂಬೂರಿ..."

ಬದುಕಿನ ಸತ್ಯವರಿಯದೇ ಮೋಹ, ಮಾಯೆಗೆ ಬಲಿಯಾಗಿ ಬದುಕನ್ನು ಹಾಳು ಮಾಡಿಕೊಳ್ಳುವವರನ್ನು 'ನರಿ ಸತ್ತು ಹೋಯ್ತು ಬೇಡಿ ಹುಲಿಯ ಬಣ್ಣಾ" ಎಂಬ ಪದದಲ್ಲಿ ತಾತ್ವಿಕವಾಗಿ ವಿಡಂಬಿಸಿದ್ದಾರೆ.

"ನರಿ ಸತ್ತು ಹೋಯಿತು ಬೇಡಿ ಹುಲಿಯ ಬಣ್ಣ
ನೀರೊಳಗೆ ಕರಗಿ ಬಿಟ್ಟು ಹೋಯ್ತು ಸುಣ್ಣ'
ಬಟ್ಟಾಗಬಾರದೋ ಹಣ ನಿನ್ನ ತಲೆಗೆ
ಮೆಟ್ಟಾಗಬೇಕು ಕಾಲಿನ ಅಡಿಗೆ.

ಹೆಣ್ಣು, ಹೊನ್ನು, ಮಣ್ಣು ಈ ಮೂರು ಸುಳ್ಳಣ್ಣಾ
ತಿಳಿದು ನೋಡು ಗುರುವು ಕೊಟ್ಟ ಅವು ಮೂರು ಕಣ್ಣಾ

ಕಳಕೊಂಡಲ್ಲೊ ಕಾಮಣ್ಣಾ
ನರಿ ಸತ್ತು ಹೋಯ್ತು ಬೇಡಿ ಹುಲಿ ಬಣ್ಣಾ"[೫೬]

ಹಣವನ್ನು ಚಪ್ಪಲಿಗೆಹೋಲಿಸುತ್ತ, ಇವುಗಳನ್ನು ಮೆಟ್ಟಿ ನಿಲ್ಲಬೇಕೆಂದು ಹೇಳುತ್ತಾರೆ.

'ಲಕ್ಷ್ಮಿ'ಯನ್ನು ಎಂದರೆ ದುಡ್ಡನ್ನು ಕೊರವಿಗೆ ಹೋಲಿಸುತ್ತಾರೆ. 'ಕೊರವಿ' ಎಂದರೆ ಕೀಳು ಜಾತಿಯ ಹೆಂಗಸು. ಈ ಕೊರವಿ ಮನುಷ್ಯನ ಬದುಕಿನಲ್ಲಿ ಮಾಡುವ ಅವಾಂತರವನ್ನು ಹೀಗೆ ಹಾಡಿದ್ದಾರೆ.

"ದುಡ್ಡು ಕೆಟ್ಟದ್ದೊ ಮನುಜ ಈ ಲೋಕದಿ...
ಹೆಡ್ಡ ಮೂಢಾತ್ಮನೆ ದೊಡ್ಡ ದೊಡ್ಡವರನು
ಮಡ್ಡು ಇಳಿಸುತಲಿ ಅಡ್ಡ ಬೀಳಿಸುವದು
ಹರನ ಪೂಜೆಯ ಕೆಡಿಸಿ, ಸದ್ಗುರುವಿನ
ವರಮಂತ್ರವನೇ ಬಿಡಿಸಿ
ಗುರುಶಿಷ್ಯಭಾವವನಳುಹಿ ಲಕ್ಷ್ಮೀಯೆಂಬ
ಕೊರವಿಯು ನರರನು ಅರವುಗೆಡಿಸುವಳು"[೬೬]

ಆಸೆಯ ಬೆನ್ನು ಹತ್ತಿದ ವ್ಯಕ್ತಿಯು ಸದ್ಗುಣಗಳನ್ನು, ಬದುಕಿನ ಸಂತೋಷವನ್ನು ಕಳೆದುಕೊಂಡು ದುಡ್ಡಿನ ದಾಸನಾಗುವನು. 'ಕೊರವಿ ಲಕ್ಷ್ಮೀ' ಎಂದು ದುಡ್ಡನ್ನು ವಿಡಂಬಿಸುತ್ತ ಇವಳ ದೆಸೆಯಿಂದ ಮಾನವನ ಅರಿವು ಹಾಳಾಗುವುದೆಂದು ಹೇಳಿದ್ದಾರೆ. ಹೊನ್ನು, ದುಡ್ಡು, ಲೌಕಿಕ ಬದುಕಿಗೆ ಆವಶ್ಯವಾದರೂ ಅದು ಅಂತಿಮವಲ್ಲವೆಂದು ಅದರ ದುಷ್ಪರಿಣಾಮವನ್ನು ವಿವರಿಸಿದ್ದಾರೆ. ಹರಪೂಜೆಯಿಂದ ವಿಮುಖಗೊಳಿಸುವ, ಗುರು–ಶಿಷ್ಯರ ಸಂಬಂಧವನ್ನು ಹಾಳು ಮಾಡುವ ದುಡ್ಡಿನ ಮೋಹವನ್ನು ಶರೀಫರು ಖಂಡಿಸಿದ್ದಾರೆ.

"ಬಾಯಿಲೆ ಬ್ರಹ್ಮವ ಬೊಗಳಿದರೇನೋ ಛೀ
ನಾಯಿ ಜನ್ಮಕೆ ಬಿದ್ದು ಹೊರಳಾಡುವ ಮನಸೇ।

ಕಾಯ ಜೀವರೊಳು ನ್ಯಾಯವ ಬೆಳಸಿ
ಮಾಯದೊಳಗೆ ಮುಳಿಗೇಳುವ ಮನಸೇ।

ಪರಸ್ತ್ರೀ ಪರಧನ ಪರನಿಂದ್ಯದಿ ನೀನು
ಪರಸ್ತುತಿಯಲಿ ದಿನಗಳಿಯುವಿ ಮನಸೇ।
ಪರಶಾಸ್ತ್ರಗಳೋದಿ ಅರಗಿಳಿಯಂದದಿ

೫೬. ಅದೇ, ಪು. ೧೩೦.
೬೬. ಅದೇ, ಪು. ೧೮೧.

ನೆರೆ ಸಂಸಾರ ಪಂಜರದಿ ತೊಳಲುವಿ ಮನಸೇ!"

ಹೀಗೆ ಮನಸ್ಸಿನ ಜಂಜಾಟವನ್ನು ಕುರಿತು ಬರೆದ ಪದಗಳಲ್ಲಿ ವ್ಯಕ್ತಿಯ ಜೀವನದಲ್ಲಿನ ವಿರ್‍ಳಿತವನ್ನು ಹೇಳುತ್ತಲೇ ನೀತಿವಂತರು ಜ್ಞಾನಿಗಳಾಗಲು ಪಡೆಯಬೇಕಾದ ಮನಸ್ಸಿನ ಸಾಧನೆಯನ್ನು ವಿವರಿಸಿದ್ದಾರೆ. "ಮಚ್ಚೆ ಮಚ್ಚೆಲ್ಲೊಡೆದು" ಎಂಬ ಶಬ್ದ ಪ್ರಯೋಗ ಅವರ ಸಾತ್ವಿಕ ಕೋಪದ ಅಭಿವ್ಯಕ್ತಿಯಾಗಿದೆ. ಮಾನವ, ಸಮಾಜ ಕಲ್ಯಾಣಕ್ಕಾಗಿ ಮನಸ್ಸಿಗೆ ಯಾವ ಶಿಕ್ಷೆಯನ್ನಾದರೂ ಕೊಡಬಹುದೆಂಬ ಸಿದ್ಧಾಂತವನ್ನು ಹೀಗೆ ಹೇಳಿದ್ದಾರೆ. ಹೀನವಾದ ಮನಸ್ಸಿಗೆ ಚಪ್ಪಲಿ ಏಟೇ ಗತಿಯೆಂಬ ಕೋಪದ ವಿಡಂಬನೆ ಅತ್ಯಂತ ಉಗ್ರವಾಗಿ ಕಂಡರೂ ಸಮತಟ್ಟ ಬದುಕಿನ ಕುರುಹೂ ಹೌದು.

ಮನಸ್ಸಿನ ಚಂಚಲತೆ, ವಿಷಯಸುಖದ ಲಾಲಸೆ, ದುರಾಸೆ, ದ್ವಂದ್ವ ಅಭಿಪ್ರಾಯದ ಚಿಂತೆಯ ಮನಸ್ಸು, ಸಮಯ ಸಾಧಕ ಮನಸ್ಸು, ಹರಿದಾಡುವ ಅಶಾಂತಿಯ ಮನಸ್ಸು, ಚಿಂತಕ ಮನಸ್ಸು... ಹೀಗೆ ಮನಸ್ಸಿನ ಹತ್ತು ಹಲವಾರು ಬಗೆಗಳನ್ನು ಶರೀಫರು ವಿಡಂಬಿಸುವುದನ್ನು ಕಾಣುತ್ತೇವೆ.

"ಹೊತ್ತುಗಳೆಯದಿರೆಲೋ ಮನವೆ
ಗೊತ್ತು ಇಲ್ಲದೆ ನೀನು ಬರಿದೆ
ಚಿತ್ತ ಚಂಚಲನಾಗಿ ಚರಿಸ್ಯಾಡುತ್ತ ನಾನಾ ವಿಷಯಗಳನು
ಹೊತ್ತು ಶ್ರಮದೊಳಾಡಬೇಡ"

ಮನಸಿನ ನಿಯಂತ್ರಣ ಬಗ್ಗೆ ಹೀಗೆ ಹಾಡಿದ್ದಾರೆ–

"ಮನಸೇ ಮನಸಿನ ಮನಸ ನಿಲ್ಲಿಸುವುದು
ಮನಸ್ಸಿನ ಮನ ತಿಳಿಯುವ ಮನ ಬ್ಯಾರೆಲೋ ಮನಸೇ
ತನುತ್ರಯದೊಳು ಸುಳಿದಾಡುವ ಜೀವನ
ಗುಣವರಿತರೆ ನಿಜದಾರಲೋ ಮನಸೇ"

ಬದುಕಿನಲಿ ಮನುಷ್ಯನು ಬದುಕಿನ ಅರ್ಥ, ಉದ್ದೇಶ ತಿಳಿಯದೇ ವ್ಯರ್ಥವಾದ ಆಸೆಗಳಿಗೆ ಹೋಗುವುದನ್ನು, ಕೊನೆ ಘಳಿಗೆಯಲ್ಲಿ ಅವನ ಆಸೆಗಳೆಲ್ಲ ಅವನನ್ನೇ ನೋಡಿ ವಿಡಂಬಿಸುತ್ತಿರುವುದನ್ನು ಮಾರ್ಮಿಕವಾಗಿ ವಿವರಿಸಿದ್ದಾರೆ.

"ನೀ ಮಾಡುವಿಯೆಂದರೆ ಯಾರ
ಬ್ಯಾಡಂತಾರ ಮಾಡಪ್ಪ ಚಿಂತೆ
ನೀ ಮಾಡೋದು ಘಳಿಗಿ ಸಂತೆ
ಮೇಲ್ ಮಾಳಗಿ ಕಟ್ಟಬೇಕಂತಿ
ಆನೆ ಅಂಬಾರಿ ಏರಬೇಕಂತಿ"[೭೦]

ಎಲ್ಲವನ್ನೂ ಬಿಟ್ಟು ಹೋಗುವ ಮನುಷ್ಯನು ಎಲ್ಲವೂ ತನ್ನದೆಂದು ಹೋರಾಡುವ ಭ್ರಮೆಗೆ ಒಳಗಾಗುವುದರ ವ್ಯಂಗ್ಯದ ದನಿಯಲ್ಲಿ ಹೇಳಿದ್ದಾರೆ.

ದಾಸರ ದಿಕ್ಕಿನಲ್ಲಿಯೇ ಚಿಂತನೆಗೈದ ಶರೀಫರು, ಬಾಹ್ಯಾಡಂಬರದಲ್ಲಿ ಭಕ್ತಿಯನ್ನು ನಟಿಸುತ್ತ, ಮಾಯೆಯೊಳಗೆ ಮುಳಿಗೇಳುತ್ತ, ಪರಸ್ತ್ರೀ, ಪರಧನ, ಪರನಿಂದೆಯಲ್ಲಿಯೇ ದಿನವನ್ನು ಕಳೆಯುವ ಹೊಲಸು ಮನಸ್ಸನ್ನು ನಾಯಿಗೆ, ನೊಣಕ್ಕೆ ಹೋಲಿಸಿದ್ದಾರೆ.

"ನಿಶ್ಚಿಂತನಾಗಬೇಕಂತಿ ಬಹು
ದುಶ್ಚಿಂತಿಯೊಳಗೆ ನೀ ಕುಂತಿ
ಯಾಕೋ ಎಲೋ ನಿನಗೀ ಭ್ರಾಂತಿ
ನಾಳಿಗಾಗುವದೀಗಾಗಂತಿ..."[೭೧]

ಮನುಷ್ಯ ಎಲ್ಲ ವಿಷಯಗಳನ್ನು ತನ್ನೊಳಗೆ ಇಟ್ಟುಕೊಂಡು ನಿಶ್ಚಿಂತತೆಯನ್ನು ಬಯಸುವ ಪರಿ ಹಾಸ್ಯಾಸ್ಪದವಾಗಿದೆ. ಶರೀಫರ ವಾಸ್ತವ ಬದುಕಿನ ಒಳ ಹೊರಗುಗಳನ್ನು ವ್ಯಕ್ತಪಡಿಸಿದ್ದಾರೆ.

ಬದುಕಿನ ವಿಕಾರಕ್ಕೆ, ನಿರರ್ಥಕತೆಗೆ, ಸ್ಥಿರವಲ್ಲದ ಚಂಚಲ ಮನಸೇ ಕಾರಣವೆಂದು, ಮನಸ್ಸಿನ ಮಂಗತನವನ್ನು, ಅಸ್ಥಿರತೆಯನ್ನು ಟೀಕಿಸಿದ್ದಾರೆ. ಅವರ 'ಬಲುನಾತಾ... ಬಲುನಾತಾ' ಪದದಲ್ಲಿ ಎಲ್ಲ ಹೊಲಸುಗಳನ್ನು ವಿವರಿಸುತ್ತ, ಅದೆಲ್ಲವುಗಳಿಗಿಂತ ಅತಿ ಹೆಚ್ಚು ಹೊಲಸಿನಿಂದ ಕೂಡಿರುವುದು ಮನಸ್ಸು. ಇತರ ಹೊಲಸಿನಿಂದ ಪರಿಸರ ಹಾಳಾಗುತ್ತದೆ. ಶಾರೀರಿಕ ಹೊಲಸನ್ನು ಅಲ್ಪ ಶ್ರಮದಿಂದ ಶುದ್ಧಗೊಳಿಸಬಹುದು. ಆದರೆ ಕಲುಷಿತ ಮನಸ್ಸು ಅನೇಕ ದೇಹಗಳನ್ನು, ಶುದ್ಧ ಹೃದಯಗಳನ್ನು, ಪರಿಸರವನ್ನು, ಮನೆತನಗಳನ್ನು ತೊಳೆಯಲು ಸಾಧ್ಯವಾಗಲಾರದಂತೆ ಹೊಲಸು ಮಾಡುತ್ತವೆ. ಇದಕ್ಕೆಲ್ಲ ಕಾರಣ ದೇವರ ಧ್ಯಾನದಿಂದ

---

೭೦. ಅದೇ, ಪು. ೧೭೭

೭೧. ಅದೇ, ಪು. ೮೫.

ದೂರವಿರುವುದು. ಮಂಗಳಾತ್ಮಕ ಗುರು ಗೋವಿಂದನ ಸಂಗದಿಂದ ಇಂಥ ಯಾವ ಕೊಳಕು ಮನಸ್ಸಿನ ಹತ್ತಿರ ಸುಳಿಯುವುದಿಲ್ಲ. ಅಂತರಂಗಶುದ್ಧಿಯನ್ನು ಕುರಿತು ಹೀಗೆ ಹೇಳಿದ್ದಾರೆ:

"ಬಲುನಾತ ಬಲುನಾತ ಮನ
ಮಲಿನ ತೊಳೆಯದಿರೆ ಹೊಲಸಾಯ್ತವ್ವ
ನಾಯಿ ಸತ್ತು ಕೊಳೆತರೆ ನಾತಲ್ಲ
ಕಾಯಿ ಕೆಟ್ಟು ಹುಳಿತರೆ ನಾತಲ್ಲ
ಭಂಗಿ ಸೇದಿದರ ಬಾಯ್ನಾತಲ್ಲ
ನುಂಗಿ ಕಾರಿಕೊಂಡುದು ನಾತಲ್ಲ
ಮಂಗಳಾತ್ಮಕ ಗುರುಗೋವಿಂದನ
ಸಂಗ ಮಾಡದಿರುವುದು ನಾತವ್ವ"[೨]

ಬಸವಣ್ಣನವರು ಹೇಳುವ ಅಂತರಂಗ ಶುದ್ಧಿಯ ಬಗ್ಗೆಯೂ ಹಾಡಿದ್ದಾರೆ.

"ಹೌದಪ್ಪ ಹೌದು ನೀನೇ ದೇವರ
ನಿಂದ ನೀ ತಿಳಿದರ ನಿನಗಿಲ್ಲೋ ದೂರಾ
ನೀರಿಲ್ಲದ ಜಳಕ ಮಾಡಿರಬೇಕು
ಅರಿವೆಯಿಲ್ಲದ ಮಡಿಯ ಉಟ್ಟಿರಬೇಕು
ಊಟವಿಲ್ಲದ ಹೊಟ್ಟೆ ತುಂಬಿರಬೇಕು
ನಿದ್ದೆಯೊಳಗೆ ಸದಾ ಎಚ್ಚರವಿರಬೇಕು
ತಂಬಾಕಿಲ್ಲದ ಬತ್ತಿ ಸೇದಿರಬೇಕು
ಸೆರೆ ಕುಡಿಯದೇ ನಿಶೆಯಾಗಿರಬೇಕು
ಎಬಡಾ ತಬಡಾ ನಾಲಿಗೆ ಬಿದ್ದಿರಬೇಕು
ಮೋಜಲಿ ಹೋಗಿ ಶಿಶುನಾಳಧೀಶನ ಪಾದಕ ಬಿದ್ದಿರಬೇಕು"[೩]

ಎಂದು ಹಾಡುತ್ತ ತನ್ನನ್ನು ತಾನು ಮೊದಲು ತಿಳಿದುಕೊಂಡು ಅಂತರಂಗ ಶುದ್ಧಿ ಹೊಂದಿ ದೇವರ ಸ್ಮರಣೆಯಲ್ಲಿ ಲೀನವಾಗಬೇಕೆಂಬ ಸ್ಥಿತಿಯ ಬಗ್ಗೆ ಹೇಳಿದ್ದಾರೆ. ಜ್ಞಾನಿಗಳು, ಭಕ್ತರು ಲೌಕಿಕ ಪರಿವೆಯನ್ನು ಕಳಚಿಕೊಂಡು ಬ್ರಹ್ಮಾನಂದ ರಸದಲ್ಲಿ ಲೀನವಾಗಿ ತಾವೇ ದೇವರಾಗುತ್ತಾರೆ. ಬಹಿರಂಗ ಶುದ್ಧಿಗಳನ್ನು ಅಣಕಿಸುತ್ತ ಅಂತರಂಗದ ಪರಮಾತ್ಮನ ಗುಂಗಿನಲ್ಲಿ ಎಲ್ಲವನ್ನೂ ಮರೆಯುತ್ತಾನೆ.

ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಡಂಬನಾ ಪದಗಳು

ಧರ್ಮಗಳ, ಧಾರ್ಮಿಕ ಆಚರಣೆಗಳ ಮತ್ತು ಅವುಗಳ ತತ್ತ್ವಸಿದ್ಧಾಂತಗಳಿಗೆ, ಪಂಡಿತರಿಂದ ಮುಗ್ಧ ಜನರು ಶೋಷಣೆಗೆ ಒಳಗಾಗುವ ಬಗೆಗೆ ತಮ್ಮ ಪದಗಳಲ್ಲಿ ವಿಡಂಬಿಸಿದ್ದಾರೆ.

ಶರೀಫರು 'ಜಂಗಮ'ರನ್ನು ಪೂಜ್ಯ ಭಾವನೆಯಿಂದ ಕಾಣುತ್ತಿದ್ದರು. ಜಂಗಮನ ಪರಮ ಶ್ರೇಷ್ಠ ಕರ್ತವ್ಯ ಧರ್ಮಬೋಧೆ ಮತ್ತು ಲೋಕ ಕಲ್ಯಾಣ, ಆದರೆ ಮನೆ ಮನೆಗೂ ಹೋಗಿ ಧರ್ಮವನ್ನು, ನೀತಿಯನ್ನು ನೆಲೆಗೊಳಿಸುವ ಬದಲು ತನ್ನ ಉದರ ಪೋಷಣೆಗಾಗಿ ಡಾಂಭಿಕ ಜಂಗಮನ ವೇಷ ಧರಿಸಿ ಭಿಕ್ಷೆ ಬೇಡುವುದನ್ನು ಶರೀಫರು ಟೀಕಿಸಿದ್ದಾರೆ.

> **"...ಭಂಡ ಭವಿಗಳನು ಖಂಡಿಸದೇ ಸುಳ್ಳೇ**
> **ಹಿಂಡುಗಟ್ಟಿ ತಿರುಗಲೇನು ಫಲ?**
> **ತುಂಡುಗಂಬಳಿಯ ಹೊತ್ತು ಹೆಗಲಿನೊಳು**
> **ಮಂಡೆ ಬೋಳಿಸಿದರೇನು ಫಲ?**
>
> **ಪೊಡವಿಯೊಳು ಶಿಶುನಾಳಧೀಶನ**
> **ಅಡಿಯ ಪೂಜಿಸದಿರಲೇನು ಫಲ?**
> **ಕಡುತರದಾಸೆಯ ಸುಡದ ವಿರಕ್ತಿಯ**
> **ಪಡೆದು ಮಠದೊಳಿರಲೇನು ಫಲ"**

ಅಡ್ಡಪಲ್ಲಕ್ಕಿ ಮೆರವಣಿಗೆಯ ಆಚರಣೆಯನ್ನು ವಿರೋಧಿಸುತ್ತಾ ಶರೀಫರು ಹೀಗೆ ಹೇಳುತ್ತಾರೆ.

> **"ಒಂದು ಹೆಣಕೆ ಎರಡು ಹೆಣವು ಕುಣಿವುದ್ಯಾತಕೆ**
> **ಮುಂಗಃಗಾಣದಾಗಿ ತನ್ನೊಳು ದಣಿವುದ್ಯಾತಕೆ..."**

ಒಬ್ಬ ಮನುಷ್ಯ ಇನ್ನೊಬ್ಬರ ಹೆಗಲ ಮೇಲೆ ಕುಳಿತು ಸಾಗುವುದು ಸತ್ತಾಗ ಮಾತ್ರವೆಂಬ ಹೇಳಿಕೆಯನ್ನು ನೀಡಿ, ಮಹಾಸ್ವಾಮಿಗಳಿಗಾಗಿ ಇರುವ ಅಡ್ಡಪಲ್ಲಕ್ಕಿಯ ಉತ್ಸವವನ್ನು ಹೀಗಳೆದಿದ್ದಾರೆ.

> **"...ನಾಗಲಿಂಗಯೋಗಿ ತಾನು ತಿರುಗೋದ್ಯಾತಕೆ**
> **ದುರಿತ ಭವ ಯೋಗದಿಂದ ವಾದವ್ಯಾತಕೆ**
> **ವಾದದಿಂದ ಸಿದ್ಧಿಯೋಗ ಮಾಡುವುದ್ಯಾತಕೆ..."**

ಶರೀಫರು ಪವಾಡಗಳ ವಿರೋಧಿಯಾಗಿದ್ದರು. ನಾಗಲಿಂಗಪ್ಪನವರು ಮಾಡುವ ಪವಾಡಗಳನ್ನು ಒಪ್ಪದೆ ತಮ್ಮ ಅಭಿಪ್ರಾಯವನ್ನು ಶರೀಫರು ಅಡೆ-ತಡೆ ಇಲ್ಲದೆ ಹೇಳಿದ್ದಾರೆ. ಶರೀಫರು, ನಾಗಲಿಂಗ ಸ್ವಾಮಿಗಳಿಗೆ ತುಂಬಾ ಆತ್ಮೀಯರಾಗಿದ್ದರು. ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಪರಮಾರ್ಥ ವಿಚಾರಧಾರೆ ಒಂದೇ ಆಗಿದ್ದರೂ ನಿಷ್ಠುರವಾದಿ ಶರೀಫರು ವಿಷಯನಿಷ್ಠವಾಗಿ ಮಾತನಾಡುತ್ತಿದ್ದರು. ಮಾನವ ಶಕ್ತಿಗೆ ಮೀರಿದ ಅಲೌಕಿಕ ಪವಾಡಗಳನ್ನು ತೋರಿಸಿ, ಜನರನ್ನು ಭ್ರಮೆಗೆ ಒಳಗೊಳ್ಳಿಸುವುದರ ಬದಲು ಸರಳ ವಿಚಾರಗಳಿಂದ ಮಾರ್ಗದರ್ಶನ ಮಾಡಬೇಕೆಂದು ಸೂಚಿಸಿದ್ದಾರೆ.

ರಂಭಾಪುರಿ ಶಾಖಾ ಮಠದಲ್ಲಿ ನಡೆದ ಸ್ವಾಮಿಗಳೊಬ್ಬರ. ಪಾದಪೂಜೆಯ ಆಚರಣೆಯನ್ನು ಕುರಿತೂ ಹಾಡಿದ್ದಾರೆ. ಲಕ್ಷ್ಮೇಶ್ವರದ ಸಮೀಪದ ಸಂಶಿ ಗ್ರಾಮದಲ್ಲಿ ಆಗಾಗ ನಡೆಯುವ ಪಾದಪೂಜಾ ಸಮಾರಂಭವು ವೈಭವದಿಂದ, ವಿಜೃಂಭಣೆಯಿಂದ ಕೂಡಿತ್ತು ವೀರಸಿಂಹಾಸನಕ್ಕೆ ತಕ್ಕ ಸ್ವಾಮಿಯನ್ನು ಗೌರವಿಸದೆ, ಆಡಂಬರದಿಂದ ಮಾಡುವ ಈ ಪಾದಪೂಜೆಯಲ್ಲಿ ಶಾನುಭೋಗರು, ಗೌಡರು, ರೈತರು, ವ್ಯಾಪಾರಿಗಳು ಮತ್ತು ಸಾಮಾನ್ಯ ಜನರ ಮೆರೆಯುವ ಮೌಢ್ಯತೆಯನ್ನು, ಅಜ್ಞಾನವನ್ನು ವಿಶ್ಲೇಷಿಸಿದ್ದಾರೆ.

> "ಪಾದಪೂಜೆಯಾದುದೇನಿದು! ಪ್ರಭುವರನ ಕಾಣದೆ...
> ಭೂಮಿಯೊಳಗೆ ನಿಸ್ಸೀಮ ಪ್ರೌಢರು ಈ
> ಗ್ರಾಮದೊಳು ಶಾನಭೋಗ ಗೌಡರು ಬಹು
> ನಾಮ ಪಡೆದ ವಣಿಕ ಜನರು। ಪ್ರೇಮ ರೈತರು ಸಮಸ್ತರು
>
> ಕಾಮಿತಾರ್ಥ ಫಲವ ಬೇಡಿ
> ನೇಮಹಿಡಿದು ನಿಜಕೆ ನಿಲುಕದೆ
> ಎಮಗೆ ವಿಚಿತ್ರ ಗೂಸಮೂಹ ನೆರಪಿ ಸ್ವಾಮಿ ಇಲ್ಲದೆ"[೬]

ಅಧಿಕಾರ, ಸ್ಥಾನ-ಮಾನಕ್ಕಾಗಿ ನಡೆಯುವ ಕಾದಾಟವನ್ನು ಶರೀಫರು ಈ ಪದದಲ್ಲಿ ಹೀಗೆ ಹೇಳಿದ್ದಾರೆ. ವೀರಶೈವರಲ್ಲಿ ಹದಿನೆಂಟು ಪಂಗಡಗಳಿದ್ದು, ಮಠಸ್ಥರು, ಜಂಗಮರು, ವಿಭೂತಿಯವರು, ವಸ್ತ್ರದವರು, ಘಂಟೆಯವರು, ಜಾಗಟೆಯವರು, ರುದ್ರಾಕ್ಷಿಯವರು ಎಂಬುದಾಗಿ ಗುರುಪೀಠ-ವಿರಕ್ತಪೀಠಗಳು ತಮ್ಮ ಶ್ರೇಷ್ಠತೆಗಾಗಿ ಯಾವಾಗಲೂ ಕಲಹ ಮಾಡಿ ಆಡಂಬರಗಳ ಸಮಾರಂಭಗಳನ್ನು ಮಾಡುತ್ತಾರೆ. ಮಠದ ಗುರು-ಧ್ಯೇಯಗಳನು, ಗಾಳಿಗೆ ತೂರುವ ಜನರ ಮತು ಸಾಮಿಗಳ

ಮೌಢ್ಯತೆಯನ್ನು ಕಂಡಂತೆಯೇ "ಮಾನಿನಿ ಮಾತಾಡಬ್ಯಾಡಮ್ಮ" ಪದ್ಯದಲ್ಲಿ ವಿಶ್ಲೇಷಿಸಿದ್ದಾರೆ.

"...ಓದುವರು ಅಕ್ಷರವ ಇದರೊಳಗೆ
ವೇದಾಂತಮಾರ್ಗದ ಹಾದಿ ತಿಳಿಯದು ಶಾಸ್ತ್ರಿಯೆಂಬುವಗೆ
ಸಾಧಿಸಿತು ಪೂರ್ವದ ಕ್ರೋಧ ಅಂದಾಸಯ್ಯ ಗದಿಗೆಯ್ಯಗೆ
ಹಾದಿ ತಿಳಿಯದೆ ಹೀಂಗ ಜಂಗಮರಾದವರು ಬೈದಾಡುತಿರೆ
ಬಸವಾದಿ ಪ್ರಮಥರು ಮೆಚ್ಚಲರಿಯರು
ಮೇದಿನಿಗೆ ಮಹಾಚೋದ್ಯವಾಯಿತು"[೭೮]

ಎಂದು ವೀರಶೈವರ ಒಳಜಗಳವನ್ನು ಟೀಕಿಸಿದ್ದಾರೆ. ಪ್ರಭುಲಿಂಗಲೀಲೆಯ ಮಹತ್ವವನ್ನು ಕುರಿತು ಹೇಳುತ್ತ–

"ಓದುವವ್ಗ ಎಚ್ಚರ ಇರಬೇಕು
ಪ್ರಭುಲಿಂಗ ಲೀಲೆ..."[೭೯]

ಎಂಬ ಪದದಲ್ಲಿ ಎಚ್ಚರಿಕೆಯನ್ನು ನೀಡಿದ್ದಾರೆ.

ಮದುವೆ–ಸಂಸಾರ ಎಂಬ ಜಂಜಾಟವನ್ನು ಮಾಯದ ಮರಕ್ಕೆ ಹೋಲಿಸಿ, ಇಂಥ ಮಾಯದ ಮರವೇರಲು ಪ್ರೋತ್ಸಾಹಿಸುವ ಜನರನ್ನು ಅಜ್ಞಾನಿಗಳೆನ್ನುತ್ತಾರೆ. 'ಅಳಬೇಡಾ ತಂಗಿ ಅಳಬೇಡ' ಎಂಬ ಪದದಲ್ಲಿ–

"ಅಡಿಕೆಲೆ ಉಡಿಯಕ್ಕಿ ಹಾಕಿದರವ್ವಾ
ಒಳ್ಳೆ ದುಡಿಕೀಲಿ ಮುಂದಕ್ಕ ನೂಕಿದರವ್ವಾ
ಮಿಡಿಕ್ಯಾಡಿ ಮದುವ್ಯಾದಿ ಮೋಜು ಕಾಣವ್ವ ಮುಂದ
ಹುಡುಕ್ಯಾಡಿ ಮಾಯದ ಮರವೇರಿದೆವ್ವಾ"[೮೦]

ಎಂದು ಹಾಡುತ್ತ ಬಯಸಿ ಮದುವೆಯಾದ್ದರಿಂದ ಮೋಜು ಕಾಣೆಂದು ವಿಡಂಬಿಸಿದ್ದಾರೆ.

ಮೂರ್ತಿಪೂಜೆಯನ್ನು ವಿರೋಧಿಸುವ ಮುಸ್ಲಿಂ ತತ್ತ್ವವನ್ನು ಉಲ್ಲಂಘಿಸಿ ಮೊಹರಮ್ ಸಂದರ್ಭದಲ್ಲಿ ಮಸೂತಿಯೊಳಗೆ ಹಜರತ್ ಹಸೇನ ಹಜರತ್ ಹುಸೇನ ಹಾಗೂ ಅವರ ಸಂಬಂಧಿಗಳ ಸಂಕೇತರೂಪವಾಗಿ 'ಪಂಜಾ'ಗಳನ್ನಿಟ್ಟು ಹರಕೆ ಸಲ್ಲಿಸುವರು. ಅಲ್ಲದೆ, ಸಂಭ್ರಮದಿಂದ ಮೆರವಣಿಗೆ ಮಾಡುವುದು ಸಂಪ್ರದಾಯದ

೭೮. ಅದೇ, ಪು. ೧೩೯.
೭೯. ಅದೇ, ಪು. ೧೨೪.
೮೦. ಅದೇ, ಪು. ೧೩೪.

ಆಚರಣೆಯಾಗಿದೆ. ಹಬ್ಬದ ಮೂಲ ಆಶಯವನ್ನು ಮರೆತ ಇಂತಹ ಅರ್ಥವಿಲ್ಲದ ಬಾಹ್ಯ ಆಚರಣೆಗಳನ್ನು ಶರೀಫರು ವಿರೋಧಿಸಿದ್ದಾರೆ.

"ತನು ಮಸೂತಿಯೊಳು
ಪಂಚತತ್ತ್ವ ಪಂಜಾಯ ಕೂಡಿಸಿದ್ದೆನೋ"
...ಕೈಲಿ ಕವಾಲಿ ತಟ್ಟಿ
ತಗಡಿನ ಹಸ್ತವನಿಟ್ಟ
ಶಾಸ್ತ್ರ ಧರ್ಮವ ಬಿಟ್ಟ"[೮].

ಮತ್ತು

"ಅಲ್ಲಮ ಪ್ರಭುವಿನರಿಯದ ತುರುಕರು
ಪಂಜಾಪೂಜಾ ಮಾಡುವುದು ವ್ಯರ್ಥ"[೯]

ಎಂದು ವಿಡಂಬಿಸಿದ್ದಾರೆ.

ಮೊಹರಮ್ ಸಂದರ್ಭದಲ್ಲಿ ಫಕೀರರಾಗಿರುವೆನೆಂದು ಹೇಳಿ ಮನೆ ಮನೆಗೆ ಹೋಗಿ ಭಿಕ್ಷೆ ಬೇಡುವುದೇಕೆಂದು ಸವಾಲ್-ಜವಾಬ ಪದದಲ್ಲಿ ಪ್ರಶ್ನಿಸಿದ್ದಾರೆ.

"...ಸಕ್ಕರೆ ಓದಿಸಿ ಫಕ್ಕೀರನಾಗುವ
ಒಕ್ಕ ಒಕ್ಕ ಮನಿ ಭಿಕ್ಷೆ ಬೇಡುವುದೀಗ
"ಫಕೀರನಾಗುವ ಬಗಿ ತಿಳಿಸೆನಗ
ಭಿಕ್ಷಾ ಬೇಡುವುದ್ಯಾಕೋ ಮನಿ ಮನಿಗೆ"[೧೦]

ಎಂದು ಕಾಯಕ ತತ್ತ್ವವನ್ನು ವಿವರಿಸಿದ್ದಾರೆ. ಧರ್ಮದ ಸೋಗಿನಲ್ಲಿ ಭಿಕ್ಷೆ ಬೇಡುವ ಹೀನ ಸ್ಥಿತಿಗಿಂತ ದುಡಿದು ಜೀವನ ಮಾಡಬೇಕೆಂದು ಹೇಳಿದ್ದಾರೆ.

ಮೊಹರಮ್ ಹಬ್ಬದ ಪ್ರಮುಖ ಆಚರಣೆಗಳಾದ ದೇವರನ್ನು ಕೂಡ್ರಿಸುವುದು, ಸವಾರಿ ಎಬ್ಬಿಸುವುದು ಮತ್ತು ದೇವ ದೇವರಿಗೆ ಪರಸ್ಪರ ಭೇಟಿ ಮಾಡಿಸಿ ಹೊಳೆಗೆ ಕಳಿಸುವುದೆಲ್ಲಾ ಹುಡುಗಾಟವಾಗಿ ಶರೀಫರಿಗೆ ಕಾಣಿಸಿತು.

"ಅಲ್ಲಿದಾ ಹೇಳತಿತ್ತು
ಸತ್ತ ದೇವರ ಹೊತ್ತು
ತುರುಕರಿಗಿಲ್ಲ ಗೊತ್ತು
ಮಸಿದ್ಯಾಗ ಹುಡುಗಾಟಮಾಡಿ

ಮೊಹರಮ್ ಹೋಯಿತಲ್ಲ ಓಡಿ
ಶಿಶುನಾಳಧೀಶನ ನೋಡಿ"[೮೪]

ಎಂದು ಇಡೀ ಹಬ್ಬದ ಗೊಡ್ಡು ಆಚರಣೆಯನ್ನು ವಿಡಂಬಿಸಿದ್ದಾರೆ.

ವೇದಗಳನ್ನು, ಹದಿನೆಂಟು ಪುರಾಣಗಳನ್ನು ಓದಿ, ನೀತಿಶಾಸ್ತ್ರವನ್ನು ತಿಳಿದು, ಶ್ರೀಧರ ನಾಮದ ಮಹಿಮೆಯನ್ನು ಅರಿಯದೇ ಬೋಧಾನಂದದ ಸುಖವನ್ನು ಅನುಭವಿಸದ ವೈದಿಕರನ್ನು ಚಲುವಾದಿ ನಾಯಿ, ಮಾದಿಗರ ನಾಯಿ, ಮ್ಯಾದಾರನಾಯಿ ಮತ್ತು ಆರೇರ ನಾಯಿಗಳೆಂದು ಶರೀಫರು ಟೀಕಿಸಿದ್ದಾರೆ.

"ವೇದ ವಾದದಲಿ ಕುಣಿದಾಡುವ ನರ ಸಾಕಿದ
ಆದಿ ಚಲವಾದಿಯರ ನಾಯಿ
ವಾದನಿಟ್ಟು ಪದ ವೋದದಿ ಹಾಡುವ
ಮಾದಿಗರ ಮೋಹದ ನಾಯಿ
ಸಾಧನದಲಿ ಹದಿನೆಂಟು ಪುರಾಣವ
ಓದುವ ವಾಲ್ಮಿಕರ ನಾಯಿ
ಬೋಧಾನಂದದಿ ವೇದಾಂತವರಿಯದ
ಸಾಧುವೆಂಬುವ ಸೋನಗಾರ ನಾಯಿ
ಶ್ರೀಧರ ನಾಮವನರಿಯದ ವೈಷ್ಣವ
ಈ ಧರೆಯೊಳಗೆ ಮ್ಯಾದಾರ ನಾಯಿ

ಮಾತು ದಂತಕಥೆ ಗೀತ ಭಾಗವತಗಳ
ರೀತಿ ಹೇಳುವ ಜಾತಿಗರ ನಾಯಿ

ನೀತಿಯಿಂದ ನಿಜಶಾಸ್ತ್ರವ ತಿಳಿದು ಅವ
ಧೂತನಾದವನು ಆರೇರ ನಾಯಿ"[೮೫]

ಜನರ ಮೂಢನಂಬಿಕೆ, ಅಜ್ಞಾನವನ್ನು ಕುರಿತು ತಮ್ಮ ಲಾವಣಿಯಾದ "ದೇವರಾಟ ಕಣಗಂಡೆ ಸಂಶಿಯೊಳು" ಎಂಬ ಪದದಲ್ಲಿ ಘಟನಾತ್ಮಕ ಸನ್ನಿವೇಶವನ್ನು ಹೇಳಿದ್ದಾರೆ.

"ದೇವರಾಟ ಕಣಗಂಡೆ ಸಂಶಿಯೊಳು
ಹಾವು ಕಡಿದು ಸತ್ತಿತು ಹುಡುಗ
ವಸುಧೆಯೊಳಗೆ ಹೊಸಮಾತು ಕೌತುಕ
ಮುಸಲ್ಮಾನ ಜನ ಮಹಿಮಕುಲ

೮೪. ಅದೇ, ಪು. ೨೨೫.
೮೫. ಅದೇ, ಪು. ೨೫೦.

ಕೊಸರಿ ಬಂದು ಕಾಳೋರಗ ಕಚ್ಚಿತು
ಪಸುಮಗನೀತ ಪುಣ್ಯ ಫಲ
ವಿಷವು ಏರಿ ಅಪಹಾರಿದ ಹೆಣವನು
ಪಸನು ಮಾಡಿ ಹುಗಿದಂಥ ಸ್ಥಲ
ಉಸುಕು ಬೈಲು ಎರೆಮಣ್ಣಿನ ಗೋರಿಗೆ
ಶಿವ ಬ್ರಹ್ಮ ರಕ್ಕಸ ಜಾಲ
ಅಸಲ ತುರುಕರು ಜಾತಿ ಕರ್ಮದಲಿ
ಓದಿಕೆ ಮಾಡ್ಯಾರೋ ಬಿಸಬಿಲ್ಲಾ

ಪೂತು ಎತ್ತು ಬಂಡಿ ಈ ಕ್ಷಣಕ ಕೊಟ್ಟರೆ
ಜೋಡ ಕಂದೂರಿ ಮಾಡುವೆನೆಂದು
ಕಿವುಡ, ಕುರುಡ, ಕುಂಟ, ಮುಂಡ ಮುಕರ್‍ಯಾ
ಬೇಡ ಮೂಕ ಬಾಯ್ಬೇಕೆಂದು
ಬಾತ ಬಣಜಿಗರು ವ್ಯವಹಾರವಾಗಲೆಂದು
ಕೋತಗಸ್ತಾಂಗ ಕುಣಿಯುತ ಬಂದು
ಬಾಡ ಮಾಡುವ ಬಾಗವಾನರು
ನೀಡುತಿಪರು ಸಕ್ಕರಿ ಓಯ್ದು"[೨]

ದು ಹಾವು ಕಡಿದು ಸತ್ತರೆ ಪುಣ್ಯಫಲವೆಂದು, ತಿಳಿದ ಅಜ್ಞಾನಿ ಜನರು ಬದಲ್ಲಿ ಕಾಳೋಗರದಿಂದ ಕಚ್ಚಿಸಿಕೊಂಡು ತೀರಿ ಹೋದ ಹುಡುಗನ ನನ್ನು ಜಾಗೃತ, ಮಹಿಮೆಯ ಪುಣ್ಯ ಸ್ಥಳವೆಂದು ಭ್ರಮಿಸಿ, ಕಾಯಿ, ಸಕ್ಕರೆ ಓದಿಕೆಯೊಂದಿಗೆ ಪೂಜೆ ಮಾಡಿ ಹರಕೆ ಕಟ್ಟಿಕೊಳ್ಳುವ ಮೂಢ ಕಂಡು ಶರೀಫರು ಮರುಗುತ್ತಾರೆ.

ನೆ

ೀಫರು ಪಕ್ಷಪಾತಿಗಳಲ್ಲ, ನಿಷ್ಠುರವಾದಿಗಳು. ಬಾಹ್ಯಲೋಕದ, ನ್ಯರ ಲೋಪದೋಷಗಳನ್ನು ನೇರವಾಗಿಯೇ ಟೀಕಿಸಿದರು. ಸ್ವತಃ ತಮ ಮನಸಿನ ದೇಹ-ದೋಷಗಳು ಸರಿಕಾಣದಿದಲಿ ಖಂಡಿಸಿ

ಈ ಅಂಶಗಳು ಕಂಡುಬರುತ್ತವೆ. ಪಶುಪತಿಹಾಳದಿಂದ ನಡೆದು ಬರುವಾಗ ಕೆಸರಲ್ಲಿ ಜಾರಿಬಿದ್ದ ಶರೀಫರು ತಮ್ಮನ್ನು ತಾವೇ ವಿಡಂಬಿಸಿ ಕೊಳ್ಳುತ್ತಾರೆ. "ಬೀಳಬಾರದೋ ಕೆಸರಿನೊಳು ಜಾರಿ" ಎಂದು ಹಾಡುತ್ತ ಕೆಸರನ್ನು ಸಂಸಾರ ಸುಖಕ್ಕೆ ಹೋಲಿಸುತ್ತ, ಈ ಮಾಯಾ, ಮೋಹದ ಸಂಸಾರ ಕೆಸರಲ್ಲಿ ದೇವ–ದೇವತೆಗಳು ಸಹ ಬಿದ್ದು ಹೊರಬಾರಲಾಗದೇ ಒದ್ದಾಡಿರುವುದಾಗಿ ಹೇಳಿರುತ್ತಾರೆ. ತಾವು ಬಿದ್ದುದನ್ನು ನೆನಪಿಸಿಕೊಂಡು ಶಿಶುನಾಳಧೀಶನ ಕೃಪೆಯಿಂದ ಮತ್ತೆ ಹಸನಾಗಿರುವುದನ್ನು ಹೇಳಿ ಹಾಡಿರುತ್ತಾರೆ. ಸಂದರ್ಭಕ್ಕೆ ತಕ್ಕಂತೆ ಕಥೆಯನ್ನು ಕಟ್ಟಿ ಪದಗಳನ್ನು ರಚಿಸುವ ಶರೀಫರ ಸೃಜನಶೀಲತೆಯ ಸುಪ್ತಪ್ರಜ್ಞೆಯು ನಿಜಕ್ಕೂ ಮೆಚ್ಚುವಂತಹದು.

ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಒಲ್ಲದ ಮನಸ್ಸಿನಿಂದ ಕುಲಕರ್ಣಿ ಅವರಿಂದ ಪಡೆದ ಅರೆಪಾವ ಜೋಳ ಮತ್ತು ನಾಲ್ಕಾಣೆಯ ಹಣದಿಂದ ಅವಮಾನಿತರಾಗಿ ಶರೀಫರು ತಮ್ಮ ಮನಸ್ಸಿನ ತಾಕಲಾಟದಿಂದ ತಾವು ತಪ್ಪು ಮಾಡಿರುವುದಾಗಿ ಒಪ್ಪಿಕೊಳ್ಳುತ್ತಾರೆ.

"ಕುಲಕರ್ಣಿ ಕೊಟ್ಟ ಪಾವಲಿ ರೊಕ್ಕದಿಂದ
ಬ್ರಹ್ಮನೆಲೆಗಾಣಬುದ್ಹ್ಯಾಂಗ ಹೇಳಲೋ ಮನಸೇ
ಕಡು ಹರುಷದಿವಸ ಐಶ್ವರ್ಯ ಪಂಗಿನಲಿ
ಜಡಮತಿಗೆ ಯೋಗ್ಯವಾದೀತೆ ಮನಸೇ
ಸ್ಥೂಲ ತನುವಿನ ಕಾರ್ಯ ಮಾಳ್ಪ ಮಾಮಲೆದಾರ
ನಾಲಯುವ ಹೋಗಸಿದಲ್ಲೋ ಮನಸೇ"[೮]

ಸಂಸಾರದಿಂದಲೇ ಇಂಥ ಹೀನಾಯ ಸ್ಥಿತಿಯುಂಟಾಯಿತೆಂದು ಕೋಪದಿಂದ ಸಂಸಾರವನ್ನು 'ಕೆರವಿನಟ್ಟಿ'ಗೆ ಹೋಲಿಸಿ ವಿಡಂಬಿಸಿದ್ದಾರೆ.

ಶರೀಫರ ಎಲ್ಲ ಪದ್ಯಗಳು ಸಾಮಾಜಿಕ ನೆಲೆಯನ್ನು ಒಳಗೊಂಡು ಆಧ್ಯಾತ್ಮಿಕ ಗುರಿ ಹೊಂದುವ ಪದಗಳಾಗಿವೆ. ಸಾಮಾಜಿಕ ನೆಲೆಯಲ್ಲಿ ರಚಿತವಾಗಿರುವುದರಿಂದ ಪ್ರತಿಯೊಂದು ಪದಕ್ಕೂ ಸಾಮಾಜಿಕ ಘಟನೆ ಹಿನ್ನೆಲೆಯಾಗಿದೆ. ಅಂತೆಯೇ ಸಮಾಜದ ಎಲ್ಲ ಒಳಿತು–ಕೆಡಕುಗಳು ಶರೀಫರ ಹರಿತವಾದ ವಿಡಂಬನಾ ಖಡ್ಗಕ್ಕೆ ಬಲಿಯಾಗಿ ಸಮಾಜ ಸುಧಾರಣಾ ಕಾರ್ಯಕ್ಕೆ ವ್ಯಕ್ತಿಗತವಾಗಿ ದುಡಿದಿವೆ.

ಸಾಮಾಜಿಕ ಹೊಲಸನ್ನು ದಾಟಿ ಹೋಗಲು ಆಧ್ಯಾತ್ಮಿಕತೆಯ ಸಹಾಯ ಬೇಕು. ಆಧ್ಯಾತ್ಮ ಸಾಧಕನಿಗೆ ಸಮಾಜವು ಬದುಕಿನ ನೆಲೆಯಾದರೂ ಅದು

ಎರಡನೆಯ ಸ್ಥಾನ ಪಡೆಯುತ್ತದೆ. ಅಧ್ಯಾತ್ಮಕ್ಕೆ ಪ್ರಥಮ ಮನ್ನಣೆ ನೀಡುವ ಶರೀಫರು

"ಮೂಕಾಗಿರಬೇಕೋ ಜಗದೊಳು
ಜೋಕ್ಯಾಗಿರಬೇಕು
ಕಾಕು-ಕುಹಕರ ಸಂಗ ನೂಕಿರಬೇಕು
ಲೋಕೇಶನೊಳಗೇಕಾಗಿರಬೇಕು"[೨೦]

ಎಂದು ಹಾಡುತ್ತ ಲೋಕದ ಡೊಂಕನ್ನು ತಿದ್ದುವ ಬದಲು ತಮ್ಮ ತಮ್ಮ ಅಂತರಂಗದ ಮನವನ್ನು ಶುದ್ಧಿಗೊಳಿಸಿಕೊಳ್ಳಲು ಮೂಕನಂತೆ ಯತ್ನಿಸಬೇಕೆಂದು ಬಸವಣ್ಣನವರಂತೆ ನುಡಿದರು.

ಶರೀಫರು ತಮ್ಮ ತತ್ತ್ವಪದಗಳ ಮೂಲಕ ವ್ಯಕ್ತಿಯ ಮನಸ್ಸುಗಳನ್ನು ಶುದ್ಧಗೊಳಿಸಲು ಯತ್ನಿಸಿದರು. ಆ ಮೂಲಕ ಪರಿಸರವನ್ನು ಮತ್ತು ಸಮಾಜವನ್ನು ಹಸನುಗೊಳಿಸುವ ರೂವಾರಿಯಾದರು. ವಾಸ್ತವ ಬದುಕಿನ ಸಂದರ್ಭದಲ್ಲಿಯ ಪ್ರಸಂಗಗಳು ಅವರ ಪದ ಸೃಷ್ಟಿಗೆ ಕಾರಣವಾದವು. ಸೂಕ್ಷ್ಮ ಸಂವೇದನಾಶೀಲರಾದ ಶರೀಫರು ಸಮಾಜದಲ್ಲಿನ ಲೋಪದೋಷಗಳನ್ನು, ಅನೀತಿ, ಅನ್ಯಾಯಗಳನ್ನು ಕಂಡು ನೊಂದು ಸಂದರ್ಭಕ್ಕನುಸಾರವಾಗಿ ಪದ ಕಟ್ಟಿ ಹಾಡಿದರು.

ಶರೀಫರು ಸಾಮಾಜಿಕ ಕಳಕಳಿಯಿಂದ ಮೌಢ್ಯತೆ ಮತ್ತು ಡಂಭಾಚಾರಗಳನ್ನು ವಿರೋಧಿಸಿದರು. ಪ್ರಗತಿಪರ ವಿಚಾರ, ವೈಜ್ಞಾನಿಕ ಮನೋಭಾವ, ಜಾತ್ಯತೀತ ಮನೋಭಾವವನ್ನು ಶರೀಫರ ಪದಗಳಲ್ಲಿ ಗುರುತಿಸಬಹುದಾಗಿದೆ. ಅವರ ಸಾಮಾಜಿಕ ಪ್ರಜ್ಞೆಯನ್ನೂ ಪದಗಳಲ್ಲಿ ಕಾಣಬಹುದಾಗಿದೆ. ಸಮಾನತೆ ಮತ್ತು ಮಾನವೀಯತೆಯ ವ್ಯಕ್ತಿತ್ವವು ಶರೀಫರು ಅಪಾರ ಜೀವನಾನುಭವವನ್ನು ಪಡೆದವರು. ತಮ್ಮ ಅನುಭವದಿಂದ ಪಡೆದ ಅನುಭಾವದಿಂದ ಜೀವನವನ್ನೇ ತತ್ತ್ವಪದವಾಗಿಸಿಕೊಂಡು ಬದುಕಿನುದ್ದಕ್ಕೂ ಹಾಡಿದರು. ಅಂತೆಯೇ ಅವರ ಹಾಡುಗಳಲ್ಲಿ ಅಂದಿನ ಸಾಮಾಜಿಕ ವ್ಯವಸ್ಥೆ, ಸಮಾಜದ ಸ್ಥಿತಿ-ಗತಿ, ಜನರ ಮನೋಭಾವ, ವರ್ಗತಾರತಮ್ಯ, ಜಾತೀಯತೆ, ಧರ್ಮಾಧರ್ಮಗಳ ಸಂಘರ್ಷ, ಸಾಮರಸ್ಯತೆ, ಬದುಕಿನ ಮೌಲ್ಯ, ಪರಕೀಯರ ಆಗಮನ, ರಾಜಕೀಯದಲ್ಲಾದ ಏರು-ಪೇರು, ಜನಜೀವನದ ಮೇಲಾದ ಪರಿಣಾಮಗಳ ಸ್ಪಂದನವಿದೆ. ಜನಸಾಮಾನ್ಯರ ಭಾಷೆಯು, ದೇಶೀಯ ಸಂಸ್ಕೃತಿಯನ್ನು ಪ್ರತಿಪಾದಿಸಿದ ಒಬ್ಬ ಶ್ರೇಷ್ಠ ಜನಪದ ತತ್ತ್ವ ಪದಕಾರರಾಗಿದ್ದಾರೆ.

ಬದುಕಿನ ಎಲ್ಲಾ ಆಯಾಮಗಳನ್ನು ಅವರ ತತ್ತ್ವಪದಗಳು ಒಳಗೊಂಡಿವೆ. ಶರೀಫರು ಯಾವುದೇ ಜಾತಿ, ಮತ, ಪಂಥ ವರ್ಗಗಳೆಂಬ ಕಟ್ಟುಪಾಡುಗಳ ಗೊಂದಲಕ್ಕೆ ಬೀಳದೆ ಸಮಾಜಮುಖಿಯಾದ ಶುದ್ಧ ಭಾವನೆಗಳಿಗೆ ಸ್ಪಂದಿಸಿದರು. ವ್ಯಕ್ತಿಯ ಶುದ್ಧೀಕರಣದಿಂದ ಸಮಾಜ ಶುದ್ಧೀಕರಣ ಮಾಡಿದರು.

ಒಂದೊಂದು ತತ್ತ್ವಪದಗಳಲ್ಲೂ ಒಂದೊಂದು ಆಶಯವನ್ನು ಕಾಣಬಹುದು. ದೇಶೀಯ ಮತ್ತು ಪ್ರಾದೇಶಿಕ ಕುಲಕಸುಬುಗಳನ್ನು ಗೌರವವಿರುವುದರ ಮೂಲಕ ಅದರಿಂದಾಗಿ ಆರ್ಥಿಕ ಸುಧಾರಣೆಯಾಗುವುದಲ್ಲದೆ ಸಮಾಜದ ಸುಸ್ಥಿತಿಯಲ್ಲಿರುತ್ತೆಂದು ಭಾವಿಸಿದ್ದರು. ಆ ಮೂಲಕ ಜನರಿಗೆ ಜಾಗೃತಿಯನ್ನು ಮೂಡಿಸಿದರು. ಶರೀಫರು ದೇಶ, ಸಮಾಜ, ಕುಟುಂಬಗಳ ಬಗೆಗಿನ ಕಾಳಜಿ, ಅವುಗಳ ಆಗು–ಹೋಗುಗಳನ್ನು ಕುರಿತು ಮಾಡಿದ ಚಿಂತನೆ ಎಲ್ಲ ಕಾಲಕ್ಕೂ ಪ್ರಸ್ತುತವಾದುದು. ಜಾತ್ಯತೀತ ಮನೋಧರ್ಮದ ಹರಿಕಾರರಾದ ಶರೀಫರು ಸಮನ್ವಯ ಸಂಸ್ಕೃತಿಯ ಪ್ರತಿಪಾದಕರು. ನಿಜವಾದ ಸಂತನಿಗೆ ಇರಬೇಕಾದ ಅರ್ಹ ಗುಣಗಳನ್ನು ಅವರ ವ್ಯಕ್ತಿತ್ವದಲ್ಲಿ ಮನಗಾಣಬಹುದು. ಅವರು ಯಾವುದೇ ಧಾರ್ಮಿಕ ಕಟ್ಟುಪಾಡುಗಳಿಗೆ ಸಿಲುಕದ ಮಹಾ ಮಾನವತಾವಾದಿ ಆಗಿದ್ದರು. ಸಮಾಜ ಸುಧಾರಕರಾಗಿ, ಸಾಹಿತಿಯಾಗಿ ಅವರು ರಚಿಸಿರುವ ತತ್ತ್ವಪದಗಳು ಹನ್ನೆರಡನೆಯ ಶತಮಾನದ ಅಲ್ಲಮಪ್ರಭು, ಬಸವಣ್ಣ ಮೊದಲಾದವರ ವಚನಗಳಿಗೆ ಸಮೀಪವಾಗಿವೆ.

ಅಧ್ಯಾಯ ೩

ಶರೀಫರ ತತ್ತ್ವಪದಗಳಲ್ಲಿ ವೈಚಾರಿಕತೆ ಮತ್ತು ಪಾರಮಾರ್ಥಿಕತೆ

೩.೧ ಶರೀಫರ ತತ್ತ್ವಪದಗಳಲ್ಲಿ ಜೀವನ ಮೌಲ್ಯಗಳು

ಸಾಹಿತ್ಯದ ಪರಮ ಉದ್ದೇಶ ಕಲೆ ಮತ್ತು ಸಾಮಾಜಿಕ ಕಾಳಜಿಯಾಗಿದೆ. ಶರೀಫರ ತತ್ತ್ವಪದಗಳು ಸಾಹಿತ್ಯದ ಮತ್ತು ಸಂಗೀತದ ಕಲೆಯಾಗಿ ಸೃಷ್ಟಿಗೊಂಡರೆ, ಅವುಗಳಲ್ಲಿರುವ ಮೌಲ್ಯಗಳು ಮಾನವ ಕುಲದ ಕಾಳಜಿಯಾಗಿ ಹೊರಹೊಮ್ಮಿವೆ.

'ಮೌಲ್ಯ' ಎಂದರೆ ಬೆಲೆ. 'ಜೀವನ ಮೌಲ್ಯ' ಎಂದರೆ ಮನುಷ್ಯನು ತನ್ನ ಬದುಕಿನಲ್ಲಿ ಯಾವುದಕ್ಕೆ ಬೆಲೆ ಕೊಡುತ್ತಾನೋ, ಯಾವುದನ್ನು ಪ್ರಮುಖವೆಂದು ಸ್ವೀಕರಿಸುತ್ತಾನೋ ಅದು ಜೀವನದ ಮೌಲ್ಯವಾಗಿರುತ್ತದೆ.

ಅಂದಂದಿನ ಕಾಲಕ್ಕೆ ಪರಿಸರಕ್ಕೆ ಅನುಗುಣವಾಗಿ ಅಲ್ಲಲ್ಲಿಯ ಜೀವನ ಕ್ರಮಕ್ಕೆ ಸೂಕ್ತವೂ, ಪ್ರಾಮುಖ್ಯವೂ ಎನಿಸುವಂತಹ ಸ್ವತಃ ಜನರೇ ನಿರ್ಧರಿಸಿಕೊಂಡ ಕೆಲವು ಸಮೂಹ ನಿಯಮಗಳು, ಅಂದಿನ ಕಾಲದ ಜೀವನದ ಮೌಲ್ಯಗಳಾಗುತ್ತವೆ. ಜೀವನದ ರೀತಿಗಳು, ಸತ್ಯಶೀಲ ಮಾರ್ಗಗಳು, ಸಾಮಾಜಿಕ ಪರಂಪರೆಗಳು, ಜೀವನದ ಧ್ಯೇಯ ಧೋರಣೆಗಳು, ಸಮಾಜದಲ್ಲಿ ಜೀವಕಳೆ ತುಂಬಲು ಸಹಾಯಕವಾಗುವ ಸಾಮಾಜಿಕ ಹಾಗೂ ಆದರಣೀಯ ಅಂಶಗಳನ್ನು ಅಂದಂದಿನ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ. ಇವುಗಳ ಮುಖಾಂತರ ಜೀವನ ಮೌಲ್ಯಗಳು ವ್ಯಕ್ತವಾಗುವವು. ಈ ಮೌಲ್ಯಗಳು ಆದರ್ಶವಾಗಿದ್ದು, ಆಧ್ಯಾತ್ಮಿಕವಾಗಿವೆ.

ವಿಚಾರದಲ್ಲಿ, ಕಾರ್ಯದಲ್ಲಿ, ಕಲ್ಪನೆಯಲ್ಲಿ ಶ್ರೇಷ್ಠನಾದ ಮಾನವನು ಕೇವಲ ತನ್ನ ಸ್ವಾರ್ಥ ಸಾಧನೆಯನ್ನು ಮಾಡಿಕೊಳ್ಳದೇ ಸಮಾಜದ ಹಿತಕ್ಕಾಗಿ, ಸಕಲ ಜೀವಿಗಳ ಪ್ರಗತಿಗಾಗಿ ಸೇವಾಕಾರ್ಯ ನಿರ್ವಹಿಸಿ ತನ್ನ ಇಹದ ಜೀವನವನ್ನು ಸಾರ್ಥಕ ಮಾಡಿಕೊಳ್ಳುವನು. ತನ್ನ ಅನುಭವದಿಂದ ನಶ್ವರತೆಯನ್ನು ಮನಗಂಡು, ಲೌಕಿಕ ಬದುಕಿಗೆ ಅಂಟಿಕೊಳ್ಳದೇ, ಪರಮಾರ್ಥದಲ್ಲಿ ಭಗವಂತನನ್ನು ಪೂಜಿಸಿ, ಅಂತರಂಗ, ಬಹಿರಂಗ ಶುದ್ಧಿಯಿಂದ ಪರಿಶುದ್ಧನಾಗಿ ದೇವರಕೃಪೆಗೆ ಪಾತ್ರನಾಗಿ ಇಹದಲ್ಲಿ ಸಾರ್ಥಕತೆಯನ್ನು ಪಡೆದುಕೊಂಡಂತೆ ಪರದಲ್ಲಿಯೂ ಮೋಕ್ಷವನ್ನು

ಪಡೆಯಬೇಕೆನ್ನುವ ಧ್ಯೇಯವೇ ಜೀವನದ ಮುಖ್ಯ ಮೌಲ್ಯವಾಗಿದೆ. ಪ್ರಪಂಚದಲ್ಲಿ ಸಾರ್ಥಕತೆಯನ್ನು ಪಡೆಯಲು ಸಹಾಯಕವಾಗುವ ಮೌಲ್ಯಗಳನ್ನು 'ಪ್ರಾಪಂಚಿಕ ಮೌಲ್ಯ'ಗಳೆಂದು, ಪರದಲ್ಲಿ ಮೋಕ್ಷ ಪಡೆಯಲು ಸಾಧನವಾಗುವ ಮೌಲ್ಯಗಳನ್ನು 'ಪರಮಾರ್ಥ ಮೌಲ್ಯ'ವೆಂದು ಗುರುತಿಸಬಹುದಾಗಿದೆ.

ಭಕ್ತನಾದವನು ದೇವರಲ್ಲಿ ಅನುರಕ್ತನಾಗಿ, ಸಂಯಮಿಯಾಗಿ, ವಿವೇಕಿಯಾಗಿ, ತತ್ತ್ವನಿಷ್ಠನಾಗಿ, ಸಮಾಜದಲ್ಲಿ ಅತ್ಯುತ್ತಮ ವಿಚಾರಗಳನ್ನು ಪ್ರತಿಪಾದಿಸುವುದರಿಂದ ಆದರ್ಶ ನಾಗರಿಕನಾಗುವನು. ಹಾಗಾಗಿ ವೈಚಾರಿಕತೆ ಮತ್ತು ಪಾರಮಾರ್ಥಿಕತೆಗಳು ತೀರ ಹತ್ತಿರ ಬಂದು ಒಂದಕ್ಕೊಂದು ಪೂರಕವಾಗಿ ಜೊತೆಯಲ್ಲಿಯೇ ಸಾಗುತ್ತವೆ. ನೀತಿಯುತ ಮೌಲ್ಯಯುಕ್ತ ವೈಚಾರಿಕತೆಯೇ ಇಹದ ಬದುಕನ್ನು ಸಾರ್ಥಕಗೊಳಿಸಿ ಪರವನ್ನು ಸೇರುವ ಮಾರ್ಗವಾದುದರಿಂದ ಶರೀಫರಿಗೆ ಪ್ರಾಪಂಚಿಕ, ಪಾರಮಾರ್ಥಿಕ ಬೇರೆ ಬೇರೆಯಾಗಿರದೇ ಒಂದೇ ಆಗಿದೆ. ಆದ್ದರಿಂದ ಅವರು ಲೌಕಿಕ ಸನ್ನಿವೇಶ, ಘಟನೆ, ವಸ್ತುಗಳ ಮೂಲಕ ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಮೌಲ್ಯಗಳನ್ನು ಬೋಧಿಸಿದರು.

ಶರೀಫರ ತತ್ತ್ವಪದಗಳಲ್ಲಿ ಅವರ ಸಾರ್ಥಕ ಜೀವನದ ಸೂಕ್ಷ್ಮ ಚಿತ್ರಣವು ಹಂತಹಂತವಾಗಿ ಕಾಣಿಸುತ್ತದೆ. ಸಾಧನೆಯಲ್ಲಿ ತೊಡಗಿದ ಜೀವನಿಗೆ ಇಹದ ಭೋಗೋಪಭೋಗಗಳು ಆಕರ್ಷಣೆಯನ್ನು ಒಡ್ಡಿದಾಗ, ಸಂಸಾರ ಬಂಧನಕ್ಕೆ ಸಿಲುಕುವುದು ಸಹಜವಾಗಿದೆ. ಶರೀಫರು ಅವುಗಳನ್ನೆಲ್ಲಾ ಗೆದ್ದು ನಿಂತು ಸಾಧನೆಯ ಉತ್ತುಂಗಕ್ಕೇರಿದರು. ಸಾಧಕನಿಗೆ ಇರುವ ಅಡ್ಡಿ ಆತಂಕಗಳನ್ನು ಗೆದ್ದ ಪರಿಯನ್ನು ತಮ್ಮ ಪದಗಳಲ್ಲಿ ವರ್ಣಿಸಿದ್ದಾರೆ.

"ಹಾವು ತುಳಿದೇನೆ ಮಾನಿನಿ
ಹಾವು ತುಳಿದೇನೇ

ಹಾವು ತುಳಿದು ಹಾರಿ ನಿಂತೆ
ಜೀವ ಕಳವಳಿಸಿದೆಯೇ ಗೆಳತಿ
ದೇಹತ್ರಯದ ಸ್ಮೃತಿಯು ತಪ್ಪಿ
ದೇವಾ ನೀನೇ ಗತಿಯು ಎಂದು

ಬೋಧಾನಂದವಾಗಿ ಬರಲು
ಹಾದಿಯೊಳಗೆ ಮಲಗಿ ಇರಲು
ಪಾದದಿಂದ ಪೊಡವಿಗೊತ್ತಿ
ನಾದಗೊಳಿಸಿತು ನಿಜದಿ ನೋಡಿ

ಘೋರತರದ ಉರಗ ಅದರ
ಕ್ಕೋರೆಹಲ್ಲು ಮುರಿದೆ ತ್ವರಿತದಿ......
...............ಕತ್ತಲೊಳಗೆ ಬಂದು ಕಾಲಿಗೆ
ಸುತ್ತಿಕೊಂಡಿತು ಸಣ್ಣನಾಗರ"[7]

ಪ್ರಸ್ತುತ ಈ ಪದದಲ್ಲಿ ಜೀವವು ಸಾಧನಾ ಮಾರ್ಗಕ್ಕೆ ಅಡ್ಡಿತರುವ ಲೌಕಿಕ ಭೋಗೋಪಭೋಗಗಳನ್ನು ಮೆಟ್ಟಿ ನಿಂತು ಅಧ್ಯಾತ್ಮದ ಎತ್ತರಕ್ಕೆ ಏರುವ ಪರಿಯನ್ನು ವಿವರಿಸಲಾಗಿದೆ.

ಪರಮಾರ್ಥ ಸಿದ್ಧಿಯಲ್ಲಿ ತೊಡಗಿದ ಜೀವವು ಪ್ರಾಪಂಚಿಕ ಸುಖದ ಆಕರ್ಷಣೆಗೆ ಒಂದು ಕ್ಷಣವಾದರೂ ಸೋತು ಮರುಳಾಗಿ ಮೋಹಗೊಳ್ಳುವುದು ಸಹಜವಾಗಿದೆ. ಆ ಸೋತ ಕ್ಷಣದಲ್ಲಿ ದೇಹ, ಮನಸ್ಸಿನ ಮೇಲಾದ ಪರಿಣಾಮವನ್ನು ಶರೀಫರು ಗಾಬರಿ, ಕಳವಳ, ಮೈಮರೆವುಗಳಿಂದ ವರ್ಣಿಸಿದ್ದಾರೆ. ಮಾನವ ಸಹಜವಾದ ಲೌಕಿಕ ಬಯಕೆಗಳನ್ನು ಹೊಂದಿ, ಅನೀತಿಯಿಂದ ಬಯಕೆ ಈಡೇರಿಸಿಕೊಳ್ಳುವುದು ತಪ್ಪೆಂದು, ತಕ್ಷಣವೇ ಎಚ್ಚೆತ್ತು, ಅದನ್ನು ಮೆಟ್ಟಿ ನಿಂತ ಶರೀಫರಲ್ಲಿ ಆಧ್ಯಾತ್ಮಿಕ ಸದಾಕಾಲ ಜಾಗೃತವಾಗಿರುವುದನ್ನು, ಹಂತ ಹಂತವಾಗಿ ಲೌಕಿಕವನ್ನು ಗೆಲ್ಲುತ್ತಿರುವುದನ್ನು ಕಾಣುತ್ತೇವೆ. ಸಂಯಮಿಯಾದ ಶರೀಫರು ಹಾವು ಕಡಿತದಿಂದ ತಪ್ಪಿಸಿಕೊಳ್ಳುವುದಷ್ಟೇ ಅಲ್ಲ, ಅದು ಎಂದೆಂದಿಗೂ ಕಚ್ಚದಿರುವಂತೆ ಅದರ ಕೋರೆಹಲ್ಲನ್ನು ಮುರಿಯುತ್ತಾರೆ. ಇಂಥ ಶಕ್ತಿ, ಸಾಮರ್ಥ್ಯ ಶರೀಫರಿಗೆ ದೊರೆತುದು ಶಿಶುನಾಳಧೀಶನ ನಿತ್ಯ ಸೇವೆಯಿಂದ, ಭಕ್ತಿಯಿಂದ. ಕುಂಡಲೀನಿ ಶಕ್ತಿಯನ್ನು ಜಾಗೃತಗೊಳಿಸಿಕೊಂಡಿದ್ದ ಅಧ್ಯಾತ್ಮ ಶರೀಫ ಎಂಬ ಹಾವು ಸತತವಾಗಿ ದೇವರನ್ನು ಧ್ಯಾನಿಸುವುದರಿಂದ ಲೌಕಿಕ ಭೋಗಾಸಕ್ತ ವಿಷಯಗಳಿಂದ ದೂರವಿರಲು ಸಾಧ್ಯವಾಯಿತು. ಭೋಗದ ಹಾವು ಕೊನೆಗೆ ಸಣ್ಣ ನಾಗರದಂತೆ ಸೋತು ಶರಣಾಗಿ ಶರೀಫರ ಕಾಲಿಗೆ ಸುತ್ತಿಕೊಂಡದ್ದು, ಅವರು ಲೌಕಿಕವನ್ನು ಗೆದ್ದು ಪರಮಾರ್ಥ ಸಾಧಿಸಿದರ ತಾತ್ಪರ್ಯವಾಗಿದೆ. ವಿಷಯಗಳಲ್ಲಿ ನಿರಾಸಕ್ತಿ, ಸಂಯಮ, ದೃಢಮನಸ್ಸು ಪ್ರಾಪಂಚಿಕ ಮೌಲ್ಯಗಳಾದರೆ ಸೇವೆ, ಭಕ್ತಿ, ಮುಕ್ತಿ ಸಾಧನೆಗಳು ಪರಮಾರ್ಥ ಮೌಲ್ಯಗಳಾಗಿ ಈ ಪದದಲ್ಲಿ ಬಂದಿವೆ.

ಮಾನವನು ಲೌಕಿಕದಲ್ಲಿ ಕಷ್ಟಗಳಿಂದ ಪಕ್ವವಾಗಿ, ಪಾತಕಗಳಿಂದ ಮುಕ್ತನಾದರೆ, ಅವುಗಳ ಅರಿವು ಪರಮಾರ್ಥ ಪ್ರೇರಣೆಯಾಗಿ ಪರಿಣಮಿಸುವುದು. ಅದಕ್ಕೆಂದೇ ಶರೀಫರು ಲೌಕಿಕದ ಎಲ ಕಷಗಳನು. ಆಹಾನಿಸುತಾರೆ.

"ಎಂತೆಂತಾದೆಲ್ಲಾನು ಬರಲಿ
ಚಿಂತೆಯೆಂಬೋದು ನಿಜವಾಗಿರಲಿ
ಅಂತರಂಗದಿ ಗುರುವಿನ ಧ್ಯಾನವು
ಸಂತತ ಕಾಲದಿ ತಾ ನೆಲೆಸಿರಲಿ

ಬಡತನವೆಂಬುದು ಕಡೆತನಕಿರಲಿ
ವಡವಿ ವಸ್ತ್ರ ಹಾಳಾಗಿ ಹೋಗಲಿ
ಮಡದಿ ಮಕ್ಕಳು ಸುಡುಗಾಡ ಸೇರಲಿ
ಬಡಿವಾರದ ಬಾಂಧವರು ಮಡಿಯಲಿ"

"ದೀರ್ಘವಾದ ಈ ಪದದ ಶಿಶುನಾಳಧೀಶನ ಭಜಿಸುವ ಆಶೆಯೊಂದು ತಾ ನಿಜವಾಗಿರಲಿ"[೨] ಪದದಲ್ಲಿ ಶರೀಫರು ಸಂಕಟಗಳನ್ನು ಬರಮಾಡಿ ಕೊಳ್ಳುತ್ತಲೇ ಹೋಗುತ್ತಾರೆ. ಲೌಕಿಕವಲ್ಲಿಯ ಯಾವ ಕಾರ್ಯವಾಗಲಿ, ಯೋಚನೆಯಾಗಲಿ ಶಾಶ್ವತವಲ್ಲ. ಆದರೆ ಲೌಕಿಕ ಕ್ಷಣಿಕ ಸುಖದ ಆಕರ್ಷಣೆಯು ಅಯಸ್ಕಾಂತದಂತೆ ಸೆಳೆದು ಬಿಡದೇ ಅಂಟಿಕೊಳ್ಳುತ್ತದೆ. ಪ್ರಾಪಂಚಿಕ ಸುಖಾನುಭವಕ್ಕಿಂತ ಕಷ್ಟ ಕೋಟಲೆಗಳ ದುಃಖವು ಸತತವಾಗಿ ಬಂದರೆ, ಮಾನವನು ಸಹಜವಾಗಿ ಬದುಕಿನಲ್ಲಿ ನಿರಾಸಕ್ತಿ ಹೊಂದಿ ಲೌಕಿಕದ ನಶ್ವರತೆಯನ್ನು ಬೇಗನೆ ಅರಿತುಕೊಂಡು ವ್ಯಾಮೋಹ ನಶಿಸಿ, ನಿಜ ಸುಖದ ಅನುಭವಕ್ಕಾಗಿ ಹಂಬಲಿಸುವನು. ಬಡತನ, ಕಳ್ಳತನ, ಷಂಡತನ, ಅವಮಾನ, ಅಪಹಾಸ್ಯ, ಅಪನಂಬಿಕೆ, ಸ್ವಾರ್ಥ, ಜಾಣತನ, ದ್ವೇಷ, ವಚನ ಭ್ರಷ್ಟತೆ, ಸಾವು, ನೋವು, ದುಃಖ ಇವೆಲ್ಲವೂ ಲೌಕಿಕ ಸ್ಥಿತಿಗಳು. ಇವುಗಳನ್ನು ಮೆಟ್ಟಿ ನಿಂತು ಗೆಲ್ಲುವುದೇ ಪ್ರಾಪಂಚಿಕ ಮೌಲ್ಯವಾದರೆ ನಿಜ ಸುಖವಾದ ಪರಮಾರ್ಥದ ಹಂಬಲವು ಆಧ್ಯಾತ್ಮಿಕ ಮೌಲ್ಯವಾಗಿದೆ.

ಪರಮಾರ್ಥದ ಸೌಧವು ಸಾಮಾಜಿಕ ನೆಲೆಗಟ್ಟಿನ ಮೇಲೆ ನಿಂತಿರುವುದರಿಂದ ಸಮಾಜದ ಭದ್ರತೆ, ಸಮಾಜದ ಸ್ವಾಸ್ಥ್ಯ ತೀರ ಅವಶ್ಯಕವಾಗಿದೆ. ಇದಕ್ಕೆ ಪೂರಕವಾಗುವ ಎಲ್ಲ ಅಂಶಗಳು ಪ್ರಾಪಂಚಿಕ ಮೌಲ್ಯಗಳಾಗುವವು. ಅನಾದರ, ಮೂರ್ಖತನ, ವ್ಯಸನ, ನಿರ್ಲಕ್ಷ್ಯ, ಪುಂಡತನ, ಭಂಡಾಟ, ಮದ್ಯ ಸೇವನೆಗಳೆಲ್ಲ ದುಷ್ಕೃತ್ಯಗಳಾಗಿದ್ದು, ಇವುಗಳಿಂದ ದೂರವಾಗಿ ಸರಳತೆ, ಸದ್ಗುಣ, ಸಜ್ಜನಿಕೆಗಳನ್ನು ಬೆಳೆಸಿಕೊಳ್ಳುವುದು ಇವು ಪ್ರಾಪಂಚಿಕ ಮೌಲ್ಯವಾಗಿವೆ. ಇವುಗಳ ಹಿನ್ನೆಲೆಯಲ್ಲಿಯೇ ಆಧ್ಯಾತ್ಮಿಕ ಚಿಂತನೆ ಪರಮಾರ್ಥದ ಮೌಲ್ಯವಾಗಿದೆ.

ಅಂತರಂಗ ಬಹಿರಂಗ ಶುದ್ಧಿಯಿಂದಲೇ ಮಾನವ ಜನ್ಮವು ಬದುಕಿನ ಸಾರ್ಥಕತೆಯನ್ನು ಪಡೆಯುವುದು. ಈ ಪರಮ ಶುದ್ಧಿಯಿಂದಲೇ ದೇವರನ್ನು ಒಲಿಸಿಕೊಳ್ಳಲು ಸಾಧ್ಯವೆಂದು ಬಸವಣ್ಣನವರು ಹೇಳಿದ್ದಾರೆ. ಪ್ರಪಂಚದಲ್ಲಿ ನಡೆ-ನುಡಿಯ ಮೌಲ್ಯವನ್ನು ಶರೀಫರು ಹೇಳುತ್ತ ದೇವಸನ್ನಿಧಿಯಲ್ಲಿ ಭೇದ-ಭಾವವನ್ನಳಿದು, ಎಲ್ಲರಲ್ಲಿ ಆದರಾಭಿಮಾನ ಹೊಂದಿ, ತನ್ನಂತೆ ಪರರನ್ನು ಬಗೆಯಬೇಕೆಂಬುದನ್ನು ತಿಳಿಸುತ್ತಾರೆ.

"ಸತೆ ನುಡಿಯಿಂದ ನಾವು ನಡೆಯಬೇಕಣ್ಣ
ದೇಹವಿದು ತಮ್ಮಾ ನಡುವೆ ಬಿದ್ದು ಹೋಗತೈತಣ್ಣ

ಭಜನೆಯ ಮಾಡ್ವಾಗ ಭೇದಭಾವ ಬಿಟ್ಟು ಭಜಿಸಬೇಕಣ್ಣ
ಅಣ್ಣ ತಮ್ಮರೆಂದು ತಿಳಿಯಬೇಕಣ್ಣ
ಪರ ಹೆಣ್ಣಮಕ್ಕಳು ಎದುರಿಗೆ ಬಂದರೆ ನಜರಿಡಬೇಡಣ್ಣ
ನಿನ್ನ ಭಗಿನಿಯರೆಂದು ಅರಿಯಬೇಕಣ್ಣ

ಪಥದೊಳು ಶಿವನಾಳಧೀಶನ ದಯವ ಗಳಿಸಬೇಕಣ್ಣ
ಗುರುಗೋವಿಂದನ ಧ್ಯಾನ ಮಾಡಣ್ಣ"[1]

ಸೋದರತೆ, ಸಹಕಾರ ಮನೋಭಾವದಿಂದ ಅಂತರಂಗ ಶುದ್ಧಿಗೈದು ದೇವರನ್ನು ಭಜಿಸಿದರೆ ದೇವರ ಕೃಪೆಗೆ ಒಳಗಾಗುವರು. ಪರಸ್ತ್ರೀಯರನ್ನು ಸೋದರಿ ಭಾವದಿಂದ ಕಂಡು ನಡೆ-ನುಡಿಯಲ್ಲಿ ಕಪಟವಿಲ್ಲದಂತೆ ಇರಬೇಕು.

ನೆರೆಯವರೊಂದಿಗೆ ಸೋದರ ಭಾವ, ಪರನಾರಿ ಗೌರವಗಳು ಸಾಮಾಜಿಕ ಮೌಲ್ಯಗಳು ಇವುಗಳ ಜೊತೆಗೆ ದೇವರ ಕರುಣೆಗೆ ಪಾತ್ರವಾಗುವ ಪಾರಮಾರ್ಥಿಕ ಮೌಲ್ಯವನ್ನು ಹೇಳಿದ್ದಾರೆ.

ನಡೆ-ನುಡಿ ಶುದ್ಧವಾದ ಲೌಕಿಕ ಮೌಲ್ಯದೊಂದಿಗೆ ಏಕಚಿತ್ತದಿಂದ ಆಧ್ಯಾತ್ಮಿಕ ಮೌಲ್ಯವನ್ನು ಪಡೆಯಬಹುದೆಂದು ಹೇಳಿದ್ದಾರೆ.

"ಕುಂಟ ಕುರುಡರೆಂಟು ಮಂದಿ ರಂಟೆ ಹೊಡೆಯಲೋ
ಸುಂಟರಗಾಳಿಗೆ ಸಿಗದೆ ಈ ಲೋಕದ ರಂಟೆ ಹೊಡೆಯಲೋ
ಸುಜ್ಞಾನವೆಂಬುವ ಕುಂಟೆಯ ಹೂಡಿ ರಂಟೆ ಹೊಡೆಯಲೋ
ಜ್ಞಾನವೆಂಬುವ ಕೂರಿಗೆ ಹೂಡಿ ಬೀಜ ಬಿತ್ತಲೋ"[2]

ಲೋಕವನ್ನು ಹದಗೊಳಿಸುವ ಕಾರ್ಯ ಮಾನವನ ಮನಸ್ಸಿನಿಂದಲೇ ಮೊದಲು ಪ್ರಾರಂಭಗೊಳ್ಳಬೇಕು. ಮನದಲ್ಲಿ ಮನೆಮಾಡಿರುವ ಅರಿಷಡ್ವರ್ಗಗಳನ್ನು ಸುಜ್ಞಾನದ ರಂಟೆ ಹೂಡಿ ಕಳೆಯಬೇಕು. ಇಹದ ಹದವಾದ ಬದುಕಿಗಾಗಿ ಸ್ವಾರ್ಥ ಭಾವನೆಯನ್ನು ತ್ಯಜಿಸಬೇಕು. ಅರಿಷಡ್ವರ್ಗಗಳ ನಾಶ ಪ್ರಾಪಂಚಿಕ ಮೌಲ್ಯವಾದಾಗ, ಒಳ್ಳೆಯ ಬೀಜ ಬಿತ್ತಲು ಸಾಧ್ಯವಾಗುವುದು. ಅದೇ ಸುಜ್ಞಾನವೆಂಬ ಪರಮಾರ್ಥಿಕ ಮೌಲ್ಯ ಬೆಳೆಸುವುದು ಎಂದು ಹೇಳಿದ್ದಾರೆ.

ಕೃಷಿಮೌಲ್ಯದ ಬಗ್ಗೆ ಶರೀಫರ ಇನ್ನೊಂದು ಪದ ಹೀಗಿದೆ:

"ಎಷ್ಟ ಕಾಡತಾವ ಕಬ್ಬಕ್ಕಿ ನಾ
ಹೊಲದಾಗ ಇರುವಾಕಿ ಒಬ್ಬಾಕಿ
ಕಬ್ಬಕ್ಕಿ ಬರತಾವ ಸರಬೆರಕಿ
ಕವಣೆ ಬೀಸಿ ಬೀಸಿ ಬಂತೆನಗ ಬ್ಯಾಸರಕಿ
ಆರು ಮೂರು ಒಂಭತ್ತು ಬಹಳ ಬೆರ್ಕಿ
ಅದರೊಳಗೊಂದೈತಿ ಮೂಬೆರ್ಕಿ..."[೫]

ಈ ಪದದಲ್ಲಿ ಶರೀಫರು ಶರೀರವನ್ನೇ ಹೊಲವಾಗಿಸಿ ಪರಮಾರ್ಥ ಸಾಧನೆಯಲ್ಲಿ ಕಾಡುವ ಅರಿಷಡ್ವರ್ಗಗಳ ಕಾವಲು ಮಾಡುತ್ತ ಹಾಡಿದ್ದಾರೆ. ಆತ್ಮಾನಂದ ಪಡೆಯಲು ಹವಣಿಸುವಾಗ, ಇಂದ್ರಿಯ ವಿಕಾರದಿಂದಾಗುವ ಲೌಕಿಕ ಸೆಳೆತವನ್ನು ಕಾಡುವ ಕಬ್ಬಕ್ಕಿಯಾಗಿಸಿದ್ದಾರೆ. ವಿಷಯಾಸಕ್ತಿಯನ್ನು ಗೆದ್ದು ಧ್ಯಾನದಿಂದ ಮುಕ್ತಿ ಪಡೆಯುವುದು ಜೀವನ ಮೌಲ್ಯವಾಗಿದೆ.

ಜಗತ್ತಿನ ಇತಿಹಾಸದಲ್ಲಿ ಒಳಿತು-ಕೆಡಕಿನ ಹೋರಾಟ ಯಾವಾಗಲೂ ನಡೆದೇ ಇರುತ್ತದೆ. ದುಷ್ಟ ಸಂಹಾರವಾದಾಗಲೇ ಶಿಷ್ಟ ರಕ್ಷಣೆಯಾಗುತ್ತದೆ. ದುಷ್ಟ ಸಂಹಾರವನ್ನು ಮಾಡಲು ವಿಶೇಷ ಶಕ್ತಿ-ಸಾಮರ್ಥ್ಯ ಪಡೆದ ಧೀಮಂತ ವ್ಯಕ್ತಿಯೇ ಬೇಕು. ಸಂತರು ಅನುಭಾವಿಗಳು ಮದ್ದಾನೆಯಂತೆ ಇಪ್ಪತ್ತನಾಲ್ಕು ಗಂಟೆ ತಮ್ಮ ಶರೀರದೊಂದಿಗೆ ಆಧ್ಯಾತ್ಮಿಕ ಧೀಮಂತಿಕೆಯ ತೂರ್ಯಾವಸ್ಥೆಯಿಂದ ತೂಗಾಡುತ್ತಿರುತ್ತಾರೆ. ಪರಮಾತ್ಮನ ಪ್ರೀತಿಯಿಂದ ಮತ್ತರಾಗಿ, ದೈವಿ ಉನ್ಮಾದದಲ್ಲಿ ನಲಿದಾಡುತ್ತಿರುತ್ತಾರೆ. ಉನ್ಮಾದದ ಸ್ಥಿತಿಯಲ್ಲಿರುವ ಭಕ್ತ ಎಂಬ ಮದ್ದಾನೆಯು ಅಷ್ಟಮದಗಳನ್ನು ಪುಡಿ ಪುಡಿ ಮಾಡಿ ಹುಡಿಗೊಳಿಸುವುದು ಎಂದು ನುಡಿದಿದ್ದಾರೆ.

"ಸದ್ಗುರು ಸಾಕಿದ ಮದ್ದಾನಿ ಬರುತಿದೆ
ಎದ್ದು ಹೋಗಿರಿ ಇದ್ದ ನಿಂದಕರು

---

೫. ಅದೇ, ಪು. ೨೦೨.

ಬಿದ್ದು ಈ ಭವದೊಳು ಒದ್ದಾಡುವ ಜನರನ್ನು
ಉದ್ಧಾರ ಮಾಡುತ ಬರುತಲಿದೆ
ಅಷ್ಟಮದಗಳೆಂಬ ಕೆಟ್ಟ ನೀಚರನ್ನು
ಬಟ್ಟಲೆ ಹೀರುತ ಬರುತಲಿದೆ
ಹುಟ್ಟು ಸಾವುಗಳೆಂಬ ಬಟ್ಟೆಗಳನ್ನು ಕಟ್ಟಿ
ಸುಟ್ಟು ಕಾಮ-ಕ್ರೋಧಗಳದು ಬರುತಲಿದೆ"[1]

ದೇಹಾಭಿಮಾನ, ಕುಲಾಭಿಮಾನಗಳನ್ನು ಸುಲಭವಾಗಿ ಬಿಟ್ಟು ಬಿಡಲು ಸಾಧ್ಯವಿಲ್ಲ. ಈ ಅಭಿಮಾನಗಳಂತೆ ಇತರ ವಿಷಯಗಳಲ್ಲಿಯೂ ತಾನು ಶ್ರೇಷ್ಠನೆಂದು ಅಭಿಮಾನಪಡುವ ಮಾನವನು ಸಮಾಜದಲ್ಲಿ ತನ್ನದೇ ಆದ ಪ್ರತಿಷ್ಠೆಯನ್ನು ಸ್ಥಾಪಿಸಿ ಗೌರವ ಬಯಸುವವನು. ಪ್ರಾಪಂಚಿಕ ಸುಖಕ್ಕಾಗಿ ಹಾತೊರೆಯುವವನು ನಿಜಸುಖದಿಂದ ವಂಚಿತನಾಗುವನು ಎಂದು ಹೇಳಿದ್ದಾರೆ.

"ನಾ ನಾ ಎಂಬುದು ನಾನಲ್ಲ ಈ
ಮಾನುಷ ಜನ್ಮವು ನಾನಲ್ಲ
ನಾರಾಯಣ ಪರಬ್ರಹ್ಮ ಸದಾಶಿವ
ನೀ ಎನಿಸುವ ಗುಣ ನಾನಲ್ಲ

ನರದೇಹವಿದು ನಾನಲ್ಲ
ಜರೆ ಮರಣಾದಿಯು ನಾನಲ್ಲ
ಪರ ವೈಭವ ಸಂಸಾರದ ಸವಿಸುಖ
ಮರೆವ ನಾಯಕನು ನಾನಲ್ಲ

ಮಾತಾ ಪಿತ ಸುತ ನಾನಲ್ಲಾ ಭೂ
ನಾಥನಾದವ ನಾನಲ್ಲಾ
ಜಾತಿಗೋತ್ರಗಳು ನಾನಲ್ಲ ಬಲು
ಪ್ರೀತಿಯ ಸತಿಸುತ ನಾನಲ್ಲಾ...

ನಾನಾ ರೂಪವು ನಾನಲ್ಲಾ ನಾ
[illegible] ಬಿಡಲಿಲ್ಲ
[illegible] ಯಲಾರದು
ನೀ ಎನಿಸುವ ಗುಣ ನಾನಲ್ಲ."[2]

ಆಸ್ತಿ, ಅಂತಸ್ತಿಗಾಗಿ, ಗೌರವ, ವೈಭವಕ್ಕಾಗಿ, ಅಧಿಕಾರಕ್ಕಾಗಿ ಹಂಬಲಿಸುತ್ತ, ಅದನ್ನೆಲ್ಲಾ ದಕ್ಕಿಸಿಕೊಂಡು ತಾನೇ ಶ್ರೇಷ್ಠವೆಂಬುವನಲ್ಲಿ ಆತ್ಮಾಭಿಮಾನವಿರುವುದಿಲ್ಲ. ಶರೀಫರು ಪದದ ಪ್ರತಿಸಾಲಿನಲ್ಲೂ ನಾ...ನಾ... ಎನ್ನುವ ಆತನ ಅಭಿಮಾನವನ್ನು ಹೊಡೆದುರುಳಿಸಿ 'ನಾ' ಎನ್ನುವದು ನನ್ನಲ್ಲಿ ನಾಶವಾದರೆ ಮಾತ್ರ 'ನಾ' ಎನ್ನುವ ಪದದ ಅರ್ಥ ಹೊಳೆಯುವುದೆಂದು ಹಾಡಿದ್ದಾರೆ. ಲೌಕಿಕದಲ್ಲಿ ನಿರಾಭಿಮಾನದ ತತ್ತ್ವದ ಮೌಲ್ಯವನ್ನು ಎತ್ತಿ ಹಿಡಿಯುತ್ತ, ಪರಮಾರ್ಥ ಸಾಧನಾ ಮಾರ್ಗವಾದ ಜ್ಞಾನ ತನ್ನರಿಯುವ ಮೌಲ್ಯವನ್ನು ತಮ್ಮದಾಗಿಸಿಕೊಳ್ಳುತ್ತಾರೆ.

ನಮ್ಮ ಜೀವನದಲ್ಲಿ ಮಾಡುವ ಮಹಾ ಪ್ರಮಾದಗಳಲ್ಲಿ ಕೆಲವು ನಾಲಿಗೆಯ ಮೂಲಕವೇ ಆಗುತ್ತವೆ. ಸಮಾಜ ಜೀವಿಯಾದ ಮನುಷ್ಯನು ಸಮಾಜವನ್ನು ತೊರೆದು ಜೀವಿಸಲಾರ. ನೆಮ್ಮದಿಯಿಂದ, ಶಾಂತಿಯಿಂದ ಬದುಕಬೇಕೆನ್ನುವವನು ಮೂಕನಂತಿರಬೇಕೆಂದು ಶರೀಫರು ಹೇಳುತ್ತಾರೆ.

"ಮೂಕನಾಗಿರಬೇಕೋ ಈ ಜಗದೊಳು
ಜೋಕ್ಯಾಗಿರಬೇಕೋ

ಕಾಕು ಕುಹಕರ ಸಂಗ ನೂಕಿರಬೇಕೋ
ಲೋಕೇಶನೊಳಗೇಕಾಗಿರಬೇಕೋ
ಕಚ್ಚುವ ನಾಯಿಯಂತೆ ಬೊಗಳ್ವರು
ಹುಚ್ಚರಂದದೊಳಿಹರು ಎಚ್ಚರವಿಲ್ಲದವರು
ನಡೆನುಡಿಗೆ ನುಡಿಯಬೇಕು ಗುರುವಿನ
ಅಡಿಯ ಒಡಿಯಬೇಕು"[೮]

ಮೂಕನಾಗಿರಬೇಕು ಎಂದರೆ ಶಾಂತನಾಗಿರಬೇಕು ಎಂದರ್ಥ. 'ಶಾಂತಿ' ಎಂಬುದು ಲೌಕಿಕದಲ್ಲಿಯೂ ಪಾರಮಾರ್ಥಿಕತೆಯಲ್ಲಿಯೂ ಶ್ರೇಷ್ಠವಾದ ಮೌಲ್ಯವಾಗಿದೆ. ಲೋಕದಲ್ಲಿ ನಡೆಯುವ ಅನ್ಯಾಯ, ಅನೀತಿಯನ್ನು ಸಾತ್ವಿಕ ಮಾರ್ಗದಿಂದ ಎದುರಿಸಬೇಕಾದರೆ 'ಶಾಂತಿ' ಎಂಬ ಮೌಲ್ಯವು ಮಂತ್ರದಂತೆ ಕೆಲಸ ಮಾಡುವುದು. ಶಾಂತಿಯಿಂದ ವಿವೇಚನೆ ಮೂಡಿ, ವಿಷಯ ಪರಿಸ್ಥಿತಿಯನ್ನು ಅರಿತುಕೊಂಡರೆ, 'ಶಾಂತಿ'ಯು ಧ್ಯಾನಸ್ಥವಾಗಿ ಪರಮಗುರಿಯೆಡೆಗೆ ಸಾಗುವುದು. ನಾಲಿಗೆಗೆ ಮೌನ ತಾಳಲು ಬೇಡಿಕೊಳ್ಳಬೇಕು. ಪರಮಾತ್ಮನ ನಾಮವನ್ನು ಸತತವಾಗಿ ನೆನೆದುಪರಮಾತ್ಮ ಸಾಕ್ಷಾತ್ಕಾರದ ಅತೀಂದ್ರಿಯ ಪರಾತ್ಪರಾನಂದವನ್ನು ಸೇವಿಸಲು ನಾಲಿಗೆಗೆ ಹೇಳಬೇಕು. ಶಾಂತಿಯಿಂದ ಸದ್ಗುರುವಿನ ಸಹವಾಸದಲ್ಲಿ ಇರುವುದಾದರೆ

---

೮. ಅದೇ, ಪು. ೧೮೮.

ಮೌನದ ಸದ್ಗುಣವನ್ನು ಸಹಜವಾಗಿ ನಮ್ಮದಾಗಿಸಿಕೊಳ್ಳಬಹುದು. ಶಾಂತಿಯಲ್ಲಿ ಪರಮಾತ್ಮನ ಅನುಭಾವದ ಮೇರೆಯಿಲ್ಲದ ಆನಂದದಲ್ಲಿ ಮನಸ್ಸು ಮುಳುಗಿತೆಂದರೆ, ಅದೇ ಪರಬ್ರಹ್ಮ ರೂಪವನ್ನು ತಳೆಯುವುದು ಎನ್ನುತ್ತಾರೆ.

ಅನೇಕ ಜಾತಿ, ಮತ, ಪಂಥ, ವರ್ಗಗಳ ಬೀಡಾದ ಈ ನೆಲದಲ್ಲಿ ಭೇದ, ಭಾವ, ಮೇಲು-ಕೀಳು, ಮಡಿ-ಮೈಲಿಗೆಗಳಂಥ ಕ್ಷುಲ್ಲಕ ಭಾವನೆಗಳನ್ನು ಹೋಗಲಾಡಿಸಲು ಶರೀಫರು ಸಮಾನತೆ, ಏಕತೆ, ಸಮನ್ವಯ ಮತ್ತು ಪರಧರ್ಮ ಸಹಿಷ್ಣುತೆಯ ಮೌಲ್ಯಗಳನ್ನು ತಮ್ಮ ಪದಗಳಲ್ಲಿ ಹಾಡಿದರು.

> "ಬೋಕಿಸೊಳಗ ಮೂರು ಲೋಕ ಹುಟ್ಟಿತು
> ಆ ಕುಲ ಈ ಕುಲ ಎಲ್ಲಿತ್ತು"

ಎಂದು ಹಾಡಿ ಕುಲಭೇದವನ್ನು ತಿರಸ್ಕರಿಸಿದರು.

ಪ್ರತಿಯೊಬ್ಬ ಮಾನವನು ತೊಗಲ ಮೊಲೆಯ ಹಾಲು ಕುಡಿದು ಬೆಳೆಯುವುದರಿಂದ ಮಡಿ ಮೈಲಿಗೆ, ಭೇದ-ಭಾವ ಸಲ್ಲದು ಎಂದು ಏಕತೆಯ, ಸಮಾನತೆಯ ಮೌಲ್ಯವನ್ನು ಎತ್ತಿ ಹಿಡಿದರು. ತಾವು ಯಾವ ಜಾತಿ, ಧರ್ಮಕ್ಕೆ ಅಂಟಿಕೊಳ್ಳದೇ, ಮಾನವೀಯ ಸಂಸ್ಕಾರವನ್ನು ತಮ್ಮದಾಗಿಸಿಕೊಂಡರು.

ಬ್ರಾಹ್ಮಣ ಗುರು ಗೋವಿಂದರಿಂದ ಜನಿವಾರ ಪಡೆದು, ಸಂಧ್ಯಾವಂದನೆ, ಏಕಾದಶಿ ವ್ರತಗಳನ್ನು ಆಚರಿಸಿದರು. ಅನ್ಯಧರ್ಮದ ದೇವರುಗಳನ್ನು ಭಕ್ತಿಭಾವದಿಂದ ಸ್ತುತಿಸಿ, 'ಶ್ರೀಕೃಷ್ಣದಶಾವತಾರ', 'ಹನುಮದೇವರ ದಂಡಕ', 'ಬಸವ ದಂಡಕ', 'ಶ್ರೀದೇವಿ ದಂಡಕ', ಪ್ರಮಿಳೆಯ ಹೋಳಿಪದ, ಮೈಲಾರಲಿಂಗನ ಹೋಳಿಪದಗಳನ್ನು ರಚಿಸಿದರು. ರಮ್‌ಜಾನ ಹಬ್ಬದ ರಿವಾಯತ್ ಪದಗಳನ್ನು ಹಾಡಿದರು. ತಮ್ಮ ಅಂತ್ಯಕಾಲದಲ್ಲಿ ವೀರಶೈವ ಧರ್ಮದ ಪ್ರಕಾರ ವಿಭೂತಿ-ವೀಳ್ಯಶಾಸ್ತ್ರ ಮಾಡಿಸಿಕೊಂಡ ಶರೀಫರಲ್ಲಿ ಅನೇಕ ಧರ್ಮಗಳು ಸಮಾವೇಶಗೊಂಡ ಏಕವ್ಯಕ್ತಿತ್ವವು ವಿಶಿಷ್ಟವಾಗಿದೆ. ತಮ್ಮ ನಡತೆಯಂತೆಯೇ ಪರಧರ್ಮದ ಸಹಿಷ್ಣುತೆಯ ಮೌಲ್ಯದಿಂದ ಸಮಾನತೆ, ಐಕ್ಯತೆಯ ಮೌಲ್ಯಗಳು ಅವರ ನೆರಳಾಗಿ ಹಿಂಬಾಲಿಸಿದವು. ಇವೇ ಮೌಲ್ಯಗಳು ಅವರನ್ನು ಪರಮಾರ್ಥದ ಮಟ್ಟಕ್ಕೇರಿಸಿದವು.

> "ಬೋಧ ಒಂದೇ ಬ್ರಹ್ಮನಾದ ಒಂದೇ
> ಸಾಧನ ಮಾಡುವ ಹಾದಿ ಒಂದೆ
> ಆದಿ ಪದ ಒಂದೇ..."

ಎಂದು ಹಾಡುತ್ತ ವಿವಿಧತೆಯಲ್ಲಿರುವ ಏಕದೈವತ್ವದ ಪಾರಮಾರ್ಥಿಕ ಮೌಲ್ಯವನ್ನು ಎತ್ತಿ ಹಿಡಿದರು.

ಕಾಯಕ ಮತ್ತು ಕರ್ತವ್ಯ ಪ್ರಜ್ಞೆ ಸಮಾಜದಲ್ಲಿ ಎಂದಿಗೂ ಪ್ರಸ್ತುತವಾಗಿರುವ ಮೌಲ್ಯಗಳಾಗಿವೆ. ಇವುಗಳಿಂದಲೇ ಮಾನವ ಸ್ವಾಭಿಮಾನಿಯಾಗಿ, ಸರಳ ವ್ಯಕ್ತಿತ್ವ ಉಳ್ಳವನಾಗಿ ಇಹದ ಬದುಕನ್ನು ಸುಗಮಗೊಳಿಸುಕೊಳ್ಳುವನು.

"ಕುಡುಗೋಲ ಹಿಡಿದು ಕೂಲಿ ಮಾಡಿ
ತುಂಬಿಸಬೇಕು ಈ ಚೀಲ
ಒಂದರಘಳಿಗೆ ಅನ್ನವಿಲ್ಲದಿರೆ
ಸೈಲ ಬೀಳತ್ತೈತೋ ಈ ತೊಗಲ..."[೧೧]

ಎಂದು ಹಾಡಿ ಕಾಯಕದ ಮೌಲ್ಯವನ್ನು ಅರುಹಿದರು.

ಜಂಗಮ ತನ್ನ ಕರ್ತವ್ಯವನ್ನು ಮರೆತು ಭಿಕ್ಷಾಟನೆ ಮಾಡುವುದನ್ನು ಪ್ರಶ್ನಿಸಿದ ಶರೀಫರು ಅವನ ಕರ್ತವ್ಯವನ್ನು ಎಚ್ಚರಿಸಿದರು.

"ಲಿಂಗದೊಳಗೆ ಮನವಿಡದಿನ್ನಷ್ಟಾವರಣ
ಇಂಗಿತ ತಿಳಿಯದವರೇನು ಫಲ?
ಜಂಗಮ ಜಂಗುಬಿಟ್ಟು ಹಿಂಗದೆ ತಿರುಗಲು
ಸಂಗನ ಶರಣರಿಗೇನು ಫಲ"[೧೨]

ಎಂದು ಹಾಡಿ ಸಮಾಜದಲ್ಲಿ ಜಂಗಮ ಕರ್ತವ್ಯವನ್ನು ವಿವರಿಸಿ ಕಾಯಕ ನಿಷ್ಠೆಯನ್ನು ತಿಳಿಸಿದರು. "ವೀರಶೈವ ಸಮಾಜದಲ್ಲಿ ಬೆಳಿಗ್ಗೆ ಹಿಟ್ಟಿನ ಅಥವಾ ಕಂತೆ ಭಿಕ್ಷೆಗೆ ಮನೆ ಮನೆಗೆ ಬರುವ ಜಂಗಮನನ್ನು 'ಕಂಬದ ಜಂಗಮ' ಎಂದು ಕರೆಯುತ್ತಾರೆ. ಮನೆಯವರು ಬೆಳಿಗ್ಗೆ ಸೂರ್ಯೋದಯಕ್ಕೆ ಮೊದಲೇ ಎದ್ದು ಮುಖ ತೊಳೆದು, ವಿಭೂತಿ ಧರಿಸದಿದ್ದರೆ, ಮನೆಯ ಮುಂದೆ ಗುಡಿಸಿ ಸ್ವಚ್ಛಗೊಳಿಸದಿದ್ದರೆ, ಅವರಿಗೆಲ್ಲ ಮಾಡಬೇಕಾದ ಕೆಲಸದ ಬಗ್ಗೆ ಬುದ್ಧಿ ಹೇಳುತ್ತಿದ್ದರು. ಮುಳ್ಳಾವಿಗೆಯ ಜಂಗಮನು ಅನ್ಯಾಯಕ್ಕೊಳಗಾದ ದುರ್ಬಲರಿಗೆ ನ್ಯಾಯ ಕೊಡಿಸಲು ಆತ್ಮಹಿಂಸೆಗೆ ಮುಂದಾಗುವ ಕಾಯಕ ಮಾಡುತ್ತಿದ್ದ."[೧೩]

---

೧೧ ಅದೇ, ಪು. ೨೪೮.

೧೨. ಅದೇ, ಪು. ೮೪.

೧೩ ಭಕ್ತಿ ಪಂಥದಲ್ಲಿ ಸಮಾಜಕಾರ್ಯದ ಬೇರುಗಳು, ಮರುಳಸಿದ್ದಯ್ಯ ಎಚ್.ಎಂ. ಪು. ೩೩.

ಜಂಗಮರು ಸಮಾಜ ಸುಧಾರಣಾ ಕರ್ತವ್ಯ ಮೌಲ್ಯವನ್ನು ಮರೆತು ಕೇವಲ ಹೊಟ್ಟೆಪಾಡಿಗೆ ಭಿಕ್ಷೆ ಬೇಡುವುದನ್ನು ಕಂಡು, ಮರೆತು ಹೋದ ಅವರ ಕರ್ತವ್ಯವನ್ನು ಈ ಹಾಡಿನ ಮೂಲಕ ಶರೀಫರು ನೆನಪಿಸಿದ್ದಾರೆ.

ವ್ಯಕ್ತಿಗತ ಮೌಲ್ಯಗಳಾದ ನಿರಾಡಂಬರ, ನಿಶ್ಚಿಂತೆಗಳನ್ನು ಪುಷ್ಟೀಕರಿಸಿರುವುದನ್ನು ಶರೀಫರು ಮಾರ್ಮಿಕವಾಗಿ ತಮ್ಮ ಪದಗಳಲ್ಲಿ ಹೇಳಿದ್ದಾರೆ.

"ನಿಶ್ಚಿಂತನಾಗಬೇಕಂತಿ ಬಹು
ದುಶ್ಚಿಂತಿಯೊಳಗ ನೀ ಕುಂತಿ...
ಆಶಾಪಾಶಗಳ ಬ್ಯಾಡಂತಿ ಒಳ್ಳೆ
ಮೀಸಲ ಸುದಿ ಮಾತಾಡಂತಿ
ಭಾಷೆ ಕೊಟ್ಟು ತಪ್ಪಬ್ಯಾಡಂತಿ
ಹರಿವಾಸರೊಳಗ ಮನ ನೀಡಂತಿ
ಅವರನು ಕಂಡರೆ ಅವರಂತಿ
ಮತ್ತಿವರನು ಕಂಡರೆ ಇವರಂತಿ
ಅವರಿವರರಿಯದೆ ತನಗೂ ತಿಳಿಯದೆ
ಮೂಢನಾಗಿ ಸುಮ್ಮನೆ ಕುಂತಿ..."[17]

• ನಡೆ–ನುಡಿ ಶುದ್ಧ, ಸಮಾನತೆ, ತ್ಯಾಗ, ಶಿಷ್ಟ ರಕ್ಷಣೆ, ದುಷ್ಟ ಖಂಡನೆ, ಮನಸ್ಸಿನ ಗಟ್ಟಿತನ, ದೃಢನಿರ್ಧಾರ, ಸ್ಪಷ್ಟ ಅರಿವು, ನೀತಿ, ಲೋಕ ಕಲ್ಯಾಣ ಈ ಮೌಲ್ಯಗಳ ಸಹಾಯದಿಂದ ಅಜ್ಞಾನ, ಚಂಚಲತೆಯನ್ನು ದೂರಮಾಡಿ ದೈವದಲ್ಲಿ ಏಕವಾಗಿ ನಿಲ್ಲುವ ನಿಶ್ಚಿಂತೆಯ ಮೌಲ್ಯವನ್ನು ಗಳಿಸುವುದಾಗಿದೆ ಎಂದಿದ್ದಾರೆ.

ಸ್ತ್ರೀಮೌಲ್ಯ

ಪುರುಷಾರ್ಥ ಸಾಧನೆಗೆ ಹೆಣ್ಣು ಅಡ್ಡಿ, ಆತಂಕಗಳನ್ನು ಒಡ್ಡುವಳೆಂದು ಹೆಣ್ಣನ್ನು 'ಮಾಯೆ' ಎಂದರು. ಶರಣರು ಹೆಣ್ಣನ್ನು ಮಾಯೆ ಎನ್ನದೇ ಹೆಣ್ಣನ್ನು ಬಯಸುವ ಮನದಾಸೆಗೆ 'ಮಾಯೆ' ಎಂದು ಕರೆದರು. ಇವರೆಲ್ಲರಿಗಿಂತ ಸ್ತ್ರೀಯನ್ನು ನೋಡುವ ಶರೀಫರ ದೃಷ್ಟಿಯು ಭಿನ್ನವಾಗಿದೆ. ಶರೀಫರು ಹೆಣ್ಣನ್ನು ಪ್ರಾಯೋಗಿಕ ದೃಷ್ಟಿಕೋನದಿಂದ ನೋಡಿ ವಾಸ್ತವ್ಯದ ನೆಲೆಯಲ್ಲಿ ಕಂಡುಕೊಂಡಿದ್ದಾರೆ. ಅವರ ಬಹುತೇಕ ಪದಗಳು ಹೆಣ್ಣನ್ನು ಸಂಭೋಧಿಸಿ ಹೇಳದವಾಗಿವೆ. ಸ್ತ್ರೀಮೌಲ್ಯವನ್ನು ಶರೀಫರು ಗರತಿಯ ಪ್ರತಿನಿಧಿಯತೆಯಲ್ಲಿ ಉನ್ನತೀಕರಿಸಿದ್ದಾರೆ. ಗರತಿಗೆ ಆವಳದೇ ಆದಂಥ ಕೆಲವು ಮೌಲ್ಯಗಳಿವೆ. ಪತಿಭಕ್ತಿ, ಅತ್ತೆ–ಮಾವರ ಸೇವೆ, ಗಂಡನ ಬಳಗದ

ಆವರ, ಮನೆ–ಮಕ್ಕಳ ಆರೈಕೆ

"ಬೆಳಗಾಯಿತು ಏಳು ತಂಗಿ ಬಾಗಿಲ ತಗಿಯೇ
ಮೂಡಲ ಹರಿಯಿತು ಮುಖದೊಳಯೇ।
ಮೊದಲಿಗೆ ನೀನೇಳು ಪತಿ ಪಾದಸೇವೆ ಮಾಡು
ಪ್ರೇಮದಿಂದಲಿ ಏಳು ಅತ್ತೆ–ಮಾವನ ಪಾದಕ ಬೀಳ
ಗಂಡನ ಜೋಪಾನ ಮಾಡೆ ನಮ್ಮವ್ವಾ
ಗಂಡನೆಂದರೆ ಮನಿ ದೇವರವ್ವ
ಕರಿಮಣಿಯೆಂಬುವದೊಂದು ಖಂಡುಗದ ರಾಸೆವ್ವ
ಆ ರಾಶಿ ಹೋದ ಮೆಲೆ ನೀ ಪರದೇಶೆವ್ವ..."[೧೫]

ಮುತ್ತಿನಂಥಾ ಮಾತಿದು ಕೇಳೆ ಗೆಳತಿ ನಿ–
ಮ್ಮತ್ತಿ ಮಾವರಿಗೇನುತ್ತರ ಹೇಳತಿ...
ನಾದಿನಿ ಮೈದುನ ಭಾವಗೇನು ಹೇಳತಿ
ಒಬ್ಬ ಮಾದರವನ ಸ್ನೇಹ ಮಾಡಿ ಮತಿಗೆಡತಿ
ಬಿಡು ಬಿಡು ತರವಲ್ಲ ಈ ನಡತಿ
ಸುಳ್ಳೇ ಬಾಯ್ಬಿಡುತಿ..."[೧೬]

ಎಂದು ಗೃಹಿಣಿಯ ಪಾತ್ರ ಸಂಸಾರದ ನೆಮ್ಮದಿಗೆ ಎಷ್ಟು ಮುಖ್ಯ ಎಂಬ ಸ್ತ್ರೀಯ ಪ್ರಾಪಂಚಿಕ ಮೌಲ್ಯವನ್ನು ತಮ್ಮ ಅನೇಕ ಪದಗಳಲ್ಲಿ ವಿವರಿಸಿದ್ದಾರೆ. ಸ್ತ್ರೀ ಕುಲಕ್ಕೆ ಸ್ಥಾನಮಾನ, ಗೌರವ ತರುವ ಗರತಿ ಹೇಗಿರಬೇಕೆಂದು ಹೇಳುತ್ತಾರೆ.

"ಹುಟ್ಟು ಗರತಿ ಕಾಣಲಿಲ್ಲ ಖೊಟ್ಟ್ಯಾದಿಯಲ್ಲ...
ಮಾನವಂತರ ಮನೆಯೊಳ್ಹುಟ್ಟಿ
ಆದೆಲ್ಲ ಖೊಟ್ಟಿ, ಅಪಕೀರ್ತಿ ಅವಗ ತಂದಿಟ್ಟಿ
ಮಾನ ಹೋದ ಬಳಿಕ ಇನ್ನು ಏನು ಕೊಟ್ಟರ ಬಂದಿತ್ತೇಳ...
ಗರತಿ ಲಕ್ಷಣ ಹೋದ ಮ್ಯಾಲಿನ್ನ ತಿರುಗಿ ಗರತ್ಯಾಗಬಹುದೆ?
ಇರಲಿ ನಿಮ್ಮಯ ಶಾಂತಿಯ ಗುಣವು ಸೂಳಿಗೆ ಗರತೆನ್ನಬಹುದೆ?..."[೧೭]

ಈ ಪದದಲ್ಲಿ ನೀತಿಗೆಟ್ಟ ಹೆಣ್ಣನ್ನು ಪ್ರಾಪಂಚಿಕ ದೃಷ್ಟಿಯಲ್ಲಿ ಅವಳ ನಡತೆಯಲ್ಲಿ ಅಪವಿತ್ರಳೆಂದು ಸ್ಪಷ್ಟಪಡಿಸುತ್ತಾರೆ. ಗರತಿಯ ಮೌಲ್ಯವನ್ನು ಗೌರವಿಸುತ್ತಾರೆ.

---

೧೫. ಅದೇ, ಪು. ೧೮೫.
೧೬. ಅದೇ, ಪು. ೯೩.
೧೭. ಅದೇ, ಪು. ೧೬೭

ಘರು ಸ್ತ್ರೀಯನ್ನು ನೋಡುವ ದೃಷ್ಟಿ ಗರತಿಯತನವಷ್ಟಕ್ಕೇ ಸೀಮಿತಗೊಳ್ಳದೇ
ಲ್ಲಿ ಹಲವಾರು ರೂಪಗಳನ್ನು, ಅನೇಕ ಶಕ್ತಿಗಳನ್ನು ಕಾಣುವ ಅವರ
. ವೈಚಾರಿಕ ಮತ್ತು ಪಾರಮಾರ್ಥಿಕದ ಅಂತರದೃಷ್ಟಿಯು ಅನನ್ಯ

"ನನ್ನ ಹೇಣತಿ ನನ್ನ ಹೇಣತಿ
ನಿನ್ನ ಪೆಸರೇನ್ಹೇಳಲಿ ಗುಣವಂತಿ...
ಘನ ಪ್ರೀತಿಲೆ ಈ ತನುತ್ರಯದೊಳು
ಏನ ಅನುಗೊಡುವ ಬಾ ಗೆಳತಿ

ಮೊದಲಿಗೆ ತಾಯ್ಯಾದಿ ನನ್ನ ಹೇಣತಿ ಮತ್ತ
ಸವನಕ ಸೊಸೆಯಾದಿ ನನ್ನ ಹೇಣತಿ
ಮುದದಿಂದ ಮೋಹಿಸಿ ಮದುವ್ಯಾದವನಿಗೆ
ಮಗಳೆಂದೆನಿಸಿದೆ ನನ್ನ ಹೇಣತಿ

ಅತ್ತಿಗಿ ನಾದಿನಿ ನನ್ನ ಹೇಣತಿ
ನಮ್ಮತ್ತ್ಯಾಗಿ ನಡದೀಯೇ ನನ್ನ ಹೇಣತಿ
ತುತ್ತು ನೀಡಿ ಎನ್ನೆತ್ತಿ ಆಡಿಸಿದ
ಹೆತ್ತವ್ವನೆನಿಸಿದೆ ನನ್ನ ಹೇಣತಿ"[15]

ೀ ಬದುಕಿನ ಅನೇಕ ಘಟ್ಟಗಳಲ್ಲಿ, ತಿರುವುಗಳಲ್ಲಿ, ಕಷ್ಟ-ನೋವುಗಳಲ್ಲಿ, ಮ್ಮಾನಗಳಲ್ಲಿ, ಸುಖ-ಸಂತೋಷಗಳಲ್ಲಿ, ಸ್ನೇಹ-ಸಲಿಗೆಯಲ್ಲಿ, ಪ್ರೀತಿ- ಃ, ಆತ್ಮೀಯ ಅಕ್ಕರತೆಯಲ್ಲಿ ಹೆಂಡತಿಯ ಪಾತ್ರ ಪ್ರಮುಖವಾದುದು. ೂಪಗಳಾಗಿ ಕಂಡ ನೆಲೆಯಲ್ಲಿ ಅವಳ ಅನಂತ ಶಕ್ತಿಯನ್ನು ಶರೀಫರು ನ್ನಾರೆ. ಪ್ರಾಪಂಚಿಕ ನೆಲೆಯಲ್ಲಿ ಹೆಂಡತಿಯಾದವಳು ಮನೆಗೆ ಗಿದ್ದಾಳೆ. ತನ್ನ ಗುಣ, ನಡತೆ, ಸ್ವಭಾವ, ಸಲಹೆ, ಮಾರ್ಗದರ್ಶನ, ಳಿಂದ ಹೆತ್ತವ್ವಳಾಗಿ, ಚಿಕ್ಕಮ್ಮಳಾಗಿ, ಅತ್ತೆ, ನಾದಿನಿಯಾಗಿ, ಅಕ್ಕರೆಯ ಪ್ರೀತಿಯ ಮಗಳಾಗಿ, ಸ್ನೇಹ ಸುಖವನ್ನು ನೀಡುವ ಪ್ರೇಮಿಯಾಗಿ, ದಲ್ಲಿ ಅಲಾಪವಾಗಿ, ಬದುಕಿನ ಶ್ರುತಿ ಹಿಡಿದು ಜೀವನವೆಲ್ಲಾ ಹಾಡಾಗಿಸಿ ಹೆಂಡತಿಯನ್ನು ವೈಚಾರಿಕ ನೆಲೆಯಲ್ಲಿ ಶರೀಫರು ಕಂಡುಕೊಂಡಿದ್ದಾರೆ. ಳಾದ ಗರತಿಯು ಮಂಗಳರೂಪಿಣಿಯಾಗಿ, ದೈವಾಂಶ ಸಂಭೂತಳಾಗಿ, ೀಪಿಯಾಗಿ ಶರೀಫರಿಗೆ ದರ್ಶನ ನೀಡಿ ತನ್ನ ಪಾರಮಾರ್ಥಿಕ ಶಕಿಯನು.

ಶರೀಫರಿಗೆ ಪ್ರಕಾಶಿಸಿದ್ದಾಳೆ. ಲೌಕಿಕವಾಗಿ, ವೈಚಾರಿಕವಾಗಿ, ಪಾರಮಾರ್ಥಿಕವಾಗಿ ಹೆಣ್ಣನ್ನು ಅನನ್ಯ ಭಾವದಿಂದ ಶರೀಫರು ಕಂಡುಕೊಂಡಿದ್ದು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾಗಿದೆ.

ಸತಿ ಮೌಲ್ಯವನ್ನು ಸ್ಪಷ್ಟಪಡಿಸಿದಂತೆ ಶರೀಫರು ಪತಿ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ. ಕುಟುಂಬದ ಸುಭದ್ರತೆಗೆ, ಸುರಕ್ಷತೆಗೆ ಗಂಡ-ಹೆಂಡತಿ ನಡುವಿನ ಪ್ರೀತಿ, ವಿಶ್ವಾಸ, ನಂಬಿಕೆ, ಗೌರವ, ಹೊಂದಾಣಿಕೆಗಳೇ ಮುಖ್ಯವಾಗಿರುವವು. ಸಮಾಜದ ಮೂಲವಾದ, ಅತೀ ಚಿಕ್ಕ ಘಟಕವಾದ ಕುಟುಂಬವು ಸ್ವಸ್ಥ, ಸುಂದರವಾಗಿದ್ದರೆ, ಇಡೀ ಸಮಾಜವೇ ಆದರ್ಶಮಯವಾಗುವುದು. ಕುಟುಂಬದ ಮುಖ್ಯ ಬೇರುಗಳಾದ ಸತಿ-ಪತಿಯರ ಹೊಣೆಗಾರಿಕೆಯನ್ನು ಪ್ರಜ್ಞಾಪೂರ್ವಕ ವಾಗಿಸಿಕೊಂಡು ಸತಿ-ಪತಿ ಮೌಲ್ಯದ ಮಹತ್ವವನ್ನು ಶರೀಫರು ಹಾಡಿದ್ದಾರೆ. ಹಾಗೆಯೇ 'ಸತಿ-ಪತಿಗಳಲ್ಲೊಂದಾದ ಭಕ್ತಿ-ಶಿವಂಗೆ ಹಿತವಪ್ಪುದು'ಎಂದು ನುಡಿದಿರುವ ಬಸವಣ್ಣನವರು ಸ್ಮರಣೀಯರಾಗುತ್ತಾರೆ.

"ಎಲ್ಲರಂಥವನಲ್ಲ ನನ ಗಂಡ ಬಲ್ಲಿದನು ಪುಂಡ
ಎಲ್ಲರಂಥವನಲ್ಲ ನನ ಗಂಡ

ಎಲ್ಲರಂಥವನಲ್ಲ ಕೇಳೆ
ಸೊಲ್ಲು ಸೊಲ್ಲಿಗೆ ಬಯ್ದು ಎನ್ನನು
ಎಲ್ಲಿಗ್ಹೋಗದ್ಹಾಂಗ ಮಾಡಿಟ್ಟ
ಕಾಲ್ಮುರಿದು ಬಿಟ್ಟಾ...

ಅತ್ತೆ ಮಾವರ ಮನೆಯ ಬಿಡಿಸಿದನು
ಮತ್ತಲ್ಲಿ ಮೂವರ
ಮಕ್ಕಳೈವರ ಮಮತೆಯ ಕೆಡಿಸಿದನು...
ತೆಕ್ಕೆಯೊಳು ಬಿಗಿದಪ್ಪಿ ಸುರತದಿ
ತಕ್ಕ ಸುಖ ತಾಂಬೂಲ ರಸಗುಟಗಿಕ್ಕಿ ಬಲು
ಅಕ್ಕರೆಯಲಿ ನಗುವನು ತಾ
ಬಹು ಸುಗುಣನೀತ..."[೧೯]

ಮತ್ತು

"ನಡೆ ನಡೆಯುತ ಗಂಡ ನಡಮುರಿದೊದೆದೆನ್ನ
ಹುಡುಗಾಟ ಬಿಡಿಸಿ ಹೌದನಿಸುವನೇ

೧೯. ಅದೇ, ಪು. ೯೭

ನೆದರಿನ ಮ್ಯಾಲ ತಾ ನೆದರಿಟ್ಟು ಎನಗೆ
ಮುದದಿ ಚುಂಬನ ಕೊಟ್ಟು ರಮಿಸಿದನೇ"[೨೦]

ಎಲ್ಲರಂಥವನಲ್ಲ ನನಗಂಡ" ಹಾಗೂ "ನಡೆ ನಡೆಯುತ ನನಗಂಡ ನಡು ಮುದಿದೊದೆದನೆನ್ನ" ಈ ಪದಗಳಲ್ಲಿ ಪತಿ–ಪತ್ನಿಯರ ಅನ್ಯೋನ್ಯ ಸಂಬಂಧವನ್ನು ವಿವರಿಸಿದ್ದಾರೆ. ಗಂಡನು ಹೆಂಡತಿಯನ್ನು ಪ್ರೀತಿಯಿಂದ ಬೈದು ಹೊಡೆಯುತ್ತಾನೆ. ಒದೆಯುತ್ತಾನೆ. ಸೊಂಟ ಮುರಿಯುತ್ತಾನೆ.ತೌರಿನ ಮೋಹವನ್ನು ಬಿಡಿಸಲು ತಂದೆ, ತಾಯಿ, ಅಕ್ಕ, ತಂಗಿ, ಅಣ್ಣ, ತಮ್ಮಂದಿರನ್ನು ತನ್ನ ಹೆಂಡತಿಯಿಂದ ದೂರ ಮಾಡುತ್ತಾನೆ. ಅತ್ತೆ ಮಾವನ ಒಡನಾಟವನ್ನು ನಿಯಂತ್ರಿಸಿ, ಮಕ್ಕಳ ಮೇಲಿನ ಮಮತೆಯನ್ನು ಕೆಡಿಸುತ್ತಾನೆ. ಭಂಡರನ್ನು, ಕಳ್ಳರನ್ನು, ಕುಂಟ, ಕುರುಡ, ಕುಂಟಲಿ, ಸವತಿಯರನ್ನು ಬರದಂತೆ ಕಾವಲು ಕಾಯ್ದು ಹೆಂಡತಿಯನ್ನು ಜೋಪಾನ ಮಾಡುತ್ತಾನೆ. ದೇವಪತಿಯು ಭಕ್ತನ ಪ್ರಾಪಂಚಿಕ ವ್ಯಾಮೋಹವನ್ನು ಬಿಡಿಸಿ, ಪರಮಾರ್ಥದಲ್ಲಿ ನೆಲೆಗೊಳಿಸುವುದೇ ಆಧ್ಯಾತ್ಮಿಕ ಮೌಲ್ಯವಾಗಿದೆ.

"ಬಲು ನಾತಾ ಬಲು ನಾತಾ ಮನ
ಮಲಿನ ತೊಳೆಯದಿರೆ ಹೊಲಸಾಯ್ತವ್ವ..

ನಾಯಿ ಸತ್ತು ಕೊಳೆತರೆ ನಾತಲ್ಲ
ಕಾಯಿ ಕೆಟ್ಟು ಕೊಳೆತರೆ ನಾತಲ್ಲ...
ಭಂಗಿ ಸೇದಿದರೆ ಬಾಯ್ನಾತಲ್ಲ
ಸುಂಗಿ ಕಾರಿಕೊಂಡರೆ ನಾತಲ್ಲ
ಮಂಗಳಾತ್ಮಕ ಗುರುಗೋವಿಂದನ
ಸಂಗ ಮಾಡದಿರುವದು ನಾತವ್ವ"[೨೧]

ತ್ರಿಕರಣ ಶುದ್ಧಿಯನ್ನು ಸಾಧಿಸುವುದು ಎಷ್ಟು ಅನಿವಾರ್ಯವೋ ಅಷ್ಟೇ ಅವಶ್ಯವಾಗಿದೆ. 'ನಾತ' ಎಂದರೆ ವಾಸನೆ, ವಾಸನೆ ಎಂದರೆ ಸಂಸ್ಕಾರ. ಕರ್ಮಗಳಿಂದಾಗಿ ಮನಸ್ಸಿನಲ್ಲಿ ಸಂಸ್ಕಾರಗಳು ಉತ್ಪನ್ನವಾಗಿದೆ. ಪುನಃ ಈ ಸಂಸ್ಕಾರ ವಿಶೇಷಣೆಯಿಂದಾಗಿ ವ್ಯಕ್ತಿ ಹೊಸ ಹೊಸ ಕರ್ಮಗಳನ್ನು ಮಾಡುತ್ತಾನೆ. ಇಂತಹ ಕರ್ಮಗಳನ್ನು ನಿಷ್ಕಾಮಭಾವದಿಂದ ಮಾಡುತ್ತ ಮಾಡುತ್ತ ಕರ್ಮಪಾಶವನ್ನು ಕತ್ತರಿಸಿಕೊಳ್ಳಬಹುದು. ಈ ರೀತಿಯಲ್ಲಿ ಸಂಸ್ಕಾರಗಳಿಂದ ವಿಮುಕ್ತವಾದಾಗ ಹೃದಯ ಶುದ್ಧವಾಗುತ್ತದೆ. ಮನದ ಮಾಲಿನ್ಯವನ್ನು ಹೋಗಲಾಡಿಸುವುದೇ ತ್ರಿಕರಣ ಶುದ್ಧಿಯ

ಉದ್ದೇಶ. ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಸಂಸ್ಕಾರಗಳ ವಾಸನೆ ಅಥವಾ ನಾತವನ್ನು ಹೋಗಲಾಡಿಸಬೇಕು. ಇದು ಪಾರಮಾರ್ಥಿಕ ಮೌಲ್ಯವಾಗಿದೆ. ಸ್ಥಿರವಾದ ಮನಸ್ಸು ಆಧ್ಯಾತ್ಮಿಕ ಸಾಧನೆಗೆ ಮೊದಲ ಮೆಟ್ಟಲಾಗಿದೆ.

"ಮನಸೇ ಮನುಜನ ಮನಸ ನಿಲ್ಲಿಸುವುದು
ಮನುಜನ ಮನ ತಿಳಿಯುವ ಮನ ಬೇಡಲೋ ಮನಸೇ
ತನುತ್ರಯದೊಳಗೆ ಸುಳಿದಾಡುವ ಜೀವನ
ಗುಣವನರಿತರೆ ನಿಜ ಬೇಡಲೋ ಮನಸೇ
ದಶದಿಕ್ಕಿಗೆ ಹಾರಾಡುವ ಹಕ್ಕಿಯು
ದಿಕ್ಕು ತಪ್ಪಿಸೋ ಪರಿ ಬೇಡಲೋ ಮನಸೇ...
ವಿಷಯಗಳಲ್ಲಿ ಸುಖ ಬಯಕೆ ಬಯಸಿ ಭವ-
ನಿಶಿಜ್ಯೋತಿ ಪ್ರಕಾಶವು ಮನಸೇ
ಇಳೆಯೊಳು ಶಿಶುನಾಳಧೀಶ ನಿರ್ಮಲನು
ತಿಳಿದರೆ ಒಳಹೊರಗೊಂದು ಮನಸೇ"[೨೨]

ಮನಸ್ಸು ಸದಾ ಕಾಲ ಏನಾದರೊಂದನ್ನು ನೆನೆಯುತ್ತ ಇರುತ್ತದೆ. ಮನಸ್ಸನ್ನು ಅಂತರಂಗದಲ್ಲಿ ನಿಲ್ಲಿಸಿ ವಾಸನಾರಹಿತನಾದವನು ಸುಜ್ಞಾನಿ.

ಸಂತರು ಇಡೀ ಸೃಷ್ಟಿಯೊಡನೆ ಏಕತೆಯನ್ನು ಪಡೆಯುವರು. ಅವರು ವಿಶ್ವಜೀವನದಲ್ಲಿ ನೆಲಸಿ ಮಾನವ, ಪ್ರಕೃತಿ ಮತ್ತು ಪರಮಾತ್ಮನೊಡನೆ ತಾದಾತ್ಮ್ಯವನ್ನು ಅನುಭವಿಸುವರು. ಇರುವಿನ ವಿಶ್ವವಿಷಯಕ, ಜ್ಞಾನ ವಿಷಯಕ, ಅನುಭಾವ ವಿಷಯಕ ಎಂಬ ಎಲ್ಲ ರೂಪಗಳಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಆಶ್ಚರ್ಯಯುಕ್ತವಾದ ಆನಂದಾತಿರೇಕದಲ್ಲಿ ಮುಳುಗಿ ಬಿಡುವರು ಎಂದು ಡಾ. ಆರ್.ಡಿ. ರಾನಡೆಯವರು "ಕನ್ನಡ ಸಂತರ ಪರಮಾರ್ಥಪಥ"ದಲ್ಲಿ ಹೇಳುವರು. ತನ್ನನ್ನು ತಾನು ಅರಿತ ಆತ್ಮಜ್ಞಾನವು ವಿಶ್ವಜೀವನದ ಪ್ರತಿಯೊಂದು ಬಗೆಯ ಜ್ಞಾನವನ್ನು ಒಳಗೊಂಡಿರುವುದು.

ಆತ್ಮಜ್ಞಾನ ಮತ್ತು ಸಾಕ್ಷಾತ್ಕಾರ ಪಾರಮಾರ್ಥಿಕ ಮೌಲ್ಯಗಳಾಗಿವೆ. ಬದುಕು ತಿದ್ದಿ ಹಸನಾದರೆ, ಪರಮಾತ್ಮ ದೂರವಿರುವನೆನ್ನಿಸುವುದಿಲ್ಲ. ಪ್ರತಿಯೊಂದು ಚರಾಚರ ವಸ್ತುವಿನಲ್ಲಿಯೂ ದೇವರ ಶಕ್ತಿಯ ದರ್ಶನವಾಗುತ್ತದೆ. 'ಅಲ್ಲಿಕೇರಿ' ಹಬ್ಬವು ಸಾಂಕೇತಿಕವಾಗಿ ಲೌಕಿಕದಹಬ್ಬದ ಆಚರಣೆ, ಆದರೆ ಶರೀಫರ ದೃಷ್ಟಿಯಲ್ಲಿ ಪಾರಮಾರ್ಥಿಕ ಸಾಧನೆಯ ಪರಿಕಲ್ಪನೆಯೂ ಆಗಿದೆ. ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಮೌಲಗಳನು. ಒಂದು ಸಾಂಸ ತಿಕ ಸನಿ.ವೇಶದ ಮುಖಾಂತರ

"ಅಲ್ಲಕೇರಿಗೆ ಹೋಗುಣ ಬರ್ತೀರೇನ್ರೇ" ಎಂಬ ಪದದಲ್ಲಿ ಹೇಳಿದ್ದಾರೆ.

"...ಅಲ್ಲೀಕೇರಿಗೆ ಹೋಗುನು ಬರ್ತಿರೇನ್ರೇ ನೀವು
ಒಲ್ಲದಿದ್ದರೆ ಇಲ್ಲೇ ಇರತೀರೇನ್ರೇ...
ಪಡಿಯನುಟ್ಟ ಮೀಸಲದಡಗಿ ಮಾಡಬೇಕ್ರ ಅದಕ
ತಡವು ಆದರೆ ನಿಮ್ಮ ಗೊಡವೆ ನಮಗ ಸಾಕ್ರೇ
ಊರ ಹೊರಗ ಸಾರಿ ಮೀರಿದ ಸ್ಥಳವ ನೋಡ್ರೇ ಅದನು
ಸೇರದಿದ್ದರೆ ನಿಮ್ಮ ಸ್ನೇಹ ನಮಗ ಬ್ಯಾಡ್ರೇ
ಮೂರುಗಿರಿಯ ಮರೆಯೊಳಿರುವ
ನೀರು ತರುವ ಕೆರೆಯ ಬದಿಯೊಳು
ಚಾರುತರದ ಬುಧಜನೊಳು ಬಾಜಾರ ಹೂಡ್ರೇ ಮುಂದ
ಪಾರುಗಾಣುವಂಥ ಸುಸರಿ ತಂದು ಇಡ್ರೇ
ವಸುಧೆಯೊಳು ಶಿಶುನಾಳಧೀಶನ ನೋಡ್ರೇ ಹೇಸಿ
ವ್ಯಸನಿಕರಾದವರೆಲ್ಲ ಇದಕೆ ಬರಲೇ ಬ್ಯಾಡ್ರೇ..."[೨]

ಅಂತರಂಗ ಶುದ್ಧಿ, ಶ್ರದ್ಧೆ, ಸಮಯ ಪ್ರಜ್ಞೆ ಇವು ಪ್ರಾಪಂಚಿಕ ಮೌಲ್ಯಗಳು. ಈ ಪ್ರಾಪಂಚಿಕ ಮೌಲ್ಯಗಳ ಸಹಾಯದಿಂದಲೇ ಪೂಜೆ ಮಾಡಿ ಭಕ್ತಿ ಎಂಬ ಪಾರಮಾರ್ಥಿಕ ಮೌಲ್ಯವನ್ನು ಸಾಧಿಸಬಹುದು ಎಂದು ಶರೀಫರು ಹೇಳುತ್ತಾರೆ. ಶರೀಫರಿಗೆ 'ಅಲ್ಲಿಕೇರಿ'ಯು ದೈವದ ತಾಣ, ಸ್ವರ್ಗವಾಗಿದೆ. ಅರಿಷಡ್ವರ್ಗಗಳನ್ನು ಸುಟ್ಟು ಹಾಕಿ ಸದ್ಗುಣಗಳ ಅಡಿಗೆ ಮಾಡಿ ನಿರ್ಮಲವಾದ ಮನಸ್ಸಿನಿಂದ ತನ್ನನ್ನು ತಾನೇ ದೇವರಿಗೆ ಸಮರ್ಪಿಸಿಕೊಳ್ಳುವುದು ಪಾರಮಾರ್ಥಿಕ ಮೌಲ್ಯವಾಗಿದೆ.

೩.೨ ಭಕ್ತಿ

ಭಕ್ತಿಯ ಮಾರ್ಗವು ನೇರ ಹಾಗೂ ಸರಳವಾಗಿದ್ದು ಆಚರಿಸಲು ಸುಲಭವಾಗಿದೆ. ಇದರಲ್ಲಿ ಜಾತಿ, ಕುಲ, ವರ್ಗ, ಜನಾಂಗಗಳ ಭೇದವಿಲ್ಲ. ದೇಶ, ಕಾಲಗಳ ವಿಧಿ ನಿಯಮಗಳಿಲ್ಲ, ಉಚ್ಚ-ನೀಚಗಳ ತಾರತಮ್ಯವಿಲ್ಲ. ಭಾಷೆಯ ಗೊಂದಲವಿಲ್ಲ. ಚಿತ್ತಶುದ್ಧಿಯಿಂದ ಭಗವಂತನ ಉಪಾಸನೆ ಮಾಡುವುದು, ಪ್ರೀತಿಸುವುದು ಭಕ್ತಿಯಾಗಿದೆ. ದೇವರನ್ನು ಸ್ತೋತ್ರ, ಧ್ಯಾನ, ಹಾಡುಗಳ ಮೂಲಕ ಪಡೆಯಬಯಸುವುದು, ತನ್ನನ್ನು ತಾನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು ಭಕ್ತಿಯ ಲಕ್ಷಣವಾಗಿದೆ. ವೈದಿಕ ಕಾಲದಲ್ಲಿದ್ದ ಸ್ತೋತ್ರ, ಮಂತ್ರಗಳೇ ಮುಂದಿನ ಕಾಲದಲ್ಲಿ ಹಾಡುಗಳ ರೂಪವನ್ನು ತಾಳಿ ಜನ ಸಾಮಾನ್ಯರಿಗೂ ತಲುಪುವಂತಾಗಿದೆ.

ಶರೀಫರ ಭಕ್ತಿಯು ವಿಶಿಷ್ಟವಾದದ್ದು ಮತ್ತು ದೇಶೀಮಯವಾದುದು ವಿಶಿಷ್ಟ ಏಕೆಂದರೆ, ಭಕ್ತಿಪಂಥದ ಅನುಯಾಯಿಗಳಾದ ಶರಣ, ದಾಸರಂತೆ ಧರ್ಮದ ಚೌಕಟ್ಟಿನಲ್ಲಿ ಸೀಮಿತಗೊಂಡು ಶರೀಫರು ಭಕ್ತಿ ಸಾಧನೆ ಮಾಡಿದವರಲ್ಲ. ಧರ್ಮದ ಪ್ರಗತಿಗಾಗಿ, ಧರ್ಮದ ಸಿದ್ಧಾಂತಕ್ಕಾಗಿ ಕಟ್ಟುಬಿದ್ದು ಭಕ್ತಿಮಾರ್ಗವನ್ನು ಅವಲಂಬಿಸದೇ, ಧರ್ಮಾತೀತವಾದ, ಮತಾತೀತವಾದ ಮಾನವ ಕುಲದ ಆತ್ಮೋನ್ನತಿಗೆ ಸಾಧನವಾಗುವ ಬಂಧನಮುಕ್ತಿಗಾಗಿಯೇ ಮಾಡಿದ ವಿಶಿಷ್ಟ ಭಕ್ತಿ ಶರೀಫರದಾಗಿದೆ. ಮುಸ್ಲಿಂ, ವೀರಶೈವ ಮತ್ತು ವೈದಿಕ ಧರ್ಮಗಳ ಆಪ್ತ ಒಡನಾಡಿಯಾದ ಶರೀಫರಿಗೆ ಧರ್ಮ-ಧರ್ಮಗಳಲ್ಲಿರುವ ಜಿಜ್ಞಾಸೆಗಿಂತ ನೇರವಾಗಿ ಪರಮಾರ್ಥವನ್ನು ಹೊಂದುವ ದೇವರೆಡೆಗೆ ಅವರ ಭಕ್ತಿ ಸ್ಫುರಿಸಿದೆ.

ಶರೀಫರ ಕಾವ್ಯದ ಮೂಲ ಸೆಲೆ ಭಕ್ತಿಯೇ ಆಗಿದೆ. ಭಕ್ತಿಯ ನೆಲೆಗಟ್ಟಿನ ಮೇಲೆ ಅವರ ಪದಗಳು ರಚಿತವಾಗಿವೆ. ಶರೀಫರ ಜೀವಾಳವಾದ ಭಕ್ತಿಯು ವಿವಿಧ ರೂಪದ ಉತ್ಕಟ ಪ್ರೀತಿಯಾಗಿ ಮೈದೋರಿ ದೇವರಲ್ಲಿ ಸಮರ್ಪಿತ ಗೊಳ್ಳುವುದನ್ನು ಅವರ ಪದಗಳಲ್ಲಿ ಕಾಣುತ್ತವೆ. ಕೇವಲ ಪರಮಾರ್ಥ ಗೀತೆಗಳು ಮಾತ್ರ ಭಕ್ತಿಯನ್ನು ಆವರಿಸದೇ ಸಾಮಾಜಿಕ, ಲೌಕಿಕ ಅಂಶಗಳನ್ನೊಳಗೊಂಡ ಘಟನಾತ್ಮಕ ಪದಗಳು ಮತ್ತು ಲಾವಣಿಗಳು ಭಕ್ತಿಯ ಮೂಲಾಧಾರ ಮಾರ್ಗದಿಂದ ಸಾಗಿ ಎತ್ತರೇತ್ತರಕ್ಕೇರಿ ಆಧ್ಯಾತ್ಮಗೀತೆಗಳಾಗಿ ಮಾರ್ಪಾಡಾಗಿವೆ. ಭಕ್ತಿ ಬೇರಿನಿಂದ ಕವಲೊಡೆದ ಅವರ ಎಲ್ಲ ಪದಗಳು ಪಾರಮಾರ್ಥಿಕತೆಯನ್ನು ನಿರೂಪಿಸುತ್ತವೆ.

ಸಾಮಾಜಿಕ ವಲಯದಲ್ಲಿ ಹರಿದಾಡಿದಂತೆ ಭಕ್ತಿಯು ತಾತ್ತ್ವಿಕವಲಯದಲ್ಲಿ ಹರಿದು, ಗುರುವಿನ ಸೇವೆಯಿಂದ, ಗುರುಕೃಪೆಯಿಂದ, ಭಾವಶುದ್ಧಿ ಹೊಂದಿ ದೇವರ ಧ್ಯಾನ, ದೇವರ ನಾಮಸ್ಮರಣೆ, ವೈರಾಗ್ಯದಂಥ ಭಾವದೊಂದಿಗೆ ಕೊನೆಗೆ ಅಂತರಂಗ ನಿವೇದನದಲ್ಲಿ ಭಕ್ತಿಯು ಪರಾಕಾಷ್ಠೆಯನ್ನು ತಲುಪಿ ದೈವತ್ವದಲ್ಲಿ ಒಂದಾಗುವುದನ್ನು ಕಾಣುತ್ತೇವೆ.

ಶರೀಫರ ತತ್ತ್ವಪದಗಳಲ್ಲಿ ನವವಿಧ ಭಕ್ತಿಯನ್ನು ಕಾಣುತ್ತೇವೆ. ಮನಸ್ಸು ಭಕ್ತಿಮಯವಾದಾಗ ಅದು ಒಂಭತ್ತು ಕ್ರಿಯಾಚರಣೆಯ ಮೂಲಕ ಬಾಹ್ಯದಲ್ಲಿ ವ್ಯಕ್ತವಾಗುತ್ತದೆ. ಅವು ಶ್ರವಣಭಕ್ತಿ, ಕೀರ್ತನಭಕ್ತಿ, ಸ್ಮರಣಭಕ್ತಿ, ಪಾದಸೇವನಭಕ್ತಿ, ಅರ್ಚನಭಕ್ತಿ, ವಂದನಭಕ್ತಿ, ದಾಸ್ಯಭಕ್ತಿ, ಸಖ್ಯಭಕ್ತಿ ಮತ್ತು ಆತ್ಮ ನಿವೇದನ ಭಕ್ತಿಯಾಗಿದೆ.

ಶ್ರವಣಭಕ್ತಿಯಲ್ಲಿ ಭಕ್ತನು ದೈವಾಸಕ್ತನಾಗಿ ಶ್ರದ್ಧಾಭಕ್ತಿಯುಳ್ಳವನಾಗಿ, ದೇವರ ಲೀಲೆಗಳನ್ನು, ಅವನ ಗುಣಮಹಿಮೆಗಳನ್ನು, ಪ್ರೀತಿಯಿಂದ ಕಿವಿಗೊಟ್ಟು ಆಲಿಸುವನು.

ಇದು ಶ್ರವಣಭಕ್ತಿಯಾಗಿದೆ. ಶರೀಫರಿಗೆ ಪುರಾಣ ಪ್ರವಚನಗಳ ಆಲಿಕೆಯು ಆಸಕ್ತಿಯ ಸಂಗತಿಯಾಗಿತ್ತು. ಅವರು ಬೆಳೆದಿರುವ ಪರಿಸರದಲ್ಲಿ ಶ್ರವಣ ಭಕ್ತಿಗೆ ತಕ್ಕ ಅವಕಾಶವಿತ್ತು.

ಒಮ್ಮೆ ಹಿರೇಮಠದಲ್ಲಿ 'ಬ್ರಹ್ಮೋತ್ತರಕಾಂಡ'ದ ವಿವರಣೆ ಕೇಳುವ ಪ್ರಸಂಗದಲ್ಲಿ ಶರೀಫರು ಭಾಗವಹಿಸಿದ್ದರು. ಶ್ರವಣ ಭಕ್ತಿ ಜಾಗ್ರತೆಗೊಳ್ಳಲು ಪದದರ್ಥವಾಗುವ ಹಾಗೆ ಹೇಳಬೇಕೆಂದು ಕೆಳಗಿನ ಪದದಲ್ಲಿ ಎಚ್ಚರಿಕೆ ಕೊಟ್ಟಿದ್ದಾರೆ.

"...ಮಂಡಲಕ ಮಹಿಮಾಸಾಗರ ಬ್ರಹ್ಮೋತ್ತರಕಾಂಡ
ಪಂಡಿತರಿಗೆ ಪದದರ್ಥದಾಗರ ತಾ ಕಂಡಿದ್ದಿಲ್ಲ
ಬಂದು ಬರಿದೆ ಬೊಗಳು ಅಕ್ಷರ
ಪುಂಡ ಶಿಶುನಾಳಧೀಶನ ದಂಡಕೋಲು ಕೈಯೊಳು ಹಿಡಿದು
ದಿಂಡಿತನವ ಮುರಿದು ನಿನ್ನ
ಚಂಡಿತನವ ಬಿಡಿಸಿ ನೋಡಲೆ"[೨೯]

ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಅಪಾರ ಭಕ್ತಿಗೌರವವನ್ನು ಹೊಂದಿದ್ದ ಶರೀಫರು ಪ್ರಭುಲಿಂಗಲೀಲೆಯ ವಾಚನ, ಪ್ರವಚನವನ್ನು ಕೇಳಲು ತಪ್ಪದೇ ಹೋಗುತ್ತಿದ್ದರು. ಅಲ್ಲದೆ ಪ್ರವಚನ ಮಾಡುವವರು ತಪ್ಪಿಲ್ಲದೆ ಹೇಗೆ ಓದಬೇಕು ಎಂಬ ಎಚ್ಚರಿಕೆಯನ್ನು ಕೊಟ್ಟು ತಮ್ಮ ಪದದಲ್ಲಿ ಹಾಡಿದರು.

"ಓಮವವಗ ಎಚ್ಚರ ಇರಬೇಕು
ಪ್ರಭುಲಿಂಗಲೀಲೆಯ
ಅಭಯ ಮೆಚ್ಚುವ ತೆರದೊಳರ್ಥವ
ಶುಭದಿ ಕೆಡಿಸದೆ ಓದಲವನಿಗೆ
ಉಭಯ ಭೇದವ ಕಳೆದು ಸ್ವರ್ಗದ
ಸಭೆಯವರು ಹೌದೆನ್ನುತಿರಲು
ಸಾಧುಗಳು ಸೈಯೆಂಬ ಪರಿಯಿಂದ
ನಾದಸ್ವರ ಸಂಗೀತ ಹಿಡಿತದಿಂದ
ಓದಿ ಅಲ್ಲಮನ ಪಾದ ಸ್ಮರಿಸುತ"[೩೦]

ಪ್ರಭುಲಿಂಗಲೀಲೆಯನ್ನು ಸಭೆಯವರು, ಸಾಧುಗಳು ಮೆಚ್ಚುವಂತೆ ಓದಬೇಕು. ಸಂಗೀತ ಸ್ವರದಿಂದ ರಾಗವಾಗಿ ಕರ್ಣಾನಂದವಾಗಿ ಶ್ರವಣಶಕ್ತಿ ಹೆಚ್ಚುವ ಹಾಗೆ ಮಾಡಬೇಕು ಎಂದು ಶ್ರವಣಾಸಕ್ತಿಯ ಭಕ್ತಿಯನ್ನು ಈ ಪದದಲ್ಲಿ ತೋರಿಸಿದ್ದಾರೆ.

ಕೀರ್ತನ ಭಕ್ತಿಯಲ್ಲಿ ಶರೀಫರು ಯಾವಾಗಲೂ ಮೈಮರೆಯುತ್ತಿದ್ದರು. ಶರೀಫರ ಪದಗಳೆಲ್ಲ ಭಜನೆ ಪದಗಳೇ ಆಗಿವೆ. ಭಕ್ತಿ ಶೃತಿಯಿಂದ ಯಾವಾಗಲೂ ಮಿಡಿಯುತ್ತಿದ್ದ ಅವರ ಹೃದಯವೀಣೆಯು ದೇವರ ಮಹಿಮೆಗಳ, ಲೀಲೆಗಳ, ಲೀಲಾಕಥೆಗಳನ್ನು ಹೃದಯ ತುಂಬಿ ಹಾಡುತಿತ್ತು. ಭಕ್ತಿ ಉನ್ಮಾದದಿಂದ ತೂರಾಡುತ್ತಿದ್ದ ಶರೀಫರು ದೇವರನ್ನು ಸ್ತುತಿಸದ ಸಮಯವೇ ಇಲ್ಲ. ಸದಾ ದೇವರ ಸ್ಮರಣೆಯಲ್ಲಿದ್ದು, ಅವನನ್ನು ಕೊಂಡಾಡುವ ಪದಗಳನ್ನೇ ಶರೀಫರಲ್ಲಿ ಕಾಣುತ್ತೇವೆ.

ಎಲ್ಲ ದೈವ ದೇವರನ್ನು ಸದಾ ಸ್ಮರಿಸುತ್ತ ಧ್ಯಾನದಲ್ಲಿ ಮುಳುಗಿ ಭಕ್ತಿಗೀತೆಗಳನ್ನು ರಚಿಸಿ ಹಾಡಿದ್ದಾರೆ. ಅವರ ಪದಗಳಲ್ಲಿ ಸ್ಮರಣೆ, ಭಜನೆ, ಧ್ಯಾನಗಳನ್ನು ಕಾಣಬಹುದು.

ದಾಸ್ಯ ಭಕ್ತಿಯಲ್ಲಿ ನಮ್ರ ಭಾವನೆಯಿದ್ದು, ದೇವನು ಒಡೆಯನಾಗಿ, ಭಕ್ತನು ದಾಸನಾಗುತ್ತಾನೆ. ಗುರುಕೃಪೆಗೆ ಅರ್ಹನಾದ ಭಕ್ತನು ಗುರುವಿಗೆ, ದೇವರಿಗೆ ಸೇವೆಗೈಯುತ್ತಾ, ಅಧಿಕ ಭಕ್ತಿಯನ್ನು ತೋರುತ್ತ ದೇವರ ಪ್ರೀತಿಯನ್ನು ಗಳಿಸಲು ಪ್ರಯತ್ನಿಸುತ್ತಾನೆ. ಪೂಜೆಯಿಂದ ಪ್ರಾರಂಭವಾದ ಭಕ್ತಿಯು ಭಜನೆ ಕೀರ್ತನೆ ಸತ್ಸಂಗಗಳಲ್ಲಿ ಭಾವಶುದ್ಧಿ ಹೊಂದಿ ದೇವರ ಆಡಿಯಾಳಾಗಿ ಅವನ ಕೃಪೆಗೆ ಒಳಗಾಗಲು ಪ್ರಯತ್ನಿಸುತ್ತಾನೆ. ಐಹಿಕತೆ, ಕ್ಷುಲ್ಲಕತೆ, ಕ್ಷಣಿಕತೆಗಳನ್ನು ಮನವರಿಕೆ ಮಾಡಿಕೊಳ್ಳುತ್ತ, ಸಂಸಾರದ ಸ್ವರೂಪವನ್ನು ಅರಿತು ಅದರಿಂದ ದೂರಾಗುವುದು ಭಕ್ತಿಯ ಪ್ರಥಮ ಹೆಜ್ಜೆಯಾಗಿದೆ. ದೇವರೇ ಇದಕ್ಕೆಲ್ಲಾ ದಾರಿ ತೋರಿಸುವ, ಕೈ ಹಿಡಿದು ಕಾಪಾಡುವ ಸಮರ್ಥಶಾಲಿಯೆಂಬ ಅಖಂಡ ನಂಬಿಕೆಯೊಂದಿಗೆ ದಾಸ್ಯಭಾವವು ಭಕ್ತನಲ್ಲಿ ನಿರ್ಮಾಣವಾಗುತ್ತದೆ.

ಶರೀಫರು ದೈವಕ್ಕೆ ಸಂಪೂರ್ಣವಾಗಿ ಶರಣಾಗತರಾಗಿ, ಅವನ ಕರುಣೆ ಕಟಾಕ್ಷ ಮಾತ್ರದಿಂದ ತನ್ನ ರಕ್ಷಣೆ ಸಾಧ್ಯವೆಂದು ನಂಬಿದವರು.

"ನಂಬಿದೆ ನಾ ನಿನ್ನ
ಶಂಭು ರಕ್ಷಿಸು ಎನ್ನ
ಕುಂಭಿನಿಯೊಳು ಬಿಡದೆ
ತುಂಬಿ ತುಳುಕುತಲಿರುವೆ
ಜಡದೇಹ ಜಗದಿ ನಾನು
....
ಮೃಡರೂಪ ಮೂರ್ತಿ ನೀನು

ಪೊಡವಿಪ ಶಿಶುನಾಳ ಒಡೆಯ ನೀ ಕರುಣಿಸು
ಕೊಡು ಮತಿ ಸದ್ಗುರು ಗೋವಿಂದನಾಥನೆ"[೨೪]

ಎಂಬಲ್ಲಿ ಶರೀಫರ ಸಂಪೂರ್ಣ ಶರಣಾಗತಿಯನ್ನು ಕಾಣುತ್ತೇವೆ.

"ದೇವಿ ನಿನ್ನ ಸೇವಕನೆಂದು ಸೇವೆ ಮಾಡುವೆನೆಂದು
ಇಂದು ನಿನ್ನ ಚರಣಗಳನ್ನು ಹೊಂದುವೆನೆಂದು
ಪಂಚಮತಿ ನಿನ್ನ ಕಂದನಿಗೆ ಚಂದದಿ ಆನಂದದಿ ನಿನ್ನ
ಕಂದನೆಂದು ಸಲಹು ಇಂದು..."

"ರಾಮಲಿಂಗಮೂರ್ತಿ ಸದ್ಗುರು..
ಚಂದದಿ ನಾ ಬಂದು
ಈ ಕ್ಷಣ ಸೇವೆಯೊಳಗೆ ನಿಂದು
ಅಂದ ವಚನಗಳ ಸಿದ್ಧಿಗೆ ಹೊಂದಿಸು
ಎಂದೆಂದಿಗೂ ನಿನ್ನ ದ್ವಂದ್ವ ಚರಣ ಗತಿ...ಶ್ರೀ"[೨೫]

ಮತ್ತು

"ಪಾಲಿಸಯ್ಯ ಪಾರ್ವತೀಪತಿ
ತ್ರಿಲೋಕದೊಳ್ ವಿರತಿ
ಗಂಗಾಧರನ ಸ್ತುತಿ
ಧ್ಯಾನಿಸುವ ಆತ್ಮಾಭಿರತಿ
ಕರುಣೆ ಕೈಲಾಸಪತಿ
ಬೇಗನೆ ಹೊಂದಿಸು ಸದ್ಗತಿ
ಶಿಶುನಾಳಧೀಶನೇ ಗತಿ
ಕೊಡು ಬೇಗನೆ ಮುಕುತಿ"[೨೬]

ಎಂದು ಅನನ್ಯ ಶರಣಾಗತಿಯಿಂದ ದೇವರ ರಕ್ಷಣೆಯನ್ನು ಪಡೆದು ಜೀವನವನ್ನು ಭದ್ರಮಾಡಿಕೊಂಡು ಹಂತ ಹಂತವಾಗಿ ದೇವರ ಸಮೀಪಕ್ಕೆ ಹೋಗುತ್ತಾರೆ.

ದಾಸ್ಯ ಭಾವನೆಯಿಂದ ದೇವನಲ್ಲಿ ತನಗುಂಟಾದ ನಂಬಿಕೆ, ಹಂಬಲ, ಶ್ರದ್ಧೆಯ ಬಲದಿಂದ, ದೇವರಲ್ಲಿ ಆದರ ಭಾವವು ಹೆಚ್ಚಾಗಿ, ಗೌರವವೂ ಅಧಿಕವಾಗಿ, ಭಕ್ತಿ

ಸಾಧನೆಯ ಮಾರ್ಗದಲ್ಲಿ ತನ್ನ ಅಲ್ಪತ್ವಗಳು ನಾಶಹೊಂದಿ ದೇವರನ್ನು ಬಿಟ್ಟು ಸಂರಕ್ಷಕರು ಅನ್ಯರಿಲ್ಲ ಎಂಬ ಭಾವವು ದೃಢವಾದಾಗ ದೇವರಲ್ಲಿ ಮಮಕಾರ ಮೊಳೆತು, ದೇವನೇ ತನ್ನ ಆಗು-ಹೋಗುಗಳಿಗೆ, ಜನನ-ಮರಣಗಳಿಗೆ ಕಾರಣಕರ್ತನೆಂದು ಅಲ್ಲದೆ ತನ್ನ 'ಒಡೆಯ'ನೆಂದು ಕರೆದು, ತಾನು 'ಕಂದ'ನಾಗಿ, 'ಶಿಶು'ವಾಗಿ, ಮಗನಾಗಿ ತನ್ನೆಲ್ಲ ರಕ್ಷಣೆಯ ಭಾರವು ದೇವರ ಮೇಲೆ ಇದೆ ಎನ್ನುತ್ತಾನೆ.

"ಹೌದೆ ನಮ್ಮಪ್ಪ ನೀನು ಹೌದೆ
ಹೌದೆ ಭವದ ಗೊನೆ ಕೊಯ್ದೆ..
ಮುಕ್ತಿಯ ಮನೆಗೊಯ್ದೆ ನಮ್ಮಪ್ಪ ನೀನು ಹೌದೆ

ಹಿಡಿದೆ ಧರ್ಮದ ಮಾರ್ಗ
ಕಡಿದು ಕರ್ಮದಬೇರು
ಕಡಿದೆ ನಮ್ಮಪ್ಪ ನೀನು ಹೌದೆ.."[೨೯]

ತಾಯಿಯಾಗಿ ತನ್ನ ಕರ್ಮದ ಬಾಧೆಯನ್ನು ಕಡಿದು ಹಾಕಿದ ದೇವಿಯನ್ನು ಹಾಡಿ ಹೊಗಳುತ್ತಾರೆ.

"ಅಪ್ಪ ಆರಿಗೆ ಸಿಗದ ಬದುಕಿನೊಳಿಟ್ಟ ಎನಗೆ
ಒಪ್ಪುವಂಥ ಹೆಣ್ಣು ತಂದು ಮದುವೆ ಮಾಡಿಬಿಟ್ಟ.."[೩೦]

ದೇವರ ಕರುಣೆಯಿಂದ ತೃಪ್ತಗೊಂಡ ಶರೀಫರು ದೇವ ಅಪ್ಪನೇ ತನ್ನನ್ನು ವಾತ್ಸಲ್ಯದಿಂದ ಕಾಪಾಡುತ್ತಿರುವನು ಎಂದು ಭಾವಿಸುತ್ತಾರೆ.

"ನಾ ನಿನ್ನ ಮಗ ನಗೆಗೇಡು ಮಾಡಬ್ಯಾಡ ಈ ಜಗದೊಳಗೆ
ನಾ ನಿನ್ನ ಮಗನು ಅಹುದೆನ್ನುವ ಮಾತಿದು..."[೩೧]

ಮತ್ತು

"ಮಾನಾಪಮಾನ ನಿನ್ನದಮ್ಮಾ ಎನಗೇನು
ನಿಜಾನಂದ ಬೋಧ ಎನಗೆ
ಕುಜನರ ನಿಂದೆ ನಿನಗೆ..."[೩೨]

ಎಂದು ತನ್ನೆಲ್ಲಾ ಲೌಕಿಕ ಸಂಕಷ್ಟಗಳನ್ನು ತಮ್ಮ ಮನದಾಳದಿಂದ ಶರೀಫರು ದೇವರಲ್ಲಿ ನಿವೇದಿಸಿಕೊಂಡಿದ್ದಾರೆ. ಮುಂದುವರಿದು ದೇವರು ತನ್ನವನೆಂಬ ಆತ್ಮೀಯ ಹಕ್ಕಿನ ಭಾವ ಬಂದಾಗ ಭಕ್ತಿಯು ಬೋಧೆಯಾಗಿ ಪರಿಣಮಿಸಿದೆ. ಬೋಧನಾ ಭಕ್ತಿಯಲ್ಲಿ ತಂಗಿ, ತಮ್ಮ, ಅಣ್ಣ ಎಂಬ ಪ್ರೀತಿ ವಾತ್ಸಲ್ಯದಲ್ಲಿ ಶರೀಫರ ಭಕ್ತಿಯು ಸಾರ್ವತ್ರಿಕ ಕುಟುಂಬಮಯವಾಗಿವೆ.

ಸತಿ-ಪತಿಭಾವ ಭಕ್ತಿಯಲ್ಲಿ ವಾತ್ಸಲ್ಯವು ಇನ್ನಷ್ಟು ಗಟ್ಟಿಯಾಗಿ ಬೆಳೆದು ಸಖ್ಯದ ಸ್ನೇಹವನ್ನು ದಾಟಿ ಪ್ರೇಮಪೂರಿತವಾಗಿರುವುದನ್ನು ವಿವರಿಸಿದ್ದಾರೆ. ಭಕ್ತಿಯು ಪತಿವ್ರತಾ ಸ್ತ್ರೀಯ ಸ್ನೇಹದ ಭಾವವಾಗಿದೆ. ಭಕ್ತನು ದೇವನೊಡನೆ, ಗುರುವಿನೊಡನೆ ಬಾಳುವೆ ಮಾಡುವಾಗ ಜಾರಿಣಿಯಾಗದೆ, ದೈವದೊಡಗಿನ ದಾಂಪತ್ಯ ಹಾಳು ಮಾಡಿಕೊಳ್ಳದೆ ಗಂಡನೊಲವನ್ನು ಪಡೆದು ಬಾಳುವ ಸದ್ಗುಣ ಸ್ತ್ರೀಯಾಗುತ್ತಾಳೆ.

"ಎಲ್ಲರಂಥವನಲ್ಲ ನನ ಗಂಡ ಬಲ್ಲಿದನು ಪುಂಡ
ಎಲ್ಲರಂಥವನಲ್ಲ ನನ ಗಂಡ...
ಎತ್ತ ಹೋಗದೆ ಚಿತ್ತವಗಲದೆ
ಗೊತ್ತಿನಲಿ ಕಾಯ್ದು ಎನಗೆ
ಮುತ್ತಿನ ಮೂಗಿತಿಯ ಕೊಟ್ಟಾನೇ
ನಯದಿಂದಲಿಟ್ಟಾನೇ
ಕಾಂತೆ ಕೇಳೆಲೆ ಕರುಣ ಗುಣದಿಂದ
ಎನಗಿಂಥ ಪುರುಷನು
ಬಂದು ದೊರಕಿದ ಪುಣ್ಯಫಲದಿಂದಾ..."[೧೩]

ದೈವವನ್ನು ಗಂಡನ್ನಾಗಿ ಪಡೆದ ಧನ್ಯತೆಯ ಭಕ್ತಿ ಭಾವವನ್ನು ಶರೀಫರು ವ್ಯಕ್ತಪಡಿಸಿದ್ದಾರೆ. ಗಂಡನ ಕೋಪ, ಆಟೋಪ, ಮುನಿಸು, ಸಿರಿತನ, ಬಡತನಗಳನ್ನು ಅರಿತು ಒಗೆತನದ ಬಾಳುವೆ ಮಾಡಿರುವುದನ್ನು ಶರೀಫರು ಪದಗಳಲ್ಲಿ ಹಾಡಿದ್ದಾರೆ.

"ನಡಿ ನಡಿಯುತ ಗಂಡ ನಡುಮುರಿದೊದೆರೆನ್ನ...
ನಡರಿನ ಮ್ಯಾಲ ತಾನೆದರಿಟ್ಟು ಎನಗೆ
ಮುದದಿ ಚುಂಬನ ಕೊಟ್ಟು ರಮಿಸಿದನೇ...
ಕಸೂತಿ ಕುಪ್ಪಸ ತೊಡಿಸಿದನೇ..."[೧೪]

ದೇವದಾಂಪತ್ಯದಲ್ಲಿ ಅತಿಪ್ರೇಮದ ಪೋಷಣೆಯಾಗಿ, ದೇವನು ಕೊಡುವ ತೊಂದರೆಗಳೆಲ್ಲಾ ಮಾನಸಿಕ ಸುಖವಾಗಿ ಅನ್ಯೋನ್ಯತೆ, ಸಹಕಾರ, ಅರಿವು ಬೆಳೆದು ಬಿಟ್ಟಿರಲಾರದ ಪ್ರೇಮಭಾವಭಕ್ತಿಯು ಭಕ್ತನನ್ನು, ದೇವನನ್ನು ಬಂಧಿಸುತ್ತದೆ. ಪರಮಾರ್ಥದ ಚುಂಬನಕ್ಕೆ, ಮುಕ್ತಿಯ ಕುಪ್ಪಸಕ್ಕೆ ಮನಸೋತ ಸತಿಯ ಧನ್ಯತಾ ಭಾವವನ್ನು ವಿವರಿಸಿದ್ದಾರೆ.

"ನನ್ನೊಳಗ ನಾ ತಿಳಕೊಂಡೆ ನನಗ
ಬೇಕಾದ ಗಂಡನ ಹುಡಕೊಂಡೆ
ಆಜ್ಞಾ ಪ್ರಕಾರ ನಡಕೊಂಡೆ
ನಾ ಎಲ್ಲಾರ ಹಂಗನು ಹರಕೊಂಡೆ..."[೨೫]

ಎಂದು ತೃಪ್ತ ದಾಂಪತ್ಯ ಸುಖದ ಸತಿಭಕ್ತಿಯನ್ನು ಶರೀಫರು ಈ ರೀತಿಯಾಗಿ ಹಾಡಿದ್ದಾರೆ.

ದೈವವನ್ನು ಹೆಣ್ಣಾಗಿಸಿ, ಭಕ್ತನು ಪುರುಷನಾಗಿ ಅನುಭೋಗಿಸುವ ಪರಿಕಲ್ಪನೆ ಸೂಫಿಸಂತರದು. ಶರೀಫರ ಅನೇಕ ಪದಗಳಲ್ಲಿ ದೈವವನ್ನು ಸತಿಯಾಗಿ, ಗೆಳತಿಯಾಗಿ, ಕಾಮಿನಿಯಾಗಿ, ಮಾನಿನಿಯಾಗಿ, ಸೂಳೆಯಾಗಿ ಕಂಡು ಪರಮಾರ್ಥ ದಾಂಪತ್ಯವನ್ನು ಭಕ್ತಿಪೂರ್ವಕವಾಗಿ ಕಂಡಿದ್ದಾರೆ.

'ದಾಸ್ಯ ಭಕ್ತಿ'ಯಲ್ಲಿ, 'ಸತಿಪತಿಭಕ್ತಿಯಲ್ಲಿ ಸೇವಾಭಕ್ತಿ ಇದೆ. ದಾಸನೂ ಅನನ್ಯ ಭಕ್ತಿಯಿಂದ ಒಡೆಯನ ಸೇವೆ ಮಾಡುವಂತೆ, ಸತಿಯಾದವಳು ಪ್ರೇಮದಿಂದ ಭಯದಿಂದ ಗಂಡನ ಸೇವೆ ಮಾಡುವಳು. ಸತಿಯಾದವಳು ದಾಸಿಯಾದರೆ, ಭಕ್ತನು ದೇವರ ಸೇವಕನಾಗುತ್ತಾನೆ.

ಆತ್ಮನಿವೇದನೆ, ಅಂತರಂಗ ನಿವೇದನೆ ಎಂದರೆ ತನ್ನನ್ನೇ ತಾನೇ ದೇವರ ವಶಕ್ಕೆ ಒಪ್ಪಿಸಿಕೊಳ್ಳುವುದು. ಅಂತರಂಗದಲ್ಲಿ ತನ್ನನ್ನು ತಾನು ಅರಿತುಕೊಳ್ಳುವುದರಿಂದ, ದೇವನೆಂದರೆ ಯಾರೆಂಬ ಜಿಜ್ಞಾಸೆ, ಭಕ್ತ ಮತ್ತು ದೇವರಿಗೂ ಇರುವ ಸಂಬಂಧತತ್ತ್ವವು ಸ್ಪಷ್ಟವಾಗುತ್ತದೆ. ಭಕ್ತನು ದೇವರ ಒಂದು ಅಂಶ ಎಂಬ ತತ್ತ್ವದ ಅರಿವಿನೊಂದಿಗೆ ದೈವತತ್ತ್ವದಲ್ಲಿ ಒಂದಾಗುವುದೇ ಸರ್ವ ಸಮರ್ಪಣೆಯ ಆತ್ಮ ನಿವೇದನೆಯಾಗಿದೆ. ಜೀವ ಮತ್ತು ಶಿವ ಐಕ್ಯತೆಯೇ ಆತ್ಮನಿವೇದನವಾಗಿದೆ.

ಶರೀಫರ ಅನೇಕ ಪದಗಳಲ್ಲಿ ಭಕ್ತನು ತನ್ಮತನವನ್ನು ದೈವತ್ವದಲ್ಲಿರಿಸುವುದರ ಮೂಲಕ ಭಕ್ತಿಯ ಪರಾಕಾಷ್ಠೆಯ ಆತ್ಮ ನಿವೇದನವನ್ನು ಕಾಣುತ್ತೇವೆ.

---

೨೫. ಅದೇ, ಪು. ೪೦.

"ಬೋಧ ಒಂದೇ ಬ್ರಹ್ಮನಾದ ಒಂದೇ
ಸಾಧನ ಮಾಡುವ ಹಾದಿ ಒಂದೇ
ಆದಿ ಪದ ಒಂದೇ
ಬಿಂದು ಒಂದೇ ನಿಜಾ
ನಂದ ಒಂದೇ...
ದೋಷ ಒಂದೇ ನಿರ್-
ದೋಷ ಒಂದೇ
ಶಿಶುನಾಳಧೀಶನ ಭಾಷೆ ಒಂದೇ
ಭವನಾಶ ಒಂದೇ"[೨೪]

ಮತ್ತು

"ಆದಿ ಅಂತ್ಯ ಆತ್ಮರುಭಯ ಭೇದವಳಿದು ಸಾಧು ಎನಿಸಿ
ಕಾಲ ಕರ್ಮ ತುಳಿದು ತೂರ್ಯ ಜೋಲಿಯೊಳಗೆ ಮೆರೆಯುತಿರಲು
ಪರಮಗುರು ನಿರಾಲಹಸ್ತ ಶಿರದ ಮೇಲೆ ಹರಿಯುತಿರಲು...
ತಂದೆ ಶಿಶುನಾಳಧೀಶ ಇಂದು ನಮಗೆ ಪಾಲಿಸೆಂದು
ಬಿಂದು ವಸ್ತು ಸವಿದು ಪರಮಾನಂದದೊಳಗೆ ಮರೆಯುತಿರಲು"[೨೫]

ಭಕ್ತಿಯ ಕೊನೆಯ ಹಂತವಾದ ಪರಮ ಆನಂದವನ್ನು ಅಂತರಂಗ ನಿವೇದನದಲ್ಲಿ ಶರೀಫರು ಹಾಡಿದ್ದಾರೆ.

"ತತ್ತ್ವಬೋಧದೊಳಗಿದ್ದು ಭವಬಾಧೆಯನು ಗೆದ್ದು
ಪರನಾದದೊಳಗಿದ್ದ ಮೇಲೆ ಮರುಳೆ
ಕಾಮ ಕ್ರೋಧಗಳೆಂಬ ಹಾವಿಗಳ್ಯರ ಭೀತಿ
ಯಾದುದುಂಟೆ ತಿಳಿದು ನೋಡೆ ಮರುಳೆ"[೨೬]

ಎಂದು ಲೌಕಿಕ ಅಳಿದಾಗಲೇ ಬ್ರಹ್ಮಜ್ಞಾನ ಲಭಿಸುವುದು ಅದರಲ್ಲೇಕೆ ಮತ್ತೇ ಸಂದೇಹ ಎಂಬ ಪ್ರಶ್ನೆಯನ್ನೇ ತಾವೇ ಹಾಕಿಕೊಂಡಿದ್ದಾರೆ. ಪರಮಾನಂದದ ಸುಖವನ್ನು ಮೇಲಿಂದ ಮೇಲೆ ಅನುಭವಿಸುವ ಶರೀಫರ ಸ್ಥಿತಿ ಇದಾಗಿದೆ. ನಿವೇದನೆಯ ಸ್ಥಿತಿಯು ಭಕ್ತನಿಗೆ ಲಭಿಸದೇ ಹೋದರೆ ಜನನ-ಮರಣಗಳ ಯಾತನೆ ಎಂದೂ ತಪ್ಪುವುದಿಲ್ಲ. ಭಕ್ತಿ ಮಾರ್ಗದಿಂದಲೇ ಶರೀಫರು ಸಾಯುಜ್ಯ ಸ್ಥಿತಿಯನ್ನು ಪಡೆದರು.

ಪರಮಾರ್ಥವನ್ನು ಹೊಂದುವ ಮಾರ್ಗದಲ್ಲಿ ಶರೀಫರ ಭಕ್ತಿಯು ಅನೇಕ ರೂಪಗಳಲ್ಲಿ ಉತ್ಕಟ ಪ್ರೀತಿಯಾಗಿ ವ್ಯಕ್ತವಾಗಿದೆ. ಆಧ್ಯಾತ್ಮಿಕ ಪ್ರೀತಿಯು ಇಷ್ಟದೈವದ

ಆರಾಧನೆ, ಲೌಕಿಕ ಸುಖದ ನಿರಾಸಕ್ತಿ, ಬದುಕಿನ ನಶ್ವರತೆಯ ಅರಿವು, ದೇವಲೀಲೆಗಳ ವರ್ಣನೆ, ನೀತಿಬೋಧೆಯಂತಹ ಭಕ್ತಿಯ ಹಲವು ರೂಪಗಳು ಶರೀಫರ ಪದಗಳ ಲಕ್ಷಣಗಳಾಗಿವೆ.

ಶರೀಫರ ಭಕ್ತಿ ಸಾಧನೆಯಲ್ಲಿ ಭಾವನೆಯ ಉದ್ವೇಗವಿದೆ. ತತ್ತ್ವಚಿಂತನೆಯ ದರ್ಶನವಿದೆ. ಲೋಕಹಿತಕ್ಕಾಗಿ ಮಿಡಿಯಬಲ್ಲ ಅನುಕಂಪವಿದೆ. ಆದ್ದರಿಂದ ಅವರ ಪದಗಳು ಅಪಾರ ತತ್ತ್ವಾನುಭವದ ದರ್ಶನದಿಂದ ದೀಪ್ತವಾಗಿದೆ. ಜ್ಞಾನದ ಬೆಳಕಿನಲ್ಲಿ ಭಾವನೆಗಳನ್ನು ಹರಿಯಬಿಟ್ಟ ವಾಹಿನಿಯಾಗಿದೆ. ಶರೀಫರ ಭಕ್ತಿಮಾರ್ಗವು ದೇಹ, ಮನ, ಮಾತು, ಕ್ರಿಯೆಗಳು ಒಂದಾಗಿ ಧ್ಯಾನ ನೆಲೆಯನ್ನು ಕಂಡುಕೊಂಡದುದಾಗಿದೆ. ಶರೀಫರು ಭಕ್ತಿಯೋಗದ ಸಾಧಕರಾಗಿದ್ದಾರೆ.

ಶರೀಫರು ತಮ್ಮ ಯೋಗಜ್ಞಾನವನ್ನು "ಗಿರಣಿ ವಿಸ್ತಾರ ನೋಡಮ್ಮ" ಮತ್ತು "ಚೋಳ ಕಡಿತ ನನಗೊಂದು" ಎಂಬ ಪದಗಳಲ್ಲಿ ವಿವರಿಸಿದ್ದಾರೆ.

> "...ಜಲ ಅಗ್ನಿ ವಾಯು ಒಂದಾಗಿ
> ಕಲೆತು ಚಂದಾಗಿ...
> ನೆಲದಿಂದ ಗಗನಕ್ಕೆ ಮುಟ್ಟದಂತೆ ಕಾಂಬದು
> ಚಲುವ ಮಧ್ಯದ ಕಂಭವೋ, ತೂಗಿ ಬಿಂಬವೋ...
> ಒಳಗೊಂದು ಬೇರೆ ಆಕಾರ
> ದಳಗಳೊಂಭತ್ತು ಚಕ್ರ ಸುಳಿವ ಸೂತ್ರದ ದಾರದಲಿ
> ಒಳಗೆ ಹೊರಗೆ ನವಕೋಳಿವೆಯೋ ಇದರಳಿವಿಯೋ...
> ಗಾಲಿಯೊಂದರ ಮೇಲೆ ಬ್ರಹ್ಮದ ಕೀಲ
> ಮೂಲ ಸುಷಮ್ನದಲಿ ಜೋಲುತಿರುವುದು ನಾಡಿ...
> ಪ್ರಾಣವನು ಮರತಿಟ್ಟವೊ..."[೪೦]

ಯೋಗಜ್ಞಾನದಿಂದ ಚೈತನ್ಯವನ್ನು ಹೊಂದಿ ದೇಹದ ಸೂಕ್ಷ್ಮತೆಯನ್ನು ಅರಿತು ಸಿದ್ಧಿಸಿಕೊಳ್ಳುವ ಯೋಗವು ಭಕ್ತಿಯಿಂದಲೇ ಜಾಗೃತ ಹೊಂದುವುದು ಎಂಬುದನ್ನು ಶರೀಫರು ಅರಿತಿದ್ದರು.

> "ಚೋಳ ಕಡಿತ ನನಗೊಂದು
> ಚೋಳ ಕಡಿತ
> ಮೂರು ದೇಹದೊಳು ತಾನಿತ್ತ
> ಪರಮಾರ್ಥವನು ಅಳದಿತ್ತ...

---

೪೦. ಅದೇ, ಪು. ೧೪೦.

ಆರು–ಮೂರು ಬಾಗಿಲದಲಿತ್ತ
ಮೀರಿದುನ್ಮನಿ ಸೇರಿತ್ತ
ದೇವರ ಮನಿ ಮೂಲೆಯೊಳಗಿತ್ತ
ಭಾವಶುದ್ಧದಿ ಹೊಳಿತಿತ್ತ
ಊರ್ಧ್ವಮುಖ ಮಾಡಿತ್ತ
ಸ್ಥೂಲದೇಹದೊಳದಗಿತ್ತ
ಕಾಲ ಕರ್ಮವನು ನುಂಗಿತ್ತ...
ಧ್ಯಾನದೊಳಗ ತಾನಿರುತಿತ್ತ
ಕಟ್ಟದಕಟ್ಟರಾಗಿ ಹುಟ್ಟ ಹಿಡಿದಂಗಾತ"[೧೧]

ಎಂದು ಯೋಗ ಸಾಧನೆಯಿಂದ ಕುಂಡಲೀನಿ ಶಕ್ತಿ ಜಾಗೃತಗೊಂಡಿರುವುದನ್ನು ಚೇಳು ಕಡಿತದಲ್ಲಿ ಹೇಳಿದ್ದಾರೆ. ಇಂದ್ರಿಯ ನಿಗ್ರಹದ ಬಗ್ಗೆ, ವಿಷಯ ವಾಸನೆಯನ್ನು ನೀಗುವ ಬಗ್ಗೆ ಅನೇಕ ಪದಗಳನ್ನು ಹಾಡಿದ್ದಾರೆ. ನವರಂಧ್ರಗಳಿಗೆ 'ಆರು–ಮೂರು' ಎಂಬ ಪದಗಳಲ್ಲಿ ಹಾಡಿದ್ದಾರೆ.

"...ಆರು ಮೂರು ಕಟ್ಟ ಮೇಲಕೆ
ಏರಿದವನು ಘಟ್ಟ..."[೧೨]

ಮತ್ತು

"ಆರು ಮಕ್ಕಳದವಿಗಟ್ಟ
ಮೂರು ಮಕ್ಕಳ ಬಿಟ್ಟುಗೊಟ್ಟ..."[೧೩]

ಎಂದು ಶರೀಫರು ಇಂದ್ರಿಯ ಹತೋಟಿಯಿಂದ ಅರಿಷಡ್ವರ್ಗಗಳನ್ನು ಗೆದ್ದಿದ್ದಾರೆ. ಭಕ್ತಿಯೋಗವು ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಮಾಡಿ ದೈವತ್ವದೆಡೆಗೆ ಕರೆದೊಯ್ಯುತ್ತದೆ ಎಂದು ನುಡಿದಿದ್ದಾರೆ.

೩.೩ ಮಾಯೆ, ನಶ್ವರತೆ ಮತ್ತು ವೈರಾಗ್ಯ

ಕೆಲವು ವಿಶಿಷ್ಟವಾದ ಶಕ್ತಿಗಳಿಂದ ಮಾನವನು ಶ್ರೇಷ್ಠನಾಗಿದ್ದಾನೆ. ಕಲ್ಪನಾ ಶಕ್ತಿ, ಜ್ಞಾಪನ ಶಕ್ತಿ ಮತ್ತು ಪ್ರಜ್ಞಾಶಕ್ತಿಗಳು ಮಾನವನ ಬದುಕನ್ನು ಇತರ ಜೀವಿಗಳಿಂದ ಭಿನ್ನಗೊಳಿಸಿದೆ. ಈ ಎಲ್ಲ ಬುದ್ಧಿಬಲದಿಂದ ಮಾನವನು ತನ್ನ ಜೀವನದ ಸುಖದ ಸೀಮೆಯನ್ನು ವಿಸ್ತರಿಸಿಕೊಂಡಿದ್ದಾನೆ. ಅನೇಕ ಆವಿಷ್ಕಾರಗಳಿಂದ ಸುಖ ಪಡೆಯಲು

ಪ್ರಯತ್ನಿಸುತ್ತಾನೆ. ಸರ್ವಭೋಗ ವಿಷಯಗಳ ಮೇಲೆ ಆಕರ್ಷಣೆ, ವ್ಯಾಮೋಹ ಅತಿಯಾಗಿ ಈ ವಿಷಯಾಸಕ್ತ ಲೌಕಿಕ ಸುಖವೇ ನಿಜವಾದ ಸುಖವೆಂದು ಭ್ರಮೆಗೆ ಒಳಗಾಗಿ ಮಾನವನು ಭೋಗಾಸಕ್ತನಾಗುವನು. ಬೆಳಕಿನ ಸನಿಹದಲ್ಲಿಯೇ ಕತ್ತಲೆ ಇರುವಂತೆ ಪ್ರತಿಯೊಂದು ಸುಖದಲ್ಲಿಯೂ ದುಃಖವು ಹುದುಗಿರುವದು ಕಂಡು, ಸುಖದ ಸಾಧನೆಗಳೆಂದು ಹಿಡಿದುಕೊಂಡ ವಸ್ತುಗಳು ಒಂದಿಲ್ಲೊಂದು ದಿನ ನಾಶ ಹೊಂದುವವು ಎಂಬ ಸತ್ಯ ಅವನ ಅನುಭವಕ್ಕೆ ಬಂದು, ಸಂಸಾರದ ಕಷ್ಟ-ನಷ್ಟಗಳಿಂದ ಪ್ರಾಕೃತಿಕ ಏರುಪೇರಿನಿಂದಾಗಿ ಆಘಾತಗೊಂಡು ದುಃಖಿತನಾದ.

ಯಾವ ದೇಹವನ್ನು ಅತಿಯಾಗಿ ಪ್ರೀತಿಸಿ ತನ್ನದೆಂದು ಭಾವಿಸಿಕೊಂಡಿದ್ದನೋ, ಅದು ರೋಗ, ರುಜಿನಗಳಿಗೆ ಈಡಾಗಿ ಸಾವಿಗೆ ಶರಣಾಗುವುದನ್ನು ಕಂಡು ಕಂಗಾಲಾಗಿ ಪರಿಹಾರ ಕಾಣದೆ ಜರ್ಝರಿತನಾದ. ತನ್ನ ಜೀವಿತಾವಧಿಯಲ್ಲಿ ಸುಖಪ್ರಾಪ್ತಿಗಾಗಿ ಮಾಡಿದ, ಮಾಡಬೇಕೆಂದಿದ್ದ ಪ್ರಯತ್ನಗಳೆಲ್ಲ ಜೊಳ್ಳಾಗಿ ತೋರಿದವು. ದುಃಖದಿಂದ, ಮೃತ್ಯುನಿಂದ ಕಾಪಾಡದ ಈ ಎಲ್ಲ ಭೋಗಭಾಗ್ಯಗಳು ವ್ಯರ್ಥ ನಿಷ್ಪ್ರಯೋಜಕವೆಂದು ಅರಿತುಕೊಂಡ. ಜಗತ್ತು ವ್ಯವಹಾರಿಕವಾಗಿ ಸತ್ಯವೆನಿಸಿದ್ದು, ಪಾರಮಾರ್ಥಿಕವಾಗಿ ಮಿಥ್ಯೆಯಾಗಿದೆ. ಇರುವ ಹಾಗೆ ಕಾಣಿಸುವ ಈ ಜಗತ್ತಿನಲ್ಲಿ ಯಾವುದು ಇಲ್ಲದಂತಿದೆ. ಇಂದ್ರಜಾಲದಂತೆ ಜಗತ್ತು ಮಾಯೆಯಲ್ಲಿ ಮುಸುಕಿದೆ. ರೂಪ-ರಸಾದಿಗಳಿಂದ ಕೂಡಿದ ಈ ಮಾಯಾ ಜಗತ್ತು ಮಾನವನನ್ನು ಆಕರ್ಷಿಸುತ್ತಲೇ ಎಲ್ಲವೂ ಬರಿದಾದಂತೆ ಶೂನ್ಯದಲ್ಲಿ ಸೇರಿ ಹೋಗುವುದು. ಶರಣರು ಇದನ್ನೇ 'ಬಯಲು' ಎಂದರು.

ಶರೀಫರು ಈ ಮಾಯೆ ಮತ್ತು ನಶ್ವರತೆಯನ್ನು ಅರಿತು ಜಗತ್ತು, ಜೀವನ ಸಂಸಾರ, ನಾನು, ನೀನು ಎಂಬುದು ಸುಳ್ಳು ಇದೊಂದು ಭ್ರಮೆಯೆಂದು-

"ಸುಳ್ಳೇ ಸುಳ್ಳು ಸಂಸಾರದಾಟ ಸುಳ್ಳೆ ಸುಳ್ಳು
ನಾನು ಸುಳ್ಳು ನೀನು ಸುಳ್ಳು
ಅವನು ಸುಳ್ಳು ಮತ್ತು ಇವನು ಸುಳ್ಳು
ಕವಿ ಮಾಡಿದ ಕೈ ಬರಹ ಸುಳ್ಳೋ
ಸೃಷ್ಟಿಕರ್ತನೊಬ್ಬ ಮೊದಲೇ ಸುಳ್ಳು..."[೪೪]

ಎಂದು ಮಾಯೆ ಮತ್ತು ನಶ್ವರತೆಯ ಕುರಿತು ಹಾಡಿದ್ದಾರೆ. ಇದ್ದೂ ಇಲ್ಲದಂತಾಗುವುದು ಮಾಯೆಯಾದರೆ ಯಾವುದೂ ಶಾಶ್ವತವಲ್ಲವೆಂಬ ಅರಿವು

೪೪. ಸುಳ್ಳೆ ಸುಳ್ಳೇ ಧ್ವನಿಸುರುಳಿ ಹಾಡಿದವರು ಬಸಲಿಂಗಯ್ಯ ಹಿರೇಮಠ

ಮೂಡಿಸುವುದು ನಶ್ವರತೆ. ಮಾಯೆಯ ಚಮತ್ಕಾರದಿಂದ ಆಶ್ಚರ್ಯ ಗಾಬರಿಗೊಂಡ ಮಾನವನು ವಿವೇಕೋದಯದಿಂದ ವಿಷಯ ಸುಖಗಳ ಅನಿಶ್ಚತೆಯನ್ನು ಅರಿತನು. ಸಂಸಾರಸುಖ, ಸರ್ವಭೋಗಗಳು ದೋಷಪೂರಿತ, ಅನಿತ್ಯವೆಂದು, ದುಃಖ ರೂಪವೆಂದು, ಸತ್ಯವಲ್ಲವೆಂದು ಕಟುಸತ್ಯದ ಸ್ಪಷ್ಟ ದಟ್ಟ ಅನುಭವವನ್ನು ನಶ್ವರತೆಯ ಮೂಲಕ ಪ್ರತಿಪಾದಿಸಿದ್ದಾರೆ.

"ಹುಟ್ಟಿದ್ದು ಹೊಲಿಮನೆ
ಬಿಟ್ಟೊಂಟ್ಯೋ ಕಾಯ್ಮನೆ
ಎಷ್ಟಿದ್ದರೇನಿದು ಖಾಲಿ ಮನೆ

ವಸ್ತಿ ಇರುವ ಮನೆ
ಗಸ್ತಿ ತಿರುಗುವ ಮನೆ
ಶಿಸ್ತಿನಿ ಕಾಣೋದು ಶಿವನಮನಿ

ಒಂಭತ್ತು ಬಾಗಿಲ ದಾಟ
ಹೊಂಟೆದ್ದು ಹೋಗುವಾಗ
ಗಂಟೆ ಬಾರಿಸಿದಂತೆ ಗಾಳಿಮನಿ..."[೪೫]

ದೇಹವು ಶಾಶ್ವತವಲ್ಲ ಎಂದ ಮೇಲೆ ದೈಹಿಕ ಸುಖಗಳೆಲ್ಲವೂ ಮಿಥ್ಯವೆಂಬ ತಿಳುವಳಿಕೆ ಮಾಯೆಯನ್ನು ಗೆಲ್ಲಲು ಸಹಾಯ ಮಾಡುತ್ತವೆ. ಬದುಕು ಎಷ್ಟೇ ಆಕರ್ಷಕವಾಗಿದ್ದರೂ ಕೊನೆಗೊಮ್ಮೆ ನಿರಾಕರ್ಷಣ ಹೊಂದುವ ನಶ್ವರತೆಯು ಸತ್ಯವಾಗಿದೆ ಎನ್ನುತ್ತಾರೆ.

ವೈರಾಗ್ಯ

ಮಾಯೆ ಮತ್ತು ನಶ್ವರತೆಯ ಮುಂದಿನ ಹಂತವೇ ವೈರಾಗ್ಯವಾಗಿದೆ. ವೈರಾಗ್ಯವೆಂದರೆ ವಿರಕ್ತಿ, ಇಹಜೀವನದಲ್ಲಿ ಅನಾಸಕ್ತಿ ಅಥವಾ ನಿರ್ಲಿಪ್ತತೆಯೇ ವೈರಾಗ್ಯವಾಗಿದೆ. 'ರಾಗ' ಪದದ ವಿರುದ್ಧ ಪದವು ವಿರಾಗವಾಗಿದೆ. 'ರಾಗ' ಎಂದರೆ ಪ್ರೀತಿ, ವ್ಯಾಮೋಹ, ಭೋಗದಾಸೆಯಾಗಿದೆ. ಲೌಕಿಕ ಭೋಗವಿಷಯಗಳು ಅನಿತ್ಯ ಮತ್ತು ದುಃಖರೂಪವಾಗಿದ್ದು ಮಾಯಾಮಯವಾಗಿವೆ ಎಂಬ ದೋಷಗಳನ್ನು ತಿಳಿದು ಅವುಗಳ ಮೇಲಿನ ಪ್ರೀತಿಯನ್ನಳಿವುದು ಅಥವಾ ಭೋಗದಾಸೆಯನ್ನು ತ್ಯಜಿಸುವುದು ವೈರಾಗ್ಯವಾಗಿದೆ ಎಂದು "ಈಸಲಾಗದು ಮನಸೆ ಆಸೆಯ ನದಿಯೊಳು" ಮತ್ತು

---

೪೫. ಅದೇ. ಪು. ೧೭೩

"...ಮರಳೆ ಮಾಯೆ ಮೋಹಿಸುವದೇಕೆ?
ಲೋಕದಿ ಶಿಶುನಾಳಧೀಶನ ಭಜಿಸದೆ
ಕಾಕು ವಿಷಯಕೆಂದು ಸಾಕೆನಿಸದೆ ನೀ"[೪೬]

ಎಂದು ಹಾಡಿದ್ದಾರೆ.

ಪ್ರೀತಿಯ ಹೆಂಡತಿಯ ಮರಣದ ನಂತರ ಬದುಕಿನಲ್ಲಿಯೇ ವೈರಾಗ್ಯ ಹೊಂದಿ, ಮಾವನ ಮನೆಯ ಹಂಗನ್ನು ತೊರೆಯುವರು.

"ಮೋಹದ ಹೆಂಡತಿ ತೀರಿದ ಬಳಿಕ
ಮಾವನ ಮನೆಯ ಹಂಗಿನ್ಯಾಕೋ

ಖಂಡವನದಿ ಸೋಂಕಿ ತನ್ನ ಮೈಯೊಳು ತಾಕಿ
ಬಂದೆದ್ದು ಹೋಗುವದು ಭಯವ್ಯಾಕೋ
ಮಂಡಲನಾಡಿಗೆ ಪಿಂಡದ ಗೂಡಿಗೆ
ಚಂಡಿತನದಿ ಚರಿಸ್ಯಾಡುವದ್ಯಾಕೋ

ತಂದೆ ಗುರುಗೋವಿಂದನ ಸೇವಕ
ಕುಂದಗೋಳಕೆ ಬಂದು ನಿಂತಾನ್ಯಾಕೋ
ಬಂಧರ ಶಿಶುನಾಳಧೀಶನ ದಯದಿಂದ
ಇಂದಿಗೆ ವಿಷಯದ ವ್ಯಸನಗಳ್ಯಾಕೋ"[೪೭]

ಎಂದು ಹಾಡುತ್ತ ಪ್ರಪಂಚದ ವಿಷಯದ ಸುಖದ ವ್ಯಸನಗಳನ್ನು ತ್ಯಜಿಸುವರು.

"ದುಃಖಮೆ ಪಡಾಮನ್ ಸುಖ ನಹಿ ಪಾಯಾ
ಟಕತಿ ಮರನ ರಖವಾಲರೆ
ಖಾತಾ ಪೀತಾ ಸೋತಾ ಸಬದಿನ
ಬಾತ ಯೆ ಗಫಲತ್ ಖೇಲರೆ
ತೀನ ರೋಜ ಗುಜರಾನ ಜೀವಕಾ ಯೇ
ತನಮಾತಿ ಮೈಲರ
ರೋಶನ ಹೋ ಶಿಶುನಾಳ ಜಗತ್‌ಪರ
ದೇಶ ಪಿಯಾಕೆ ಲಾಲರೆ"[೪೮]

ಮಗಳ ಅಕಾಲ ಮರಣದಿಂದ ಅತೀವವಾಗಿ ನೊಂದ ಶರೀಫರು ಜೀವನದ ನಶ್ವರತೆ, ಮಾಯೆ ಮತ್ತು ವೈರಾಗ್ಯವನ್ನು ಕುರಿತು ಮೇಲಿನ ಪದ್ಯದಲ್ಲಿ ಚಿಂತಿಸಿದ್ದಾರೆ.

---

೪೬. ಅದೇ, ಪು. ೮೭
೪೭. ಅದೇ, ಪು. ೧೨೭
೪೮. ಅದೇ, ಪು. ೧೭೪.

"ನರಜನ್ಮ ಸ್ಥಿರವೆಂದು ಜರೆಮರಣದೊಳು ನೊಂದು
ಮರಳಿ ಮರಳಿ ಭವಕೆ ಬರಹುದೆ?"[೨೯]

ಎಂದು ತಮ್ಮನ್ನೇ ಪ್ರಶ್ನಿಸಿಕೊಳ್ಳುತ್ತಾರೆ. ವೈರಾಗ್ಯ ಉತ್ಪನ್ನವಾಗುವುದರಿಂದ ಮೋಹ ಅಥವಾ ವಿಷಯದಾಸೆ ಅಳಿದು, ಮನುಷ್ಯನಿಗೆ ಪ್ರಾಪಂಚಿಕ ವಿಷಯಗಳ ಬಗ್ಗೆ ಚಿಂತೆಗಳು, ಭಯಗಳು ದೂರವಾಗಿ ಸುಖ ಶಾಂತಿ ನಿರ್ಭಯಗಳುಂಟಾಗುತ್ತವೆ ಎಂದಿದ್ದಾರೆ.

"ಭೋಗ ವಿಷಯ ನೀಗಿ ಭವದ
ಬೇಗೆಯಳಿದು ಬ್ರಹ್ಮ ಸುಖದ
ತನುವಿನಾಶವ ಅಳಿದು ಮಾಯೆಯ
ಗೊನೆಯ ಕೊರೆದು ಕರ್ಮಸಾಗರ
ಕನಸಿನಂತೆ ತಿಳಿದು ತಾನೆ ಚಿನ್ಮಯನಾತ್ಮನಾಗಿ ಮೆರೆವ_"[೩೦]

ವೈರಾಗ್ಯವು ಪರತರ ಸುಖ ಸಂಪತ್ತೇ ಆಗಿದೆ. ವೈರಾಗ್ಯವು ನಿಷ್ಕಾಮ ಕರ್ಮವಾದುದರಿಂದ ಚಿತ್ತ ಶುದ್ಧಿಗೊಂದು, ಲೌಕಿಕ ವಿಷಯಗಳ ದೋಷಗಳಿಂದ ಅವುಗಳಲ್ಲಿ ನಿರಾಸಕ್ತಿ ಹೊಂದಿ ಮೋಕ್ಷ ಪಡೆವ ಹಂಬಲ ಉಂಟಾಗುವುದು. ಆಗ ಮಾತ್ರ ಮೋಕ್ಷಾಪೇಕ್ಷೆಯಿಂದ ಸಾಧಕನು ಆತ್ಮಜ್ಞಾನದ ಸಂಪಾದನೆಯಲ್ಲಿ ಆಸಕ್ತನಾಗುತ್ತಾನೆ ಎಂದು ನುಡಿದಿದ್ದಾರೆ.

ಅನುಭಾವಿಗಳು, ಆಧ್ಯಾತ್ಮಿಗಳು ಬದುಕಿನ ಎಲ್ಲ ಸುಖ-ಸಂಪತ್ತನ್ನು ತ್ಯಜಿಸಿ ನಿವೃತ್ತಿ ಮಾರ್ಗದ ಕಡೆಗೆ ಹೆಚ್ಚು ಒತ್ತು ಕೊಡುತ್ತಾರೆ. ಸುಖ ಸಂಪತ್ತು ಆಧ್ಯಾತ್ಮದ ಹಾದಿಯಲ್ಲಿರುವ ಕಂದಕಗಳು. ಅವುಗಳ ಆಕರ್ಷಣೆಯನ್ನು ಅಷ್ಟು ಸುಲಭವಾಗಿ ಹರಿದೊಗೆಯಲು ಸಾಧ್ಯವಾಗುವುದಿಲ್ಲ. ಅವುಗಳನ್ನು ಬಿಡದಿದ್ದರೆ ಅಧ್ಯಾತ್ಮ ಸಾಧನೆಯಾಗವುದಿಲ್ಲ. ಹೀಗಾಗಿ ಶಾಶ್ವತ ಸುಖ ನೀಡುವ ಬಡತನದಲ್ಲಿಯ ಆಧ್ಯಾತ್ಮ ಭಾವ, ಅನುಭಾವಿಗಳಿಗೆ, ಬಡತನದಿಂದಾಗಿ ಅಹಂಕಾರ, ಆಡಂಬರ, ನಷ್ಟವಾಗಿ ನಮ್ರತೆ, ದೈನ್ಯತೆ ಮೂಡುತ್ತದೆ. ಜ್ಞಾನ ಸಾಧನೆ ಹೊಂದಿ ಪರಮಾರ್ಥದ ಗುರಿ ತಲುಪುತ್ತಾರೆ.

"ಎಂಥಿಂಥಾದೆಲ್ಲಾನು ಬರಲಿ
ಚಿಂತೆಯೆಂಬುದು ನಿಜವಾಗಿರಲಿ
ಅಂತರಂಗದಿ ಗುರುವಿನ ಧ್ಯಾನವು

ಸಂತತ ಕಾಲದಿ ತಾ ನೆಲಸಿರಲಿ
ಬಡತನವೆಂಬುದು ಕಡೆತನಕಿರಲಿ
ವಡವಿ ವಸ್ತ್ರ ಹಾಳಾಗಿ ಹೋಗಲಿ..."[೫೧]

ಎಂದು ಎಲ್ಲ ಕಷ್ಟಗಳ ಮಧ್ಯದಲ್ಲಿ ದೇವರನ್ನು ಭಜಿಸುವ ಆಸೆಯು ಮಾತ್ರ ಎಂದೆಂದಿಗೂ ಶಾಶ್ವತವಾಗಿರಲಿ ಎಂದು ಪಾರಮಾರ್ಥಿಕ ಸುಖವೇ ಅಂತಿಮ ಸುಖವೆಂದು ಹೇಳಿದ್ದಾರೆ.

೩.೪ ಜ್ಞಾನ, ಅನುಭಾವ

ಮುಕ್ತಿಯನ್ನು ಹೊಂದಲು ವಿಭಿನ್ನ ಪಥಗಳಿವೆ. ಭಕ್ತಿಮಾರ್ಗ, ಜ್ಞಾನಮಾರ್ಗ ಮತ್ತು ಕರ್ಮ ಮಾರ್ಗಗಳು. ಜ್ಞಾನವೆಂದರೆ ಸಾಕ್ಷಾತ್ಕಾರ ಆಧ್ಯಾತ್ಮಶಕ್ತಿಯ ಪ್ರತ್ಯಕ್ಷ ಜ್ಞಾನಕ್ಕೆ ಸಾಕ್ಷಾತ್ಕಾರವಾದುದೇ ಅನುಭಾವವಾಗಿದೆ. ಆತ್ಮಜ್ಞಾನಕ್ಕೆ, ಆತ್ಮೋನ್ನತಿಗೆ ಅನುಭಾವ ಸಂಪತ್ತೇ ಸಾಧನವಾದುದು. ಕ್ರಿಯಾ, ಜ್ಞಾನ, ಅನುಭವಗಳೆಂಬ ಸ್ವಶಕ್ತಿಯಲ್ಲಿ ಆತ್ಮಜ್ಞಾನ ಅಡಗಿದೆ. ಅನುಭಾವವಿಲ್ಲದ ಕ್ರಿಯೆಯಾಗಲಿ, ಜ್ಞಾನವಾಗಲಿ ಬರಡಾಗುತ್ತವೆ.

ಅನುಭಾವವು ನಿತ್ಯಪರಿಪೂರ್ಣವಾಗದುದು, ತೃಪ್ತಿಮಯವಾದುದು. ತನು, ಮನ, ಪ್ರಾಣಗಳನ್ನು ದಾಟಿ ಭಾವವನ್ನು ವ್ಯಾಪಿಸಿ ಭಾವಾತೀತವಾಗಿದೆ. ಈ ನಿರಾಳದಲ್ಲಿ ತನುಸಂಬಂಧದ ಕ್ರಿಯೆಯಾಗಲಿ, ಪ್ರಾಣಸಂಬಂಧದ ಯೋಗವಾಗಲಿ, ಬುದ್ಧಿ ಸಂಬಂಧದ ಜ್ಞಾನವಾಗಲಿ ಕೆಲಸ ಮಾಡುವುದಿಲ್ಲ. ಅನುಭಾವವು ಅತೀಂದ್ರಿಯದ ಮೂಲಕ, ಅರಿವಿನ ಮೂಲಕ ಪಡೆಯುವುದಾಗಿದೆ. ತನ್ನನ್ನು ತಾನು ಕಂಡುಕೊಳ್ಳಲು ಯತ್ನಿಸಿದಾಗ ಉಂಟಾಗುವ ಪ್ರತಿಕ್ರಿಯೆಯೇ ಅನುಭಾವ. ಭಕ್ತ, ಭಗವಂತನ ಸಂಬಂಧಕ್ಕಷ್ಟೇ ಸೀಮಿತವಾಗಿದೆ.

ಶರೀಫರ ಅನುಭಾವಿ ಜೀವನವು ಅತೃಪ್ತಿಗೆ ಸಮಾಧಾನವನ್ನು ಹುಡುಕುವುದರಲ್ಲಿ ತಮ್ಮ ಸದ್ಯದ ಅಪೂರ್ಣತೆಯಲ್ಲಿ ಪೂರ್ಣತೆಯನ್ನು ಶೋಧಿಸುವಲ್ಲಿ ನಡೆಸಿಕೊಂಡು ಬಂದ ಹೋರಾಟವಾಗಿದೆ. ಸತ್ಯಶೋಧನೆಯೂ ಕೂಡ ಶರೀಫರ ಮೂಲಭೂತ ಸ್ವಭಾವದಲ್ಲಿ ಅಡಕವಾಗಿದೆ.

"ದೊರಕುವದ್ಯಾಂಗ ಪರಮಾನಂದ
ಅರಿಯದು ಅದರಂದ...

---

೫೧. ಅದೇ, ಪು. ೪೧.

ಅರಿವಿನೋಳ್ ಅಮಲ ಗುರುತವ ತೋರಿ
ಇರುವುದು ಆ ದಾರಿ
ಆರು ಮೂರು ಎರಡರ ದಾರಿ ಮೀರಿ
ನಿಜತರಿ ಸುಖಿಪರಿ''[೨೮]

ಎಂದು ಅನುಭಾವವನ್ನು ಪಡೆಯುವ ಸಾಧನೆಯನ್ನು ಹಾಡಿದ್ದಾರೆ.

ತನ್ನ ಹೃದಯಾಂತರಾಳದಲ್ಲಿಯೇ ದೇವರ ಅಸ್ತಿತ್ವ ಅರಿಯುವುದು ಅನುಭಾವಿಗಳ ಅನುಭಾವ. ಭಕ್ತಿ, ಜ್ಞಾನ, ವೈರಾಗ್ಯಪೂರಿತ ವಿಹಿತ ಕರ್ಮ ಮಾಡಿ ಮುಕ್ತಿ ಪಡೆಯಬೇಕೆಂಬ ತತ್ತ್ವವನ್ನೇ ಶರೀಫರು ಹೇಳಿದರು. ಇಂತಹ ಅನುಭಾವದಲ್ಲಿ ಅದ್ವೈತದ ಸಿದ್ಧಾಂತಗಳಿರುವುದನ್ನು ಗುರುತಿಸಬಹುದು.

ಪ್ರಪಂಚ ತತ್ತ್ವವು ಅನಂತವೂ ಪ್ರತ್ಯಕ್ಷವೂ ಆಗಿದೆ. ಇದೇ ಆತ್ಮತತ್ತ್ವವಾದುದರಿಂದ ಅದು ಜ್ಞಾನರೂಪವೆಂದು ವ್ಯಕ್ತವಾಯಿತು. ಪ್ರಪಂಚ ತತ್ತ್ವವಾಗಿರುವ ಬ್ರಹ್ಮನು ಸತ್ಯ-ಜ್ಞಾನ ಮತ್ತು ಅನಂತವಾಗಿರುವನು. ಸತ್ಯವೆಂದರೆ ತತ್ತ್ವವೆಂದು, ಜ್ಞಾನವೆಂದರೆ ಆತ್ಮರೂಪನೆಂದು ಅನಂತವೆಂದರೆ ಅವಧಿರಹಿತವೆಂದರ್ಥ.

ಜ್ಞಾನಿಯು ಬ್ರಹ್ಮವಿದ್ಯೆಯನ್ನು ತಿಳಿದವನು. ದೃಶ್ಯ ಜಗತ್ತು ಸತ್ಯವಲ್ಲ. ಮಾಯಿರೂಪವಾದ ಭೌತಿಕ ದೇಹ ತಾನಲ್ಲ. ಜೀವೇಶ್ವರನಲ್ಲ, ಅಭೇದವೇ ಇದೆ ಎಂದು ತಿಳಿಯುವುದೇ ಜ್ಞಾನವಾಗಿದೆ. ತನ್ನ ನಿಜಸ್ವರೂಪವನ್ನು ಅರಿಯುವುದೇ ಜ್ಞಾನವಾಗಿದೆ. ಜ್ಞಾನದ ಹಂತಗಳನ್ನು ಶರೀಫರ ಪದಗಳಲ್ಲಿ ಕಾಣುತ್ತೇವೆ. ಪ್ರಾರಂಭದಲ್ಲಿ ದ್ವೈತಭಾವದಿಂದ ಪ್ರಾರಂಭವಾದ ಅವರ ಅಧ್ಯಾತ್ಮಜ್ಞಾನ, ಗುರುಕೃಪೆಯಿಂದ ಅದ್ವೈತದ ಹಂತಕ್ಕೇರುವುದು.

೬.೫ ದೇವರು-ಮುಕ್ತಿ

ಶರೀಫರ ಪದಗಳಿಂದ ಅವರ ಆಧ್ಯಾತ್ಮಿಕ ಭಕ್ತಿ ಜೀವನದ ಕ್ರಮವು ವಿಷದವಾಗುವುದು. ಶರೀಫರು ಭಾವುಕ ಭಕ್ತರು ಜೊತೆಗೆ ಆಶುಕವಿಗಳು. ದೈವ ಸಾಕ್ಷಾತ್ಕಾರವೇ ಅವರ ಮುಖ್ಯ ಉದ್ದೇಶವಾಗಿತ್ತು. ಆದುದರಿಂದ ಅವರು ಯಾವ ದೇವಮೂರ್ತಿ ಎದುರಿಗೆ ನಿಂತರೂ ಸಾಕ್ಷಾತ್ ದೇವರನ್ನು ಕಂಡಂತೆ ಭಾವೋದ್ವೇಗದಿಂದ, ಭಕ್ತಿಯ ಪರಾಕಾಷ್ಠೆಯನ್ನು ತಲುಪಿ, ಮೈಮರೆತು ಹಾಡುತ್ತಿದ್ದರು. ಅವರ ಸರಳವಾದ ಮನಸ್ಸು ದ್ವೈತ-ಅದ್ವೈತ, ಸಗುಣ-ನಿರ್ಗುಣ ಎಂಬ

ದೈವತತ್ತ್ವಗಳಲ್ಲಿ ಭೇದ ಕಾಣದೇ ಪ್ರಕೃತಿಯ ಚರಾಚರವಸ್ತುಗಳಲ್ಲಿ ದೈವಾಂಶವನ್ನು ಕಂಡ ದೈವೀ ಪುರುಷರವರು. ದ್ವೈತ–ಅದ್ವೈತ, ಸಗುಣ, ನಿರ್ಗುಣ ಎಲ್ಲ ತತ್ತ್ವಗಳನ್ನು ಒಳಗೊಂಡಿರುವ ದೇವ ಸಂಕಲ್ಪವನ್ನು ಅವರಲ್ಲಿ ಕಾಣುತ್ತೇವೆ. ಎಲ್ಲ ವಸ್ತು, ಸನ್ನಿವೇಶಗಳಲ್ಲಿ ದೇವಾಂಶವನ್ನು ಕಾಣುವ ಶರೀಫರಿಗೆ ದೇವರನ್ನು ಕಾಣಲು ವಿಶೇಷ ವಸ್ತು, ಪರಿಸರದ ಅಗತ್ಯವಿರಲಿಲ್ಲ. ಜನಪದ ವ್ಯಕ್ತಿಯಾದ ಶರೀಫರು ಬಹುದೇವತಾ ಉಪಾಸಕರಾಗಿದ್ದರು.

ಅಧ್ಯಯನದ ಮೊದಲೇ ಪ್ರಸ್ತಾಪಿಸಿದಂತೆ ದ್ವೈತಸಿದ್ಧಾಂತದ ಭಕ್ತಿಯಲ್ಲಿ ದೇವರುಗಳನ್ನು ಕಂಡು ಅನೇಕ ಪದಗಳನ್ನು ಶರೀಫರು ರಚಿಸಿದ್ದಾರೆ. ಊರಿನ ದೈವಗಳ ಬಗ್ಗೆ ಮತ್ತು ಭಕ್ತನಲ್ಲಿ ದೇವನನ್ನು ಕಂಡು ಅದ್ವೈತ ಪದಗಳನ್ನು ಹಾಡಿದ್ದಾರೆ. ಊರು ದೇವರುಗಳು ಸಗುಣವಾದರೆ, ಭಕ್ತನ ಭಕ್ತಿ ಭಾವದಲ್ಲಿ ಒಂದಾದ ದೇವರು ನಿರ್ಗುಣನಾಗಿದ್ದಾನೆ.

ಜೀವ ದೇವನಾಗುವ ಮಾರ್ಗದಲ್ಲಿ ಭಕ್ತಿಗೆ ಮೊದಲ ಸ್ಥಾನ. ಆದ್ದರಿಂದ ಮುಕ್ತಿಗೆ ಉತ್ತಮ ಸಾಧನ ಭಕ್ತಿಯಾಗಿದೆ. ಭಕ್ತಿಭಾವದಿಂದ ಜೀವನು ಉತ್ತಮನಾಗಿ ಬಾಳುತ್ತಾನೆ. ಶರೀಫರ ಜೀವಾಳವಾದ ಭಕ್ತಿಯ ಶಕ್ತಿಸ್ತುತಿ, ದೇವಸ್ತುತಿ, ಗುರುಸ್ತುತಿಗಳಲ್ಲಿ ಅವರ ಮತ್ತು ದೇವರ ಸಾಮಿಪ್ಯವನ್ನು ಕಾಣಬಹುದು.

ಭಕ್ತಿಯು ಮೊದಲ ಹಂತದಲ್ಲಿ ಪೂಜೆಯಿಂದ ಆರಂಭವಾಗಿ ಭಜನೆ, ಕೀರ್ತನೆಗಳಲ್ಲಿ ಮುಂದೆ ಸಾಗಿ ಸ್ಮರಣೆ, ಧ್ಯಾನಗಳಲ್ಲಿ ಸೂಕ್ಷ್ಮರೂಪ ತಾಳಿ, ಆತ್ಮ ನಿವೇದನದಲ್ಲಿ ಆತ್ಮಪರಿಶೋಧನೆಯಿಂದ ಪರಮಾತ್ಮನೊಳಗೆ ಸಮರಸ ಭಾವವಾಗುತ್ತದೆ.

ಭಕ್ತಿಯು ವಿವಿಧ ರೂಪದ ಉತ್ಕಟ ಪ್ರೀತಿಯಾಗಿ ಮೈದೋರಿ ಮಗು–ತಂದೆ, ತಾಯಿ, ಆಳು–ಒಡೆಯ, ಸತಿ–ಪತಿಭಾವ, ಈ ವಿವಿಧ ರೀತಿಯ ಸಂಬಂಧವನ್ನು ಶರೀಫರು ದೇವರಲ್ಲಿ ಕಂಡಿದ್ದಾರೆ.

ದ್ವೈತ ಮತ್ತು ಅದ್ವೈತ ಎರಡೂ ಸಿದ್ಧಾಂತಗಳಿಗೆ ಶರೀಫರ ಭಕ್ತಿಯು ಒಲಿದಿರುವುದನ್ನು ಅವರ ಅನೇಕ ಪದಗಳಿಂದ ತಿಳಿಯಬಹುದಾಗಿದೆ. ಸಹಜವಾದ ಭಕ್ತಿಯಿಂದ ಪರಮಾರ್ಥವನ್ನು ತಲುಪುವವರೆಗಿನ ಅವರ ಭಕ್ತಿಯ ಅವಸ್ಥೆಯ ಕ್ರಮವನ್ನು ದ್ವೈತ, ಅದ್ವೈತದಿಂದಲೇ ಗುರುತಿಸಬಹುದಾಗಿದೆ.

ಪ್ರಾರಂಭದಲ್ಲಿ ದ್ವೈತಿಗಳಾದ ಶರೀಫರು ದೇವರ ಸಗುಣ ರೂಪವನ್ನು ಭಕ್ತಿಭಾವದಿಂದ ಆರಾಧಿಸಿದ್ದಾರೆ. ಅವರ ಸಂಪರ್ಕಕ್ಕೆ ಬಂದ ಗ್ರಾಮಗಳ ದೇವ–

ದೇವತೆಗಳನ್ನು, ವಿಶೇಷ ಭಕ್ತಿಯಿಂದ ಆರಾಧಿಸಿದ್ದಾರೆ. ನಾಡಿನ ಹಲವೆಡೆ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ದೇವರ ಸಚೇತನ ರೂಪವನ್ನೇ ಕಂಡಂತೆ ಮೈದುಂಬಿ ಹೃದಯತುಂಬಿ ದೇವರ ಸ್ತುತಿ ಮಾಡಿದ್ದಾರೆ. ಸಗುಣ ರೂಪದಲ್ಲಿ ದೇವರನ್ನು ಕಂಡ ಶರೀಫರ ದ್ವೈತ ತತ್ತ್ವದ ಪದಗಳು ಸಾಕಷ್ಟಿವೆ. ಸಗುಣ ತತ್ತ್ವದ ಸ್ಪಷ್ಟ ಅರಿವು ಕ್ಷೇತ್ರದರ್ಶನದಲ್ಲಿ ಸ್ಪಷ್ಟವಿರುವುದರಿಂದ ಆ ಪದ್ಯಗಳಲ್ಲಿ ಕೆಲವನ್ನು ಹೆಸರಿಸಲಾಗಿದೆ. ಶರೀಫರ ಪ್ರಾರಂಭಿಕ ಭಕ್ತಿಯು ದ್ವೈತ, ಸಗುಣ ತತ್ತ್ವದ ದೇವರನ್ನು ಒಳಗೊಂಡಿರುವುದನ್ನು ಗಮನಿಸಬಹುದಾಗಿದೆ. ನವವಿಧ ಭಕ್ತಿಯಲ್ಲಿ ದೇವರ ಮಹಿಮೆ, ಸ್ತುತಿಯನ್ನು ಸಾರುವ ಪದಗಳೇ ದ್ವೈತ ಸಿದ್ಧಾಂತವನ್ನು, ಸಗುಣ ರೂಪದ ದೇವರನ್ನು ಬಣ್ಣಿಸುತ್ತವೆ. ಉದಾ: "ಪಾಲಿಸಯ್ಯ ಪಾರ್ವತಿ ಪತಿ"

"ಮೈಲಾರ ಮಹಾದೇವ ಕೈಲಾಸಪತಿಯೆ", "ನಡಿಯೋ ದೇವರ ಚಾಕರಿಗೆ", "ಅಪ್ಪಯ್ಯನ ಪಾದಾ ಕಂಡೆ", "ನಾ ಕಂಡೆನೀಗ ಶಾಕಾಂಬರಿಯ", "ಭಲರೆ ಬಾಲದಂಡ ಹನುಮ", "ಹಮ್ ತೋ ದೇಖಾ ಮಹಮ್ಮದ್ ನೂರೆಗಂವಾರ್", "ಎಲ್ಲಮ್ಮನ ಜಾತ್ರೆಗೆ ಬಲ್ಲವರು ಹೋಗಿ" ಇನ್ನೂ ಅನೇಕ ಭಕ್ತಿಪದಗಳಲ್ಲಿ ದೇವರ ಸಗುಣ ರೂಪವನ್ನು ನೋಡಿ ಭಕ್ತಿಯಿಂದ ಮೈಮರೆತು ದೇವರನ್ನು ಬಾಹ್ಯ ದೇಗುಲದಲಿ ತಾವು ಕಂಡ ಧನ್ಯತೆಯಲ್ಲಿ ಪದ ಹಾಡಿದ್ದಾರೆ.

ಪಾರಮಾರ್ಥಿಕ ಪಥದ ಪ್ರಥಮ ಹಂತದಲ್ಲಿ ಭಕ್ತ ಹಾಗೂ ದೇವರ ಮಧ್ಯೆ ದ್ವೈತ ಭಾವವಿದ್ದರೂ ಗುರುಸೇವೆ ಗುರುಕೃಪೆಯಿಂದಾಗಿ ಭಕ್ತ-ದೇವರ ನಡುವಿನ ಅಂತರವು ಅಳಿದು ಹೋಗಿ ಜೀವ-ಶಿವರು ಒಂದಾಗಿ ಅದ್ವೈತ ಭಾವದೆತ್ತರಕ್ಕೆ ಭಕ್ತಿ ಹರಿದು ನಿಂತಿದ್ದನ್ನು ಕಾಣುತ್ತೇವೆ.

ಶರೀಫರು ದ್ವೈತಿಗಳೋ, ಅದ್ವೈತಿಗಳೋ, ಶಿವಾದ್ವೈತಿಗಳೋ ಎನ್ನುವುದಕ್ಕಿಂತ ಅವರು ತತ್ತ್ವಪ್ರಿಯರು. ಶಿವನ ಸಾಕ್ಷಾತ್ಕಾರದ ಶಿಖರವನ್ನೇರಲು ಅದ್ವೈತವು ಒಂದು ಮೆಟ್ಟಿಲು. ಆ ಅದ್ವೈತ ಸ್ಥಿತಿಯೇ ಶಿವನ ಸಾಕ್ಷಾತ್ಕಾರದ ಚರಮಸೀಮೆಯಲ್ಲ. ಎಲ್ಲ ಮೆಟ್ಟಿಲುಗಳನ್ನೇರಿ ಕೊನೆಗೆ ಮುಟ್ಟಬಹುದಾದ ಸೂಕ್ಷ್ಮಾತಿಸೂಕ್ಷ್ಮ ಸ್ಥಿತಿಯು ಶಿವಾದ್ವೈತವೆಂದು ಶಿವಾನುಭವಿಗಳಿಂದ ಸಿದ್ಧವಾಗಿದೆ. "ಅದ್ವೈತವನ್ನು ಮೀರಿ ಬೆಳೆಯುವ ಜ್ಞಾನವೇ ಶಿವಾದ್ವೈತ"ವೆಂದು ನಿಜಗುಣರು ಹೇಳಿದ್ದಾರೆ.

ಹಂತ ಹಂತವಾಗಿ ದ್ವೈತದಿಂದ ಅದ್ವೈತಕ್ಕೆ ಏರಿದ ಶರೀಫರ ಭಕ್ತಿಯು "ಗುಡಿಯ ನೋಡಿರಣ್ಣ", "ಹೌದಪ್ಪ ಹೌದು ನೀನೇ ದೇವರು...", "ನಾ ನಾ ಎಂಬುದು ನಾನಲ್ಲ..." ಎಂದು ಹಾಡಿದ. ಅವರ ಅನೇಕ ಪದಗಳಲಿ ಜೀವ-

ದೇವರ ಐಕ್ಯತೆಯನ್ನು ತೂರ್ಯಾವಸ್ಥೆಯ ಭಕ್ತಿಯನ್ನು ಕಾಣುತ್ತೇವೆ. ಭಕ್ತಿಯ ಪ್ರಗತಿಯನ್ನು ಜಾಗ್ರತ್ ಸ್ವಪ್ನ, ಸುಷುಪ್ತಿ, ತೂರ್ಯ, ತೂರ್ಯಾತೀತ ಎಂಬ ಐದು ಅವಸ್ಥೆಗಳನ್ನು ಗುರುತಿಸಲಾಗಿದೆ.

ಮನುಷ್ಯನ ಅಂತರಂಗ, ಬಹಿರಂಗ ಕ್ರಿಯೆಗಳು ಜಾಗೃತಾವಸ್ಥೆಯನ್ನು ಸೂಚಿಸುತ್ತವೆ. ಅಂತರಂಗವು ವಿಕಾಸ ಹೊಂದಿದಾಗ ಬಾಹ್ಯ ಕ್ರಿಯೆಗಳ ಮೇಲಿನ ಲಕ್ಷ್ಯವು ಹೊರಟು ಹೋಗಿ ಅದು ಜಾಗೃತವಾಗುತ್ತದೆ. ಇದು ಸ್ವಪ್ನಾವಸ್ಥೆ, ಬಾಹ್ಯ ಮತ್ತು ಅಂತರಂಗ ಎರಡೂ ಕ್ರಿಯೆಗಳು ನಷ್ಟವಾಗಿ "ನಾ...ನಾ... ಎಂಬುದು ನಾನಲ್ಲ ಈ ಮಾನುಷ ಜನ್ಮವು ನಾನಲ್ಲ..." ಎಂಬ ಅರಿವು ಮೂಡುವುದು.

ಈ ಎರಡೂ ಪದಗಳು ಶರೀರವನ್ನೇ ಕುರಿತು ಹಾಡಿದವುಗಳಾಗಿವೆ. ನಮಗೆ ಕಾಣುವ ಈ ಜಗತ್ತು, ಈ ಜಗತ್ತನ್ನು ಕಾಣುವ ನಾವು ಈ ಎರಡರ ಮೂಲತತ್ತ್ವವನ್ನು ತಲಸ್ಪರ್ಶಿಯಾಗಿ ಅರಿಯುವ ಹಂಬಲವೇ ಇಲ್ಲಿಯ ತತ್ತ್ವಚಿಂತನೆಯಾಗಿದೆ. ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಈ ಜಗತ್ತು ಅಗಾಧವೂ, ಅದ್ಭುತವೂ ಆಗಿದೆ. ಈ ಅದ್ಭುತಗಳನ್ನು ಪರಿಶೀಲಿಸುವ ಮನುಷ್ಯನಾದರೂ ಒಂದು ಅಸಾಮಾನ್ಯ ಅದ್ಭುತವೇ. ಮನುಷ್ಯನು 'ನನ್ನ ಮನೆ', 'ನನ್ನ ವಸ್ತು' ಎನ್ನುವಂತೆ 'ನನ್ನ ದೇಹ' ಎನ್ನುತ್ತಾನೆ. ಆದರೆ ನನ್ನ ಮನೆ ನಾನಲ್ಲ, ನನ್ನ ವಸ್ತು ನಾನಲ್ಲ ಎಂದು ತನಗೂ ವಸ್ತುಗಳಿಗೆ ಇರುವ ಅಂತರವನ್ನು ನಿಶ್ಚಿತವಾಗಿ ಗಮನಿಸಿದಂತೆ ತನ್ನ ಶರೀರ ತಾನಲ್ಲವೆಂದು ಸ್ಪಷ್ಟವಾಗಿ ಯೋಚಿಸುವುದಿಲ್ಲ. ನಮ್ಮ ಧರ್ಮಗ್ರಂಥಗಳು, ಮುಖ್ಯವಾಗಿ ಭಗವದ್ಗೀತೆ ನಿಸ್ಸಂಶಯವಾಗಿ ಸಾರುವುದೇನೆಂದರೆ– ನಮ್ಮ ಮನೆ, ನಮ್ಮ ವಸ್ತುವಿನೊಂದಿಗೆ ಹೇಗೆ– ನಮ್ಮ ಸಂಬಂಧವಿರುತ್ತದೆಯೋ ಅದೇ ರೀತಿಯ ಸಂಬಂಧ ನಮ್ಮ ಶರೀರಕ್ಕೂ ಇರುತ್ತದೆ. ಈ ಶರೀರವನ್ನು ಎಷ್ಟೇ ನಮ್ಮದೆಂದರೂ ಒಂದು ದಿನ ಬಿಟ್ಟು ಹೋಗುವ ಖಾಲಿಮನೆಯಾಗಿದೆ. ತಾತ್ಕಾಲಿಕವಾಗಿ ದೇಹದಲ್ಲಿ ವಾಸ ಮಾಡಿದ ಆತ್ಮನು, ವಸ್ತುವನ್ನು ಮನುಷ್ಯನು ದೂರ ಮಾಡಿದಂತೆ, ದೇಹವೆಂಬ ಮನೆಯನ್ನು ತೊರೆಯುವನು. ಆಗ 'ನಾನು' ಎನ್ನುವ ಈ ಶರೀರ, ಆತ್ಮದಿಂದ ಬಿಡುಗಡೆ ಹೊಂದಿದ ಮೇಲೆ 'ನಾನು' ಹೇಗಾಗುವುದು? ಎಂಬುದನ್ನು ಶರೀಫರು 'ನಾನು' ಎಂಬ ಪದ ಅರ್ಥವನ್ನು 'ನಾ...ನಾ... ಎಂಬುದು ನಾನಲ್ಲ..." ಎಂಬ ಪದದಲ್ಲಿ ಹಾಡಿದ್ದಾರೆ. ಮಾನವ ಜನ್ಮದ ಪರಮ ಪುರುಷಾರ್ಥವೆಂದರೆ ಪರಮಾತ್ಮನ ಪ್ರಸಾದವನ್ನು ಪಡೆದುಕೊಂಡು ಜೀವದ ಸ್ವರೂಪ ಗುಣಗಳನ್ನು ಮತ್ತೆ ಗಳಿಸಿಕೊಂಡು, ಮುಕ್ತನಾಗಿ ಪರಮಾತ್ಮನ ಸನ್ನಿಧಿಯಲ್ಲಿ ಸೇವಾಭಾವದಿಂದ ನಿತ್ಯ ನೆಲೆಸುವುದು.

ಮಾನವ ಜನ್ಮ ಒದಗಿರುವುದೇ ಈ ಪ್ರಯೋಜನದ ಸಾಧನೆಗೆಂಬ ಕಾರಣದಿಂದ ಅದಕ್ಕೆ ಮಾನವ ಶರೀರವು ಸಾಧನವಾಗಿದೆ. ದೇಹವಿದ್ದರೂ ದೇಹವಿಲ್ಲದಂತೆ, ಜೀವಭಾವವಿಲ್ಲದಂತೆ ಮೊಟ್ಟ ಮೊದಲು ಮಾಡಿಕೊಳ್ಳಬೇಕು. 'ಆತ್ಮ'ವನ್ನು ಹಿಂದಿಕ್ಕಿ 'ನಾನು' ಎಂಬುದು ತಾನು ದೇಹವೆಂದು ತಿಳಿದು ಪಾಡು ಪಡುತ್ತದೆ. ಸುಖ-ದುಃಖಗಳನ್ನು ಅನುಭವಿಸುತ್ತದೆ. 'ನಾನು' ಎಂಬುದು ಅಡಗಿದರೆ ಕಳವಳ ಎಲ್ಲಿಯದು? ಪುಣ್ಯಪಾಪಗಳೆಲ್ಲಿಯವು? 'ತಾನು' ಎಂದು ತಿಳಿದುಕೊಂಡಿರುವುದು ಪರವಸ್ತು ಪರಮಾತ್ಮನದಾಗಿರುವಾಗ, ಮನಸ್ಸಿನಲ್ಲಿ ಬೇರೊಂದು ದೇವರನ್ನು ಕಲ್ಪನೆ ಮಾಡಿಕೊಳ್ಳುವುದು ಅವನನ್ನು ಹುಡುಕಾಡುವುದು ಅವಿವೇಕವೆಂದು ಶರೀಫರು 'ಗುಡಿಯ ನೋಡಿರಣ್ಣ' ದೇಹದ ಗುಡಿಯ ನೋಡಿರಣ್ಣ ಪದದಲ್ಲಿ ಸ್ಪಷ್ಟವಾಗಿ ಹಾಡಿದ್ದಾರೆ.

"ಗುಡಿಯ ನೋಡಿರಣ್ಣ ದೇಹದ
ಗುಡಿಯ ನೋಡಿರಣ್ಣ
ಗುಡಿಯ ನೋಡಿರಿದು
ಪೊಡವಿಗೆ ಒಡೆಯನು
ಅಡಗಿಕೊಂಡು ಕಡು ಬೆಡಗಿನೊಳಿರುತಿಹ... ಗುಡಿಯ ನೋಡಿರಣ್ಣ

ಮೂರು ಮೂಲೆಯ ಕಲ್ಲ ಆದರೊಳು
ಜಾರುತಿರುವ ಕಲ್ಲ
ಧೀರ ನಿರ್ಗುಣನುಸಾರ ಸಗುಣದಲಿ
ತೋರಿ ಅಡಗಿ ತಾ ವ್ಯಾಪ್ತಾಗಿರುವ... ಗುಡಿಯ ನೋಡಿರಣ್ಣ

ಆರು ಮೂರು ಕಟ್ಟ ಮೇಲಕೆ
ಏರಿದವನೇ ಘಟ್ಟ
ಭೇರಿ ಕಾಳೆ ಶಂಖ ಬಾರಿಸು ನಾದದಿ
ಮೀರಿದಾನಂದ ತೋರಿ ಹೊಳೆಯುತಿಹ...

ಸಾಗುತಿಹವು ದಿವಸ ಬಹುದಿನ
ಹೋಗಿ ಮಾಡಿ ವಾಸ
ಯೋಗಿ ರಾಜ ಶಿಶುನಾಳಧೀಶ ತಾ
ನಾಗಿ ಪರಾತ್ಪರ ಬ್ರಹ್ಮರೂಪನಿಹ... ಗುಡಿಯ ನೋಡಿರಣ್ಣ"[೯]

"ಆರು-ಮೂರು ಕಟ್ಟ..." ಜೀವಾತ್ಮರಿಗೆ ದತ್ತ ಸ್ವಾತಂತ್ರ್ಯವಿದ್ದರೂ, ಇಂದ್ರಿಯಗಳ ಅಷ್ಟಮದಾರ ಹಾಗೂ ಅರಿಷಡ್ವರ್ಗಗಳು ಪ್ರಬಲವಾಗಿರುವುದರಿಂದ ಈ ಶರೀರವೆಂಬ

ಕೋಟೆಯನ್ನು ಅಂಕಿತದಲ್ಲಿಟ್ಟುಕೊಂಡು ಆಳುವುದು ಕಷ್ಟಸಾಧ್ಯ. ಈ ಕಷ್ಟವನ್ನು ಸಾಧ್ಯ ಮಾಡಿಕೊಂಡು ಭಗವಂತನನ್ನು ಬಾಹ್ಯ ದೇಗುಲಗಳಲ್ಲಿ ಕಾಣುವುದಕ್ಕಿಂತ ಹೃದಯಾಂತರಂಗದ ಗುಹೆಯಲ್ಲಿ ಕಾಣುವುದೇ ಸದಾ ಶ್ರೇಷ್ಠವೆಂದು ದೇಹದ ಗುಡಿಯಲ್ಲಿ, ತಾನೇ ದೇವನಾಗಿ, ಒಂದಾಗಿ ಬೆರೆಯುತ್ತಾ, ಬೆಳೆಯುತ್ತಾ, ಬಿಟ್ಟರದೇ ಅನುಭವಿಸುತ್ತ ಅಂತರ್ಯಮುಖಿಯಾಗುತ್ತ ಸ್ವಸ್ವರೂಪವನ್ನು ತಿಳಿದು ಪರಾತ್ಪರ ಬ್ರಹ್ಮರೂಪನಾದ ಶಿಶುನಾಳಧೀಶನೇ ತಾವಾಗಿ ಬ್ರಹ್ಮಾನಂದದಲ್ಲಿ ಎರಡಿಲ್ಲದಂತೆ ಸ್ವಯಂ ದೇವನಾಗುವುದೇ ಬ್ರಹ್ಮಜ್ಞಾನವಾಗಿದೆ. 'ನಾನು' ಎಂಬ ಲವಲೇಶವಿಲ್ಲದ ಬ್ರಹ್ಮರೂಪದ ಆನಂದವನ್ನು ಶರೀಫರು ಹಾಡಿದ್ದಾರೆ.

> **'ದೇಹೋದೇವಾಲಯಃ ಪ್ರೋಕ್ತ:**
> **ಜೀವೋ ದೇವ ಸನಾತನಃ"**

ಎಂಬ ಉಪನಿಷತ್ಸಮ್ಮತವಾದ ಅಭಿಪ್ರಾಯವೇ ಆಗಿದೆ.

ಭಕ್ತಿಜ್ಞಾನ, ವೈರಾಗ್ಯಪೂರಿತ ವಿಹಿತ ಕರ್ಮ ಮಾಡಿ ಮುಕ್ತಿ ಪಡೆಯಬೇಕೆನ್ನುವ ತತ್ತ್ವವನ್ನೇ ಶರೀಫರು ಹಾಡಿದರು. ಆತ್ಮತತ್ತ್ವವನ್ನು ದೇಹದ ಗುಡಿಯಲ್ಲಿ ಗುರುತಿಸಿಕೊಂಡಿದ್ದಾರೆ. ಇಡೀ "ಶರೀರವಲ್ಲಿ ಆತ್ಮವೊಂದೇ ಮೂಲ ತತ್ತ್ವವಾಗಿದ್ದು, ಕೇವಲ ಅದರ ಸಂಕಲ್ಪ ಶಕ್ತಿಯಿಂದ ಈ ದೇಹದ ರಚನೆ ಮತ್ತು ನಿರ್ಮಿತಿಯಾಗಿದೆ. ವಿಕಾರಮಯವಾದ ಶರೀರದಲ್ಲಿ ಅವಿಕಾರಿಯಾಗಿಯೂ, ಪರಿವರ್ತನೆಯಾಗುವ ದೇಹದಲ್ಲಿ ಅಪರಿವರ್ತನೀಯವಾಗಿಯೂ, ಪ್ರತಿಕ್ಷಣವೂ ನಾಶವಾಗುವ ದೇಹದಲ್ಲಿ ಅವಿನಾಶಿಯಾಗಿಯೂ ಅದೊಂದೇ ಇದೆ. ಅದೇ ದೇಹದ ನೈಜ ತತ್ತ್ವವಾಗಿದೆ."

ಎಲ್ಲಿ ಕೇವಲ ಬುದ್ಧಿಗಮ್ಯವಾದ ಮತ್ತು ಇಂದ್ರಿಯಗಳಿಗೆ ಅಗೋಚರವಾದ ಅತ್ಯಂತ ಸುಖದ ಅನುಭವ ಆಗುತ್ತದೆಯೋ, ಒಮ್ಮೆ ಸ್ಥಿರವಾದ ನಂತರ ಯಾವ ತತ್ತ್ವದಿಂದಲೂ ಎಂದಿಗೂ ಚಲಿಸುವುದಿಲ್ಲವೋ, ಯಾವ ಸ್ಥಿತಿಪ್ರಾಪ್ತವಾದ ನಂತರ ಅದುವೇ ಆತ್ಯಂತಿಕ ಸುಖ, ದೇಹದಲ್ಲಿರುವ ಜೀವನು ಆತ್ಮನಾಗಿ, ಆತ್ಮನೇ ಅನಂತರ ಬ್ರಹ್ಮನಾಗುತ್ತಾನೆ. ಅಣುವಿನಲ್ಲಿ ಅಣುವಾಗಿ, ಮಹತ್ತಿನಲ್ಲಿ ಮಹತ್ತಾಗಿ ಎಲ್ಲೆಲ್ಲಿಯೂ ವ್ಯಾಪಿಸಿರುವೆನೆಂಬ ಭಾವವೇ ಬ್ರಹ್ಮ. ಸಾಧಕ ಈ ಬ್ರಹ್ಮನಲ್ಲಿಯೇ ಬ್ರಹ್ಮಾನಂದವನ್ನು ಹೊಂದುವನು ಎಂದು ಸಂತ ಶರೀಫರು ನುಡಿದಿದ್ದಾರೆ.

> **"ಸದಾನಂದ ಪರಮಾತ್ಮ ಬೋಧಮಯ**
> **ಇದೇ ಬ್ರಹ್ಮಜ್ಞಾನ ನೋಡಿಕೋ ಇದೇ ಬ್ರಹ್ಮಜ್ಞಾನ**

ಯೋಗಿಯಾಗಿ ಸಂಭೋಗವನಳಿದು
ರಾಗವಳಿದು ನಿಜರಾಗವ ಪಡಿಯಲು
ಇದೇ ಬ್ರಹ್ಮಜ್ಞಾನ ನೋಡಿಕೋ ಇದೇ ಬ್ರಹ್ಮಜ್ಞಾನ[೫೪]

ಜೀವನದ ವಿಚಾರದಲ್ಲಿ, ಆತ್ಮೋದ್ಧಾರದ ವಿಚಾರದಲ್ಲಿ ಶರೀಫರ ತತ್ತ್ವಗಳು ಸರಳವಾಗಿದ್ದು, ಆಶಾವಾದವನ್ನು ತುಂಬುತ್ತವೆ. ಇಹಲೋಕದ ಜೀವನವನ್ನು ತುಂಬು ಜೀವನವನ್ನಾಗಿ ಮಾಡಿಕೊಂಡು ಮನುಷ್ಯದೇಹ ಧರಿಸಿದ್ದಕ್ಕೆ ದುಃಖಿಸದೇ ಪರಮಾರ್ಥದ ಆನಂದವನ್ನು ದೊರಕಿಸಿಕೊಳ್ಳಬೇಕು. ಪ್ರಪಂಚದಲ್ಲಿದ್ದರೂ ಪ್ರಾಪಂಚಿಕ ವಿರತಿಯನ್ನು ಹೊಂದಿದವನೇ ಹಿರಿಯ. ಲೌಕಿಕ–ಪಾರಮಾರ್ಥಿಕ, ನಿಜ–ಸುಳ್ಳು, ಇವುಗಳಿಗಿರುವ ಅತಿಸೂಕ್ಷ್ಮವಾದ ಅಂತರವನ್ನು ಅರಿತು, ಅವಿನಾಶಿಯಾದ ಅನಂತದಲ್ಲಿಯ ಏಕಸ್ಮಿತಿಯನ್ನು ಅರಿಯಲೆತ್ನಿಸಬೇಕು. ಪರಮಾರ್ಥ ಪಡೆಯಲು ಕರ್ಮೇಂದ್ರಿಯಗಳನ್ನು ಮೆಲ್ಲನೆ ಪಕ್ಕಕ್ಕೆ ಸರಿಸಿ ಹೊರಗಿನ ಕ್ರಿಯೆಗಳನ್ನೆಲ್ಲಾ ತ್ಯಜಿಸಿ, ಒಳಮಾರ್ಗವೊಂದನ್ನೇ ಅನುಸರಿಸಿ, ಗುರುಮಾರ್ಗದಲ್ಲಿ ಭಕ್ತಿಯ ಅಭ್ಯಾಸವನ್ನು ಮಾಡಿ, ಚಿಂತನಾಶೀಲ ಮನಸ್ಸಿನ ಅರಿವಿಗೆ ಬಂದು ನಶ್ವರತೆ, ಮಾಯೆ, ಜನನ–ಮರಣವನ್ನು ಗೆಲ್ಲಬೇಕು. ಲೌಕಿಕ ಬದುಕನ್ನು ಶುದ್ಧಗೊಳಿಸಿದಾಗಲೇ ಪರಮಾರ್ಥದ ಹಾದಿ ಗೋಚರಿಸುವುದರಿಂದ, ಪ್ರಪ್ರಥಮವಾದ ಅವಶ್ಯಕವಾದ ಭೌತಿಕ ಬದುಕಿನ ಸಾರ–ನಿಸ್ಸಾರದ ಅರಿವಿನ ಮೇಲೆಯೇ ಶರೀಫರ ಪರಮಾರ್ಥ ಗಟ್ಟಿಗೊಂಡಿದೆ. ಆಧ್ಯಾತ್ಮದ ತುತ್ತ ತುದಿಯಲ್ಲಿ ವಿರಮಿಸುವ ಅವರ ಪದಗಳು ಬದುಕಿನ ಬೇರಿನಿಂದಲೇ ಚಿಗುರಿದವುಗಳಾಗಿವೆ.

ಆತ್ಮಬಲ ಬೆಳೆಸಿಕೊಳ್ಳಲೆಂದು ಅನುಸರಿಸಿಕೊಂಡು ಬಂದ ಆತ್ಮ ನಿರೀಕ್ಷಣೆಯ ದಾರಿ, ತಮ್ಮನ್ನು ತಾವು ಮೊದಲು ತಿದ್ದಿಕೊಂಡು ತಾನಾರೆಂಬ ತಿಳಿಯುವ ಪರಮಾರ್ಥ ಯೋಗ್ಯಮಾರ್ಗವಾಗಿದೆ. ಆತ್ಮ ನಿರೀಕ್ಷಣಾ ದಾರಿಯಲ್ಲಿ ತೊಡಗಿಸಿಕೊಂಡಾಗ ಕಂಡುಂಡ ಅನುಭವಗಳೇ ಪರಮಾರ್ಥ ಗೀತೆಗಳಾಗಿವೆ. ನಿಜಸುಖವೇ ಮನುಷ್ಯನ ಆತ್ಯಂತಿಕ ಧ್ಯೇಯವಾಗಿರುವುದರಿಂದ ಆ ಸಾಧನೆಯ ಕುರಿತು ಅನುಭವಪೂರ್ಣ ತತ್ತ್ವಪದಗಳನ್ನು ರಚಿಸಿದ್ದಾರೆ.

ಅಧ್ಯಾತ್ಮ ಶಕ್ತಿಯ ಪ್ರತ್ಯಕ್ಷ ಜ್ಞಾನವೇ ಸಾಕ್ಷಾತ್ಕಾರವಾಗಿದೆ. ಸಾಕ್ಷಾತ್ಕಾರ ಎಂಬುದು ಅಂತರಂಗದ ದಿವ್ಯ ಅನುಭವವು. ಶರೀಫರ ಅನುಭವದ ಗೀತೆಯಲ್ಲಿ ಸಂತನು ಸಾಧನಾ ವ್ಯಕ್ತಿಯಾಗಿದ್ದು, ಎಲ್ಲ ಕಡೆಗೂ, ಎಲ್ಲದರಲ್ಲಿಯೂ ದೈವಾಂಶವನ್ನು ಕಾಣುವನು. ಲೌಕಿಕವನ್ನು ಮೀರಿ ಬೆಳೆದ ಸಂತನ ಶಾರೀರಿಕ ಮತ್ತು ಮಾನಸಿಕ

೫೪. ಅದೇ, ಪು. ೪೪.

ಲಕ್ಷಣಗಳನ್ನು ಶರೀಫರು "ಹೌದಪ್ಪ ಹೌದು ನೀನೇ ದೇವರು" ಪದದಲ್ಲಿ ಹಾಡಿದ್ದಾರೆ. ಸಂತನ ಶರೀರವು ಜಳಕ ಮಾಡದೆಯೂ ತುಂಬ ನಿರ್ಮಲವಾಗಿರುವುದು. ಅವನ ಮುಖವು ಚಂದ್ರ-ಸೂರ್ಯರ ಕಳೆಯಿಂದ ಹೊಳೆಯುತ್ತಿರುತ್ತದೆ.ಅವನು ಧ್ಯಾನ ಮಾಡಿ ಬಂದಾಗ ಅಭ್ಯಂಗ ಸ್ನಾನ ಮಾಡಿದವನಂತೆ ಕಾಣುತ್ತಾನೆ. ಧ್ಯಾನದಿಂದ ಅವನಿಗೆ ಹಿರಿದಾದ ಸಾಮರ್ಥ್ಯ, ಸಮಾಧಾನ ದೊರೆಯುತ್ತದೆ. ಅದರ ಫಲವಾಗಿ ಅವನು ಅನ್ನವನ್ನು ಸೇವಿಸದಿದ್ದರೂ ತೃಪ್ತನಾಗಿರುತ್ತಾನೆ.

ಸಂತನ ಮಾನಸಿಕ ಲಕ್ಷಣಗಳು ಸೆರೆ ಕುಡಿಯದೇ ಅಮಲೇರುವುದು, ಮೈಮರೆಯುವುದು, ಪೂರ್ಣ ಎಚ್ಚರವಿದ್ದೂ ನಿದ್ರೆ ಮಾಡುವುದನ್ನು ಗುರುತಿಸಬಹುದು. ಇವನು ಜನರಿಗೆ ಜಡನಂತೆ, ಮೂಢನಂತೆ ಕಾಣುವನು. ಇಂಥ ಅವಸ್ಥೆಯ ಸಂತನು ಭೂತ-ಭವಿಷ್ಯತ್‌ನ್ನು ಅರಿಯುವ ಸಾಮರ್ಥ್ಯ ಹೊಂದಿರುತ್ತಾನೆ.

ಶರೀಫರ ಪದಗಳಲ್ಲಿ ಪಾರಮಾರ್ಥ ಸಂಗೀತದ ಅನುಭಾವ ವಿರುವುದನ್ನು ಕಾಣಬಹುದು.

"ಬೋಧ ಒಂದೇ ಬ್ರಹ್ಮನಾದ ಒಂದೇ
ಸಾಧನ ಮಾಡುವ ಹಾದಿ ಒಂದೇ
ಆದಿ ಪದ ಒಂದೇ"[೫೫]

ರಾನಡೆಯವರು ಹೇಳಿರುವಂತೆ, "ಈ ಪದದಲ್ಲಿ ಶರೀಫರು ಮಹತ್ವವಾದ, ನೂತನವಾದ, ಸ್ವತಂತ್ರವಾದ ರಾಗದ ಬಗ್ಗೆ ಹೇಳಿದ್ದಾರೆ. ಅನುಭಾವ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಕೇಳುವ ಅನಾಹತನಾದದ ಅನುಭವದ ಬದಲಾಗಿ ಪಾರಮಾರ್ಥಿಕ ನಾದದ ಅನುಭವವನ್ನು ಹೇಳುತ್ತಾರೆ. 'ರಾಗಿ' ಎಂಬ ಸಂತರನ್ನು ವಿಶೇಷವಾಗಿ ಗುರುತಿಸಿದವರು ಶರೀಫರು, ಇಂಥ ಸಂತರನ್ನು ಕಾಣುವುದು ಕಠಿಣ. ಸಂಗೀತ ಮತ್ತು ಸಾಕ್ಷಾತ್ಕಾರಗಳನ್ನು ಕೂಡಿಸುವುದು ಸುಸಾಧ್ಯವು. ಅವೆರಡನ್ನೂ ಕೂಡಿಸುವವನೇ 'ರಾಗಿ' ಎಂದು ಶರೀಫರು ಹೇಳುತ್ತಾರೆ. ಅನುರಾಗದಿಂದ ಹುಟ್ಟಿದ ರಾಗಿಯು ಪ್ರೇಮಪೂರ್ಣನಾಗಿರುತ್ತಾನೆ. ಇಂತಹ ಸಂತನ ಹೃದಯದಲ್ಲಿಯೇ ಪಾರಮಾರ್ಥಿಕ ದೈವಿ ಸಂಗೀತದ ಸೆಲೆಯು ಪುಟಿಯುವುದು. ಇದೇ ನಿಜರಾಗವಾಗಿದೆ. ಈ ನಿಜರಾಗವನ್ನು ಅರಿಯುವುದು ನುಡಿಸುವುದು ಅಷ್ಟು ಸುಲಭವಲ್ಲ. ಅದು ವೀಣೆಯ ಸಂಗೀತವಲ್ಲ; ಬೇರೆ ವಾದ್ಯಗಳ ಸಂಗೀತವಲ್ಲ. ಇಲ್ಲವೆ ತಮ್ಮ ಮನಬಂದಂತೆ ಹಾಡಿದ ಸಂಗೀತವಲ್ಲ. 'ನಿಜರಾಗವು' ನಮ್ಮ ಅಂತರಂಗದಲ್ಲಿಯ ಚೈತನ್ಯದ ಆಳದಿಂದ

---

೫೫. ಅದೇ, ಪು. ೪೫.

ಹೊರಹೊಮ್ಮಿದ ಶ್ರುತಿಯಾಗಿದೆ. ಯೋಗಿಯಾಗಿ ಸಂಭೋಗವನಳಿದು, ರೋಗವಳಿದು ನಿಜರಾಗವ ನುಡಿಯಲು ಸಾಧಕನು ಆ ದೈವಿ ಸಂಗೀತವನ್ನು ಕೇಳುವನು. ಅದು ಅವನ ಆತ್ಮದ ಅಂತರಾಳದಿಂದ ಸಹಜವಾಗಿ ಹೊರ ಹೊಮ್ಮುವುದು. ಅದೇ ಮೇರೆಗೆ ಅಂಥ ನಿಜರಾಗವು ನಮ್ಮ ಜೀವನದ ಅಂತರತಮ ಮೂಲೆಯಿಂದ ತನ್ನಿಂದ ತಾನೇ ಚಿಮ್ಮಬೇಕು. ಈ ಅವಸ್ಥೆಯಲ್ಲಿ ಪ್ರಾಪಂಚಿಕ ಭೋಗ, ರೋಗಗಳಿಂದ ಮುಕ್ತರಾಗುವೆವು ಮತ್ತು ಪರಮಾತ್ಮಭರಿತವಾದುದನ್ನು ಅನುಭವಿಸುವೆವು. ಪರಮಾತ್ಮನ ಆಜ್ಞೆಯ ಮೂಲಕವೇ ಈ ಸಂಗೀತ ಹೊರ ಚಿಮ್ಮುವುದು. ಇದು ಎಲ್ಲ ಬಗೆಯ ಸಂಗೀತಕ್ಕಿಂತ ಭಿನ್ನವಾಗಿದ್ದು, ಅಸಾಧಾರಣ ವಾಗಿರುವುದು ಎಂದು"[೫೬]

"ಬಿಂದು ಒಂದೇ ನಿಜಾನಂದ ಒಂದೇ...
ಶಿಶುನಾಳಧೀಶನ ಭಾಷೆ ಒಂದೇ
ಭವನಾಶ ಒಂದೇ..."[೫೬]

ಪಾರಮಾರ್ಥಿಕ ಅಣುವಿನ ದರ್ಶನವು ಪಾರಮಾರ್ಥಿಕ ಜೀವನದಲ್ಲಿಯ ಅದೀಮ ತೀರ. ಪ್ರಾಥಮಿಕ ಅನುಭವಗಳಲ್ಲಿ ಒಂದು. ಶರೀಫರ ಪಾರಮಾರ್ಥಿಕ ಪದಗಳಲ್ಲಿ ಬಿಂದು-ನಾದ-ಕಳೆ ಇವುಗಳನ್ನು ಪ್ರಸ್ತಾಪಿಸಿದ್ದಾರೆ. ಶೂನ್ಯ ಅಥವಾ ಬಯಲಿನಲ್ಲಿ ಮೊದಲು ನಾದವು ಹುಟ್ಟುತ್ತದೆ. ಜಗತ್ತು ಉಂಟಾಗಬೇಕೆಂಬ ಅಭಿಲಾಷೆಯೇ ಇದಕ್ಕೆ ಕಾರಣ. ನಾದ ಎಂದರೆ ಒಂದು ಬಗೆಯ ಕಂಪನ. ಇದರಿಂದಾಗಿ ಬಿಂದುವು ಉದಯವಾಗುತ್ತದೆ. ಬಿಂದುವು ವಸ್ತುವೆಂದು ಹೇಳಬಹುದು. ಅದು ಸ್ಥೂಲವು. ಅದರಲ್ಲಿ ನಾದವಿದೆ. ಈ ನಾದವು ಬಿಂದುವಿಗೆ ಚೈತನ್ಯ ಕೊಡುತ್ತದೆ. ಇವೆರಡೂ ಪರಾವಲಂಬಿಗಳು. ಈ ಎರಡೂ ಪ್ರಕಟವಾದ ಕೂಡಲೇ ಕಲೆಯು ಆ ವಸ್ತುವಿನಲ್ಲಿ ಉತ್ಪನ್ನವಾಗುತ್ತದೆ. ಈ ಕಲೆಯ ಮುಖಾಂತರವೇ ವಸ್ತುವಿನ ಗುಣ, ರೂಪ ಮೊದಲಾದವುಗಳನ್ನು ಗುರುತಿಸಬಹುದು. ನಾದ-ಬಿಂದು-ಕಲೆಗಳು ಯಾವಾಗಲೂ ಒಂದಾಗಿರುತ್ತವೆ.

ಶರೀಫರು "ಬಿಂದು ಒಂದೇ ನಿಜಾನಂದ ಒಂದೇ..." ಎಂದು ಹಾಡುತ್ತ, ಜಗತ್ಸೃಷ್ಟಿಯ ರಹಸ್ಯವನ್ನು ಹೇಳಿ ನಾದ-ಬಿಂದು-ಕಲೆಗಳನ್ನು ವಿವರಿಸುವರು. ಅಂತಿಮ ಘಟ್ಟದಲ್ಲಿ ಶರೀಫರು ಸೃಷ್ಟಿಯ ರಹಸ್ಯವನ್ನು ಭೇದಿಸಿ, ಎಲ್ಲವನ್ನೂ ಮೀರಿದ ಮೂಲ ಸಿತಿಯಾದ ಏಕತೆಯನು. ಪರಮಾತನಲಿ ಲಯವಾಗಿಸಿಕೊಂಡರು.

"...ನರದೇಹವಿದು ನಾನಲ್ಲ
ಜರೆಮರಣಾದಿಯು ನಾನಲ್ಲ
ನಾದ ಬಿಂದು ಕಳೆ ನಾನಲ್ಲ...
ನಾನಾರೂಪವು ನಾನಲ್ಲ..."[೫೮]

ಎಂದು ಹಾಡುತ್ತ ತಮ್ಮ ರೂಪವನ್ನು ದೈವದ ಏಕತೆಯ ಚೈತನ್ಯದಲ್ಲಿ ಗುರುತಿಸಿಕೊಳ್ಳುವರು. ಜೀವ ದೇವನಾಗುವ ಮಾರ್ಗದಲ್ಲಿ ಭಕ್ತಿಗೆ ಮೊದಲ ಸ್ಥಾನ. ದೈವ ಸಾಕ್ಷಾತ್ಕಾರದ ಉತ್ತಮ ಸಾಧನ ಭಕ್ತಿಯಾಗಿದೆ. ಭಕ್ತಿ ಭಾವದಿಂದ ಜೀವನು ಉತ್ತಮವಾಗಿ ಬಾಳುತ್ತಾನೆ. ದೈವತ್ವವನ್ನು ಪಡೆಯುತ್ತಾನೆ. ಜೀವೋನ್ನತಿಗೆ ಭಕ್ತಿ ಅನಿವಾರ್ಯವಾಗಿದೆ.

೩.೬ ಗುರುಕೃಪೆ, ಸತಿಭಾವ, ಅಂಕಿತ

ಶರೀಫರ ಜೀವಾಳವಾದ ಭಕ್ತಿಯಲ್ಲಿ ಶಕ್ತಿಸ್ತುತಿ, ದೇವಸ್ತುತಿ, ಗುರುಸ್ತುತಿಗಳಾಗಿ ಅವರ ಭಕ್ತಿಯ ಆಳವನ್ನು ತೋರಿಸುತ್ತವೆ. ಭಕ್ತಿ ಪ್ರಧಾನವಾದ ಮಂಗಳಾರತಿ ಮತ್ತು ದಂಡಕಗಳು ಎಲ್ಲ ಧರ್ಮದ ದೇವರುಗಳನ್ನು ಒಳಗೊಂಡಿವೆ.

ಶರೀಫರ ಭಕ್ತಿಯ ತೀವ್ರತೆಯನ್ನು ಅವರ ಬದುಕಿನ ಘಟ್ಟಗಳಲ್ಲಿ ಆದ ಪರಿಣಾಮದೊಂದಿಗೆ ತಿಳಿಯಬಹುದಾಗಿದೆ. ಗುರು, ಗುರುಕೃಪೆ, ಸತಿಭಾವ ಮತ್ತು ಅಂಕಿತ. ಶರೀಫರ ಪರಮಾರ್ಥ ಸಾಧನೆಯ ತತ್ತ್ವಪದಗಳಲ್ಲಿ ಭಕ್ತಿಮಾರ್ಗವೇ ಮೂಲಾಧಾರವಾಗಿದೆ. ಗುರುಭಕ್ತಿಯು ಈ ಭಕ್ತಿಮಾರ್ಗದ ಪ್ರಥಮ ಸೋಪಾನವಾಗಿದೆ. ಗುರುವಿನ ಮೂಲಕವೇ ಪರಮಾರ್ಥ ಸಾಧಿಸಿ ಮುಕ್ತಿ ಪಡೆದ ಶರೀಫರು 'ಮುಕ್ತಿ ಮೂಲಂ ಗುರೋಃ ಕೃಪಾ' ಎಂಬ ಹೇಳಿಕೆಗೆ ಸಾಕ್ಷಿಯಾಗಿದ್ದಾರೆ.

'ಗುರು' ಎಂದರೆ ಮನದೊಳಗಿನ ಅಜ್ಞಾನದ ಕತ್ತಲೆಯನ್ನು ಹೋಗಲಿಸುವವನು. ಜ್ಞಾನದ ಮೇರು ಪರ್ವತದಂತಿರುವ ಗುರುವೇ ಜ್ಞಾನವಾಗಿರುತ್ತಾನೆ. ಜ್ಞಾನವೇ ಗುರುವಾಗಿರುತ್ತಾನೆ. ಗುರುವೆಂದರೆ ಮೂರ್ತಿವೆತ್ತ ಜ್ಞಾನ. ಹಾಗಾಗಿ ಗುರು ಮತ್ತು ಜ್ಞಾನ ಇವುಗಳಲ್ಲಿ ಭಿನ್ನವಿರುವುದಿಲ್ಲ. ಗುರುವು ವಿಧಿವತ್ ಪಂಡಿತನಾಗಿ, ವೇದಾಂತಶಾಸ್ತ್ರ ಪರಿಣತನಾಗಿ, ಶರಣಾಗತನಾಗಿ ಬಂದ ಶಿಷ್ಯನಿಗೆ ಮರಳಿ ಸಂಶಯ ಕಾಡದಂತೆ ತತ್ತ್ವೋಪದೇಶ ಮಾಡಿ ಅಜ್ಞಾನವನ್ನು ಪರಿಹರಿಸುತ್ತಾನೆ. ಮಾನವನಿಗೆ ಸುತ್ತಿರುವ ಮಾಯೆ, ಮೋಹ, ಸಂಸಾರ ವಿಕಾರದ ವಿಕಟ ವಿಲಾಸವನ್ನು ಪರಿಹರಿಸಿ, ಶುದ್ಧಗೊಳಿಸಿ, ಶಿಷ್ಯನ ಅಂಗಾಂಗದಲ್ಲಿ ಪರಮಾರ್ಥದ ಜ್ಯೋತಿಯನ್ನು ಹಚ್ಚಿ,

೫೮. ಅದೇ, ಪು. ೧೭೮.

ಸತ್ಯದ ಬೆಳಕಿನೆಡೆಗೆ ಕೈಹಿಡಿದು ನಡೆಸುತ್ತಾನೆ. ಅರಿವಿನಲ್ಲಿ, ಅನುಭಾವದಲ್ಲಿ ಗುರುವು ಹಿರಿಯನಾದುದರಿಂದ ಭಕ್ತನ ಸಂಸ್ಕಾರಕ್ಕೆ ಅನುಗುಣವಾಗಿ ಮಂತ್ರೋಪದೇಶ ಮಾಡುತ್ತಾನೆ.

ರಾನಡೆಯವರ ಪ್ರಕಾರ, "ಸದ್ಗುರು ಪರತತ್ತ್ವಶಾಸ್ತ್ರ ವಿಷಯಕ ಮತ್ತು ಮೌಲ್ಯಮಾಪನ ಶಾಸ್ತ್ರ ವಿಷಯಕ ಎಂಬ ಎರಡು ಬಗೆಯ ಕಾರ್ಯಗಳನ್ನು ಮಾಡುವನು. ಮೂಲ ಸಮಸ್ಯೆಗಳನ್ನು ಬಿಡಿಸುವುದು ಮೌಲ್ಯಮಾಪನ ಶಾಸ್ತ್ರ. ಅದು ನೀತಿಶಾಸ್ತ್ರ, ಸಮಾಜಶಾಸ್ತ್ರ ಮತ್ತು ಸಮಾಜದರ್ಶನ. ಪರತತ್ತ್ವಶಾಸ್ತ್ರದ ದೃಷ್ಟಿಯಿಂದ ಮೋಹ, ಮಾಯೆಗಳ ಕತ್ತಲೆಯನ್ನು ದೂರೀಕರಿಸುವುದು ಸದ್ಗುರುಗಳ ಎರಡನೆಯ ಕಾರ್ಯ. ಜೀವ-ಜೀವದಲ್ಲಿ ಏಕತೆಯನ್ನು ನೆಲೆಗೊಳಿಸುವುದು ಆತನ ಮೂರನೆಯ ಕಾರ್ಯವಾಗಿದೆ.

ಶಿಷ್ಯನ ಅಹಂಕಾರವನ್ನೆಲ್ಲ ಅಳಿಸುವುದು ಸದ್ಗುರುವಿನ ಮೌಲ್ಯಮಾಪನ ಶಾಸ್ತ್ರೀಯ ಕಾರ್ಯ. ಆತ್ಮನ ನಿಜರೂಪವನ್ನು ಅರಿಯುವ ಮೂಲಕ ಅಹಂಕಾರವು ಜಯಿಸುವುದು. ಇದು ಕಠಿಣವಾದರೂ ಗುರುವಿನ ಮುಖ್ಯ ಕರ್ತವ್ಯವಾಗಿದೆ. ದಯಾಸಿಂಧುವಾದ ಗುರುವು ಶಿಷ್ಯನನ್ನು ಪರಮಾನಂದದ ನೆಲೆಯಲ್ಲಿ ನೆಲೆಗೊಳಿಸಿ ನಂತರ ಅವನನ್ನು ಮೇಲಕ್ಕೆತ್ತಿ ಮುಕ್ತಿಯ ಮಹಾ ಶಿಖರದ ಮೇಲೆ ಇರಿಸುವನು.

ಸದ್ಗುರು ಶಿಷ್ಯನಿಗೆ ಪರತತ್ತ್ವವನ್ನು ಕಾಣಿಸಿದಾಗಲೇ ಹಾಗೂ ಶಿಷ್ಯನು ಅದರ ಬೆಳಕನ್ನು ಹೊಂದಿ ಒಂದಾದಾಗಲೇ ಆ ಸಾಧನಾ ಶಾಸ್ತ್ರವು ಯಶಸ್ವಿಯಾಗುವುದು."

ನಿರ್ಮಲ ಮನಸ್ಸಿನ ಸಾಧಕ ಸದ್ಗುರುವಿಗೆ ಕುಲ-ನೆಲವೆಂಬ ಮತೀಯ ಅರಿವಿನ ಭೇದಭಾವವಿರುವುದಿಲ್ಲ. "ನೀನು ಪರಮನು, ನಿರ್ಮಲನು, ನಿಷ್ಕ್ರಿಯವಾದ ಅರಿವು ನೀನಾಗಿರುವಿ" ಎಂದು ಬ್ರಹ್ಮಜ್ಞಾನದ ಉಪದೇಶ ಮಾಡುವನು. ಬ್ರಾಹ್ಮಣ ಗುರುಗೋವಿಂದರು ಮೋಹಮದೀಯ ಶಿಷ್ಯನಿಗೆ 'ದೇವ ನಿನ್ನೊಳಗಿರುವನು, ನಿಜ ಸುಖವೆಲ್ಲವೂ ನಿನ್ನೊಳಗಿದೆ. ಅನುಭವಿಸಿ ನೋಡು" ಎಂದು ನಿರ್ಮಲವಾದ ಅದ್ವೈತ ತತ್ತ್ವವನ್ನು ಬೋಧಿಸಿದರು. ಅಲ್ಲದೆ ಶರೀಫರ ವ್ಯಕ್ತಿತ್ವದ ಬೆಳವಣಿಗೆಗೆ ಮತ್ತು ಮತೀಯ ಜಂಜಾಟದ ಸಮಾಜಕ್ಕೆ ಅರಿವನ್ನು ನೀಡಿದರು.

ಹೀಗೆ ಶಿಷ್ಯ ಶರೀಫನಿಗೆ ಕರುಣಿಸಿ ದಯಪಾಲಿಸಿದ ಪುಣ್ಯ ಜೀವನದ ಮೂಲಕ ಶಿಷನು ಪಾಪಕರ್ಮಗಳಂದ ಮುಕನಾಗುವನು. ಸದುರು ಶಿಷನಿಗೆ

ನೀಡಿದ ನವಜೀವನದ ಫಲವಾಗಿ ಶಿಷ್ಯನು ಭಗವಂತನ ರೂಪವನ್ನು ಕಾಣುವನು. ಅಪಾರ ಆನಂದವನ್ನು ಪಡೆಯುವನು. ಶಿಷ್ಯನು ತನ್ನ ದೃಷ್ಟಿ ಹೊರಳಿಸಿದರತ್ತ ಅವನಿಗೆ ಭಗವಂತನ ರೂಪ ಕಾಣುವಂತೆ ಗುರುವು ಅನುಗ್ರಹಿಸಿದ. ಸದ್ಗುರುವು ಜೀವಶಿವರಲ್ಲಿ ಇಲ್ಲವೆ ಭಕ್ತ-ಭಗವಂತನಲ್ಲಿ ಏಕತೆಯನ್ನು ನೆಲೆಗೊಳಿಸುವನು. ಬದುಕಿನಲ್ಲಿ ತನ್ನವರನ್ನೆಲ್ಲಾ ಕಳೆದುಕೊಂಡು ಒಂಟಿಯಾಗಿ ಬಾಳಿನ ಕತ್ತಲಲ್ಲಿ ದಾರಿಕಾಣದೇ ದಿಕ್ಕೆಟ್ಟಾಗ, ಗುರುವನ್ನು ಬಿಟ್ಟರೆ ತಾನು ಈ ಅಜ್ಞಾನವೆಂಬ ಅಂಧಕಾರದಿಂದ ಪಾರುಗಾಣಲು ಸಾಧ್ಯವಿಲ್ಲವೆಂದು ಅರಿತು ಭಕ್ತಿಯಿಂದ ದೀನರಾಗಿ ಗುರುವಿನ ಮೊರೆ ಹೊಕ್ಕು ಶರೀಫರು ಬೇಡಿಕೊಳ್ಳುತ್ತಾರೆ.

> "ಗುರುನಾಥಾ ರಕ್ಷಿಸು ಹೇ
> ಕರುಣಾಸಾಗರ
> ನರಜೀವಿಗೆ ಈ ದುರಿತ ಭವದ ಭಯ
> ಪರಿಹರಿಸೆನುತಲಿ ಮೊರೆಹೊಕ್ಕೆನು
> ಪಾಪಾಂಬುಧಿಯನು ಪಾರುಮಾಡೆನುತಲಿ ಶ್ರೀ
> ಪಾದಾಂಬುಜವ ತುಂಬಿಕೊಂಡೆ ಪರಮಾತ್ಮ
> ವಸುಧೆಯೊಳು ಶಿಶುನಾಳಧೀಶನ ಸೇವಕನ
> ವ್ಯಸನಗಳಿದು ಸಂತೋಷದಿ ಸಲಹು"[೫೯]

ಕರುಣಾಸಾಗರನಾದ ಗುರು ಮಾತ್ರ ಸಂಸಾರವೆಂಬ ಪಾಪಸಮುದ್ರದಿಂದ ಮೇಲಕ್ಕೆತ್ತುವನು ಎಂದು ಶರೀಫರು ಗುರುವಿನ ಪಾದಗಳನ್ನೇ ಗಟ್ಟಿಯಾಗಿ ನಂಬಿ ಹುಟ್ಟು-ಸಾವುಗಳೆಂಬ ಈ ಭೂಮಿಯ ಮೇಲಿನ ಭಯವನ್ನು ಹೋಗಲಾಡಿಸಿ ತನ್ನನ್ನು ಕಾಪಾಡಬೇಕೆಂದು ಗುರುವಲ್ಲಿ ಮೊರೆ ಹೋಗುವರು. ತನ್ನ ವ್ಯಸನಗಳನ್ನು ನಾಶಗೊಳಿಸಿ ಗುರುವಿನಲ್ಲಿಯೇ ಒಂದಾಗಿ ಸಂತೋಷ ಪಡುವಂತೆ ಅನುಗ್ರಹಿಸ ಬೇಕೆಂದು, ಬೇಡಿಕೊಳ್ಳುವರು. "ಸದ್ಗುರುನಾಥನ್ಹೊರತು ಗತಿ ಬೇರಿಹುದೆ?" ಎಂದು ಮುಕ್ತಿದಾತನಾಥ ಗುರುವೇ ತನಗೆ ಪರಮ ಗತಿಯನ್ನು ಒದಗಿಸುವನೆಂದು ದೃಢವಾದ ಭಕ್ತಿಯಿಂದ ಹಾಡಿ ಸ್ತುತಿಸಿದ್ದಾರೆ.

ಜಡದೇಹಿಯಾದ ಶರೀಫರು ದೇವರ ಸ್ವರೂಪವನ್ನು ಗುರುವಿನಲ್ಲಿ ಕಾಣುತ್ತ, ತನ್ನ ಮನದ ವ್ಯಸನ ಮಲೀನತೆಯನ್ನು ಹರಿದು ಸತತವಾಗಿ ಮನಸ್ಸು ಹರನಾಮ ಧ್ಯಾನದಲ್ಲಿ ಮಗ್ನವಾಗುವಂತೆ ಮಾರ್ಗದರ್ಶನ ನೀಡಿ ರಕ್ಷಿಸಬೇಕೆಂದು ಗುರುವನ್ನು ಬೇಡುವರು, ಗುರುವಿನಲ್ಲಿ ದೇವರನ್ನು, ತಂದೆಯನ್ನು ಕಾಣುತ್ತ ತಾನು ಶಿಷ್ಯ-

---

೫೯. ಅದೇ, ಪು. ೪೧.

ಶಿರುವಾಗಿ ಅನನ್ಯ ಭಕ್ತಿಯಿಂದ ತಮ್ಮ ಕರ್ಮಕಂಟಕಗಳನ್ನು, ಭವ ಬಂಧನವನ್ನು ಕಡಿಯದೇಕೆಂದು ಪ್ರಾರ್ಥಿಸುವರು.

"ನಂಬಿದೆನಯ್ಯಾ ನಿನ್ನ ಸದ್ಗುರುರಾಯಾ
ರಕ್ಷಿಸು ಎನ್ನ ಪ್ರಿಯಾ...
ಹರನಾಮ ಧ್ಯಾನದಲಿ ಪ್ರೇಮದಲಿ
ಕರಿಗೊಂಡು ಮನಸಿನಲಿ ಪರಮ್ಯಸನವನು ಹರಿದು...
ಜಡದೇಹಿ ಜಗದಿ ನಾನು ಪರಂಜ್ಯೋತಿ
ಮೃಡರೂಪ ಮೂರ್ತಿ ನೀನು"[೮]

ಸದ್ಗುರು ದೊರಕುವುದು ಪೂರ್ವಜನ್ಮದ ಪುಣ್ಯಫಲದಿಂದ ಮಾತ್ರ, ಗುರುವಿನಿಂದ ಮಾತ್ರ ಗುರಿ ತಲುಪಲು ಸಾಧ್ಯ. ಶಾಶ್ವತ ಸುಖದ, ಆನಂದದ ಗುರಿಯ ಗುರುತನ್ನು ಗುರುವು ಮಾತ್ರ ಬಲ್ಲವನಾದುದರಿಂದ ಬದುಕಿನಲ್ಲಿ ಪರಮಾರ್ಥ ಸಾಧನೆಗೆ ಸದ್ಗುರುವಿನ ಅನುಗ್ರಹ ಇರಲೇಬೇಕು. ಗುರುಕೃಪೆಯಿಂದ ನರಜನ್ಮ ಪಾವನವಾಗಿ, ಹಿಂದಿನ ಜನ್ಮದ ಕರ್ಮಗಳೆಲ್ಲ ಗುರೂಪದೇಶದಿಂದ ನಶಿಸಿ ಹೋಗಿ ಶಿಷ್ಯನು ಮುಕ್ತಿಗೆ ಪಾತ್ರನಾಗುತ್ತಾನೆ. ಪರಮ ನಂಬುಗೆಯ ಗುರುವು ಪರಮಾನಂದವನ್ನು ಕೊಡುವನು ಎಂದಿದ್ದಾರೆ.

"ದೊರಕಿದಾ ಗುರು ದೊರಕಿದಾ
ಪರಮಾನಂದ ಬೋಧ ಅರವಿನೊಳಗೆ ಬಂದು...
ಕರಪಾತ್ರ ಹಿಡಿದು। ಈ ನರ ಶರೀರದಿ ತನ್ನ
ಅರಿವು ತನಗೆ ತೋರಿ। ಪರಮ ನಂಬುಗೆಯಲಿ...
ಹಿಂದೆ ಜನ್ಮಾಂತರ ಒಂದೂ ಉಳಿಯದಂತೆ
ಒಂದೇ ವಸ್ತುವಿನೊಳು ಚಂದದಿಂದಲಿ ಬಂದು..."[೯]

ಜ್ಞಾನದ ಅನಂತ ಕಿರಣಗಳಿಂದ ಶಿಷ್ಯನ ಅಜ್ಞಾನ ಹೋಗಲಾಡಿಸಿ ಮುಕ್ತಿ ಪಥ ತೋರಿಸುವ ಗುರು ದೊರಕಿದನೆಂದು ಭಕ್ತಿಯಿಂದ ಹಾಡಿದ್ದಾರೆ.

ಗುರು ಕರುಣೆಯನ್ನು ಪಡೆದುಕೊಂಡ ಶರೀಫರು ಅದರ ಅನುಭಾವನಾದಕ್ಕೆ ಶರಣಾಗಿ ಬದುಕಿನಲ್ಲಿ ಬರುವ ಎಲ್ಲ ಕಷ್ಟಗಳನ್ನು ಎದುರಿಸಲು ಸಿದ್ಧರಾಗುತ್ತಾರೆ. ಭಕ್ತಿಯು ಸಂಕ್ರಮಣ ಶರೀಫರ ಸ್ಥಿತಿಯಲ್ಲಿ ಹಂತ ಹಂತವಾಗಿ ಬೆಳೆಯುತ್ತಿರುವುದನ್ನು ಕಾಣುತ್ತೇವೆ. ಗುರುಧ್ಯಾನ ಒಂದಿದ್ದರೆ ಎಂತಹ ಕಷ್ಟವನ್ನಾದರೂ ಗೆಲ್ಲಬಹುದೆಂಬ

ನೈತಿಕ ಧೈರ್ಯ ಬರುವುದರ ಜೊತೆಗೆ ಎಂತಹ ಗುರುತರವಾದ ಕಷ್ಟಗಳಿದ್ದರೂ ಬೇಗನೆ ಬಂದು ಹೋಗಲಿ, ಗುರುವಿನ ಧ್ಯಾನದ ಬಲದಿಂದ ಅದನ್ನು ಗೆದ್ದು ಗುರುವಿನಲ್ಲಿ ಆದಷ್ಟು ಬೇಗ ಒಂದಾಗಬೇಕೆಂಬ ಆಸೆಯಿಂದ ಭವದ ಕಷ್ಟಗಳನ್ನು ಆಹ್ವಾನಿಸಿ ಪಂಥ ಕಟ್ಟುತ್ತಾರೆ. ಇದು ಗುರುವು ಶಿಷ್ಯನಿಗೆ ನೀಡಿದ ನೈತಿಕ ಬಲದ ಪ್ರತಿಫಲವಾಗಿದೆ.

> "ಎಂಥಿಂಥಾದೆಲ್ಲಾನು ಬರಲಿ
> ಚಿಂತೆಯೆಂಬುದು ನಿಜವಾಗಿರಲಿ
> ಅಂತರಂಗದಿ ಗುರುವಿನ ಧ್ಯಾನವು
> ಸಂತತ ಕಾಲದಿ ತಾ ನೆಲಸಿರಲಿ..."[೮]

ಎನ್ನುವಲ್ಲಿ ಬದುಕಿನಲ್ಲಿ ಏನೆಲ್ಲ ಕಷ್ಟ ಬಂದರೂ ಗುರುವಿನಿಂದ ದೂರವಾಗಿರಸಲು ಶರೀಫರು ಸಿದ್ಧರಾಗಿಲ್ಲ. ಗುರುವಿನ ಆಧ್ಯಾತ್ಮ ಸುಖದ ಸೋಪಾನದಲ್ಲಿ ಲೌಕಿಕದ ಯಾವ ಕಷ್ಟ-ಕೋಟಲೆಗಳು ಅವರಿಗೆ ಹಿರಿದಾಗಲಿಲ್ಲ. ಸಾಯುಜ್ಯವನ್ನು ಹೊಂದುವ ತೀವ್ರ ಬಯಕೆಯನ್ನು ಈ ಪದ ತಿಳಿಸುತ್ತಲೇ, ಮುಕ್ತಿ ಸಂಪಾದನೆಯು ಕೇವಲ ಸದ್ಗುರುವಿನಿಂದ ಮಾತ್ರ ಸಾಧ್ಯವೆಂಬ ಕಟು ಸತ್ಯವನ್ನು ಅರಿತು ಸದಾ ಕಾಲವು ಗುರುವಿನ ಧ್ಯಾನಕ್ಕಾಗಿ ಮನಸ್ಸು ಹಾತೊರೆಯುತ್ತದೆ. ಗುರುವಿನ ಕರುಣೆ, ಶಿಷ್ಯನ ಅರ್ಹತೆಗಳು ಈ ಪದದಲ್ಲಿ ಮೇಳೈಸಿಕೊಂಡು ಬಂದು ಶಿಷ್ಯನ ಗುರುಭಕ್ತಿಯನ್ನು ಅನನ್ಯಗೊಳಿಸಿವೆ.

ಗುರು ಕಾರುಣ್ಯವು, ಗುರು ಅನುಗ್ರಹವು ಶಿಷ್ಯನ ಸರ್ವ ಶ್ರೇಯೋಭಿವೃದ್ಧಿಗೆ ಮೂಲವಾದುದು. ಸದ್ಗುರು ಅನುಗ್ರಹಿಸಿದ ನಾಮಮಂತ್ರವನ್ನು, ಪ್ರೀತಿಯಿಂದಲೂ, ಭಕ್ತಿಯಿಂದಲೂ ಜಪಿಸುವ ಮಹತ್ವವನ್ನು ವ್ಯಕ್ತಪಡಿಸುತ್ತದೆ. ಇದರಿಂದ ಭೌತಿಕ ಮತ್ತು ಪಾರಮಾರ್ಥಿಕ ಸುಖವು ಲಭಿಸುವುದೆಂದು ಕವಿಯು ಹೇಳುವರು.

> "ಶ್ರೀ ಗುರು ಮಂತ್ರವ
> ರಾಗದಿ ನುತಿಸಲು
> ಬೋಧ ಸಂಪದ ಸುಖವಾಗುವುದು"
>
> ಬರೆದು ಮೂರಕ್ಷರ
> ಕರುಣ ಸೇವಿಸಿದರೆ
> ಜನನ ಮರಣ ಭಯ ನೀಗುವುದು...
> ನೀ ಕಲಿ ಸುಮ್ಮನೆ

---

೬೨. ಅದೇ, ಪು. ೪೩.

ನಾಲ್ಕು ಅಕ್ಷರಗಳ
ಬೇಕೆನಿಸಿದ ವಸ್ತು ಬರುತಿಹುದು..."[೬೩]

"ಭಗವಂತನ ನಾಮದ ಬೇರೆ ಬೇರೆ ಅಕ್ಷರ ಸಂಯೋಜನೆಗಳ ದಾರ್ಶನಿಕ ಹಾಗೂ ಅನುಭಾವಿಕ ವಿಷಯಗಳ ಗರ್ಭಿತಾರ್ಥವನ್ನು ಬೆಳಸಿ ಹೇಳುವರು. ನಾವು 'ಓಂ' ಎಂಬ ಏಕಾಕ್ಷರದ ಅಮರ ಮಂತ್ರವನ್ನು ಸತತವಾಗಿ ನುಡಿಯಲು, ಮಂಡಕೋಪನಿಷತ್ತಿನಲ್ಲಿ ಅರುಹಲಾದ 'ತೈಜಸ' ಎಂಬ ರೂಪದಲ್ಲಿ ನೆನೆದರೆ, ನಾವು ಆ ಮಂತ್ರವನ್ನು ಬೆಳಕಿನ ಹೊನಲಲ್ಲಿ ಕಾಣಬಹುದು. ನಡುವೆ ಶೂನ್ಯವುಳ್ಳ ಅನುಸ್ವಾರವುಳ್ಳ ಎರಡಕ್ಷರಗಳ ಮಂತ್ರಗಳ- ಸಾಂಖ, ಹಂಸ ಇಲ್ಲವೆ ಶಂಭು ಇರಬಹುದು. ಇಂತಹ ಎರಡಕ್ಷರಗಳ ಮಂತ್ರವನ್ನು ದೃಢವಾಗಿ ಹಿಡಿದು, ಅದನ್ನು ಏಕಾಗ್ರತೆಯಿಂದ ಆತ್ಮನಲ್ಲಿ ನಿಲ್ಲಿಸಬೇಕು. ಅಲ್ಲಿಯೇ ಅದು ನಿತ್ಯವಾಗಿ ಪ್ರವಹಿಸುವಂಥೆ ಮಾಡಬೇಕು. ನೀವು 'ಶಂಕರ' ಎಂಬ ಮೂರಕ್ಷರಗಳ ಮಂತ್ರವನ್ನು ನೆನೆದರೆ, ನಿಮ್ಮ ಘಾತಕಗಳೆಲ್ಲ ಅಳಿಯುವವು. ಮತ್ತು ಆ ನಾಮವೇ ಸೂಚಿಸುವಂತೆ ಅದು ನಿಮಗೆ ಜೀವನದಲ್ಲಿ ಎಲ್ಲ ಬಗೆಯ ಕಲ್ಯಾಣವನ್ನು ದಯಪಾಲಿಸುವುದು ಎಂದು ಶರೀಫರು ಹೇಳಿದರು. ಅಂಥ ಇಂಥ ಮಂತ್ರಗಳ ಗೋಜಿಗೆ ಹೋಗದೆ, ನೀವು ನಾಲ್ಕಕ್ಷರಗಳ ಮಂತ್ರವನ್ನು ಜಪಿಸಿರಿ. ಈ ಮಂತ್ರವನ್ನು ನೆನೆದರೆ ನಿಮ್ಮ ಪಾರಮಾರ್ಥಿಕ ಆಕಾಂಕ್ಷೆಗಳೆಲ್ಲ ಫಲಿಸುವವು. ನೀವು ಐದಕ್ಷರಗಳ ಮಂತ್ರವನ್ನು ನೆನೆದರೆ ನೀವು ಪಡೆಯಬಯಸುವ ಪರತಮ ಸತ್ಯವು ನಿಮಗೆ ಖಂಡಿತವಾಗಿ ದೊರೆತೇ ದೊರೆಯುವುದು. ಅದರಿಂದ ನಿಮಗೆ 'ಅಹುದು ಅಹುದು ಎನಿಸುವುದು"[೬೪] ಎಂದು ಶರೀಫರು ಹೇಳುವರು.

ಗುರುಸೇವೆ ಮಾಡುವುದರಿಂದ ತಾಮಸ ಗುಣಗಳನ್ನೆಲ್ಲಾ ಕಳೆದು ಸಾತ್ವಿಕಶಕ್ತಿ ಪಡೆಯಬಹುದು ಎಂದು ಗುರುಸೇವೆಯ ಮಹತ್ವದ ಬಗ್ಗೆ ಹೇಳುವರು.

"ಗುರು ಸೇವಾ ಮಾಡೋ ನೀನು
ಪಾಮರ ಮೂಢ
ಬೋಧದ ಮಾರ್ಗವ ಸಾಧಿಸಿ ಸದ್ಗುರು
ಪಾದ ಸೇವೆಯೊಳು ನಿರತನಾಗಿ ಬೇಗನೆ..."[೬೫]

ಗುರುವಿನ ಬೋಧವು ಸಾಕ್ಷಾತ್ಕಾರದ ಮೊದಲ ಮೆಟ್ಟಿಲು. ಅದೇ ಪಥದಲ್ಲಿ

ಮುಂದೆ ಸಾಗಿ ಗುರಿ ಮುಟ್ಟಲು ಗುರುಸೇವೆ ಮಾಡಬೇಕು. ಗುರುಸೇವೆ ಎಂದರೆ ಪರಮಾರ್ಥಕ್ಕೆ ಸಹಾಯವಾಗುವ ಕಾರ್ಯಗಳನ್ನು ಮಾಡಿ ಜೀವಿತದ ಸಮಯವನ್ನು ಪರಮ ಪಾವನಗೊಳಿಸಿಕೊಳ್ಳುವುದು. ಲೋಕದಲ್ಲಿ ಮೂರ್ಖರೊಂದಿಗೆ, ಅಸತ್ಯ ನುಡಿಯುವವರ ಜೊತೆ ವಾದ, ವಿಮರ್ಶೆ ಮಾಡಿ ಬದುಕಿನ ಗುರಿಯನ್ನೂ ಮತ್ತು ಸಮಯವನ್ನು ಕಳೆದುಕೊಳ್ಳುವ ಬದಲು ಸಂತರ, ಸತ್ಸಂಗದಲ್ಲಿದ್ದು ಗುರುವಾಕ್ಯವನ್ನು ಪಾಲಿಸಬೇಕು. ಆತ್ಮಶುದ್ಧಿಯಾಗುವುದು ಅನುಭಾವದಿಂದ, ವೇದಗಳನ್ನು ಓದಿ ಕೇವಲ ಪಾಂಡಿತ್ಯಗಳಿಸಿ ಪಂಡಿತನಾಗುವ ಬದಲು ಹೃದಯ ಸಂಸ್ಕಾರ ಹೊಂದಿ, ಅನುಭವವನ್ನು ಅನುಭಾವಿಸಿ, ಗುರುವಿನ ಬೋಧದ ಮಾರ್ಗದಿಂದ ನಡೆದು ಗುರುಪಾದದಲ್ಲಿಯೇ ಪರಮಾರ್ಥವನ್ನು ಕಂಡುಕೊಳ್ಳಬೇಕೆಂಬ ತಮ್ಮ ಅನುಭಾವದ ಅಮೃತವನ್ನು ಶರೀಫರು ಪದಗಳಲ್ಲಿ ಹಾಡಿದ್ದಾರೆ. ಮಾನವ ಕುಲದ ಹೃದಯ ಗ್ರಂಥಿಯನ್ನು ಭೇದಿಸಿ, ಶುದ್ಧಾತ್ಮನಾದ ಶಿಷ್ಯನಿಗೆ, ಪರಬ್ರಹ್ಮವನ್ನು ಗಂಟು ಹಾಕಿದ ಸದ್ಗುರುವಿನ ಮಹಿಮೆಯು ಭೂಮಿಯದಲ್ಲ, ಆಕಾಶದಲ್ಲ, ಪರಾತ್ಪರವಾದ ವಸ್ತುವಿನ ಮೂಲವನ್ನು ಮುಟ್ಟಿ, ಕಂಡು ಉಂಡು ಸರ್ವಾಂಗದಲ್ಲಿ ಅನುಭವಿಸಿ, ಲೋಕವನ್ನು ಅಲ್ಲಿಗೆ ಕೊಂಡೊಯ್ಯಲು ಅಲ್ಲಿಂದ ಇಲ್ಲಿಗೆ ಇಳಿದು ಬಂದ ಅವತಾರವೇ ಗುರುದೇವ... ಮಹಾದೇವ... ಗುರುಗೋವಿಂದ ಭಟ್ಟರಾಗಿದ್ದಾರೆ.

> **"ಹಾಕಿದ ಜನಿವಾರವಾ ಸದ್ಗುರುನಾಥಾ**
> **ಹಾಕಿದ ಜನಿವಾರವಾ**
> **ಹಾಕಿದ ಜನಿವಾರ ನೂಕಿದ ಭವಭಾರ**
> **ಬೇಕೆನುತಲಿ ಬ್ರಹ್ಮಜ್ಞಾನ ಉಚ್ಚರಿಸೆಂದು...**
> **...ಎಂದೆಂದಿಗೂ ಯಮದಂದುಗನವಳಿಯೆಂದು..."**[೬೬]

ಮುಸ್ಲಿಂ ಶಿಷ್ಯನಿಗೆ ಜನಿವಾರ ತೊಡಿಸಿದ ಗುರುಗೋವಿಂದಭಟ್ಟರು ಜನನ-ಮರಣ ಗೆಲ್ಲುವ ಭವ್ಯ ಮಂತ್ರೋಪದೇಶವನ್ನು ಮಾಡಿ ಬ್ರಹ್ಮಜ್ಞಾನದ ನಿಜಾನಂದವನ್ನು ಶಿಷ್ಯನಿಗೆ ಧಾರೆ ಎರೆದರು. ಗುರುವಿನಲ್ಲಿ ತಂದೆಯನ್ನು, ಪತಿಯನ್ನು, ದೇವರನ್ನು ಕಂಡುಕೊಂಡ ಶರೀಫರ ಗುರುಭಕ್ತಿಯೂ ಅನನ್ಯವಾಗಿದೆ.

ತನ್ನೊಳಗೆ ತಾನು ತಿಳಿದುಕೊಂಡು, ತನಗೆ ಬೇಕಾದ ಗಂಡನನ್ನು ಮಾಡಿಕೊಂಡ ಶರೀಫರು, ಗಂಡನ ಆಜ್ಞೆಯಲ್ಲಿರುವ ಹೆಂಡತಿಯಂತೆ, ಗುರುವಿನಾಜ್ಞೆಯನ್ನು ಶಿರಸಾವಹಿಸಿ ಪಾಲಿಸಿ, ಗುರುವಿನ ಸಹಾಯದಿಂದ ಆರು-ಮೂರು ಗೆದ್ದು ಈ ಭವಕ್ಕೆ ತಿರುಗಿ ಬಾರದಂತೆ ಮುಕ್ತರಾಗಿರುವುದನ್ನು

---

೬೬. ಅದೇ, ಪು. ೩೯.

"ನನ್ನೊಳಗೆ ನಾ ತಿಳಕೊಂಡೆ
ನನಗ ಬೇಕಾದ ಗಂಡನ ಮಾಡಿಕೊಂಡೆ
ಆಜ್ಞಾ ಪ್ರಕಾರ ನಡಕೊಂಡೆ
ನಾ ಎಲ್ಲಾರ ಹಂಗನು ಹರಕೊಂಡೆ."[೬೪]

ಎಂದು ಹಾಡಿದ್ದಾರೆ.

ಬೇಕಾದ ಗಂಡನನ್ನು ಆರಿಸಿಕೊಳ್ಳುವುದು ಎಂದರೆ ಲೌಕಿಕವಾಗಿ ಪ್ರೇಮ–ವಿವಾಹ ಶರೀಫರ ಪ್ರೇಮ ವಿವಾಹವು ಆಧ್ಯಾತ್ಮಿಕ ನೆಲೆಯಲ್ಲಿ ಗುರುಗೋವಿಂದ ಭಟ್ಟರೊಂದಿಗೆ ಜರುಗಿದೆ. ಪರಮಾರ್ಥದ ಸಮರ ನಡೆಸಲು ಅಧ್ಯಾತ್ಮಿಕತೆಯನ್ನುಳ್ಳ ಗುರುಗೋವಿಂದರನ್ನೇ ತನ್ನ ಯಜಮಾನ, ಗಂಡನೆಂದು ಸ್ವೀಕರಿಸಿ ಅವರ ಆಜ್ಞೆಯ ಅಡಿಯಲ್ಲಿಯೇ ಪರಮಾರ್ಥವನ್ನು ಸಾಧಿಸಿದರು. ಗಂಡನಲ್ಲಿ ಕಾಯಾ, ವಾಚಾ, ಮನಸಾ ಸೇವೆ ಸಲ್ಲಿಸಿ, ಲೌಕಿಕದ ಎಲ್ಲ ಸಂಬಂಧಗಳನ್ನು ಕತ್ತರಿಸಿಕೊಂಡು ಚಿತ್ತ ಚಂಚಲವಿಲ್ಲದೆ ಅವರಲ್ಲಿಯೇ ಐಕ್ಯವಾಗಿ ಹೋಗಿದ್ದಾರೆ. ಗುರು ಗಂಡನಾಗಿ ತನ್ನನ್ನು ನಡೆಸಿಕೊಂಡ ಪರಿಯನ್ನು, ತಾನು ನಡೆದುಕೊಂಡ ರೀತಿಯನ್ನು ಶರೀಫರು ತಮ್ಮ ಪದಗಳಲ್ಲಿ ಹೇಳಿದ್ದಾರೆ.

"...ಅಕ್ಕತಂಗಿಯರಾರು ಮಂದಿಗಳ
ಅಗಲಿಸಿದನ್ನೆವರ ಕುಕ್ಕುಳಾತಿಯ ಅಣ್ಣತಮ್ಮಗಳ
ನೆದರೆತ್ತಿ ಮ್ಯಾಲ ನೋಡಗೊಡದೇ ಹತ್ತು ವಿಕ್ಕುಗಳ
ಮಾಡಿದನೇ ಮರುಳ..."[೬೫]

ಆತ್ಮಜ್ಞಾನದಿಂದ ಪುಂಡನಾದ ಎಂದರೆ ಶ್ರೇಷ್ಠನಾದ ತನ್ನ ಗಂಡನು ಸತಿಗೆ ಪರಮಾರ್ಥ ಸುಖ ತೋರಿಸಲು ಮೊದಲು ದೇಹ ಮತ್ತು ಮನಸ್ಸನ್ನು ಶುದ್ಧಗೊಳಿಸುತ್ತಾನೆ. ಒಡಹುಟ್ಟಿದವರಂತೆ ಬದುಕಿನಲ್ಲಿ ಅಂಟಿಕೊಂಡಿರುವ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮದ, ಮತ್ಸರ, ಮೋಹಗಳನ್ನು ಬಿಡಿಸಿ, ಪ್ರೀತಿಯ ಅಣ್ಣತಮ್ಮಂದಿರಂತೆ ಇರುವ ಹೊನ್ನು, ಹೆಣ್ಣು, ಮಣ್ಣುಗಳ ಋಣದಿಂದ ಮುಕ್ತಗೊಳಿಸಿ, ಚಂಚಲತೆಯನ್ನು ನಾಶಗೊಳಿಸಿ ಏಕಾಗ್ರತೆಯಿಂದ ಧ್ಯಾನ ಮಾಡಲು ಕಲಿಸಿ ಆತ್ಮಾನಂದ ಪರಮಬ್ರಹ್ಮದ ಸುರತ ಸುಖವನ್ನು ನೀಡುತ್ತಾನೆ. ಪ್ರಕೃತಿಯಲ್ಲಿ ಸಹಜವು ಆದ, ಹೊಸ ಚೈತನ್ಯ ಸೃಷ್ಟಿಗೆ ಕಾರಣವೂ ಆದ ಗಂಡು ಹೆಣ್ಣಿನ ಈ ಐಕ್ಯತೆಯು ಪಾರಮಾರ್ಥಿಕ ನೆಲೆಯಲ್ಲಿ ಗುರು–ಶಿಷ್ಯರ ಐಕ್ಯತೆಯಾಗಿ

ಮುಕ್ತಿ ಎಂಬ ಬ್ರಹ್ಮಾನಂದಕ್ಕೆ ಸಾಧನವಾಗಿದೆ. ಗುರುವು ಮುತ್ತಿನ ಮೂಗುತಿಯನ್ನಿಟ್ಟು ರತ್ನಪ್ರಭೆಯೊಳಗಿರಿಸುವುದು ದೈವಿಕ ಪ್ರೇಮಬಂಧನದ ಫಲವಾಗಿದೆ. 'ಮುತ್ತಿನ ಮೂಗುತಿ'ಯು ಪಾರಮಾರ್ಥಿಕ ಸಂಕೇತವಾಗಿದೆ. ಮುತ್ತಿನ ಮೂಗುತಿಯು ಪಾರಮಾರ್ಥಿಕ ಅನುಭವ ಮಂದಿರದ ಹೊಸ್ತಿಲು ಎಂದು ಅನುಭಾವಿಗಳ ಅಭಿಮತವಾಗಿವೆ. 'ರತ್ನಪ್ರಭೆ'ಯು ಬ್ರಹ್ಮಾನಂದವಾಗಿದ್ದು ಪಾರಮಾರ್ಥಿಕ ಔನ್ನತ್ಯದ ಪರಮಸುಖವಾಗಿದೆ.

ಗುರುವಿನ ಸನ್ನಿಧಿಯಲ್ಲಿ ಹಂತ ಹಂತವಾಗಿ ಮೇಲೇರಿ ಹೋದ ಶರೀಫರು ಪಾರಮಾರ್ಥಿಕ ವೈಭವದಲ್ಲಿ ಸಾಕ್ಷಾತ್ಕಾರವನ್ನು ಪಡೆದರು. ಗುರು–ಶಿಷ್ಯ ಪರಂಪರೆಯಲ್ಲಿ ವಿಶಿಷ್ಟವೆನ್ನುವಂತೆ ಶರೀಫರು, ಸ್ಮಾರ್ತಗೋವಿಂದಭಟ್ಟರನ್ನು ಗುರುವಾಗಿ ಪಡೆದರು. ಅನುಭಾವಿಗೆ ಹಿಂದೂ–ಮುಸ್ಲಿಂ, ಶೈವ–ವೈಷ್ಣವವೆಂದು ಭೇದವಿರುವುದಿಲ್ಲ. ತಮ್ಮ ಪಾರಮಾರ್ಥಿಕ ಜೀವನವನ್ನು ಹಿಂದೂ ಆಗಿಯೋ, ಮುಸ್ಲಿಂ ಆಗಿಯೋ ಪ್ರಾರಂಭಿಸಬಹುದು. ಆದರೆ ಸದ್ಗುರುವಿನ ಕೃಪಾ ಸಾಧನದಿಂದ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ ತರುವಾಯ ಅವರು ಮತೀಯ ಹಂಗನ್ನು ಹರಿದು ಜಾತ್ಯತೀತ, ಮತಾತೀತವಾದ ವಿಶಾಲತೆಯನ್ನು ಪಡೆಯುವರು ಎಂದು ತಮ್ಮ ಪ್ರತ್ಯಕ್ಷ ಸಾಕ್ಷಿಯನ್ನು, ಶರೀಫರು ಪದಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಸಾಧಕನಾದ ಶಿಷ್ಯನ ಪಾರಮಾರ್ಥಿಕದಲ್ಲಿಯ ಎಲ್ಲ ಸಂದೇಹಗಳನ್ನು, ವಿಕಲ್ಪಗಳನ್ನು ಗುರುಗೋವಿಂದರು ಪರಿಹರಿಸಿ ಪರಮಾರ್ಥದ ಸೂಕ್ಷ್ಮತೆಯನ್ನು, ಅರಿವನ್ನು ಶರೀಫರು ಗುರುಭಕ್ತಿಯಿಂದ ಹಾಡಿದ್ದಾರೆ. ಗುರುಶಿಷ್ಯರ ಅನ್ಯೋನ್ಯ ಆಧ್ಯಾತ್ಮಿಕ ಸಂಬಂಧದ ಸೆಳೆತವು ಎರಡು ಜೀವಿಗಳನ್ನು ಒಂದಾಗಿಸುವ ಕೊನೆಗೆ ಎಲ್ಲವನ್ನೂ ಒಂದರಲ್ಲಿ ಅಂತ್ಯಗೊಳಿಸುವ ಪರಮಾರ್ಥದ ಭಕ್ತಿಯ ಪ್ರೇಮಧಾರೆಯು ಶರೀಫರ ಪದಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ.

ಅಂಕಿತ

"ಒಬ್ಬ ವ್ಯಕ್ತಿ ತನ್ನ ಹೆಸರನ್ನು ಹತ್ತು ರೀತಿಗಳಲ್ಲಿ ಬರೆದುಕೊಳ್ಳಬಹುದು. ಅವು ಅವನ ರುಜು ಎನಿಸುವುದಿಲ್ಲ. ಆದರೆ ಯಾವುದೇ ಒಂದು ವಿಶಿಷ್ಟ ವಿನ್ಯಾಸದ ಅವನ ಬರಹ ಮಾತ್ರ ಅಧಿಕೃತವಾಗಿ 'ರುಜು' ಎನಿಸುತ್ತದೆ. ಅದು ವ್ಯಕ್ತಿಯ ಬರಹರೂಪದ ಪ್ರತಿನಿಧಿ. ಅವನ ವಿಶಿಷ್ಟ ವ್ಯಕ್ತಿತ್ವದ ಸಂಕೇತ. ಅಂತೆಯೇ 'ಅಂಕಿತ'ವು ಒಂದು ರೀತಿಯಲ್ಲಿ ಒಬ್ಬ ಕೃತಿಕಾರನ ಸಾಹಿತ್ಯಕ 'ರುಜು'ವಿದ್ದಂತೆ. ತನ್ನ ಸಾಹಿತ್ಯವನ್ನು

ಉಳಿದವರ ಬರಹದಿಂದ ಪ್ರತ್ಯೇಕಗೊಳಿಸಲು ಪ್ರಜ್ಞಾಪೂರ್ವಕವಾಗಿ ಬಳಸಿದ ಪದ ಅಥವಾ ಪದಗುಚ್ಛವೇ ಅವನ 'ಅಂಕಿತ'ವಾಗುತ್ತದೆ."[೮]

ಜಾನಪದೀಯ ಹಿನ್ನೆಲೆಯಲ್ಲಿ ಬರುವ ತತ್ತ್ವಪದಕಾರರು ಗುರು ಪರಂಪರೆಯಲ್ಲಿ ಬೆಳೆದು ಶಿಷ್ಯರಾಗಿರುವುದರಿಂದ ಸಾಮಾನ್ಯವಾಗಿ ತಮ್ಮ ಗುರುವಿನಿಂದಲೇ ಅಂಕಿತವನ್ನು ನೇರವಾಗಿ ಪಡೆದಿರುತ್ತಾರೆ. ಕೆಲವು ಶಿಷ್ಯರು ತಮ್ಮ ಸ್ಥಳದ, ಗ್ರಾಮದ ದೇವತೆಗಳನ್ನೇ ಆರಾಧ್ಯದೈವವನ್ನಾಗಿಸಿಕೊಂಡು ತಮ್ಮ ಕಾವ್ಯ ಕುಸುಮಗಳನ್ನು ದೈವಸಾನ್ನಿಧ್ಯಕ್ಕೆ ಭಕ್ತಿಯಿಂದ ಅರ್ಪಿಸುತ್ತಾರೆ. ಶರಣರು, ದಾಸರು ತಮ್ಮ ಕೃತಿಗಳಲ್ಲಿ ತಮ್ಮ ಇಷ್ಟ ದೈವದ ಹೆಸರನ್ನೇ, ತಮ್ಮ ಕಾವ್ಯದ ಅಂಕಿತವನ್ನಾಗಿಸಿಕೊಂಡು ಆ ಅಂಕಿತದ ವೈಶಿಷ್ಟ್ಯದಿಂದಲೇ ಗುರುತಿಸಲ್ಪಡುತ್ತಿದ್ದಾರೆ.

ಶಿಶುನಾಳ ಗ್ರಾಮದವರಾದ ಶರೀಫರು ತಮ್ಮ ಗ್ರಾಮದೇವತೆ 'ಬಯಲು ಬಸವಣ್ಣ'ನನ್ನೇ ತಮ್ಮ ಆರಾಧ್ಯ ದೈವವಾಗಿಸಿಕೊಂಡು 'ಶಿಶುನಾಳಧೀಶ" ಎಂಬ ಅಂಕಿತವನ್ನು ತಮ್ಮ ಕಾವ್ಯನಾಮವನ್ನಾಗಿಸಿಕೊಂಡರು. 'ಶಿಶುನಾಳಧೀಶ' ಎಂಬುದು ಶರೀಫರ ಪ್ರಧಾನ ಅಂಕಿತವಾದರೂ, ಶರೀಫರ ಬದುಕಿನ ತಿರುವುಗಳಲ್ಲಿ ಅವರ ಅಂಕಿತವೂ ಕೆಲವೊಮ್ಮೆ ಬದಲಾಗಿದೆ.

ಹುಟ್ಟು ಕವಿಯಾದ ಶರೀಫರು ಯುವಕರಿರುವಾಗಲೇ ಮೊಹರಮ್ ಹಬ್ಬದ ಸಮಯದಲ್ಲಿ ರಿವಾಯತ್‌ಗಳನ್ನು ರಚಿಸಿ ಹೆಜ್ಜೆ ಮೇಳ ಕಟ್ಟುತ್ತಿದ್ದರು. ಶರೀಫರ ಆರಂಭಿಕ ಪದಗಳಲ್ಲಿ 'ಶರೀಫ ಸಾಹೇಬ' ಎಂದು ತಮ್ಮ ಹೆಸರನ್ನೇ ಅಂಕಿತವನ್ನಾಗಿಸಿ ಕೊಂಡು ರಿವಾಯತ್ ಪದಗಳನ್ನು ರಚಿಸಿದ್ದಾರೆ.

> "ಶಿಶುನಾಳ ಎಂಬುದು ದೊಡ್ಡ ಶಹರಾ
> ಶರೀಫ ಸಾಹೇಬ ಮಾಡ್ಯಾನ ಕವಿ ಚಾತುರ್ಯಾ..."[೮]

ಶರೀಫರು ಒಂಟಿಯಾಗಿದ್ದ, ದುಃಖಿಯಾಗಿದ್ದ ಕಾಲದಲ್ಲಿ ಗುರುಗೋವಿಂದ ಭಟ್ಟರು ಅವರನ್ನು ಹಿಡಿದೆತ್ತಿ ಮುಕ್ತಿ ಪಥವನ್ನು ತೋರಿಸಿದರು. ಗುರುವಿನ ಕೃಪೆಗೆ, ಪ್ರಭಾವಕ್ಕೆ ಒಳಗಾದ ಶರೀಫರು 'ಗುರುಗೋವಿಂದ' ಎಂಬ ಅಂಕಿತದಿಂದ ತಮ್ಮ ಸಂಕ್ರಮಣ ಘಟ್ಟದ ಪದಗಳನ್ನು ರಚಿಸಿದ್ದಾರೆ. ಆದರೆ, ಮೂಲವಾದ ಅಂಕಿತ 'ಶಿಶುನಾಳಧೀಶ' ಎಂಬ ಬಯಲು ಬಸವಣ್ಣನ ಹೆಸರೇ ಶರೀಫರ ಪದಗಳನ್ನು ಗುರುತಿಸುವ ಅಂಕಿತವಾಗಿದೆ. ಮುಸ್ಲಿಂ ಕವಿಯಾಗಿದ್ದರೂ ಹಿಂದೂ ದೈವವನ್ನು

ಆರಾಧಿಸಿ ಬಯಲು ಬಸವಣ್ಣನನ್ನು ಶಿಶುನಾಳದ ಈಶ ಎಂದು ನಂಬಿ ಅದನ್ನೇ 'ಶಿಶುನಾಳಧೀಶ' ಎಂದು ಅರ್ಥಪೂರ್ಣವಾಗಿ ನಾಮಾಂಕಿತಗೊಳಿಸಿ ತಮ್ಮ ಪದಗಳ ಮೂಲಕ ಆ ದೇವನಿಗೆ ಸೇವೆ ಸಲ್ಲಿಸಿದ್ದಾರೆ. ಯೋಗದಲ್ಲಿ ಬರುವ ಸುಷಮ್ನ ನಾಳವನ್ನೂ ಈ ಅಂಕಿತ ಧ್ವನಿಸುತ್ತದೆ.

> **"ಶಿಶುನಾಳಧೀಶ ಪ್ರಕಾಶ ಗೋವಿಂದನ**
> **ಅಸಮ ತೇಜೋ ರೂಪ ಕಿರಣದಿಂದಲಿ ಬಂದು..."[೮]**

ಎಂದು ಗುರುವನ್ನು, ದೈವವನ್ನು ಭಕ್ತಿಯಿಂದ ನೆನೆದಿದ್ದಾರೆ.

ಹೀಗೆ ಹಲವಾರು ಪದಗಳಲ್ಲಿ ಗುರುವು, ಶಿಶುನಾಳಧೀಶನೂ ಒಟ್ಟಿಗೆ ಬರುತ್ತಾರೆ. ಶರೀಫರು ಇಬ್ಬರನ್ನೂ ತಮ್ಮ ಅಂಕಿತವಾಗಿಸಿಕೊಂಡಿರಬಹುದು.

* * * *

ಅಧ್ಯಾಯ ೪

ಶರೀಫರ ಪದಗಳಲ್ಲಿ ಸಾಹಿತ್ಯಕ ಅಂಶಗಳು

೪.೧ ಕಾವ್ಯ ಪ್ರಕಾರಗಳು

ಶರೀಫರ ತತ್ತ್ವಪದಗಳನ್ನು ನೀತಿ, ಯೋಗ, ವೈರಾಗ್ಯ, ಭಕ್ತಿ, ಸಗುಣ, ನಿರ್ಗುಣ, ಜ್ಞಾನ ಹೀಗೆ ಅನೇಕ ರೀತಿಯಲ್ಲಿ ವಿಂಗಡಿಸುವುದರ ಜೊತೆಗೆ ಶಿವಾನಂದ ಗುಬ್ಬಣ್ಣನವರ ವಿಂಗಡಣೆಯನ್ನೂ ಇಲ್ಲಿ ಆಧರಿಸಲಾಗಿದೆ. ಆಶುಕವಿಯಾದ ಶರೀಫರು ಯಾವ ಪೂರ್ವಯೋಜನೆ ಇಲ್ಲದೆ, ಘಟನೆಗೆ, ಸಂದರ್ಭಕ್ಕೆ ಅನುಸಾರವಾಗಿ ಪದ ಹಾಡಿದ್ದಾರೆ. ಸಾಮಾಜಿಕದಿಂದ ಪಾರಮಾರ್ಥದೆಡೆಗೆ ಸಾಗುವ ಪದಗಳು ಜೀವ-ಶಿವನಾಗುವ ಪಥದಲ್ಲಿ ಬರುವ ಎಲ್ಲ ವಿಷಯಗಳನ್ನು, ವಸ್ತುಗಳನ್ನು ಆವರಿಸಿಕೊಳ್ಳುತ್ತಲೇ ಆಧ್ಯಾತ್ಮವಾಗುವುದರಿಂದ ಶರೀಫರ ಪದಗಳ ವಿಂಗಡನೆ ಸುಲಭ, ಸಾಧ್ಯವಿಲ್ಲದ ಮಾತಾಗಿದೆ. ಸಮಾಜದಲ್ಲಿ ಸಂಸ್ಕೃತಿಯೂ, ಸಂಸ್ಕೃತಿಯಲ್ಲಿ ಯಲ್ಲಿಯೇ ವೈಚಾರಿಕತೆಯೂ, ಲೋಕನೀತಿಯೂ ಅನುಸಂಧಾನವಾಗಿ ಹಿಂಬಾಲಿಸುವವು. ವೈಚಾರಿಕತೆಯು ಆಧ್ಯಾತ್ಮಿಕ ನೆಲೆಯತ್ತ ಹೊರಳಿ, ಪರಮಾರ್ಥ ಗುರಿ ಸೇರುವುದು. ಎಲ್ಲ ಪದಗಳು ಇದೇ ದಾರಿಯಲ್ಲಿ ಸಾಗುವುದರಿಂದ ಶರೀಫರ ಕಾವ್ಯ ಸಾಹಿತ್ಯವನ್ನು ಒಂದು ನಿಯತ ಬಂಧಕ್ಕೆ ಒಳಪಡಿಸಿ ಚೌಕಟ್ಟು ಹಾಕುವುದು ಕಷ್ಟ ಸಾಧ್ಯ.

ಉದಾಹರಣೆಗೆ ಅಲ್ಲಿಕೇರಿಗೆ ಹೋಗೋಣ ಬರ್ತೀರೇನ್ರೆ... ಈ ಪದದಲ್ಲಿ ಸಮಾಜದಲ್ಲಿ ನಡೆಯುವ ಒಂದು ಸಾಂಸ್ಕೃತಿಕ, ಪ್ರಾದೇಶಿಕ ಆಚರಣೆಯನ್ನು ವೈಚಾರಿಕ ನೆಲೆಯಿಂದ ನೋಡಿ ಕೊನೆಯಲ್ಲಿ 'ಅಲ್ಲಿಕೇರಿ'ಯನ್ನು ಪರಮಾರ್ಥದ ಕೇರಿ ಅಥವಾ ಸ್ವರ್ಗವನ್ನಾಗಿ ಪರಿವರ್ತಿಸುವ ಅದ್ಭುತ ಶಕ್ತಿ ಶರೀಫರ ಕಾವ್ಯದಲ್ಲಿದೆ. ಹಾಗಾಗಿ ಎಲ್ಲ ಪದಗಳು ಎಲ್ಲ ಅಂಶಗಳನ್ನು ಒಳಗೊಂಡಿದ್ದರೂ ಪದಗಳ ಸಂದರ್ಭವನ್ನು ಹಿನ್ನೆಲೆಯನ್ನು ಆಧರಿಸಿ ಶಿವಾನಂದ ಗುಬ್ಬಣ್ಣನವರು ಶರೀಫರ ಗೀತೆಗಳನ್ನು ಹದಿನೇಳು ಭಾಗಗಳಾಗಿ ವಿಂಗಡಿಸಿದ್ದಾರೆ. (೧) ದೇವಸ್ತುತಿ, (೨) ಶಕ್ತಿಸ್ತುತಿ, (೩) ಗುರುಸ್ತುತಿ, (೪) ಬೋಧ ಪದಗಳು, (೫) ಸಾಧುಗಳ ಬಗೆಗಿನ ಪದಗಳು, (೬) ಶಿವಯೋಗಿಗಳ ಕುರಿತು ಪದಗಳು, (೭) ಮನಸ್ಸಿನ ಬಗೆಗಿನ ಪದಗಳು,

(೮) ಮಾನಿನಿಯ ಪದಗಳು, (೯) ಘಟನಾತ್ಮಕ ಪದಗಳು, (೧೦) ನೀತಿ ಪದಗಳು, (೧೧) ಪಶು-ಪಕ್ಷಿ-ಕೀಟಗಳ ಮೇಲಿನ ಸಾಂಕೇತಿಕ ಪದಗಳು, (೧೨) ದಂಡಕಗಳು, (೧೩) ಕಾಲಜ್ಞಾನ ಪದಗಳು, (೧೪) ಲಾವಣಿಪದಗಳು, (೧೫) ಹೋಳಿಪದಗಳು, (೧೬) ಮಂಗಳಾರತಿ ಪದಗಳು ಕೊನೆಯದಾಗಿ (೧೭) ರಿವಾಯತ್‌ಗಳು.

ದೇವಸ್ತುತಿ

ಜನಪದ ಸಂಸ್ಕೃತಿಯಲ್ಲಿ ಗಂಡುದೇವರು, ಹೆಣ್ಣುದೇವರು ಎಂದು ಹೆಸರಿನ ಅನ್ವಯ ಲಿಂಗಭೇದದಿಂದ ದೇವರನ್ನು ಪೂಜಿಸುತ್ತಾರೆ. ಜನಪದ ಕವಿಯಾದ ಶರೀಫರು ಎರಡೂ ದೇವ-ದೇವತೆಗಳನ್ನು ಕುರಿತು ಪದ ಹಾಡಿದ್ದಾರೆ. ದೇವಸ್ತುತಿಯಲ್ಲಿ ಪರಮಾತ್ಮನನ್ನು, ಮೈಲಾರ ಮಹದೇವನನ್ನು, ಗುಡಿಪುರದ ಅಪ್ಪಯ್ಯನನ್ನು, ಕಲ್ಯಾಣದ ಬಸವಣ್ಣನನ್ನು, ಶಿಗ್ಗಲಿ ನೀಲಕಂಠನನ್ನ ದಶಾವತಾರ ಕೃಷ್ಣನನ್ನು, ಲಂಕೆಗೆ ಹಾರಿದ ಹನುಮಂತನನ್ನು ಸ್ಮರಿಸಿ ಹಾಡಿದ್ದಾರೆ. ಅದರಂತೆ ಇಸ್ಲಾಂ ಧರ್ಮದಲ್ಲಿ ದೇವದೂತರೆಂದು ಪರಿಗಣಿಸಲ್ಪಡುವ ಹಜರತ್ ಮಹಮ್ಮದ್ ಪೈಗಂಬರರನ್ನು ಹುಲಗೂರಿನ ಖಾದರಲಿಂಗರನ್ನು ಕುರಿತು ಹಾಡಿದ್ದಾರೆ.

ಶಕ್ತಿಸ್ತುತಿ

ಶಕ್ತಿಸ್ತುತಿಯಲ್ಲಿ ದೇವತೆಗಳನ್ನು ಸ್ಮರಿಸುತ್ತಾ ಸಂದರ್ಭಾನುಸಾರವಾಗಿ ಜಗದಂಬೆ, ದ್ಯಾಮವ್ವ, ಶಾಕಾಂಬರಿ, ಪಾರ್ವತಿ, ಸವದತ್ತಿಯ ಎಲ್ಲಮ್ಮ, ಹೇಮರೆಡ್ಡಿ ಮಲ್ಲಮ್ಮ ಹೀಗೆ ಅನೇಕ ದೇವತೆಗಳನ್ನು ಕುರಿತು ಹಾಡಿದ ಪದಗಳಿಗೆ ಶಕ್ತಿ ಸ್ತುತಿ ಎಂದು ಕರೆದಿದ್ದಾರೆ.

ಗುರುಸ್ತುತಿ

ಗುರುವಿನ ಬಗ್ಗೆ ಅಪಾರ ಭಕ್ತಿಯನ್ನು ಹೊಂದಿದ್ದ ಶರೀಫರು ತಮ್ಮ ಹಲವಾರು ಪದಗಳನ್ನು, ಗುರುಗಳನ್ನು ಉದ್ದೇಶಿಸಿಯೇ ಹಾಡಿದ್ದರಿಂದ ಗುರುಪದಗಳು ಗುರು ಸ್ತುತಿಗಳಾಗಿವೆ. ಗುರುವಿನ ಕುರಿತು ಮಂಗಳಾರತಿಯನ್ನೂ ರಚಿಸಿದ್ದಾರೆ.

ಬೋಧ ಪದಗಳು

ಪರಮಾರ್ಥ ಸಾಧನೆಯಲ್ಲಿಯ ಬ್ರಹ್ಮಾನಂದ ನೀಡಿದ ಪದಗಳನ್ನು ಬೋಧದ ಗುಂಪಿಗೆ ಸೇರ್ಪಡಿಸಿದ್ದಾರೆ. ಅವರ ಬೋಧಪದಗಳು ಅದ್ವೈತ ನಿರ್ಗುಣ ತತ್ವಗಳನ್ನಾಧರಿಸಿ ಆತ್ಮಜ್ಞಾನದಲ್ಲಿ ಮುಂದುವರಿದ ಅಧ್ಯಾತ್ಮ ಗೀತೆಗಳಾಗಿವೆ.

ಸಾಧುಗಳ ಬಗೆಗಿನ ಪದಗಳು

ಲಿಂಗಾಯತ ಪ್ರಭಾವವಲಯದಲ್ಲಿ ಬೆಳೆದ ಶರೀಫರಿಗೆ ಜಂಗಮ, ಸಾಧು, ಶಿವಯೋಗಿಗಳ ಬಗ್ಗೆ ಅಪಾರ ಆದರ ಮತ್ತು ಗೌರವವಿದ್ದುದರಿಂದ ಸಾಧುಗಳ ಮೇಲೆ ಶಿವಯೋಗಿಗಳ ಮೇಲೆಯೂ ಪದ ರಚಿಸಿದ್ದಾರೆ.

ಮನದ ಬಗೆಗಿನ ಪದಗಳು

ಎಲ್ಲ ಅರ್ಥಕ್ಕೂ, ಅನರ್ಥಕ್ಕೂ, ಪಾರಮಾರ್ಥಕಕ್ಕೂ ಮೂಲ ಆಧಾರವಾದ ಮನಸ್ಸಿನ ಗುಣ, ಸ್ವಭಾವ, ಲಕ್ಷಣಗಳನ್ನು ಪದಗಳಲ್ಲಿ ಹಾಡಿ ವಿವರಿಸುತ್ತ ಸ್ವಾಧೀನ ತಪ್ಪಿದ ಮನಸ್ಥಿತಿಗೆ ವಿವೇಚನೆಯನ್ನು ತುಂಬುತ್ತ, ಮನಸ್ಸಿನ ಮಹತ್ವವನ್ನು ಕುರಿತು ಹಾಡಿದ್ದಾರೆ.

ಮಾನಿನಿ ಕುರಿತು ಪದಗಳು

ಬದುಕಿನ ಮಾಯೆಯಲ್ಲಿ ಮಾನಿನಿಯೂ ಒಬ್ಬಳಾಗಿರುವುದರಿಂದ ಸ್ತ್ರೀ ನಡೆ ನುಡಿ ಬಗ್ಗೆ ಮಾನಿನಿ ಪದಗಳಲ್ಲಿ ಹಾಡಿದ್ದಾರೆ.

ಘಟನಾತ್ಮಕ ಪದಗಳು

ಶರೀಫರ ಘಟನಾತ್ಮಕ ಪದಗಳು ಸಮಾಜದ, ಸಂಸಾರದ ಎಲ್ಲ ಘಟನೆಗಳ ಸುತ್ತ ಗಿರಕಿ ಹೊಡೆಯುತ್ತವೆ. ಕಂಡದ್ದನ್ನು ಕಂಡಲ್ಲಿಯೇ, ಕೇಳಿದ್ದನ್ನು ಕೇಳಿದ್ದಲ್ಲಿಯೇ ಅನುಭವವನ್ನು ಅನುಭಾವಿಸಿ ಹಾಡಿದ ಶರೀಫರ ಹೃದಯವು ಶ್ರುತಿ ಮಾಡಿಟ್ಟ ವೀಣೆಯಂತಾಗಿತ್ತು. ಗ್ರಾಮೀಣ ಸಮಾಜದ ಎಲ್ಲ ಘಟನೆ, ಸನ್ನಿವೇಶ, ಸಂಸ್ಕೃತಿಗಳನ್ನು ಒಳಗೊಳ್ಳುವ ಶರೀಫರ ಘಟನಾತ್ಮಕ ಪದಗಳು ವೈಶಾಲ್ಯತೆಯನ್ನು, ವೈವಿಧ್ಯತೆಯನ್ನು ಬಣ್ಣಿಸುವವು.

ನೀತಿಪದಗಳು

ಸಮಾಜದ ಸ್ವಾಸ್ಥ್ಯಕ್ಕೆ ಮತ್ತು ಆಧ್ಯಾತ್ಮಿಕ ಪಥಕ್ಕೆ ಪ್ರಥಮ ಅಡಿಗಲ್ಲಾದ ನೀತಿಯ ಬಗ್ಗೆ ಶರೀಫರು ಬರೆದಿರುವ ಪದಗಳನ್ನು ನೀತಿ ಪದಗಳ ಗುಂಪಿಗೆ ಸೇರಿಸಿದ್ದಾರೆ. ಈ ನೀತಿಬೋಧನೆಯಲ್ಲಿ ವೈಚಾರಿಕತೆಯು ಸೇರಿಕೊಂಡು ಪಾರಮಾರ್ಥಿಕ ಗುರಿಯನ್ನು ಸುಲಭಗೊಳಿಸಿವೆ.

ಸಾಂಕೇತಿಕ ಪದಗಳು

ತಮ್ಮ ಆಧ್ಯಾತ್ಮ ಸಾಧನೆಯ ಹಾದಿಯಲ್ಲಿ ಸಾಂಕೇತಿಕವಾಗಿ ಬಳಸಿರುವ ಪಶು-ಪಕ್ಷಿ-ಕೀಟಗಳ ಮೇಲಿನ ಪದಗಳೂ ಸಾಕಷ್ಟಿವೆ. ಮನುಷ್ಯನ ಗುಣ ಸ್ವಭಾವಕ್ಕೆ ಸಂಕೇತವಾದ, ಪಾರಮಾರ್ಥಕ್ಕೆ ಸಂಕೇತವಾದ ಅನೇಕ ಪಶು ಪಕ್ಷಿಗಳಂಥ ಜೀವಿಗಳನ್ನು ವಸ್ತುವಾಗಿಸಿ ಬರೆದ ಪದಗಳಿವೆ. ಅವುಗಳಿಗೆ ಸಾಂಕೇತಿಕ ಪದಗಳೆಂದು ಹೇಳಬಹುದು.

ದಂಡಕಗಳು

ಭಕ್ತಿಮಾರ್ಗದ ಪ್ರತಿಪಾದಕರಾದ ಶರೀಫರು ಯಾವ ಮತ, ಪಂಥ, ಧರ್ಮಗಳ ಚೌಕಟ್ಟಿನೊಳಗೆ ಸಿಗದೇ ಎಲ್ಲ ಧರ್ಮದ ಅಧಿದೇವತೆಗಳನ್ನು ಸ್ತುತಿಸಲು ದಂಡಕಗಳನ್ನು ರಚಿಸಿ ಹಾಡಿದ್ದಾರೆ. ಬಸವೇಶ್ವರ, ದಂಡಕ, ದೇವಿದಂಡಕ, ಹನುಮಂತ ದೇವರ ದಂಡಕ, ಶ್ರೀಕೃಷ್ಣ ದಂಡಕ, ಶಿವಾಪರಾಧ ಸ್ತೋತ್ರ ದಂಡಗಳನ್ನು ರಚಿಸಿ ಭಕ್ತಿಭಾವದಿಂದ ಹಾಡಿದ್ದಾರೆ.

ಕಾಲಜ್ಞಾನ ಪದಗಳು

ಶರೀಫರು ಪರಮಜ್ಞಾನಿಗಳಾಗಿದ್ದರು. ಮುಂದೆ ಒದಗಿಬರುವ ಆಪತ್ತುಗಳನ್ನು ತಮ್ಮ ಅಪೂರ್ವ ಜ್ಞಾನದಿಂದ ಮೊದಲೇ ಗ್ರಹಿಸಿ ರಾಜರನ್ನು ಪ್ರಜೆಗಳನ್ನು ಎಚ್ಚರಿಸುತ್ತಿದ್ದರು. ಮುಂದೆ ಒದಗುವ ಒಳಿತು-ಕೆಡಕುಗಳನ್ನು ಭವಿಷ್ಯ ಜ್ಞಾನವನ್ನು ತಿಳಿಸುವ ಪದಗಳನ್ನು 'ಕಾಲಜ್ಞಾನ' ಪದಗಳನ್ನಾಗಿಸಿ ವಿಂಗಡಿಸಲಾಗಿದೆ. ಬ್ರಿಟಿಷ್ ಆಳ್ವಿಕೆಯ ಮುನ್ಸೂಚನೆ, ಕಾಲರಾರೋಗ ಹರಡುವ ಬಗ್ಗೆ ಮೊದಲೇ ತಿಳಿದಿದ್ದ ಶರೀಫರು ಅವರ ಕಾಲಜ್ಞಾನದ ಪದಗಳಲ್ಲಿ ಅದನ್ನು ತಿಳಿಸಿ ಹಾಡಿದ್ದಾರೆ.

ಲಾವಣಿ ಪದಗಳು

ಶರೀಫರ ಲಾವಣಿ ಹಾಡುಗಳು ಖಂಡಕಾವ್ಯಗಳಂತಿವೆ. ಜಾನಪದ ಗೀತೆಗಳಲ್ಲಿ ಕಥಾನಕವಾಗಿ ಬರುವ ಪದಗಳನ್ನು ಲಾವಣಿಪದ ಎಂದು ಕರೆಯುತ್ತಾರೆ. ಬದುಕಿನಲ್ಲಿ ನಡೆವ ಘಟನೆಗಳನ್ನು ಕಥೆಯ ರೂಪದಲ್ಲಿ ಪದದುದ್ದಕ್ಕೂ ಹಾಡುವರು. ಮನುಷ್ಯನ ಶೌರ್ಯ, ಸಾಹಸವನ್ನು ಹೊಗಳದಂತೆ, ಜೀವನದಲ್ಲಿ ಬಂದೆರಗುವ ದುಃಖ, ಬೇಸರ, ಕೊಲೆ, ಸುಲಿಗೆಗಳಂಥ ವಿಚಾರಗಳನ್ನು, ಪೌರಾಣಿಕ ತತ್ತ್ವದ ವಿಷಯದ ಕಥೆ, ವ್ಯಥೆಗಳ ಬಗೆಗಿನ ದೊಡ್ಡದಾದ ಪದವನ್ನು ಹಾಡುತ್ತಾರೆ. ಲೋಕದ ಡಾಂಭಿಕತನವನ್ನು ಸಾಹಿತ್ಯ ರೂಪಕದ ಲಾವಣಿಯಲ್ಲಿ ಹಾಡಿದ್ದಾರೆ.

ಹೋಳಿ ಹಾಡುಗಳು

ಹೋಳಿ ಹುಣ್ಣಿಮೆಯಲ್ಲಿ ರತಿ-ಕಾಮಣ್ಣನ ಮೇಲೆ ಹಾಡುವ ಜನಪದ ಹಾಡುಗಳಿಂದ ಪ್ರಭಾವಿತರಾದ ಶರೀಫರು ದುಷ್ಟಶಕ್ತಿ ದಮನದ ಕುರಿತು ಪುರಾಣ, ಸನ್ನಿವೇಶಗಳನ್ನು ಹೋಳಿ ಪದದಲ್ಲಿ ರಚಿಸಿ ಹಾಡಿದ್ದಾರೆ.

ಮಂಗಳಾರತಿ ಪದಗಳು

ಗ್ರಾಮೀಣ ಜನರಲ್ಲಿ ಮಂಗಳಾರತಿ ಪದಗಳನ್ನು ಪೂಜೆಯ ಕೊನೆಯಲ್ಲಿ ಮಂಗಳಾರತಿಯನ್ನು ಎತ್ತುವಾಗ ಸಾಮೂಹಿಕವಾಗಿ ಹಾಡುವ ವಾಡಿಕೆ ಇದೆ. ತಮ್ಮ ತಮ್ಮ ಧರ್ಮದೇವತೆಗಳನ್ನು ಸ್ತುತಿಸಿ ದೀಪ ಬೆಳಗಿಸುವರು. ಸರ್ವಧರ್ಮಗಳ ಹರಿಕಾರರಾದ ಶರೀಫರು ಎಲ್ಲ ಧರ್ಮದ ದೈವಗಳ ಬಗ್ಗೆಯೂ ಮಂಗಳಾರತಿ ಪದಗಳನ್ನು ರಚಿಸಿದ್ದಾರೆ. ತನ್ನ ಗುರುವನ್ನು ದೈವವಾಗಿಸಿ ಗುರುವಿನ ಮೇಲೆಯೂ ಮಂಗಳಾರತಿ ಪದವನ್ನು ಶರೀಫರು ಹಾಡಿದ್ದಾರೆ.

ರಿವಾಯತ್ ಪದಗಳು

ಶರೀಫರು 'ರಿವಾಯತ್' ಪದದ ರಚನೆಗಳಿಂದಲೇ ತಮ್ಮ ಕಾವ್ಯಕೃಷಿಯನ್ನು ಪ್ರಾರಂಭಿಸಿದ್ದಾರೆ. ಮುಸ್ಲಿಂರಾದ ಶರೀಫರು ಮೊಹರಮ್ ಹಬ್ಬದಲ್ಲಿ ನಡೆಯುವ ಹೆಜ್ಜೆಮೇಳದ ಆಟಕ್ಕೆ ರಿವಾಯತ್‌ಗಳನ್ನು ರಚಿಸಿಕೊಡಲು ಪ್ರಾರಂಭಿಸಿದ್ದೇ ಅವರ ಪದ ರಚನೆಗಳ ಪ್ರಥಮ ಪ್ರಯತ್ನವಾಗಿವೆ.

'ರಿವಾಯತ್ ಪಾರ್ಸಿ ಮೂಲದಿಂದ ಬಂದ ಪದ. ಇದರ ಉಲ್ಲೇಖ ಇಸ್ಲಾಂ ಶಾಸ್ತ್ರ ಗ್ರಂಥ (ಹದೀಸ್)ಗಳಲ್ಲಿದ್ದು, ಇದರ ಅರ್ಥ ಸಂಪ್ರದಾಯ, ಕಥೆ, ಘಟನೆ ಎಂದಾಗುತ್ತದೆ. ಕಥಾ ಅಥವಾ ಘಟನಾ ಪ್ರಧಾನವಾದ ಇಂತಹ ಹಾಡುಗಳಿಗೆ 'ರಿವಾಯತ್‌ಗಳು' ಎಂಬ ಹೆಸರು ಬಂದಿರುವಂತೆ ತೋರುತ್ತದೆ.

ಇಂತಹ ಹಾಡುಗಳನ್ನು ಬರೆದ ಸಂತಕವಿ ಶಿಶುನಾಳ ಶರೀಫರೇ ರಿವಾಯತ್ ರಚನೆಯ ಹರಿಕಾರರು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ರಿವಾಯತ್ ಪದಗಳನ್ನು 'ಮೊಹರಂಪದ', 'ಅಲಾವಿಪದ' ಮತ್ತು 'ಕರ್ಬಲಾಪದ'ಗಳೆಂದೂ ಕರೆಯುತ್ತಾರೆ.

"ಮೊಹರಂ ಹಬ್ಬದ ಕಾಲಕ್ಕೆ ಹಾಡಲಾಗುವ ಇವುಗಳಿಗೆ 'ಮೊಹರಂ ಪದ' ಎಂದು ಅಲಾವಿ ಎಂದರೆ ಕುಣಿ, ಕುಣಿಯುತ್ತ, ಸುತ್ತುತ್ತ ಹಾಡುವುದರಿಂದ 'ಅಲಾವಿ

ಪದ' ಎಂದು, ಕರ್ಬಲಾ ಕದನದ ದುರಂತ ಸಾರುವುದರಿಂದ 'ಕರ್ಬಲಾ ಪದ'ಗಳೆಂದೂ ಮತ್ತು ಸವಾಲ್ ಜವಾಬ ಪದಗಳೆಂದೂ ಹೆಸರು. ಕರ್ಬಲಾ ಕಾಳಗ, ಧಾರ್ಮಿಕ ನೀತಿ, ಸಾಮಾಜಿಕ ಘಟನೆಗಳಂಥ ವಿಷಯಗಳು ರಿವಾಯತ್ ಪದದ ವಸ್ತುಗಳಾದವು."[೧]

ಶರೀಫರ ಕಾವ್ಯಪ್ರಕಾರಗಳು ಎಷ್ಟೇ ಇದ್ದರೂ, ಯಾವುದಾದರೂ ಹೆಸರಿನ ವಿಂಗಡನೆಯಲ್ಲಿ ಬಂದರೂ ಎಲ್ಲ ಪದಗಳು ಸತ್ಯದ ದರ್ಶನವನ್ನೇ ಮಾಡಿಸುತ್ತವೆ. ಅನೇಕ ದಾರಿಗಳಿಂದ ಹರಿದು ಬಂದ ಕಾವ್ಯಗಂಗೆಯು ಪರಮಾತ್ಮನ ಪಾದ ಸೇರುವ ಪಾರಮಾರ್ಥಿಕದಲ್ಲಿಯೇ ಸ್ಥಾಯಿಯಾಗುವುದರಿಂದ, ಇವರ ಎಲ್ಲ ಪದಗಳಿಗೆ ಶರೀಫರ ತತ್ತ್ವಪದಗಳೆಂದೇ ಹೇಳುವರು.

೪.೨ ಶರೀಫರ ತತ್ತ್ವಪದಗಳಲ್ಲಿ ಜಾನಪದೀಯ ಅಂಶಗಳು

ಜಾನಪದ ಎನ್ನುವುದು ಒಂದು ಪರಂಪರೆ. ಅದರ ಒಂದು ಅಂಗ ಜನಪದ ಸಾಹಿತ್ಯ. ಅನಕ್ಷರಸ್ಥರ ಮೌಖಿಕ ಪರಂಪರೆಯಲ್ಲಿ ಹುಟ್ಟಿ, ಕಂಠಸ್ಥ ಸಂಪ್ರದಾಯದಲ್ಲಿ ಬೆಳೆದು ಬಂದುದು ಜನಪದ ಕಾವ್ಯದ ಜೀವ ಲಕ್ಷಣವಾಗಿದೆ. ಎಷ್ಟೋ ಜನಪದ ಗೀತೆಗಳು ಶಿಷ್ಟಮೂಲವಾಗಿದ್ದರೂ ಅವುಗಳ ಲಕ್ಷಣ ಬೆಳವಣಿಗೆಯ ಜಾನಪದವಾಗಿದೆ.

ಜನಪದ ಕಾವ್ಯ ರಚಿಸುವಲ್ಲಿ, ಹಾಡುವಲ್ಲಿ ಯಾವುದೇ ಸಂಪ್ರದಾಯಿಕ ತಂತ್ರವಾಗಲಿ, ಸೂತ್ರವಾಗಲಿ ಇಲ್ಲ. ಜನಪದ ಕವಿ ಅಥವಾ ಗಾಯಕರಿಗೆ ಯಾವುದೇ ಪೂರ್ವಗ್ರಹಿತ ಸಿದ್ಧಾಂತವಾಗಲಿ, ತಂತ್ರಪ್ರಜ್ಞೆಯಾಗಲಿ ಇರುವುದಿಲ್ಲ.

ಜಾನಪದ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ತತ್ತ್ವಪದ, ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯವನ್ನು ಮೈಗೂಡಿಸಿಕೊಂಡಿದೆ. ಧರ್ಮಸಮನ್ವಯ, ಭಾಷಾ ಸಮನ್ವಯ ಪ್ರಾದೇಶಿಕ ಸಮನ್ವಯವನ್ನು ಸಾಧಿಸುವುದರೊಂದಿಗೆ ತತ್ತ್ವಪದದ ಸಾಹಿತ್ಯ ಸಮನ್ವಯವನ್ನೂ ಸಾಧಿಸಿದೆ. ತತ್ತ್ವಪದ ತತ್ತ್ವಪ್ರೌಢವಾದುದೂ, ಇದರ ಅಭಿವ್ಯಕ್ತಿಯ ಕ್ರಮ ಮತ್ತು ಬೆಳವಣಿಗೆ ಜನಪದವಾಗಿದೆ. ಇದರ ಹುಟ್ಟು ವೈಯಕ್ತಿಕವಾದರೂ ಬೆಳವಣಿಗೆ ಮಾತ್ರ ಸಾಮೂಹಿಕವಾಗಿದೆ. ತತ್ತ್ವಪದ ಸಾಹಿತ್ಯದ ಮೇಲೆ ಶಿಷ್ಟ ಸಾಹಿತ್ಯದ ಪ್ರಭಾವ ಬೀರುವುದರಿಂದ ತತ್ತ್ವಪದಕಾರರು ಜನಪದ ಪರಂಪರೆಗೆ ಸೇರಿದರೂ ತಮ್ಮ ಪದಗಳಲ್ಲಿ ಗಹನವಾದ ತತ್ತ್ವಗಳನ್ನು ಹೇಳಿದ್ದಾರೆ.

---

೧. ರಿವಾಯತ್‌ಗಳ ಅನುಸಂಧಾನ ಲೇ.ಎಚ್.ಎಂ.ಬೀಳಗಿ, ಪು. ೫.

ಪ್ರಾದೇಶಿಕ ಕವಿಗಳಾಗಿ ದುಡಿದ ಈ ತತ್ತ್ವಪದಕಾರರು ಆಯಾ ಪ್ರದೇಶದ ಸಾಂಸ್ಕೃತಿಕ ವ್ಯಕ್ತಿಗಳಾಗಿ ಜನಮನದಲ್ಲಿ ಬೀಡು ಬಿಟ್ಟಿದ್ದಾರೆ. ಪ್ರತಿಯೊಂದು ಪ್ರದೇಶವು ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವುದು ಅದರ ಜಾನಪದ ಜೀವನ ಮತ್ತು ಸಾಹಿತ್ಯದಿಂದ. ಶರೀಫರು ಜನಪದ ಕವಿ. ಉತ್ತರ ಕರ್ನಾಟಕದ ಸಾಮಾಜಿಕತೆ ಮತ್ತು ಸಾಂಸ್ಕೃತಿಕತೆಯ ಮಹತ್ವವನ್ನು ಶರೀಫರು ತಮ್ಮ ತತ್ತ್ವಪದ ಕಾವ್ಯದ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ಜನಪದ ವಾಹಿನಿಯಾಗಿ ಕಂಠದಿಂದ ಕಂಠಕ್ಕೆ ಪರಿಮಬರುವ ಶರೀಫರ ಕಾವ್ಯವು ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ಸೀಮಿತವಾಗುವ ಪ್ರಾದೇಶಿಕ ಪದಗಳಾಗಿವೆ. ಜನಪದ ಸಾಹಿತ್ಯದ ಎಲ್ಲ ಗುಣಲಕ್ಷಣಗಳನ್ನು ಶರೀಫರ ತತ್ತ್ವಪದಗಳು ಒಳಗೊಂಡಿವೆ. ಅವರ ತತ್ತ್ವಪದಗಳು ಶಿಷ್ಟ ಕವಿಯ ಕಾವ್ಯಶಾಸ್ತ್ರದ ರೀತಿ-ನೀತಿಯಂತೆ ಪಾಂಡಿತ್ಯ ಪೂರ್ಣವಾಗಿಲ್ಲ. ಎಲ್ಲ ಬಂಧನವನ್ನು ಮೀರಿ ಹರಿಯುವ ಸ್ವಚ್ಛಂದ, ಸ್ವತಂತ್ರ ದೇಶಿ ಕಾವ್ಯವಾಗಿವೆ. ಜನಪದ ಗೀತೆಯಲ್ಲಿ ಇರುವ ಹಾಗೆ ದೇಶ, ಧರ್ಮ, ಜಾತಿ, ಕೋಮುಗಳಿವೆ. ಇವುಗಳೆಲ್ಲವುಗಳು ಎಲ್ಲೆಯ ಕಟ್ಟನ್ನು ಮೀರಿ ಮಾನವನ ಮೂಲಭೂತ ಆಸೆ, ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ಬಾಂಧವ್ಯ ಗೀತೆಗಳಾಗಿವೆ. ವಿವಿಧ ಕೋಮು, ಕುಲ, ಧರ್ಮಗಳಲ್ಲಿಯ ಜನಪದ ಸಂಸ್ಕೃತಿಯ ಕುರಿತು ಹಾಡಿದ ದೇಶಿ ಛಂದಗಳಾಗಿವೆ. ಜನಪದ ಜೀವನದ ಮೇಲಾಗುವ ಅಂದಿನ ರಾಜಕೀಯ, ಯಾಂತ್ರಿಕತೆಯ ಪ್ರಭಾವ, ಪರಿಣಾಮಗಳನ್ನು, ಒಪ್ಪಂದ, ಒಡಂಬಡಿಕೆಗಳನ್ನು ಪದಗಳಲ್ಲಿ ಹೇಳಿದ್ದಾರೆ. ಅಂದಿನ ಕಾಲದ ಜನಪದ ಜೀವನದ ದಟ್ಟ ಚಿತ್ರಣವು ಶರೀಫರ ಪದಗಳಲ್ಲಿ ಮೂಡಿಬಂದಿದೆ.

ಶರೀಫರ ತತ್ತ್ವಪದಗಳಲ್ಲಿರುವ ಸಾಹಿತ್ಯ ಕಥೆ, ಕಾವ್ಯಾತ್ಮಕತೆ, ವಿಚಾರಗಳ ಮೌಲ್ಯ ಮತ್ತು ದೇಶೀ ಛಂದಗಳ ಬಗ್ಗೆ ಹೇಳಬೇಕಾದರೆ ಅವರ ಪ್ರತಿಯೊಂದು ಪದಗಳೂ ಉದಾಹರಣೆಗಳಾಗುತ್ತವೆ.

ಜನಸಾಮಾನ್ಯರ ಬದುಕು ಕಾವ್ಯವಸ್ತುವಾಗಿರುವುದು ಶರೀಫರ ಕಾವ್ಯದ ವಿಶೇಷವಾಗಿದೆ. ಅವರ ಸಾಮಾಜಿಕ ಬದುಕಿನಲ್ಲಿಯ ತೊಳಲಾಟ, ಮಾನಸಿಕ ಹೋರಾಟ, ಪ್ರಯೋಗ, ಚಿಂತನೆ, ಸಾಧನೆಗಳ ಮೂಲಕ ಪಡೆದ ಅನುಭವದ ವಾಡನ್ನು ಸತ್ವದ ಒರೆಗಲ್ಲಿಗೆ ಹಚ್ಚಿದಾಗ ದೊರೆತಂಥ ಸಾತ್ವಿಕ, ಅನುಭಾವಿಕ ವಿಚಾರಗಳು ತತ್ತ್ವಪದದ ಸಾಹಿತ್ಯದಲ್ಲಿ ಸಾಕಾರಗೊಂಡಿವೆ. ಲೌಕಿಕದ ಸತ್ಯವನ್ನು, ಪಾರಮಾರ್ಥಿಕತೆಯ ಸಾಧನೆಯನ್ನು ಭಾಷಿಕ ಮತ್ತು ಸಾಹಿತ್ಯಕ ಅಂಶಗಳ ಮೂಲಕ ತತ್ತ್ವಪದ ರೂಪದಲ್ಲಿ ಸಾಮಾನ್ಯರಿಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಇವರ

ಪದಗಳಲ್ಲಿ ಪಾಂಡಿತ್ಯ ಪ್ರದರ್ಶನವಿಲ್ಲದೆ ಜೀವನ ದರ್ಶನವಿದೆ, ಪಾರಮಾರ್ಥಿಕ ಸಾಧನೆಯಿದೆ.

ಶರೀಫರ ಪದಗಳು ಭಕ್ತಿ, ಜ್ಞಾನ, ವೈರಾಗ್ಯದ ಪದಗಳಾಗಿವೆ. ಅನುಭಾವ ಸಂಪತ್ತಿನಿಂದ, ಸರಳವಾದ ಅಭಿವ್ಯಕ್ತಿಯಿಂದ, ಸಹಜವಾದ ಸ್ಫೂರ್ತಿಯಿಂದಾಗಿ ಜನಕ್ಕೆ ಹತ್ತಿರವಾಗಿವೆ. ಸಾಮಾನ್ಯರನ್ನು ಮಹತ್ತಿನೆಡೆಗೆ ಕರೆದೊಯ್ಯುವ ಭಾವಗೀತೆಗಳಾಗಿವೆ. ಸಾಮಾಜಿಕ ಅನುಭವವನ್ನು ಅಧ್ಯಾತ್ಮದ ಅನುಭಾವದ ಮೂಲಕ ತಿಳಿಗೊಳಿಸುವ ರೀತಿ ಮಾತ್ರ ಅನನ್ಯವಾಗಿದೆ.

ಶರೀಫರ ಪದಗಳು ವಸ್ತು, ಶೈಲಿಗಳ ದೃಷ್ಟಿಯಿಂದ ದೇಶಿ ಸಾಹಿತ್ಯವಾದರೂ, ಶ್ರೇಷ್ಠ ಸಾಹಿತ್ಯವಾಗಿದೆ. ಗ್ರಾಮೀಣ ಪರಿಸರದ ಜನಪದ ಸಾಹಿತ್ಯಕ ಅಂಶಗಳಾದ ಕಥೆ–ಒಗಟು, ಹಾಡುಗಳು, ಉಪಮೆ, ರೂಪಕ, ದೃಷ್ಟಾಂತ, ಪ್ರತೀಕ, ಪ್ರತಿಮೆ, ಬೆಡಗು, ಛಂದಸ್ಸು, ಪ್ರಾಸದ ಮಟ್ಟುಗಳನ್ನು ಶರೀಫರ ಪದಗಳಲ್ಲಿ ಕಾಣಬಹುದು. ಕಾವ್ಯ ಸೃಷ್ಟಿಗೆಂದು ಪದಗಳನ್ನು ರಚಿಸದ ಶರೀಫರು ತಮ್ಮ ಜೀವನದ ಪರಿಸರದಲ್ಲಾದ ಅನುಭವಗಳನ್ನೇ ಆಡುಮಾತಿನ ದೇಶಿ ನೆಲೆಗಟ್ಟಿನಲ್ಲಿ ಜಾನಪದದ ಪ್ರಕಾರಗಳಲ್ಲಿ ಹಾಡಾಗಿಸಿದರು. ಪದದಲ್ಲಿರುವ ವಾಸ್ತವ ಸನ್ನಿವೇಶಗಳಲ್ಲಿ ಆಡು ಭಾಷೆ, ಭಾವ, ದೇಶಿ ರೂಪಕಗಳು ಮೈ ತಳೆದು ನಿಲ್ಲುತ್ತವೆ. ವಿಷಯಕ್ಕೆ ಹೊಂದಿಕೆಯಾಗುವ ಛಂದಸ್ಸೂ ತನ್ನಷ್ಟಕ್ಕೆ ತಾನಾಗಿಯೇ ಸಹಜವಾಗಿ ರೂಪುಗೊಳ್ಳುತ್ತದೆ.

ಶರೀಫರು ಯಾವುದೇ ಸಾಂಪ್ರದಾಯಿಕ ಅಲಂಕಾರಿಕ ಅರ್ಥದಲ್ಲಿ ಕವಿ ಎನಿಸಲಿಲ್ಲ. ಜನಮಾನಸದಲ್ಲಿ ಶಾಶ್ವತವಾದ ಆದರವನ್ನು ಪಡೆದ ಜನಪದ ಅನುಭಾವಿ ಕವಿಯಾಗಿದ್ದಾರೆ. ಭಾವನೆಗಳನ್ನು ಸಶಕ್ತ ದೇಶಿ ಪ್ರತೀಕಗಳ ಮೂಲಕ ಪ್ರತಿಕ್ರಿಯಿಸುವುದು ಅವರ ತತ್ತ್ವಪದಗಳ ವಿಶಿಷ್ಟ ವಿಧಾನವಾಗಿದೆ.

ಅಮೂರ್ತವಾದ ವಿಷಯಗಳ ಅಭಿವ್ಯಕ್ತಿಯನ್ನು ಅವರ ಪದಗಳಲ್ಲಿ ಕಾಣಬಹುದಾಗಿದೆ. ಕಾಲ ಮೃತ್ಯು, ಕರ್ಮ, ಪ್ರಕೃತಿ ಮುಂತಾದ ಗಹನತತ್ತ್ವಗಳನ್ನು ವಿವರಿಸುವಾಗಲೂ ಕವಿ ಸಹಜವಾದ ಪ್ರತೀಕ ವಿಧಾನವನ್ನು ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಹೊಲ, ಹಕ್ಕಿ, ಪ್ರಾಣಿ, ಹೆಣ್ಣು, ಸಂತೆ... ಮುಂತಾದ ಜಾನಪದ ಉಪದಾನಗಳ ಮೂಲಕ ಗೂಢವಾದ, ಗಾಢವಾದ ಅರ್ಥವಲಯಗಳನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ಸಂತೆ ಪ್ರತೀಕದ ಮೂಲಕ ಸಂಸಾರವನ್ನು, ಪಕ್ಷಿ, ಪ್ರಾಣಿಗಳ ಮೂಲಕ ಮನುಷ್ಯನ ಸ್ವಭಾವ ಮತ್ತು ಜೀವಸತ್ವವನ್ನು ಸಿದ್ಧಿಸುವ ಪ್ರತೀಕಗಳನ್ನು ಅವರ ಪದಗಳಲ್ಲಿ ಕಾಣುತ್ತೇವೆ.

ಸಾಮಾಜಿಕ ವಲಯದಲ್ಲಿ ಲೋಕನೀತಿಯನ್ನು ಹೇಳುವುದಲ್ಲದೆ ಅತೀಂದ್ರಿಯದ ಅನುಭವವನ್ನು ಹೇಳುವಲ್ಲಿ ಕವಿ ಬಳಸಿದ ಅಲಂಕಾರಿಕಪ್ರಜ್ಞೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷವೆನಿಸುವಂಥವುಗಳಾಗಿವೆ. ಬಾಹ್ಯ ಅಲಂಕಾರಗಳ ಆಗರದೊಂದಿಗೆ ದೈವಿಕ ಭಕ್ತಿ ಭಾವವು ಸೇರಿ, ಬಾಹ್ಯ ಪ್ರಪಂಚದ ಸೌಂದರ್ಯದ ಮೂಲಕ ಅಂತರಂಗದ ಆತ್ಮಸೌಂದರ್ಯವನ್ನು ಕಂಡುಕೊಂಡಿವೆ.

ಶರೀಫರ ತತ್ತ್ವಪದ ಸಾಹಿತ್ಯದಲ್ಲಿ ವಿವರಣಾತ್ಮಕ ರೂಪಕ ವಿರೋಧಾಭಾಸ ಮತ್ತು ಅನ್ಯೋಕ್ತಿಯ ಅಭಿವ್ಯಕ್ತಿಯನ್ನು ಕಾಣುತ್ತೇವೆ. ವಾಸ್ತವ ಬದುಕನ್ನು ವಿವರಿಸುವ ರೂಪಕಗಳ ಪರಂಪರೆಯನ್ನು ಶರೀಫರ ಪದಗಳಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ: ದೇಹವನ್ನು ಹೊಲವೆಂದು, ಭಕ್ತಿಯನ್ನು ವ್ಯವಸಾಯವೆಂದು, ಭೋಗ ಸುಖವನ್ನು ಹಾವೆಂದು, ವಿಷಯ ಸುಖವನ್ನು ವಿಷವೆಂದು... ಹೀಗೆ ಪರಿಸರದಿಂದಾಯ್ದ ರೂಪಕಗಳಲ್ಲದೇ ಆಧುನಿಕತೆಯಿಂದ ಉಂಟಾದ ಬದಲಾವಣೆಯನ್ನು ನೂಲಿನ ಗಿರಣಿ, ಸರ್ಕಾರಿ ಶಾಲೆ, ಉಗಿಬಂಡಿ, ಸೂಜಿ ಮುಂತಾದ ರೂಪಕ ಬಳಸಿ ಆಧುನಿಕತೆಗೆ ಪ್ರತಿಕ್ರಿಯಿಸಿದ್ದನ್ನು ಶರೀಫರ ತತ್ತ್ವಪದ ಸಾಹಿತ್ಯದಲ್ಲಿ ಕಾಣುತ್ತೇವೆ. ವೈಜ್ಞಾನಿಕ, ವೈಚಾರಿಕ ಹಿನ್ನೆಲೆಯಲ್ಲಿ ಮತ್ತು ವಿಷಯಗಳನ್ನು ಕುರಿತು ಹಾಡಿದ್ದಾರೆ.

ಬದುಕಿನ ವಿಮರ್ಶೆಯೇ ಕಾವ್ಯವಾಗಿರುವಾಗ ಜೀವನೋಪಯೋಗಿಯಾದ, ಜೀವನವನ್ನು ತಿದ್ದುವಂತಹ ಸಾಹಿತ್ಯಕ್ಕೆ ಮೌಲ್ಯವಿದೆ. ಮನಸ್ಸಿನ ಸೂಕ್ಷ್ಮವಾದ ಭಾವನೆಗಳನ್ನು, ನೀತಿಯ ಅತ್ಯುತ್ತಮವಾದ ಅಂಶಗಳನ್ನು, ತತ್ತ್ವಾನ್ವೇಷಣೆಯ ಸಾರತತ್ತ್ವಗಳನ್ನು ಸ್ಪಷ್ಟವಾಗಿ ಸುಲಭವಾಗಿ ಮನ ಮುಟ್ಟುವ ಹಾಗೆ ಹೇಳುವುದು ಸಾಹಿತ್ಯದ ಮುಖ್ಯ ಲಕ್ಷಣ. ತತ್ತ್ವವಿರಲಿ, ಧರ್ಮವಿರಲಿ, ಎಲ್ಲವನ್ನೂ ಅನುಭವದ ಆಧ್ಯಾತ್ಮಿಕ ಕುಲುಮೆಯಲ್ಲಿ ಕರಗಿಸಿ ಹೇಳಿದ್ದಾರೆ. ತಾತ್ತ್ವಿಕ ಮುಖವನ್ನು ಲೌಕಿಕ ವಸ್ತುಗಳ ಮೂಲಕ ತತ್ತ್ವಾನುಭವವನ್ನು, ತತ್ತ್ವಸಿದ್ಧಾಂತವನ್ನು ಶರೀಫರ ಪದಗಳು ದರ್ಶಿಸುತ್ತವೆ. ಹಾಗಾಗಿ ತಾತ್ತ್ವಿಕಮುಖ ಮತ್ತು ತತ್ತ್ವಾನುಭವ ಇವು ಎರಡು ಶರೀಫರ ಪದಗಳ ಮುಖಗಳು. ಈ ಎರಡು ಮುಖಗಳ ವೈಶಿಷ್ಟ್ಯವೇನೆಂದರೆ– ಪದದಲ್ಲಿರುವ ಲೌಕಿಕ ಅನುಭವವನ್ನು ಸುಲಭವಾಗಿ, ಸುಲಲಿತವಾಗಿ ಅಲೌಕಿಕಕ್ಕೆ ತರುವುದಾಗಿದೆ. ಸಾಮಾನ್ಯವಾದ ನುಡಿಗಳಲ್ಲಿ ಉಜ್ವಲವಾದ ಅನುಭೂತಿಯು ಹರಿದು ಬರುತ್ತದೆ. ಈ ಗುಣದಿಂದಾಗಿಯೇ ದಿನದಿಂದ ದಿನಕ್ಕೆ ಶರೀಫರ ಪದಗಳು ಜನಸಾಮಾನ್ಯರಿಗೆ, ಓದುಗರಿಗೆ, ಹಾಡುಗಾರರಿಗೆ ಹತಿರವಾಗುತಿವೆ.

ಶರೀಫರ ತತ್ತ್ವಪದಗಳಲ್ಲಿ ಸುತ್ತಮುತ್ತಲಿನ ಪರಿಸರದ ಯಥಾವತ್ತಾದ ಚಿತ್ರಣವು ರಾಗ-ತಾಳಗಳಲ್ಲಿ ಸುಲಭ ಶಬ್ದಗಳ ಮೂಲಕ ಕಾವ್ಯಮಯವಾಗಿ ಕಾಣಿಸಿಕೊಂಡಿದೆ. ಪ್ರಕೃತಿಯೊಡನೆ ಅಂದರೆ ಲೌಕಿಕದ ವಸ್ತು, ಸನ್ನಿವೇಶಗಳನ್ನು ಬಳಸಿಕೊಂಡು ಬೆಡಗಿನ ಆಧ್ಯಾತ್ಮದಂತಹ ಕಠಿಣ ವಿಷಯವನ್ನು ಸತ್ವಪೂರ್ಣವಾಗಿ ವರ್ಣಿಸಿರುವುದನ್ನು ಅವರ ಪದಗಳಲ್ಲಿ ಕಾಣುತ್ತೇವೆ.

ಇವರ ಭಾಷಾ ಸರಳತೆ, ಭಾವದ ಸ್ಪಷ್ಟತೆ, ಕಾವ್ಯದ ಕುಶಲತೆ, ರಾಗ-ತಾಳ ಮೇಳ, ಸಂಧಿ, ಪ್ರಾಸಗಳ ಬಂಧಕ್ಕೆ, ತಕ್ಕ ಪದಗಳ ಜೋಡಣೆ, ಅರ್ಥಗಾಂಭೀರ್ಯ, ಅರ್ಥಕ್ಕೆ ಸರಿಯಾದ ಅಲಂಕಾರಯುಕ್ತ ಸಂಬೋಧನೆ, ಮಿತಾಕ್ಷರತಾ, ಅರ್ಥಬಾಹುಳ್ಯತೆ ಇವೆಲ್ಲಾ ಕಾವ್ಯ ಗುಣಗಳನ್ನು ಇವರ ಪದಗಳಲ್ಲಿ ಕಾಣಬಹುದು. ಸಂಗೀತಕ್ಕೆ ಮೆರುಗು ಕೊಟ್ಟ ಶರೀಫರ ಪದಗಳು ಗೇಯತೆ, ನಾದಮಾಧುರ್ಯ, ಸರಳತೆ ಸಂಕ್ಷಿಪ್ತತೆ ಮತ್ತು ತತ್ತ್ವಬೋಧನೆಯ ರೀತಿಯಿಂದ ಸಾಹಿತ್ಯಕವಾಗಿ, ಸಂಗೀತಾತ್ಮಕವಾಗಿ ಜನಮನದಲ್ಲಿ ನೆಲೆನಿಲ್ಲುವ ಪದಗಳಾಗಿವೆ. ಪ್ರತಿಭೆಯೊಂದಿಗೆ ಕಾವ್ಯಧರ್ಮವನ್ನು ಒಳಗೊಂಡಿವೆ. ಕರ್ಣಾನಂದವಾದ ಶರೀಫರ ಹಾಡುಗಳ ನಾದಮಾಧುರ್ಯವನ್ನು ಕೇಳಿದಾಗ ಹೃದಯ ಮಿಡಿಯುತ್ತದೆ.

ಶರೀಫರು ಸ್ವಾನುಭಾವಿಗಳು, ಸಚ್ಚಾರಿತ್ರ್ಯಶೀಲರು, ಅವರ ಹಾಡುಗಳು ಬದುಕನ್ನು ಪ್ರತಿಬಿಂಬಿಸುವ ಪದಗಳಾಗಿವೆ. ಒಂದೇ ಪಾತ್ರದ ಅನೇಕ ಮುಖಗಳ ಅಭಿವ್ಯಕ್ತಿ ಇದೆ. ಆತ್ಮಸಮ್ಮುಖವಾದ ಶರೀಫರ ಕಾವ್ಯಧಾರೆ ಸಮಾಜಮುಖಿಯಾಗಿದೆ.

ಸಂಗೀತಕ್ಕೆ ಮೆರಗು ಕೊಟ್ಟ ಇವರ ತತ್ತ್ವಪದಗಳು ಹೃದಯದಲ್ಲಿ ಚಿರಂತನವಾಗಿ ನೆಲೆಯಾಗಿ ನಾಲಿಗೆಯ ಮೇಲೆ ನರ್ತಿಸುತ್ತವೆ. ನಿಸರ್ಗದ ಸಹಜ ತತ್ತ್ವವನ್ನರಿತ ಶರೀಫರು ವೇದಾಂತ ತತ್ತ್ವಜ್ಞಾನವನ್ನು ಸಂಗೀತಬದ್ಧ ಶುದ್ಧ ಪದಗಳಲ್ಲಿ, ಹಾಡುಗಬ್ಬಗಳಲ್ಲಿ ಬಣ್ಣಿಸಿದ್ದಾರೆ.

ಜನಪದ ಗೀತೆಗಳ ಒಂದು ಪ್ರಭೇದ ರಿವಾಯತ್ ಪದಗಳು. ಇವು 'ಇಸ್ಲಾಂ' ಸಂಪ್ರದಾಯದ ಹಾಡುಗಳು.

ರಂಗುರಂಗಿನ ಕಾಗದಗಳ ತಾಜಿಯಾ, ಹುಲಿವೇಷ, ಕೋಲಾಟ, ಹಲಿಗೆ-ಹೆಜ್ಜೆಮೇಳ, ಸವಾಲ್-ಜವಾಬ್ ಹಾಡುಗಾರಿಕೆ ಇವೆಲ್ಲ ರಿವಾಯತ್ ಪದಗಳಲ್ಲಿ ಬರುವ ಜನಪದ ಚಿತ್ರವನ್ನು ಪ್ರದರ್ಶಿಸುವ ಕಲೆಗಳು.

ಶರೀಫರು ತಮ್ಮ ಆಳವಾದ ಪುರಾಣ ಪ್ರಜ್ಞೆಯಿಂದ ಹಿಂದೂ ಸಂಸ್ಕೃತಿಯ ಅನೇಕ ಪುರಾಣ ಸಂದರ್ಭಗಳನ್ನು ಮೊಹರಮ್‌ದ ರಿವಾಯತ್ ಪದಗಳಲ್ಲಿ ರೂಪಿಸಿದ್ದಾರೆ. ರಾಮಾಯಣ, ಮಹಾಭಾರತದ ಘಟನೆಗಳನ್ನು ಕರ್ಬಲಾ ಕದನನೊಂದಿಗೆ ಸಮೀಕರಿಸಿದ್ದಾರೆ. ಉದಾಹರಣೆಗೆ ಶಂಭು ನಿಶಂಭುರ ಸಂಹಾರ ಬ್ರಹ್ಮನಿಂದ ವರ ಪಡೆದು, ದೇವತೆಗಳಿಗೆ ಕಂಟಕ ಪ್ರಾಯವಾಗಿದ್ದ ಶಂಭು–ನಿಶಂಭು ರಾಕ್ಷಸರನ್ನು ಜಗನ್ಮಾತೆ ಸಂಹರಿಸಿದ ಸಂದರ್ಭವನ್ನು ಕರ್ಬಲಾ ಕದನದಲ್ಲಿ ದುಷ್ಟಶಕ್ತಿಯನ್ನು ಮೆಟ್ಟ ಹಾಕಿದ ಸನ್ನಿವೇಶಕ್ಕೆ ತಳುಕು ಹಾಕಿದ ಕವಿ. "ಧಾಮಸಪುರದ ಯಜೀದರ ಕ್ರಮದಿ ಕಡಿದು ಕಾಲೊಳ್ ತುಳಿದಳು ಲೋಕಮಾತೆ"[೨] ಎಂದು ಪರಿಭಾವಿಸಿದ್ದಾರೆ.

ರಾಮಾಯಣ, ಮಹಾಭಾರತ ಘಟನೆಗಳೊಂದಿಗೆ ಇಸ್ಲಾಂ ಪುರಾಣವನ್ನು ಸುಲಭವಾಗಿ ಬೆರೆಸುತ್ತ, ಬೆಡಗಿನ ರೂಪಕಗಳನ್ನು ನಿರ್ಮಿಸುವ ಕೌಶಲ್ಯ ಅವರಿಗಿತ್ತು. ತತ್ತ್ವಗಳು ಪುರಾಣ ರೂಪಕಗಳನ್ನು ಪಡೆದುಕೊಳ್ಳುತ್ತವೆ. ಆದರೆ ಶರೀಫರ ಪದಗಳು ಜನಪದ ಸಾಂಸ್ಕೃತಿಕ ಸೃಜನಶೀಲತೆಗೆ ಸಾಕ್ಷಿಯಾಗಿವೆ.

ಉತ್ತಮ ಕಾವ್ಯಾಂಶ ಎಂದರೆ ಚಿಂತನಾಶೀಲವಾದುದು. ಶರೀಫರ ತತ್ತ್ವಗಳು ಕೇವಲ ಬಾಯಿಮಾತಿನ ಬೋಧವಾಗಿರದೇ ಕವಿಯ ದರ್ಶನದ ಕಾಂತಿಗೆ ಹಿಡಿದ ಕೈಗನ್ನಡಿಯಾಗಿವೆ. ತತ್ತ್ವಬೋಧನೆ ಶುಷ್ಕವಾಗಿರದೇ ಕಾವ್ಯಾಂಶ ಮೆರಗಿನ ಕಲೆಯಿಂದ ಶೋಭಿಸುತ್ತ ಜನರ ಜಾಡ್ಯವನ್ನು ತೊಳೆಯುವ ಕಾಳಜಿಯನ್ನು ಹೊತ್ತ ಚಿಕಿತ್ಸಕನ ಗುರಿಯನ್ನು ಹೊಂದಿವೆ.

ಸಾಮಾಜಿಕ ನೆಲೆಯಿಂದಲೇ ಹೊರಟ ಅವರ ತತ್ತ್ವಪದಗಳು ಸಾಹಿತ್ಯದ ಎಲ್ಲ ಅಂಶಗಳನ್ನು ಒಳಗೊಳ್ಳುತ್ತ, ಸಾಹಿತ್ಯಕ ಮೌಲ್ಯವನ್ನು ಹೆಚ್ಚಿಸುತ್ತವೆ. ಸಾಹಿತ್ಯಕ ಗುರಿ ಪರಮಾರ್ಥ ಸೇರುವುದನ್ನು ಅವರ ಪದಗಳಲ್ಲಿ ಕಾಣುತ್ತೇವೆ. ಅದು ಜನಪದ ವಾಹಿನಿಯಾಗಿ ಕಂಠದಿಂದ ಕಂಠಕ್ಕೆ ಹರಿದುಬಂದಿವೆ. ಅವುಗಳಲ್ಲಿ ಕೆಲವನ್ನು ಜೊತೆಗಿರುವವರು ಬರೆದಿಟ್ಟಿದ್ದಾರೆ. ಶಿಷ್ಟ ಸಾಹಿತ್ಯಕ್ಕೆ ತಲೆಬರಹ ಇರುವಂತೆ ಶರೀಫರ ಯಾವ ಪದಕ್ಕೂ ತಲೆಬರಹ ಹೆಸರಿನ ನಂಟಿಲ್ಲ. ಪದದ ಮೊದಲಿನ ಸಾಲನ್ನೇ ತಲೆಬರಹವಾಗಿಸಿ ಸಂಪಾದಿಸಲಾಗಿದೆ. ಪದದ ಕೊನೆಯ ಚರಣದಲ್ಲಿ ಅಥವಾ ಕೊನೆಯ ಸಾಲಿನಲ್ಲಿ ಗ್ರಾಮದೇವರಾದ ಬಯಲು ಬಸವಣ್ಣನನ್ನೇ ಶಿಶುನಾಳಧೀಶನಾಗಿಸಿ ಕಾವ್ಯಾಂಕಿತವಾಗಿಸಿಕೊಂಡಿದ್ದಾರೆ.

೪.೩ ಭಾವ, ಭಾಷೆ, ವಸ್ತು, ಶೈಲಿ

ಮಾನವನು ತನ್ನ ಜೀವಿತದ ಅವಧಿಯಲ್ಲಿ ಅನೇಕ ಪಾತ್ರಗಳನ್ನು ಮಾಡಬೇಕಾಗುವುದು. ಸೂಕ್ಷ್ಮವಾದ ಕವಿಯ ಮನಸ್ಸು ತನ್ನೆಲ್ಲಾ ಪಾತ್ರಗಳಲ್ಲಿ ಸೂಕ್ಷ್ಮತೆಯನ್ನು ಕಂಡು ಹದವಾಗಿ ಪ್ರತಿಕ್ರಿಯಿಸುವುದರಿಂದ ಅವನು ಎಲ್ಲ ರೀತಿಯ ಕವಿತೆಗಳನ್ನು ಬರೆಯಬಲ್ಲ. ಸಾಮಾನ್ಯವಾದ ವಸ್ತುವನ್ನು ತೆಗೆದುಕೊಂಡು ಅಸಾಮಾನ್ಯವಾದ ರೀತಿಯಲ್ಲಿ ಕಾವ್ಯ ರಚಿಸುವುದು ಕವಿಯ ಕವಿತಾಶಕ್ತಿಗೆ ಹಚ್ಚಿದ ಒರೆಗಲ್ಲಾಗಿದೆ.

ಶರೀಫರ ತತ್ತ್ವಪದಗಳಲ್ಲಿಯ ಭಾವ ಅದನ್ನು ವ್ಯಕ್ತಪಡಿಸಲು ಮಾಧ್ಯಮವಾದ ಭಾಷೆ, ತತ್ತ್ವಪದಗಳಲ್ಲಿಯ ವಸ್ತು, ಎಲ್ಲವೂ ಜಾನಪದ ನೆಲೆಯಿಂದಲೇ ಬಂದವುಗಳಾಗಿವೆ. ಭಾವ ಭಾಷೆಯಾಗಿ ವಸ್ತುವಿನ ಮೂಲಕ ಅಭಿವ್ಯಕ್ತಗೊಳ್ಳುವಾಗ ಸೃಷ್ಟಿಯಾದ ಶೈಲಿಯು ಜನಪದ ಸಾಹಿತ್ಯದ ಎಲ್ಲ ಅಂಶಗಳನ್ನು ತುಂಬಿಕೊಡುತ್ತದೆ. ಪರಿಸರದಲ್ಲಿಯ ಪರಿಸ್ಥಿತಿಯನ್ನು ತನ್ನಲ್ಲಿರುವ ಅಂತಃಸತ್ವದಿಂದ ಗಮನಿಸಿದ ಕವಿ ಶರೀಫರು ದೇಶಿ ನುಡಿಯ ಭಾಷೆಯನ್ನೇ ಬಳಸಿ ಪರಿಸರದಲ್ಲಿರುವ ಪರಿಚಿತ ವಸ್ತುಗಳಲ್ಲಿ ತತ್ತ್ವವಿರಿಸಿ, ಕಾವ್ಯ ಕೇಂದ್ರವನ್ನಾಗಿಸಿ ಅದರ ಸುತ್ತ ಜಾನಪದ ಶೈಲಿಯನ್ನು ಹೆಣೆದು ಕಾವ್ಯಾತ್ಮದ ಮೆರಗು ನೀಡಿದ್ದಾರೆ. ಕಾವ್ಯವು ಒಂದು ಭಾವಸಂಪತ್ತು. ಭಾವದ ಸಂಸ್ಕಾರವು ಅದರಲ್ಲಿ ಪಡಿಮೂಡಿರುತ್ತದೆ. ಭಾವವು ಪಕ್ವವಾದರೆ ಅದು ಅನುಭಾವವಾಗಿ ಪರಿಣಮಿಸುತ್ತದೆ.

ಶರೀಫರು ಅನುಭಾವಿಕ ಕವಿಗಳು. ಅವರ ಅತೀಂದ್ರಿಯದ ಅನುಭವದಲ್ಲಿ ಬುದ್ಧಿಭಾವಗಳು ಹದಗೊಂಡಿದ್ದವು. ಆ ಹದಗೊಂಡ ಸ್ಥಿತಿಯಲ್ಲಿ ಬದುಕಿನ ಯಾವುದೇ ಘಟನೆಯಾಗಲಿ, ಪ್ರಕೃತಿಯಾಗಲಿ, ಸಮಾಜ ಪ್ರೀತಿಯಾಗಲಿ, ಮಾನವ ಪ್ರೇಮವಾಗಲಿ, ಆಧ್ಯಾತ್ಮವಾಗಲಿ ಯಾವುದೂ ಹೊರತಾಗದೇ ಆ ಭಾವೋನ್ಮಾದದಲ್ಲಿ ತತ್ತ್ವಗಳು ರೂಪ ತಾಳಿ ತತ್ತ್ವಪದಗಳಾಗಿವೆ.

ಆಶುಕವಿಯಾದ ಶರೀಫರಿಗೆ ಕಾವ್ಯ ರಚನೆಗೆ ಸ್ಫೂರ್ತಿ ಬೇಕೆಂಬುದನ್ನು ಬಲ್ಲರು. ಬುದ್ಧಿ, ಭಾವಗಳು ಬಲಿತು ಒಂದಾಗುವ ಕ್ಷಣವನ್ನು 'ಭಾವದ ಕುದಿ' ಎಂದು ವರ್ಣಿಸಿದ್ದಾರೆ.

"ಬರಕೋ ಪದ ಬರಕೋ
ಇದರನ್ವಯ ತಿಳಕೋ

ಸದಮಲ ಜ್ಞಾನದ ಕುದಿ ಉಕ್ಕಿ ಬರುವಾಗ
ನೆದರಿಟ್ಟು ನಿನ್ನೊಳು ಸದಮಲತತ್ತ್ವದಿ..."[1]

ಜ್ಞಾನ, ಬೋಧದ ಭಾವಾವೇಶ ಹೊರಹೊಮ್ಮಿದಾಗ ತಾಳ, ಲಯ, ಅಡಿ, ಗಣ, ಪ್ರಾಸ ತಾವಾಗಿಯೇ ಪದದಲ್ಲಿ ಹೊಂದಿಕೊಳ್ಳುವುವೆಂದು ಜನಪದ ಕವಿ ಶರೀಫರ ಅನುಭವ.

ಶರೀಫರ ದೇಶಿ ಶಬ್ದ ಸಂಪತ್ತು ಅಪಾರವಾಗಿದೆ. ಜನ-ಸಾಮಾನ್ಯರ ಆಡುನುಡಿಗಳು, ಆಧ್ಯಾತ್ಮಿಕ ಪರಿಭಾಷೆಯ ಪದಗಳು, ನುಡಿಗಟ್ಟುಗಳು, ಗಾದೆಗಳು, ಒಗಟುಗಳನ್ನು ಹೇರಳವಾಗಿ ಬಳಸಿದ್ದಾರೆ. ಕೆಲವು ಪದಗಳ ಭಾಷೆ ಸರಳವಾಗಿದ್ದರೂ, ಅರ್ಥ ಗೂಢವಾಗಿರುತ್ತವೆ ಅಥವಾ ಹಾಡುಗಳಲ್ಲಿಯ ಶಬ್ದಗಳ ಅರ್ಥವೇ ಒಂದು ಬಗೆಯಾಗಿದ್ದರೆ, ಪದಗಳಲ್ಲಿ ಅಡಗಿರುವ ಅರ್ಥವೇ ಇನ್ನೊಂದು ಬಗೆಯಾಗಿರುತ್ತದೆ. ಈ ವಿಶಿಷ್ಟ ಶೈಲಿಯಿಂದಾಗಿ ಶರೀಫರ ತತ್ತ್ವಪದಗಳು ಆಕರ್ಷಣೀಯವಾಗಿ ರೋಚಕವಾಗಿವೆ. ಪದಗಳು ಬಿಡಿಬಿಡಿಯಾಗಿದ್ದರೂ ಪ್ರತ್ಯೇಕವಾದ ಘಟನೆ, ಸನ್ನಿವೇಶಗಳು ಕೂಡಿಕೊಂಡು ಆತ್ಮ ಪರಿಪೂರ್ಣತೆಯ ಒಟ್ಟಾರೆಯ ಭಾವವನ್ನು ನಿರ್ಮಾಣ ಮಾಡುತ್ತವೆ. ಅಂತರಂಗದಲ್ಲಿರುವ ಅನಾದೃಶ್ಯವಾದ ಭಾವನಾ ವಿಕಾಸವನ್ನು ದೇವೋನ್ಮಾದದ ನಿಬ್ಬೆರಗಿನಲ್ಲಿ ಶಿಶುನಾಳಧೀಶನಿಗೆ ತಮ್ಮ ತತ್ತ್ವಪದಗಳನ್ನು ಭಾವಪೂರ್ಣವಾಗಿ ಸಮರ್ಪಿಸಿದ್ದಾರೆ. ಅವರ ಪದಗಳೆಲ್ಲ ಭಾವ, ನಾದ, ಭಾಷೆಗಳಿಂದ ಸಮ್ಮಿಳಿತವಾದ, ಭಕ್ತಿ, ಜ್ಞಾನ, ವೈರಾಗ್ಯದಿಂದ ನೆಲೆಗೊಂಡ ಕಾವ್ಯಗಳಾಗಿವೆ.

ಶರೀಫರ ಪದಗಳ ಮೂಲಭಾವ ಭಕ್ತಿಯಾಗಿವೆ. ಭಕ್ತಿಯ ಭಿತ್ತಿಯಲ್ಲಿಯೇ ಚಿಗುರೊಡೆಯುವ ಅವರ ತತ್ತ್ವಪದಗಳು ಲೌಕಿಕ ವಿಷಯಗಳಿಗೆ ಸ್ಪಂದಿಸುತ್ತಲೇ ಪಾರಮಾರ್ಥದ ಉನ್ನತ ಭಾವಕ್ಕೇರಿ ಭಾವಸಮಾಧಿಗೈಯುವವು. ಅಮೂರ್ತವಾದ, ಅವ್ಯಕ್ತವಾದ ದೈವೀಭಾವಗಳಿಗೆ ದೇಶಿ ವಸ್ತು ಮತ್ತು ಶೈಲಿಯಿಂದ ಶರೀಫರ ಪದಗಳು ಉತ್ತಮ ಉದಾಹರಣೆಗಳಾಗಿವೆ.

"ಅಗ್ಗದರವಿಯ ತಂದು
ಹಿಗ್ಗಿ ಹೊಲಿಸಿದೆನಂಗಿ
ಹೆಗ್ಗಣವ ಒಯ್ಯಿತಪ್ಪ ತಂಗಿ ಈ ಅಂಗಿ
ಅಗಣಿತ ವಿಷಯದ ಆಮಗೇಣಿನ ಕವಚ
ಬಗಲ ಬೆವರಾಸಿ ಕುಡಿದು
ಬಗದೆ ತೋಯಿತಪ್ಪ ತಂಗಿ ಈ ಅಂಗಿ

ಬುದ್ಧಿಗೇಡಿಗಳಾಗಿ, ನಿದ್ದೆಕೆಡಿಸಿಕೊಂಡು
ಎದ್ದು ನೋಡಲು ಕರ್ಮ
ಗುದ್ದಿನೊಳಡಗಿಕೊಂಡಿತವ್ವ ತಂಗಿ ಈ ಅಂಗಿ
ಕಳದೇನ ಈ ಪರಿರಾತ್ರಿ
ಬೆಳಗಾಗುವ ಸಮಯದಿ
ಚೆಲುವ ಶಿಶುನಾಳೇಶ-
ನುಳುಪಿ ಕೊಟ್ಟಾನವ್ವ ತಂಗಿ ಈ ಅಂಗಿ"[೪]

ನಾಶವಾಗುವ ಈ ದೇಹವು ತನ್ನ ನಶ್ವರತೆಯನ್ನು ಮರೆತು ಲೌಕಿಕ ವಿಷಯಗಳಿಗೆ ಮನಸೋತು, ಅಜ್ಞಾನದ ಆಗರವಾಗಿ, ಕರ್ಮವ ಕತ್ತಲಿನ ಗುದ್ದಿನೊಳಗೆ ಕಳೆದುಹೋದ ಅಮೂಲ್ಯ ಬದುಕಿಗಾಗಿ ಪರಿತಪಿಸುತ್ತಿರುವ ಭಾವವನ್ನು ಕಾಣುತ್ತೇವೆ. ಕೊನೆಯ ಗಳಿಗೆಯಲ್ಲಿ ಜ್ಞಾನೋದಯವಾಗಿ ದೈವೀಭಾವ ಆವರಿಸುವುದನ್ನು ಅನುಭಾವದಿಂದ ತಿಳಿಯಬಹುದಾಗಿದೆ.

"ಕುಂಬಾರಕಿ ಈಕಿ ಕುಂಬಾರಕಿ ಈ
ಬ್ರಹ್ಮಾಂಡವನೆಲ್ಲ ತುಂಬಿಕೊಂಡಿರುವಾಕಿ

ಆಚಾರ ಎಂಬುವ ಆವಿಗಿ ಮುಚ್ಚಿ
ಅರಿವು ಎಂಬುವ ಬೆಂಕಿಯ ಹಚ್ಚಿ
ಸಾವಿರ ಕೊಡಗಳ ಸುಟ್ಟು ಇಂದು
ಸಂತೆಗೆ ಒಯ್ದು ಮಾರುವಾಕಿ

ಮೂರು ಕಾಸಿಗೊಂದು ಕುಡಿಕೆಯ ಮಾರಿ
ಆರು ಕಾಸಿಗೊಂದು ಗಡಿಗೆಯ ಮಾರಿ
ವಸುಧೆಯೊಳು ಶಿಶುನಾಳಧೀಶನ ಮುಂದೆ
ಧ್ಯಾನದ ಮಗಿಯೊಂದು ಇಡುವಾಕಿ"[೫]

ನಿಸರ್ಗದಲ್ಲಿ ಸೃಷ್ಟಿಯ ರಹಸ್ಯದ ಬಗ್ಗೆ 'ಕುಂಬಾರಕಿ' ದೃಷ್ಟಾಂತದಲ್ಲಿ ಹಾಡಿದರೆ 'ಅಗ್ಗದರವಿಯ ಅಂಗಿ'ಯು ವಿಷಯ ವಾಸನೆಗಳಿಂದ ತುಂಬಿದ ದೇಹದ ದೃಷ್ಟಾಂತವಾಗಿದೆ. ಒಂದೇ ದೇಹದಲ್ಲಿನ ಎರಡು ಭಾವಗಳನ್ನು ಶರೀಫರು ಸಶಕ್ತನಾದ, ಭಾವಪೂರ್ಣವಾದ ದೇಶಿಭಾಷೆ ದೇಶಿಶೈಲಿಯಲ್ಲಿ ನಿರೂಪಿಸಿದ್ದಾರೆ. 'ಅಗ್ಗದರವಿ', 'ಹಿಗ್ಗಿಹೊಲಿಸಿ', 'ಹೆಗ್ಗಣ ಒಯ್ಯತವ್ವ', 'ಬಗಲ ಬೆವರು', 'ಗುದ್ದಿನೊಳಗೆ ಅಡಗಿ

೪. ಅದೇ, ಪು. ೧೫೧.
೫. ಅದೇ, ಪು. ೧೪೩.

ಕೊಂಡಿತವ್ವ' ಇವೆಲ್ಲಾ ಪದಗಳು ದೇಶಿಭಾವ ಭಾಷೆಯ ಸಮರ್ಥಪದಗಳಾಗಿದ್ದು, ಕವಿಯ ಕಾವ್ಯಭಾವವನ್ನು ಸರಳವಾಗಿಸುತ್ತಲೇ ಸ್ಪಷ್ಟಗೊಳಿಸುತ್ತವೆ.

"ಏನ ಕೊಡ ಏನ ಕೊಡವ್ವ
ಹುಬ್ಬಳ್ಳಿ ಮಾಟ ಏನ ಚಂದುಳ್ಳ ಕೊಡವ್ವ
ತಿಕ್ಕಿಲ್ಲ ಬೆಳಗಿಲ್ಲ ಥಳಥಳ ಹೊಳತದ
ಕಂಚಲ್ಲ ತಾಮ್ರಲ್ಲ ಮಿರಿಮಿರಿ ಮಿಂಚತದ
ಶಿವರಾತ್ರಿ ಜಾತ್ರೆಗೆ ಹೋಗಿ ಸಿದ್ಧರಾಮನ ದರ್ಶನವಾಗಿ
ಮಳವ್ವ ಬಾಜಾರದಲ್ಲಿ ಬಾಳಿ ಹೋತವ್ವ ಕೊಡ
ಆರು ಮಂದಿ ಅಕ್ಕ-ತಂಗ್ಯಾರು ಜತ್ತೀಲೆ ನೀರಿಗೆ ಹೋಗಿ
ಜರ್‍ರನ ಜಾರಿಬಿದ್ದು ಸಿಗದ್ಹಂಗ ಹೋತವ್ವ ಕೊಡ"[೧]

ಆತ್ಮನ ಮೂರ್ತ ಸ್ವರೂಪವನ್ನು ಕೊಡದ ಭಾವದಿಂದ ನಿರೂಪಿಸುವ ಶರೀಫರ ಕಾವ್ಯಶಕ್ತಿ ಅನನ್ಯವಾದದ್ದು. ಪ್ರಾದೇಶಿಕ ಭಾವದ ಪ್ರಭಾವದಿಂದ ಪ್ರಯೋಗಿಸಿದ ಶಬ್ದಗಳಾದ 'ಹುಬ್ಬಳ್ಳಿ ಮಾಟ', 'ಸಿದ್ಧರಾಮನ ದರ್ಶನ', 'ಶಿವರಾತ್ರಿ ಜಾತ್ರೆ' ಇವು ದೇಶಿಭಾವವನ್ನು ಸ್ಮರಿಸುತ್ತವೆ.

ದೇಶಿ ಶೈಲಿಯಲ್ಲಿ ನೀರು ತರಲು ಹೋಗುವ ಸ್ತ್ರೀಯರ ಗುಂಪೊಂದು ಮೂರ್ತ ಸನ್ನಿವೇಶವಾಗಿದೆ. ನೀರು ತುಂಬುವಾಗ ಜಾರಿದ ಕೊಡದ ಬಗ್ಗೆ ಹಾಡುತ್ತ- 'ಜರ್‍ರನೆ ಜಾರಬಿದ್ದು ಸಿಗದ್ಹಂಗ ಹೋತವ್ವ ಕೊಡ' ಎಂಬ ಸಾಲಿನಲ್ಲಿ ಮೂರ್ತ ಸ್ವರೂಪದ ನೈಜ ಚಿತ್ರಣದೊಂದಿಗೆ ಆತ್ಮವು ಪರಮಾತ್ಮನಲ್ಲಿ ಐಕ್ಯವಾದ ಉನ್ನತ ಭಾವವನ್ನು ಹೇಳಿದ್ದಾರೆ. ಆತ್ಮೀಯ ಶೈಲಿಯು ಪಾರದರ್ಶಕವಾಗಿದ್ದಂತೆಯೇ ಸುಭದ್ರ ಚೌಕಟ್ಟು ಪಡೆದಿದೆ.

ಹೀಗೆ ಭಾವ, ಭಾಷೆ, ವಸ್ತು ಮತ್ತು ಶೈಲಿಯಲ್ಲಿರುವ ಇನ್ನೊಂದು ಪದವನ್ನು ಉದಾಹರಣೆಗೆ ಗಮನಿಸಬಹುದು.

"ಚೆನ್ನಪ್ಪ ಚೆನ್ನೆಗೌಡಾ ಕುಂಬಾರ ಮಾಡಿದ ಕೊಡನವ್ವ
ಚಂದಕ ತಂದೀನ ತಂಗಿ
ನೀರಿಗಿ ಬಂದೀನ...
ಅಗ್ಗಿಗೇರಿ ಕೆರಿಯ್ಯಾಗ ಹಸನಾದ ನೀರು ತುಂಬುವಾಗ
ಕಲ್ಲಿಗಿ ತಾಗಿತ್ತ ತಂಗಿ ಬಿಂದಿಗಿ ಒಡದಿತ್ತ..."[೨]

'ಕುಂಬಾರಕಿ' ಮತ್ತು ಕುಂಬಾರನಾದ 'ಚನ್ನಪ್ಪ ಚನ್ನಗೌಡ' ಇವರು ಸೃಷ್ಟಿಯ ಶಕ್ತಿಯ ಭಾವವನ್ನು ಸ್ಪಷ್ಟಪಡಿಸುತ್ತಾರೆ. ಅವರು ತಯಾರಿಸುವ, ಸೃಷ್ಟಿಯ ಚೇತನಶಕ್ತಿ ಹೊಂದಿದ ದೇಹ ಕೊಡವಾಗಿದೆ. ದೈವಾಂಶಗಳಿಂದ ಕೂಡಿದ ಆತ್ಮದ ಅಸ್ತಿತ್ವವು ಅರಿವಾಗುತ್ತಿದ್ದಂತೆಯೇ ಈ ಕೊಡ ಜಾರಿ ಹೋಗುವುದು, ಕಲ್ಲಿಗೆ ತಾಗಿ ಒಡೆದು ಹೋಗುವುದು. ಸೃಷ್ಟಿಯಲ್ಲಿ ಪುನಃ ಒಂದಾಗುವ ಪರಿಯನ್ನು ದೇಶಿ ದೃಷ್ಟಾಂತದಲ್ಲಿ ಸೆರೆ ಹಿಡಿದ ಭಾವವು ಸ್ಪಷ್ಟವಾಗಿದೆ. ಜಟಿಲವಾದ ಅಮೂರ್ತವಾದ ಆಧ್ಯಾತ್ಮ ಭಾವವನ್ನು ಪರಿಸರದ ವಸ್ತುವಿನಲ್ಲಿ, ಪ್ರಾದೇಶಿಕ ಶೈಲಿಯಲ್ಲಿ ಜನಪದ ಆಡುಭಾಷೆಯಲ್ಲಿ ಸ್ಪಷ್ಟವಾಗಿಸಿದ್ದಾರೆ. ಶರೀಫರ ಆಧ್ಯಾತ್ಮಿಕ ಭಾವವು ಎಳೆಬಿಡದೆ ಗಟ್ಟಿಯಾಗಿ ಹೆಣೆದ ಒಂದು ಸುಂದರ ನೇಯ್ಗೆಯ ಕಸೂತಿಯಂತೆ ಹೃದಯಕ್ಕೆ ಅಪ್ಯಾಯಮಾನವಾಗುವಂತೆ ಆತ್ಮವನ್ನು ಅಪ್ಪಿಕೊಳ್ಳುವ ಸಶಕ್ತವಾದ ಭಾವಬಂಧುರವಾಗಿದೆ.

ಆತ್ಮಕೇಂದ್ರವಾದ ದೇಹದ ಗುಡಿಯ ಮೂರ್ತ ಚಿತ್ರಣವು ಆತ್ಮಭಾವವನ್ನು ತಿಳಿಗೊಳಿಸಿ ಸರಳವಾಗಿ ಹೃದಯಂಗಮಗೊಳಿಸುತ್ತದೆ.

> **"ಗುಡಿಯ ನೋಡಿರಣ್ಣ**
> **ದೇಹದ ಗುಡಿಯ ನೋಡಿರಣ್ಣ'**
> **ಗುಡಿಯ ನೋಡಿರಿದು ಪೊಡವಿಗೆ ಒಡೆಯನ**
> **ಅಡಗಿಕೊಂಡು ಕಡುಬೆಡಗಿನೊಳಿರುತಿಹ"**[೨]

ಈ ಪದದ ಪದಗಳು ಆಡುಭಾಷೆಯಲ್ಲಿ ಅಮೂರ್ತವಾದ ಭಾವವನ್ನು ಮೂರ್ತ ವಸ್ತುಗಳಲ್ಲಿ ಹಿಡಿದಿಟ್ಟಿರುವ ಪದಗಳಾಗಿವೆ. ಅನೇಕ ಘಟ್ಟಗಳಲ್ಲಿ ಹಾಯ್ದು ಹೋದ ಶರೀಫರ ಕಾವ್ಯವಾಹಿನಿಯು ಬ್ರಹ್ಮಾನಂದದ ಭಾವಸಮಾಧಿಯಲ್ಲಿ ಒಂದಾಗುವುದನ್ನು ಕಾಣುತ್ತೇವೆ. ಭಕ್ತಿಪದಗಳಲ್ಲಿ ನಿರ್ಭರ ಭಕ್ತಿಯ ಅಭಿವ್ಯಕ್ತಿ ತಾನಾಗಿಯೇ ಅನುಭವಕ್ಕೆ ಬರುವುದು. ತಾನಾಗಿಯೇ ಹೊರಹೊಮ್ಮುವಭಾವ, ಅದಕ್ಕೆ ಅನುಗುಣವಾದ ಭಾಷೆಯಲ್ಲಿ ಪ್ರತಿಬಿಂಬಿತವಾದಾಗ ಒಂದು ತತ್ತ್ವಭರಿತ, ಶಕ್ತಿಭರಿತ ಭಾವವಿರುವುದರಿಂದ ಇವುಗಳನ್ನು ವಿಶೇಷ ರೀತಿಯ ಕನ್ನಡ ಭಾವಗೀತೆಗಳೆಂದು ಕರೆಯಬಹುದಾಗಿದೆ. ಜನಪದ ಗೀತೆಯ ಧಾಟಿಯ, ಆಡುಭಾಷೆಯ ಶೈಲಿಯ ಈ ಭಾವಗೀತೆಗಳೇ ಸಾಹಿತ್ಯದ ಪರಮ ಗುರಿಯಾದ ಪರಮಾರ್ಥವನ್ನು ಸೇರಿ ಆಧ್ಯಾತ್ಮಗೀತೆಗಳಾಗಿವೆ.

ಶರೀಫರು ತಮ್ಮ ಅನುಭಾವವನ್ನೇ ತತ್ತ್ವಪದಗಳಲ್ಲಿ ಮಾಧ್ಯಮವಾಗಿರಿಸಿದರು. ಅದು ಅವರ ಭಾವಚಿಂತನೆಯ ಫಲ. ಶರೀಫರ ತತ್ತ್ವಪದಗಳಲ್ಲಿ ಅನುಭವ ಮತ್ತು

೨. ಶರೀಫರ ಗೀತೆಗಳು, ಅದೇ, ಪು. ೫೪.

ಅಭಿವ್ಯಕ್ತಿ, ವಸ್ತು ಮತ್ತು ರೂಪ ಬೇರೆ ಬೇರೆಯಾಗಿ ಉಳಿಯದೇ, ಅವುಗಳ ಅವಿನಾಭಾವ ಸಂಬಂಧ ಮೂಡಿಬಂದಿದೆ. ತಮ್ಮ ಪರಿಸರದೊಳಗೆ, ಪರಿಸರದೊಂದಿಗ ಸ್ಪಂದಿಸಿದ ಫಲಗಳಿಂದ, ಅಂದಿನ ಜೀವನ ಮೌಲ್ಯಗಳಿಗೆ ಹೊಸ ಅರ್ಥವನ್ನು ತಮ್ಮ ಸ್ವಾನುಭವದ ಮೂಲಕ ಒದಗಿಸಿದರು. ಅವರ ಉದ್ದೇಶ ಜನಸಮ್ಮುಖವಾದ್ದರಿಂಧ ಆಡುಭಾಷೆಯನ್ನೇ ಬಳಸಿದರು. ಎಲ್ಲ ಭಾವ, ಭಾಷೆ, ಮೌಲ್ಯಗಳ ವಿಶಿಷ್ಟ ಚಿತ್ರವನ್ನು ಶರೀಫರ ತತ್ತ್ವಪದಗಳು ಕೊಡುತ್ತವೆ. ಸಾಮಾನ್ಯರ ತಿಳುವಳಿಕೆಯ ಮಾತಿನ ಬಳಕೆ, ನಿತ್ಯಜೀವನದಲ್ಲಿ ಕಾಣುವ ವಸ್ತುಸ್ಥಿತಿಗಳನ್ನೇ ಅಲಂಕಾರದಂತೆ ಬಳಸಿಕೊಳ್ಳುವ ರೀತಿಯಲ್ಲಿ ಸಮಗ್ರ ಭಾವನೆಯ ಅಭಿವ್ಯಕ್ತಿಯನ್ನು ಕಾಣುತ್ತೇವೆ.

ಅನುಭಾವ ಕಾವ್ಯದ ಮುಖ್ಯ ಗುಣವೆಂದರೆ ಸಾಂಕೇತಿಕ ಭಾಷೆಯನ್ನು ಬಳಸುವುದು. ಶರೀಫರ ಎಲ್ಲ ಪದಗಳ ಒಟ್ಟು ಸಾಂಕೇತಿಕಾರ್ಥದ ಭಾಷೆಯ ಹಿಂದಿರುವ ಭಾವ, ಎಂದರೆ 'ನೆಲೆ ಹುಡುಕುವ ಹಕ್ಕಿಯ' ಭಾವ. ಲೌಕಿಕದಲ್ಲಿ ಸಂಪೂರ್ಣವಾಗಿ ಮುಳುಗಿ ಹೋಗದ ಹಾಗೆ ಜೀವಚಿಂತನೆ, ದೈವಚಿಂತನೆಗಳಲ್ಲಿ ತನ್ನ ಅಂತರಂಗವನ್ನು ತೊಡಗಿಸಿಕೊಳ್ಳುವುದು, ಆ ಕಾವು ಆರದಂತೆ ಜೀವದೊಡನೆ ಚಿಂತನೆ ಮಾಡುತ್ತ ಮಾತನಾಡುವುದು ಶರೀಫರ ಹಲವಾರು ಪದಗಳ ಭಾವ ಸಂಭಾಷಣೆಯಾಗಿದೆ.

"ನಿದ್ದಿಯೆಂಬೋ ನಿಜ ಪಾದರಗಿತ್ತಿ
ಬುದ್ಧಿ ಇಲ್ಲವೇ ನಿನಗೆ

ಹೀನ ಲೌಡಿ ಹಿಂದಕೆ ಸರಿ ಜ್ವಾಕಿ
ಜ್ಞಾನಯೆಂಬುವ ಕಣ್ಣಿಗೆ ಮುಸುಕ್ಹಾಕಿ
ಮಲೀನದಿಂದ ಶಿಶುನಾಳಧೀಶನ
ಧ್ಯಾನ ಕೆಡಿಸುವದು ಇದ್ಯಾವ ರೀತಿ?"

ಸಿದ್ಧಿ ಸಮಾಧಿಯೋಗದಲ್ಲಿರುವ ಶರೀಫರಿಗೆ ನಿದ್ದೆಯಿಂದ ಯೋಗಭಂಗ ವಾದುದನ್ನು ಸಹಿಸಲಾಗದೇ ತಮ್ಮ ಭಾವಲೋಕದಲ್ಲಿಯೇ ನಿದ್ರೆಗೆ ಅವಾಚ್ಯ ದೇಶೀ ಭಾಷೆಯಲ್ಲಿ ಬೈಯುವುದನ್ನು ಪದದಲ್ಲಿ ಕಾಣುತ್ತೇವೆ.

"ಸೋರುತಿಹುದು ಮನೆಯ ಮಾಳಿಗಿ ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗಿ
ದಾರುಗಟ್ಟ ಮಾಳ್ಗಿಲ್ಲದೆ

ಕಾಳ ಕತ್ತಲೆಯೊಳಗೆ ನಾನು
ಮೇಲಕೇರಿ ಮೆಟ್ಟಲಾರದೆ..."[೧೦]

ಎಂದು ಅಜ್ಞಾನದಿಂದಾಗುವ ಅನಾಹುತಗಳನ್ನು ನೆನೆದು ತನ್ನಿಂದ ಸರಿ ಮಾಡಲು ಸಾಧ್ಯವಿಲ್ಲದ ಅಸಹಾಯಕತೆಯ ಭಾವದಿಂದ ತಮಗೆ ತಾವೇ ಪ್ರಶ್ನಿಸಿಕೊಂಡು ಸಂಭಾಷಿಸುವ ಶೈಲಿಯನ್ನು ಗಮನಿಸಬಹುದು.

"ಎಷ್ಟು ಕಾಡತಾವ ಕಬ್ಬಕ್ಕಿ ನಾ
ಹೊಲದಾಗ ಇರುವಾಕಿ ಒಬ್ಬಾಕಿ
ಆ ಕಡೆಯಿಂದ ಬಂದಾವ ಮೂರು ಹಕ್ಕಿ
ಅವನ್ನ ಕಾದು ಕಾದ ನನಗ ಬ್ಯಾಸರಕಿ
ಕಬ್ಬಕಿ ಬರತಾವ ಸರಬೆರಕಿ
ಕವಣಿ ಬೀಸಿ ಬೀಸಿ ಬಂತೆನಗ ಬ್ಯಾಸರಿಕಿ..."[೧೧]

ಲೌಕಿಕದ ಆಕರ್ಷಣೆಗೊಳಗಾಗುವ ಅರಿಷಡ್ವರ್ಗಗಳು ಬಿಡದೇ ಶರೀಫರನ್ನು ಕಾಡಿದಾಗ, ದೈವಚಿಂತನೆಗೆ ಶರಣಾಗುವ ಅನುಭವವನ್ನು ಈ ಪದ ತೋರಿಸುತ್ತದೆ.

ಸಾಧು ಸತ್ಪುರುಷರ ಜೊತೆ ಕಳೆದ ಅಮೃತಗಳಿಗೆಗಳ ಸವಿಯನ್ನು ತನ್ನೊಳಗೆ ನೆನೆಯುತ್ತ, ಸತ್ಸಂಗದ ಹಿತವನ್ನು ತೃಪ್ತಮನಸ್ಸಿನ ಭಾವದಿಂದ ಹಾಡಿದ್ದಾರೆ. ಲೌಕಿಕ ಸಂಗತಿಯಾದ ಹಾದರದಲ್ಲಿಯ ಸುಖವನ್ನು ಸತ್ಸಂಗಕ್ಕೆ ಹೋಲಿಸುತ್ತಾರೆ.

"ಹಾದರ ಮಾಡಿದೇನೆ ನಾನೊಂದು...
ಹಾದರ ಮಾಡಿದೆ ಹಗಲಿರುಳೆನ್ನದೆ
ಸಾಧು ಸತ್ಪುರುಷರ ಪದರಿನೊಳಗೆ
ಮಳ್ಳಿಯ ತೆರದಲಿ ಮಾತುಗಳಾಡುತ ಜಗದಲಿ
ಕಳ್ಳರೊಳಗೆ ಸುಳಿದೆ ಹಳ್ಳಕೊಳ್ಳ ಹಾಳುಗೋಡೆ ಮಳಗಿಯೊಳು
ಉಳ್ಕಾಡಿ ಬ್ಯಾಸತ್ತು ಒಳ್ಳಾಕಿ ಎನಿಸಿದೆ..."[೧೨]

ದೈವ ಸಾನ್ನಿಧ್ಯಕ್ಕಾಗಿ ಜೀವ ಚಿಂತನೆಯನ್ನು ಮಾಡುವುದರೊಂದಿಗೆ ಕಳೆದ ತನ್ನ ಸಮಯವನ್ನು ಕುರಿತು ತನ್ನಲ್ಲೇ ಹೇಳಿಕೊಳ್ಳುವ ಪರಿಯನ್ನು ಈ ಪದದಲ್ಲಿ ಕಾಣುತ್ತೇವೆ.

---

೧೦. ಅದೇ, ಪು. ೧೬೩.
೧೧. ಅದೇ, ಪು. ೨೦೨.
೧೨. ಅದೇ, ಪು. ೫೩.

ಸಮಾಜದೊಂದಿಗೆ ಸಜೀವ ಸಂಬಂಧವಿರಿಸಿಕೊಂಡು ಸಮಾಜದ ಎಲ್ಲ ಬಗೆಯ ಚಟುವಟಿಕೆಗಳಲ್ಲಿ ಇತ್ಯಾತ್ಮಕವಾಗಿ ಭಾಗವಹಿಸಿ, ತನ್ನೆಲ್ಲ ವ್ಯವಹಾರಗಳ ಮಿಥ್ಯದಲ್ಲಿ ಅಂತರಂಗದಲ್ಲಿ ಜೀವ ಸಂಶೋಧನೆಯ ತಂಬೂರಿಯ ಶೃತಿಯನ್ನು ಮೀಟುತ್ತಲೇ ಇರುತ್ತಾರೆ. ಅಂತರಂಗ ಬಹಿರಂಗ ಭಾವಗಳನ್ನು ಬೆದಕಲು ಶರೀಫರು ಬಳಸುವ ಕಲಾತ್ಮಕ ತಂತ್ರ ಇದಾಗಿದೆ.

ಸಮಾಜ ಜೀವಿಯಾದ ಶರೀಫರು ತನ್ನ ಒಳಜೀವದೊಂದಿಗೆ ನಡೆಸುವ ಸಂಭಾಷಣೆ ಒಂದು ಬಗೆಯಲ್ಲಿ ಅವರ ಸ್ವಭಾವಗಳ ವಿಶ್ಲೇಷಣೆಯೂ ಆಗಿದೆ. ಆತ್ಮಶೋಧನ, ಆತ್ಮನಿವೇದನದ ಅಂತರಂಗವನ್ನೇ ತೆರೆದು ತೋರುತ್ತದೆ. ಅನುಭಾವಿಗಳು ಭಾಷೆಯ ಅನೇಕ ರೂಪದಲ್ಲಿ ತಮ್ಮ ದೈವಭಕ್ತಿಯನ್ನು ತತ್ತ್ವತಾತ್ಪರ್ಯವನ್ನು ಅರುಹಿದ್ದಾರೆ. ಭಕ್ತಿಯೇ ಭಕ್ತರ ಭಾಷೆ ಬದುಕಿನ ಜಿಜ್ಞಾಸೆಯಲ್ಲಿ ಸಿಕ್ಕ ಜೀವ ಪರಮ ಸತ್ಯ ಪರಮಾತ್ಮನ ಹಂಬಲಕ್ಕಾಗಿ ಹಾತೊರೆದಾಗ ಹೊಳೆದ ತತ್ತ್ವದ ಸೆಳೆಮಿಂಚನ್ನು ಪದಗಳಲ್ಲಿ ಹಾಡಿದ್ದಾರೆ. ತಮಗೆ ತಿಳಿದ ಭಾಷೆಯಲ್ಲಿ ಈ ಅಭಿವ್ಯಕ್ತಿಯನ್ನು ಮಾಡಿದ್ದಾರೆ.

ಶರೀಫರ ಪದಗಳು ಸಾಹಿತ್ಯಕ ಮತ್ತು ತಾತ್ತ್ವಿಕ ಮೌಲ್ಯವುಳ್ಳ ಪದಗಳು. ಭಕ್ತಿಭಾವದಿಂದ ಹೃದಯದಲ್ಲಾದ ಗಾಢ ಅನುಭವದ ಪರಿಣಾಮವಾಗಿ ದೇಶಿ ನುಡಿಗಳ ರೂಪದಲ್ಲಿ ಹೃದಯಾನುಭವ ಉಂಟಾದಾಗ ಅವುಗಳಲ್ಲಿ ಭಕ್ತಿ ಮೌಲ್ಯ ಕಾವ್ಯ ಮೌಲ್ಯಗಳೆರಡೂ ಒಂದಕ್ಕೊಂದು ಪೂರಕವಾಗಿ ಭಾಷೆಯಲ್ಲಿ ಅರಳುವುದನ್ನು ಕಾಣುತ್ತೇವೆ.

"ಕೋಡಗನ ಕೋಳಿ ನುಂಗಿತ್ತ
ನೋಡವ್ವ ತಂಗಿ
ಆಡು ಆನೆಯ ನುಂಗಿ
ಗೋಡೆ ಸುಣ್ಣವ ನುಂಗಿ
ಆಡಲು ಬಂದ ಪಾತರದವಳ ಮದ್ದಲೆ ನುಂಗಿತ..."[೩]

ಉನ್ನತವಾದ ತಾತ್ತ್ವಿಕ ಮೌಲ್ಯ ಮತ್ತು ಸಾಹಿತ್ಯ ಮೌಲ್ಯಗಳು ಅಚ್ಚ ದೇಶಿಭಾಷೆಯಲ್ಲಿ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ತತ್ತ್ವಪದಗಳಲ್ಲಿ ಪ್ರಯೋಗ ಗೊಂಡಿರುವ ದೇಶಿ ಪದಗಳು ತಮ್ಮ ಅಪೂರ್ವತೆಯಿಂದ ಗಮನಾರ್ಹವಾಗಿದೆ. ಸಾಹಿತ್ಯಕ ಮೌಲ್ಯಗಳನ್ನು ತಂದುಕೊಟ್ಟಿವೆ. ಅಲೆಮಾರಿಯಂತೆ ಬದುಕನ್ನುಂಡ

ಸಂಚಾರಿಯ ಶರೀಫರು ಸಮಾಜದ ವಿಭಿನ್ನ ವ್ಯಕ್ತಿಗಳೊಂದಿಗೆ ಬೆರೆತ ಕಾರಣ ಅವರ ಲೋಕಾನುಭವ ಆಳವಾಗಿದೆ.

ಶರೀಫರ ದೇಶಿಭಾಷೆಯ ಸೊಗಸು ಅನುಭವ–ಅಭಿವ್ಯಕ್ತಿಯನ್ನು ಒಂದಾಗಿಸಿದೆ. ಒಂದು ಭಾಷೆಯ ಸ್ವಂತ ನುಡಿಗಳು ಅಥವಾ ಜನನುಡಿಗಳಾದ ದೇಶಿ ಭಾಷೆಯು ಶರೀಫರ ಪದಗಳಲ್ಲಿ ವಿಶಿಷ್ಟತೆಯನ್ನು ಪಡೆದು ಪದದ ಗುರಿ ತಲುಪಲು ಪೂರಕವಾಗಿ ನಿಂತಿದೆ. ದೇಶಿ ನುಡಿಗಳಲ್ಲಿ ದ್ವಿರುಕ್ತಿ, ಜೋಡುನುಡಿ, ಪಡೆನುಡಿ, ನಾಣ್ನುಡಿ, ಬೈಗುಳದ ಪದಗಳನ್ನು ಕಾಣುತ್ತೇವೆ.

ಜೋಡುನುಡಿಗಳು– ಅರ್ಥದಲ್ಲಿ ಸಾಮ್ಯವಿರುವ ಎರಡು ಅಥವಾ ಹೆಚ್ಚು ಪದಗಳು. ಭಾವದ ಸ್ಪಷ್ಟತೆಗಾಗಿ ಅಭಿಪ್ರಾಯದ ವಿಶೇಷತೆಗಳಿಗಾಗಿ ದೇಶಿ ಜೋಡಿ ಪದಗಳನ್ನು ಶರೀಫರು ತಮ್ಮ ಪದಗಳಲ್ಲಿ ಬಳಸಿದ್ದಾರೆ.

"..................................
ತಂಬಾಕಿಲ್ಲದೆ ಬತ್ತಿ ಒಳ ಸೇರಿರಬೇಕು
ಶೆರೆ ಕುಡಿಯದೆ ನಿಶೆಯಾಗಿರಬೇಕು
ಎಬಡಾ–ತಬಡಾ ನಾಲಿಗೆ ಬದ್ಧಿರಬೇಕು..."[೧೪]

"ಕೆಟ್ಟಗಡಕಿ ಕೊಟ್ಟ ಗಂಡನ ಬಿಟ್ಟು ಊರೊಳಗೊಬ್ಬನ ನೆಂಟನ
ಇಟ್ಟುಕೊಂಡು ಎಷ್ಟು ಪಂಟು ಪಟ್ಟುಕೊಳ್ಳುವಿ?"[೧೫]

"ಕೂಲಿ ಹಂಜಿ ನೂತಕೊಂಡು ಶಾಲಿ ಕುಬ್ಬಸ ಮಾಡಿಕೊಂಡು
ಕಲ್ಲಾಬಿಲ್ಲಿ ಕವದಿ ಹರಕಿ ಗಲ್ಲಾಗುಂಟ ನೀನಲ್ಲವೆ?"[೧೬]

"ಕಲ್ಲಾಬಿಲ್ಲಿ ಎಂದರೆ ದೇಶಿ ನುಡಿಯಲ್ಲಿ ಚೆಲ್ಲಾಪಿಲ್ಲಿ ಎಂದರ್ಥ. ಇದು ದೇಶಿ ಜೋಡುನುಡಿ, 'ಕೆಟ್ಟಗಡಕಿ', 'ಕವದಿ ಹರಕಿ' ಮತ್ತು 'ಗಲ್ಲಾಗುಂಟಿ' ಈ ಪದಗಳು ದೇಶಿ ಬೈಗುಳ ಪದಗಳಾಗಿದ್ದು ಕಾವ್ಯದ ಉದ್ದೇಶವನ್ನು ತೀವ್ರಗೊಳಿಸುತ್ತವೆ.

"ಒಳ್ಳು–ವನಕಿಯ ನುಂಗಿ
ಹಗ್ಗ–ಮಗ್ಗವ ನುಂಗಿ
ಎತ್ತು–ಜತ್ತಿಗಿ ನುಂಗಿ
ಗುಡ್ಡ–ಗಂವ್ಹರ್ ನುಂಗಿ..."[೧೭]

---

೧೪. ಅದೇ, ಪು. ೧೭೫.
೧೫. ಅದೇ, ಪು. ೧೬೮.
೧೬ ಅದೇ, ಪು. ೧೬೮.
೧೭ ಅದೇ, ಪು. ೧೯೮.

ಈ ಜೋಡಿ ಪದಗಳ ಸಹಕಾರದಿಂದ ಅಚ್ಚರಿಯ ಬೆಡಗಿನ ಪದಗಳನ್ನು ಹಾಡಿದ್ದಾರೆ. ಅಸಾಧ್ಯವಾದುದು ಸಾಧ್ಯವಾಗುವ ಭಾವದ ಜೊತೆಗೆ ಪ್ರಾಸಬದ್ಧವಾದ ದೇಶಿಭಾಷೆಯ ಶಬ್ದಗಳು, ಅವುಗಳನ್ನು ಜೋಡಿಸಿ ಹೇಳುವ ಶೈಲಿಯು ಶರೀಫರ ಕಾವ್ಯಚತುರತೆಯನ್ನು ಪ್ರದರ್ಶಿಸುತ್ತದೆ. ಭಾವತೀವ್ರತೆಯಿಂದ, ದೇಶಿಛಂದದಿಂದ, ಸುಂದರ ಶೈಲಿಯಿಂದ ಅವರ ಪದಗಳು ಆಕರ್ಷಕವಾಗಿರುವುದನ್ನು ಕಾಣುತ್ತೇವೆ.

ಇದೇ ತೆರನಾದ ದೇಶಿ ಜೋಡಿ ಪದಗಳನ್ನು ಗಾಳಿ–ಧೂಳಿ, ತೆನೆ–ಸೊಪ್ಪು, ಹೆಂಡ–ಹೇಸಿಗೆ, ಹೆಂಡಿರು–ಮಕ್ಕಳು,ಸಂದಿ–ಗೊಂದಿ, ಸೆರೆ–ಶೇಂಧಿ, ಶಿವ–ಹರ, ಹಂದರ–ಹಾಲಗಂಬ, ದಂಡಿ–ಬಾಸಿಂಗ ಮುಂತಾದ ಪದಗಳನ್ನು ಕಾಣುತ್ತೇವೆ. ಇವು ದೇಶಿ ಶಬ್ದ ಸಂಪತ್ತನ್ನು ಸಮೃದ್ಧಿಗೊಳಿಸುತ್ತವೆ.

ಪಡೆನುಡಿಗಳು

ಪಡೆ ನುಡಿ ಒಂದು ನುಡಿಗಟ್ಟು, ಎರಡು ಅಥವಾ ಮೂರೇ ಶಬ್ದಗಳಲ್ಲಿ ವಿಶಿಷ್ಟ ಅರ್ಥವನ್ನುಳ್ಳ ಕಾವ್ಯದ ಭಾವವನ್ನು ತೀವ್ರಗೊಳಿಸುವುದು. ಜನಪದರಲ್ಲಿ ಸಹಜವಾಗಿ ಬಳಕೆಯಾಗುವ ಈ ಪದಗಳು ಅವರ ಜಾಣ್ಮೆ, ಅನುಭವ, ಧ್ವನಿಗಳೆಲ್ಲವನ್ನೂ ಪಡೆ ಮಾತಾಗಿ ಬಿಂಬಿಸುತ್ತದೆ. ಪಡೆ ನುಡಿಗಳು ವಿಶೇಷವಾಗಿ ಶರೀಫರು ರಚಿಸುವಂಥ ಆಧ್ಯಾತ್ಮಿಕ ಸಂಕೇತಾರ್ಥದ ಪದಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ.

"ತಾಳಲಾರೆ ತಗಣೆಯ ಕಾಟವ
ಶಿವ–ಹರನೇ ಬಲ್ಲ...

ಮೈಮೇಲೆ ಬಿದ್ದರೆ ತಿಂಡಿ
ಹಚ್ಚಿದಂತೆ ಪುಂಡಿ
ಮಾಯದೇಹದಕ್ತದ ಉಂಡಿ..."[೨೮]

ಮತ್ತು

"...ಆರು ಮೂರು ಒಂಭತ್ತು ಭಾಳಬೆರ್ಕಿ
ಅದರೊಳಗೊಂದೈತಿ ಮೂಬೆರ್ಕಿ
ತುದಿಕಾಲ್ಗಿಂದ ಹೊಡೆತಾನು ಗುರಕಿ
ಶಿಶುನಾಳಧೀಶನ ಮುದಿಹಕ್ಕಿ..."[೨೯]

'ತುದಿಕಾಳು ಪರಮಾರ್ಥವನ್ನು, ಜ್ಞಾನವನ್ನು ತೋರಿಸುವ ಸಂಕೇತಾರ್ಥ ಪಡೆನುಡಿಯಾಗಿದೆ.

"...ನೀರಿಲ್ಲದ ಜಳಕ ಮಾಡಿರಬೇಕು
ಅರಿವೆ ಇಲ್ಲದ ಮಡಿ ಉಟ್ಟಿರಬೇಕು
ಊಟ ಇಲ್ಲದ ಹೊಟ್ಟೆ ತುಂಬಿರಬೇಕು..."[೨೦]

ಅಂತರಂಗ ಶುದ್ಧಿಯನ್ನು ಸಾಮಾನ್ಯರಿಗೂ ತಿಳಿಯುವಂತೆ ಬಳಸಲಾದ ಸರಳ ದೇಶಿ ಪಡೆ ನುಡಿಗಳಿವು.

ದ್ವಿರುಕ್ತಿಗಳು–ಅನುಕರಣವಾಚಿಗಳು

ಯಾವುದೇ ಒಂದು ಸಂದರ್ಭದಲ್ಲಿ ಒಂದೇ ಪದ ಎರಡು ಸಲ ಬಳಕೆಗೊಳ್ಳುವುದಕ್ಕೆ 'ದ್ವಿರುಕ್ತಿ' ಎನ್ನುವರು. ಸಾಂದರ್ಭಿಕ ಹಿನ್ನೆಲೆಯಲ್ಲಿ ಇದನ್ನು ಅರ್ಥೈಸಬೇಕಾಗುತ್ತದೆ. ಆಡುನುಡಿಗೆ ಒತ್ತು ಕೊಡುವ ದ್ವಿರುಕ್ತಿಗಳು ಅರ್ಥವನ್ನು ಗಟ್ಟಿಗೊಳಿಸುತ್ತವೆ. ಶರೀಫರ ಪದಗಳಲ್ಲಿಯ ಭಾವಕ್ಕೆ ಒತ್ತುಕೊಟ್ಟು ಲಕ್ಷಾರ್ಥವನ್ನು ಗಟ್ಟಿಗೊಳಿಸುವ ದ್ವಿರುಕ್ತಿಗಳು ಹಾಗೂ ಅನುಕರಣವಾಚಿಗಳು ಇಂತಿವೆ:

"...ಕವಣೆ ಬೀಸಿ ಬೀಸಿ ಬಂತು ಬ್ಯಾಸರಕಿ..."[೨೧]

"ನೋಡಿದ್ಯಾ ಕಪ್ಪೆ ನೋಡಿದ್ಯಾ...
ಗುಳಿ ಗುಳಿ ಧ್ವನಿಯಿಂದ ಸುಳಿದಾಡುವ ಕಪ್ಪೆ"[೨೨]

"ನಡೆಯಬಾರದೆ ಲಟು ಲಟು...
ನಡೆಯಬಾರದೆ ಈ ಸರಿ ಕುದುರೆಯೊಳು
ಮಿಡುಕುವದ್ಯಾತಕೆ ಕಡಲೇಯ ನೀಡುವೆನು"[೨೩]

ಭಾವದ ಕುದುರೆ ನಿಲ್ಲದೆ ಸದಾ ಚೈತನ್ಯಶಾಲಿಯಾಗಿ ನಡೆಯಬೇಕೆಂಬ ಭಾವವನ್ನು ವ್ಯಕ್ತಪಡಿಸಿದೆ.

"ಕಟಕಟ ತಾಳಲಾರೆ ಓಣ್ಯಾನ ಅವ್ವಗಳಿರಾ
ಕಟಕಟ ತಾಳಲಾರೆ ಓಣ್ಯಾನ ಅಕ್ಕಗಳಿರಾ..."[೨೪]

---

೨೦. ಅದೇ, ಪು. ೧೭೫.
೨೧. ಅದೇ, ಪು. ೨೦೨.
೨೨. ಅದೇ, ಪು. ೧೯೧.
೨೩. ಅದೇ, ಪು. ೧೬೯.
೨೪. ಅದೇ, ಪು. ೧೬೯.

ಸೊಸೆಯು ತನಗಾಗುವ ಅತ್ತೆಯ ಹಿಂಸೆಯನ್ನು ಅನುಕರಣವಾಚಿಯ ಮೂಲಕ ಸಮರ್ಥವಾಗಿ ವ್ಯಕ್ತಪಡಿಸುತ್ತಾಳೆ.

"ಬಿಡು ಬಿಡು ನಿಮ್ಮಯ ಈ ನಡತೆ
ಥೇ ಸಲ್ಲದು ರೀತಿ
ಪೊಡವಿಯೊಳಗೆ ನಮ್ಮ ಗೊಡವಿಯಾತಕೆ ನಿಮಗೆ
ನಡಿಯದೊಂವನು ನೀನು ನಡೆ ನಡೆ ಮನೆಗೆ"[೨೨]

ಭೋಗದಲ್ಲಿ ಮೈಮರೆತ ಜೀವಿಗೆ ಸಲ್ಲದು ಪರಮಾರ್ಥ ಎನ್ನುವ ಭಾವವನ್ನ ಈ ದ್ವಿರುಕ್ತಿಗಳು ಗಟ್ಟಿಗೊಳಿಸುತ್ತವೆ.

"ಕುಂಡಿ ಕುಂಡಿ ಸಾಲ್ದವರೊದೆಯಲಿ
ಬಂಡು ಮಾಡಿ ಬಯಲಿಗೆ ನಗುತಿರಲಿ
ಸಂಬಿಕೆ ಎಳ್ಳಷ್ಟಿಲ್ಲದ್ಹಾಂಗಾಗಲಿ
ಅಂಬಲಿ ಎನಗೆ ಸಿಗದೆ ಹೋಗಲಿ
ಹುಂಬಸೂಳೇಮಗನೆಂದು ಬೈಯಲಿ
ಕಂಬ ಮುರಿದು ಮೈಮ್ಯಾಲ ಬೀಳಲಿ
ಪದ್ದು ಕಾಗೆ ಹರಕೊಂಡ ತಿನ್ನಲಿ..."[೨೩]

'ಪಡವಿ-ವಸ್ತ್ರ, ಮಡದಿ-ಮಕ್ಕಳು, ಹದ್ದು-ಕಾಗೆ' ಎಂಬ ನುಡಿಗಟ್ಟುಗಳು ಪದದ ಮುಖ್ಯ ಉದ್ದೇಶಕ್ಕೆ ಪೂರಕವಾಗಿವೆ.

ಗಾದೆಮಾತು

ಜನವಾಣಿಯಾದ ಗಾದೆಯು ಒಂದು ಜನಾಂಗದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಆದರ್ಶವನ್ನು ಹೇಳುವ ಗಾದೆ ಮಾತುಗಳು ಎಲ್ಲ ಭಾವದಲ್ಲಿ ವ್ಯಕ್ತವಾಗುತ್ತವೆ. ಲೌಕಿಕ ಮತ್ತು ಆಧ್ಯಾತ್ಮಿಕ ವಿಚಾರಗಳು ಸಾಮಾನ್ಯರಿಗೂ ಅರ್ಥವಾಗುವ ಹಾಗೆ, ಮನಪರಿವರ್ತನೆಗೊಳ್ಳುವಂತಹ ಪರಿಣಾಮವನ್ನು ಬೀರುವವು. ವ್ಯಂಗ್ಯ, ವಿಡಂಬನೆಗಳನ್ನು ಗಾದೆಗಳು ಹೊಂದಿರುತ್ತವೆ. ಜನಪದ ಪರಿಸರದಲ್ಲಿ ನಿತ್ಯ ಬಳಕೆಯಾಗುವ ಅನೇಕ ದೇಶಿ ಗಾದೆಗಳನ್ನು ಶರೀಫರು ಸಹಜವಾಗಿ ತಮ್ಮ ಪದಗಳಲ್ಲಿ ಸಂದರ್ಭಕ್ಕನುಸಾರವಾಗಿ ಬಳಸಿದ್ದಾರೆ.

"ಎಂತಹ ಬೇಗನೆ ಯವ್ವನ ಬಂತೆ ನಿನಗೆ
ನಿಂತು ನೋಡಿ ಹೋಗದ್ಹಾಂಗದಾಯಿತೆನಗೆ..

ನೊಣವು ಹತ್ತಿಗೆ ಏರಿ ಸಣ್ಣ
ಮಣಕ ಎಮ್ಮಿ ಕೋಣನೀದ್ಹಾಂಗ..."[೨೮]

ಚಿಕ್ಕ ಪ್ರಾಯದಲ್ಲಿಯೇ ಕೋಣದ ಹಾಗೆ ಬುದ್ಧಿಗೇಡಿ, ಮಾನಗೇಡಿ ಕೆಲಸ ಮಾಡುವುದನ್ನು ಸಂದರ್ಭನುಸಾರವಾಗಿ ಹೇಳುವ ಗಾದೆ ಇದು.

"ಸರಿ ಸತ್ತು ಹೋಯ್ತು ಬೇಡಿ ಹುಲಿ ಬಣ್ಣ
ನೀರೊಳಗೆ ಕರಗಿ ಸುಟ್ಟುಹೋಯ್ತು ಸುಣ್ಣ
ಜಟ್ಟಾಗಬಾರದೋ ಹಣ ನಿನ್ನ ತಲೆಗೆ
ಮೆಟ್ಟಾಗಬೇಕು ಕಾಲಿನ ಅಡಿಗೆ..."[೨೯]

ಈ ಪದದ ಪ್ರತಿಯೊಂದು ಸಾಲು ಗಾದೆಯಂತೆಯೇ ಇದೆ. ಒಂದರ್ಥದಲ್ಲಿ ಗಾದೆಗಳ ಸರಮಾಲೆಯಾಗಿದೆ. ಮಾಡುವ ಕೆಲಸವೆಲ್ಲಾ ವ್ಯರ್ಥವಾಗಿ ಆ ಭಾವನೆಯ ವ್ಯಕ್ತಿ ಒಳ್ಳೆಯ ಬದುಕನ್ನು ಕಾಣದೇ ನಾಶವಾಗುವುದು ಖಂಡಿತ ಎಂಬ ವಿಷಯವನ್ನು ಹೇಳುವ ಗಾದೆ ಇದು. ಬಣ್ಣದ ಆಕರ್ಷಣೆ, ಸುಳ್ಳು ಭರವಸೆ, ಢಾಂಬಿಕತೆ, ಪೊಳ್ಳು ಪ್ರತಿಷ್ಠೆಗಳೆಲ್ಲವು ಬದುಕನ್ನು ನಿರಾಶೆಗೊಳಿಸುತ್ತವೆ ಎಂಬ ಅರ್ಥವನ್ನು ಈ ಒಂದು ಸಾಲು ವಿವರಿಸುತ್ತವೆ.

"ಏಸೂರು ತಿರುಗಿದರೂ ಬೀಸೋಣ ಬಿಡದವ್ವ
ಬೀಸೋಣ ಬಾರವ್ವ ಹಾಡ್ಯಾಡಿ..."[೩೦]

ಮಾಡಿದ ಕರ್ಮವನ್ನು ಭೋಗಿಸಲೇಬೇಕೆಂಬ ವಿಧಿಯನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲದಿರುವಾಗ ತನ್ನ ಪಾಲಿನ ಕರ್ಮದ ಜೋಳವನ್ನು ಸಂತೋಷದಿಂದ ಬೀಸಿ ಕರ್ಮಮುಕ್ತರಾಗಬೇಕೆಂಬ ತಾತ್ತ್ವಿಕ ಭಾವವನ್ನು ದೇಶಿ ಗಾದೆಯಲ್ಲಿಟ್ಟು ಶರೀಫರು ಹೇಳಿದ್ದಾರೆ.

"ಬಂದೇನ ಇಲ್ಲೆ ಕಂಡಿ
ಇಂದಿನ ಕರ್ಮಫಲವೆಲ್ಲಾ ಇಲ್ಲೆ ಉಂಡಿ
ಮುಂದಿನ ಮಾರ್ಗ ತಿಳಕೊಳ್ಳೋ ಹುಚ್ಚು ಮುಂಡೆ
ಎಚ್ಚರಕಿಲ್ಲದೆ ಹುಚ್ಚನ ತೆರನಂತೆ
ಬೆಟ್ಟನೆ ಮರದಂತೆ ಕೆಟ್ಟನಾಗಲಿಬ್ಯಾಡ
ಸಾಧುಗಳ ಸಂಗವಬಿಟ್ಟ
ವಾದ ಮಾಡಿ ಕಾದುವದ್ಯಾಕೊ ಖೊಟ್ಟ

೨೮. ಅದೇ, ಪು. ೯೪.
೨೯. ಅದೇ, ಪು. ೧೮೧.
೩೦. ಅದೇ, ಪು. ೧೩೬

ವೇದವನೋದಿ ಆದೆಲ್ಲೊ ಮೂರಾಬಟ್ಟ..
ಮದವೇರಿದಾನೆಯಂತಾದಿಯಲ್ಲೋ
ಕದನದೊಳು ಕಾಲಯಮನಾದಿಯಲ್ಲೋ"[೨೫]

ಗಾದೆ ಮಾತಿನಂತಹ 'ಕರ್ಮವೆಲ್ಲಾ ಇಲ್ಲೇ ಉಂಡಿ', 'ಮದುವೇರಿದಾನಿಯಂತಾದಿ', 'ವೇದವನೋದಿ ಆದೆಲ್ಲೊ ಮೂರಾಬಟ್ಟ', 'ವಾದಮಾಡಿ ಕಾದುವದ್ಯಾಕೊ ಬೊಟ್ಟ' ಇವು ಗ್ರಾಮೀಣ ಪರಿಸರದಲ್ಲಿ ದಿನನಿತ್ಯವೂ ಸಾಮಾನ್ಯ ಜನರು ಸಂದರ್ಭಯುಕ್ತವಾಗಿ ಆಡುವ ಮಾತುಗಳು ಅನುಭವದ ಗಾದೆಯಂತಿರುತ್ತವೆ.

ಬೈಗುಳ ಪದಗಳು

ಗ್ರಾಮೀಣ ಪ್ರದೇಶದ ಬೈಗುಳ ಪದಗಳು ಶರೀಫ ಭಾವಾವೇಶವನ್ನು ವ್ಯಕ್ತಪಡಿಸುವುದರೊಂದಿಗೆ ಕಳಕಳಿಯ ಭಾವನೆಯನ್ನು, ಅನುಕಂಪವನ್ನು ಏಕಕಾಲಕ್ಕೆ ತೋರಿಸುತ್ತವೆ. ಸಾಮಾಜಿಕ ಪ್ರಜ್ಞೆಯನ್ನು, ಕಾಳಜಿಯನ್ನು ಕೋಪ ಮತ್ತು ಅನುಕಂಪಭರಿತ ಭಾವವನ್ನು, ವ್ಯಕ್ತಪಡಿಸುವ ಬೈಗುಳಗಳನ್ನು ಕಾಣುತ್ತೇವೆ.

"ಗೊತ್ತುಗೇಡಿ ಮಗಳೆ ವ್ಯರ್ಥ
ಹೊತ್ತುಗಳಿಯುತಿ
ಅತ್ತ ಇತ್ತ ತಿರುಗಿ ಭವದೊಳು ಬೀಳುತಿ
ಛೀ ಛೀ ಕೆಡುತಿ..."[೨೬]

ಮತ್ತು

"...ಮುದುಕ್ಯಾಗಿ ಮುದುಕ ಇನ್ನ್ಯಾಕ ನಮ್ಮ
ಎದುರಿಗೆ ಬರಿ ನಿರಿಗಿಗಳ ಒದೆಯುವದು ಸಾಕ...
ಸೂಳೇರ ತೆರದಲಿ ತಿರುಗುತ ಎತ್ತ..."[೨೭]

ಹಾಗೂ

"ಮದನಿಗಿತ್ಯಾಗಿ ಬಂದು ಮನೆಯೊಳಗಿರುತಿದೆ
ಬೆದೆಗೆಡಹಿಯೆಂದು ಹೆಸರಿಡಿಸಿದನೇ"[೨೮]

"ಎಂಥಾ ನಗಿ ಬಂತು ಎನಗ
ನಡಮುರಕಿ ಕಂಡು_"[೩೫]

ಮತ್ತು

"...ಕೆಟ್ಟ ಹೆಣ್ಣಾ ಇವಳು ಬೆದೆಗಡಕಿ
ಇಟ್ಟಳು ಕೆಟ್ಟಗುಣದ ಪಳೆ ಗಟಗಡಕಿ
ಕಟ್ಟಿದ ಗೊಂಬೆಹಾಂಗ ತೆರೆಮ ಕಾಣತಾಳು ಇವಳಂಗಳದಿ..."[೩೬]

ಇವಲ್ಲದೆ ಮಿಂಡೇರು, ರಂಡೇರು, ಲೌಡಿ, ಹೊಯ್ಯಮಾಲಿ ಮಾನಗೇಡಿ ಮಡಸಿ, ಕುಟಿಲ ಕುಂಟಲೆ, ಬುದ್ಧಿಗೇಡಿ, ಪಿಸುರು ಪಿಚ್ಚುಗಣ್ಣಿನ ಮುದುಕಿ, ಚಿತ್ತಗಡಕಿ, ಕೋಣದಂಥ ರಂಡೆ, ಮೊದಲಾದ ಜನಪದ ಬೈಗುಳಗಳು ಶರೀಫರ ಪದಗಳಲ್ಲಿ ಶುದ್ಧೀಕಾರ್ಯ ನಿರ್ವಹಿಸುತ್ತವೆ.

ದೇಶಿಭಾಷೆಯ ಸಾಮಾನ್ಯ ಬೈಗುಳಗಳಲ್ಲದೇ ಮನುಷ್ಯ ಸ್ವಭಾವವನ್ನು ಪಶು, ಪ್ರಾಣಿ ಕೀಟಗಳಿಗೆ ಹೋಲಿಸಿ, ಸಂಕೇತಗಳನ್ನಾರಿಸಿ ಶರೀಫರು ಅನೇಕ ಪದಗಳನ್ನು ರಚಿಸಿದ್ದಾರೆ.

"ನಾಯಿ ಬಂದಾವು ಬೆಸ್ನತ್ರಿ..
ನಾಯಿಯೆಂದರೆ ನಾಯಿಯಲ್ಲ
ಮಾನವ ಜನ್ಮದ ಹೀನ ನಾಯಿ"[೩೭]

ಮಾನವನ ನೀಚ ಸ್ವಭಾವ ತೋರಿಸುವ 'ನಾಯಿ'ಯ ಸಂಕೇತ ಬಗ್ಗೆ ಹಿಂದೆ ಚರ್ಚಿಸಲಾಗಿದೆ.

"ಮರಣಕ್ಕೆ ಒಳಗಾಗುವ ನರಕುರಿಗಳೆ ನಿಮ
ಗರಿಕಿರಲಿ ಸಾರುವೆ ಕೇಳಿರಿ"[೩೮]

ಬದುಕಿನ ಪರಮಾರ್ಥವನ್ನು ಸಾಧಿಸದ ಜೀವಿಗಳಿಗೆ 'ನರಗುರಿ'ಗಳೆಂದು ದೇಶಿ ಭಾಷೆಯಲ್ಲಿ ಕರೆದಿದ್ದಾರೆ.

ನಿಂದೆಯನ್ನಾಡಿ ನೀಚ ಕೆಲಸ ಮಾಡುವವರನ್ನು ಹಂದಿಗೆ ಹೋಲಿಸಿ ಶರೀಫರು ತಮ್ಮ ಸಾತ್ವಿಕ ಕೋಪವನ್ನು ವ್ಯಕ್ತಪಡಿಸಿದ್ದಾರೆ.

---

೩೫. ಅದೇ, ಪು. ೯೭
೩೬ ಅದೇ, ಪು. ೧೩೪.
೩೭ ಅದೇ, ಪು. ೧೯೫.
೩೮ ಅದೇ, ಪು. ೧೯೫.

"ತಂದೆ ಗುರು ಗೋವಿಂದರಾಜನ
ದ್ವಂದ್ವ ಪಾದವ ನಂಬಿದವಗ
ಕುಂದನಿಟ್ಟ ಮಂದಮತಿಗೆ
ಹಂದಿ ಜನ್ಮ ಬಿಡದು ತಮ್ಮ..."[೫೮]

ಗ್ರಾಮೀಣ ಭಾಷೆಯ ನಿಷ್ಠುರವಾದ ಪದಗಳಲ್ಲಿ ಬೈದು ಬುದ್ಧಿ ಹೇಳಿದ ಶರೀಫರು ಪ್ರೀತಿಯಿಂದ, ಪ್ರೇಮಭಾವದಿಂದ ಸಲಿಗೆ, ಸ್ನೇಹದಿಂದಲೂ ಜನರ ಮನಸ್ಸನ್ನು ತಿದ್ದಲು ಪ್ರಯತ್ನಿಸಿದ್ದಾರೆ. ಬದುಕಿನ ಸಾರ್ಥಕತೆಯನ್ನು ತಿಳಿಯದೆ ತಪ್ಪು ಮಾಡುವ ಜನಕ್ಕೆ ಗಂಭೀರವಾಗಿಯೂ, ಹಾಸ್ಯವಾಗಿಯೂ, ಲಘುಹಾಸ್ಯವಾಗಿಯೂ, ಮಾರ್ಮಿಕವಾಗಿಯೂ, ಉಪದೇಶಾತ್ಮಕವಾಗಿಯೂ ತನ್ನವರೆಂಬ ಅಧಿಕಾರದಿಂದ, ಆದರದಿಂದಲೂ ಹೇಳಿದ್ದಾರೆ. ಆಗೆಲ್ಲ ಅವರ ಸಂಬೋಧನೆಯೂ ಭಾವಸೂಚಕವಾಗಿ ಹೃದಯದಿಂದ ಸ್ಫುರಿಸಿದೆ.

ಶರೀಫರ ಭಾಷಾ ಪ್ರಯೋಗದಲ್ಲಿ ಕಂಡುಬರುವ ವೈಶಿಷ್ಟ್ಯವೆಂದರೆ ಗಾದೆಮಾತು, ನುಡಿಗಟ್ಟುಗಳ ಪ್ರಯೋಗ. ತಮ್ಮ ಜೀವನಾನುಭವದಿಂದ ದೊರೆತ ಈ ಪದ ಪುಂಜಗಳನ್ನು ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಪದಗಳಲ್ಲಿ ಬಳಸಿಕೊಂಡಿದ್ದಾರೆ. ತತ್ತ್ವಪದಗಳಲ್ಲಿಯ ದೇಶೀಭಾಷೆಯಾದ ಕನ್ನಡ ಭಾಷೆಯ ಬಗೆಗಿನ ಕಳಕಳಿ, ಅಭಿಮಾನ ಶರೀಫರ ವ್ಯಕ್ತಿತ್ವಕ್ಕೆ ಮೆರಗನ್ನು ತಂದಿದೆ. ಹೊಸ ಆಯಾಮದೊಂದಿಗೆ ಭಾಷೆಯ ಸಾಧ್ಯತೆಗಳನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಅನುಭಾವದ ಕ್ಷೇತ್ರದಲ್ಲಿನ ಸವಾಲುಗಳಿಗೆ ಭಾಷೆ ಸರಿಸಮಾನವಾಗಿ ಮಿಡಿದಿದ್ದು ಮಾತ್ರವಲ್ಲ. ಭಾಷೆಯು ಹೊಸ ಆಯಾಮವನ್ನು ಪಡೆದುಕೊಂಡು ಹೊಸ ದಾರ್ಶನಿಕ ಪರಿಭಾಷೆಯನ್ನು ಅದು ಆಡುನುಡಿಯಲ್ಲಿ ಸೃಷ್ಟಿಸಿದೆ. ಶರೀಫರ ಪದಗಳ ಬಹುಮುಖ್ಯ ವಸ್ತುಸಂಪತ್ತು ಆ ಕಾಲದ ಸಾಂಸ್ಕೃತಿಕ, ಧಾರ್ಮಿಕ, ಬದುಕಿನ ಚಿತ್ರಣವಾಗಿದೆ.

ಅನುಭಾವಿ ಶರೀಫರು ಭಾಷೆಯ ಅನೇಕ ರೂಪದಲ್ಲಿ ತಮ್ಮ ದೈವಭಕ್ತಿಯನ್ನು, ತತ್ತ್ವತಾತ್ಪರ್ಯವನ್ನು ಅರುಹಿದ್ದಾರೆ. ಅವರಿಗೆ ಭಕ್ತಿಯೇ ಭಾಷೆಯಾಗಿತ್ತು. ತತ್ತ್ವವನ್ನು, ಲೋಕನೀತಿಯನ್ನು ಈ ಭಕ್ತಿ ಭಾಷೆಯಲ್ಲಿ ಕಾಣುತ್ತೇವೆ. ಶರೀಫರ ಭಾಷೆ ಸರಳವಾಗಿದ್ದರೂ ಭಾವಾರ್ಥಗಳು ಸರಳವಲ್ಲ. ಪದಗಳ ಭಾವ ಊಹಿಸಿದಷ್ಟು ವಿಸ್ತಾರವಾಗುತ್ತದೆ. ಅರ್ಥ ಚಿಂತನೆಗಿಂತ ವ್ಯಾಪಕವಾಗುತ್ತದೆ.

ಶರೀಫರ ಭಾವಭಾಷೆಯಲ್ಲಿ ಸಮುದಾಯದ ಶಿವನಾನುಭವವು ತುಂಬಿದೆ. ತತ್ತ್ವಪದಗಳು ವ್ಯಕ್ತಿಗತ ಅನುಭವವಾಗಿದ್ದರೂ, ಇನ್ನೊಬ್ಬ ಸಾಧಕನಿಗೆ ತಟ್ಟಿದಾಗ ಅವು ಅವರ ಅನುಭವವೇ ಎಂದೆನಿಸುತ್ತದೆ. ಆಗ ಅದು ಸಮಷ್ಟಿ ಅನುಭವವಾಗಿ ಗೋಚರಿಸುತ್ತದೆ. ಜನಬಳಕೆಯ ಭಾಷೆಯನ್ನೇ ಕಾವ್ಯದ ಅಥವಾ ತತ್ತ್ವದರ್ಶನದ ಉನ್ನತ ಶಿಖರಕ್ಕೇರಿಸುವ ಮಹತ್ವದ ಕಾರ್ಯವನ್ನು ಶರೀಫರು ಮಾಡಿ ತೋರಿಸಿದರು.

ತತ್ತ್ವಪದಗಳು ಶರೀಫರ ಭಾವ ಚಿಂತನೆಯ ಫಲ. ಇವುಗಳಲ್ಲಿ ಅನುಭಾವ ಅಥವಾ ಅಭಿವ್ಯಕ್ತಿ, ವಸ್ತು ಮತ್ತು ರೂಪಗಳು ಬೇರೆ ಬೇರೆಯಾಗಿ ಉಳಿಯದೇ ಅವಿನಾಭಾವ ಸಂಬಂಧದಿಂದ ಕೂಡಿವೆ.

ಮಡಿವಂತರಿಗೆ ಇವರ ಭಾಷೆ ಒರಟಾಗಿ, ಕೆಲವು ಸಲ ಅಶ್ಲೀಲವೂ ಎನಿಸಬಹುದು. ಶರೀಫರ ಪದಗಳಲ್ಲಿ ಕೊಂಕು-ಡೊಂಕುಗಳನ್ನು ಖಂಡಿಸುವ ಸಾತ್ವಿಕ ಕ್ರೋಧ, ನಗೆ, ವಿಡಂಬನೆಗಳ ಮೂಲಕ ದೋಷಗಳನ್ನು ನಿವಾರಿಸುವ ಜಾಣ್ಮೆ, ಮಾನವಾನುಕಂಪ, ಸಮಾಜ ಸುಧಾರಣೆಯ ಆವೇಗ, ಉದಾತ್ತವಾದುದನ್ನು ಭವ್ಯವಾಗಿಯೂ, ಸರಳವಾಗಿಯೂ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಕಾಣಬಹುದು. ನಿಷ್ಠುರವಾದಿಯಾದ ಶರೀಫರು ಕಂಡದ್ದನ್ನು ಕಂಡ ಹಾಗೆ ಮುಖಕ್ಕೆ ಹೊಡೆದ ಹಾಗೆ ಪದ ಕಟ್ಟಿ ಹಾಡಿದ್ದಾರೆ. ಮನುಷ್ಯನಿಗೆ 'ನಾಯಿ' ಎಂದು ಸಂಬೋಧಿಸಿದ್ದಾರೆ. ಹೀಗೆ ಪದಪುಂಜಗಳೆಲ್ಲ ಆಡುನುಡಿಯ ವ್ಯವಹಾರಿಕವಾದ ಸಹಜ ಭಾಷೆಯಲ್ಲಿ ಜನಪದರೊಂದಿಗೆ ಗಾಢವಾಗಿ ಬೆರೆತಿದ್ದುದರಿಂದಲೇ ಕಾವ್ಯಭಾಷೆಯಾಗಿ ದುಡಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಆಡುನುಡಿಯಲ್ಲೇ ಅನುಭಾವವನ್ನು ಸಶಕ್ತವಾಗಿ ಜನಮನಕ್ಕೆ ಮುಟ್ಟಿಸಿದರು. ಶರೀಫರ ಪದಗಳಲ್ಲಿ ನಾಣ್ಣುಡಿಗಳ ಬಳಕೆ, ಒಡಪು ಮಾತಿನ ಸೊಬಗು, ದೇಶಿ ನುಡಿಗಳ ಜಾಣ್ಮೆಯನ್ನು ಕಾಣುತ್ತೇವೆ.

ಶೈಲಿ

ಶರೀಫರ ಕಾವ್ಯರಚನಾ ಶೈಲಿಯು ಕೇವಲ ಸಾಹಿತ್ಯ ಸಂಸ್ಕಾರದಿಂದ ಬಂದದ್ದಲ್ಲ. ಅಂತರಾಳದಿಂದ ಹೊರಹೊಮ್ಮಿ ಬಂದುದು. ಅವರ ಕಾವ್ಯಶೈಲಿಯ ಕಾಂತಿಯು ಅವರ ವ್ಯಕ್ತಿತ್ವದ ಕಾಂತಿಯನ್ನೇ ಪ್ರತಿಬಿಂಬಿಸುತ್ತದೆ. ಜ್ಞಾನಜೀವಿಗಳೂ, ಭಾವಜೀವಿಗಳೂ ಆದ ಶರೀಫರು ಲಲಿತ ಮತ್ತು ಕಾಂತಿಯ ಶೈಲಿಯಲ್ಲಿಯೇ ಪದ ರಚಿಸಿದರು. ವಸ್ತು-ತತ್ತ್ವ ಯಾವುದೇ ಆದರೂ ಅವರ ನಿರೂಪಣಾ ಶಕ್ತಿ ಅದ್ಭುತವಾಗಿದೆ. ಭಾಷೆಯ ಬಳಕೆಯ ಶೈಲಿಯ ಮೇಲೆ ಅವರ ಕಾವ್ಯ ಪ್ರತಿಭೆ ಪ್ರಕಾಶಿಸಿದೆ. ತಮ್ಮ ಸರಳ ಶೈಲಿಯಲ್ಲಿ, ದೇವಸ್ತುತಿ ಹಾಡಿದ್ದಾರೆ. ಹಾಸ್ಯ ವಿಡಂಬನೆ,

ಮೊದಲಾದವನ್ನು ವಿಮರ್ಶೆ ಮಾಡಿದ್ದಾರೆ. ಜನಪದರ ಜೀವನ, ಘಟನೆ, ಪುರಾಣಗಳ ಸಮೀಕರಣಗಳನ್ನು ತಮ್ಮದೇ ಆದ ಶೈಲಿಯಲ್ಲಿ ವಿನೂತನವಾಗಿ ಮಾನವೀಯತೆಯನ್ನು ಬಿಂಬಿಸಿದ್ದಾರೆ. ಅದರಂತೆ ತೀರ ಕ್ಷುಲ್ಲಕ ವಸ್ತು ಘಟನೆಗಳಲ್ಲೂ ಆಧ್ಯಾತ್ಮಿಕ ಸ್ಪಷ್ಟತೆಯ ಚಿತ್ರಣದ ಮೂಲಕ ಸೆರೆ ಹಿಡಿದಿದ್ದಾರೆ.

೪.೪ ಅಲಂಕಾರಿಕ ಪ್ರಜ್ಞೆ

ಸಾಹಿತ್ಯದ ಅರ್ಥವನ್ನು ಸಮರ್ಪಕವಾಗಿ ಬಿಂಬಿಸಲು ಜೊತೆಗೆ ಕಾವ್ಯವನ್ನು ಲಕ್ಷಣಗೊಳಿಸಲು ಶಬ್ದ ಸಾಧುತ್ವ, ಶಬ್ದ ಸೌಂದರ್ಯ, ಶಬ್ದದ ಗುಣತತ್ತ್ವಗಳು ಬೇಕಾಗುತ್ತದೆ. ಇವು ಕಾವ್ಯದ ಅಂತರಂಗ ಮತ್ತು ಬಹಿರಂಗದ ರೂಪವನ್ನು ಸುಂದರಗೊಳಿಸುವವು. ಕಾವ್ಯಕ್ಕೆ ಸೌಂದರ್ಯವನ್ನು, ಗಾಂಭೀರ್ಯವನ್ನುಂಟುಮಾಡುವ ಶಬ್ದಾರ್ಥ ಚಮತ್ಕೃತಿಗಳೆಲ್ಲ ಅಲಂಕಾರಗಳಾಗುವವು. ಕಾವ್ಯವನ್ನು ಸಾಹಿತ್ಯಕವಾಗಿ, ಆಧ್ಯಾತ್ಮಿಕವಾಗಿ ಶಬ್ದದ ಸುಂದರ ಚೌಕಟ್ಟಿನೊಳಗೆ ಬಂಧಿಸಿ ಅನುಭವ, ಅನುಭಾವದ ಸ್ಪಷ್ಟ ಚಿತ್ರಣವನ್ನು ನೀಡುವುದು ಅಲಂಕಾರಿಕ ಪ್ರಜ್ಞೆ. ಭಾವಮಯವಾದ ಕಾವ್ಯದ ಸೂಕ್ಷ್ಮ ಸಂವೇದನೆಗಳನ್ನು ಹೃದಯಸ್ಪರ್ಶಿಯಾಗಿ, ಅರ್ಥಪೂರ್ಣವಾಗಿ, ಸಮರ್ಪಕವಾಗಿ ಬಿಂಬಿಸುವ ಶಬ್ದಾರ್ಥ ಚಮತ್ಕಾರ ಮತ್ತು ಅರ್ಥಚಮತ್ಕಾರ ಕೌಶಲ್ಯವು ಸಹಜವಾಗಿ ಅನಿವಾರ್ಯವಾಗಿ ಕಾವ್ಯದ ಒಂದು ಅವಿಭಾಜ್ಯ ಅಂಗವಾಗಿದೆ.

ಶರೀಫರ ತತ್ತ್ವಪದಗಳು ಭಕ್ತಿ, ಜ್ಞಾನ, ವೈರಾಗ್ಯಗಳಂಥ ಪಾರಮಾರ್ಥಿಕ ವಿಷಯವನ್ನು ಬಿಂಬಿಸುವ ಜಟಿಲ ಪದಗಳಾಗಿವೆ. ಎಂಥ ಜಟಿಲ ವಿಷಯವಾದರೂ ಸುಲಭ ಗ್ರಾಹ್ಯವಾಗುವಂತೆ, ನಿಶ್ಚಿತಮತಿಗಳಾದ ಶರೀಫರು ಸಂದರ್ಭೋಚಿತವಾಗಿ ಅಲಂಕಾರದ ಪ್ರಯೋಗವನ್ನು ಮಾಡಿದ್ದಾರೆ. ತಮ್ಮ ಅನುಭಾವದ ಪದಗಳ ಅರ್ಥ ಜನರಿಗೆ ಮನದಟ್ಟಾಗಬೇಕೆಂದು ಶ್ರೀ ಸಾಮಾನ್ಯರಿಗೆ ನಿಲುಕುವ, ನಿತ್ಯಜೀವನದ ಕ್ಷೇತ್ರದಲ್ಲಿಯ ಉಪಮೆ, ರೂಪಕ, ಪ್ರತಿಮೆ, ಬೆಡಗುಗಳ ದೃಷ್ಟಾಂತಗಳ ಅನ್ಯೋಕ್ತಿ, ಸ್ವಭಾವೋಕ್ತಿಗಳಿಂದ ತಮ್ಮ ಪದಗಳ ಸಾಲುಗಳನ್ನು ವಿಸ್ತರಿಸಿದ್ದಾರೆ. ಮಿಂಚಿನಂತೆ ಒಳಗೆ ಹೊಳೆದುದನ್ನು ಅದೇ ವೇಗದಲ್ಲಿ ನೂತನ ದೃಷ್ಟಿಯಿಂದ ಪಡೆದು ಸಹಜವಾಗಿ ಶರೀಫರು ಹಾಡಿ ತೋರಿಸಿದ್ದಾರೆ.

ಶರೀಫರು ಸಂಪ್ರದಾಯಿಕ ಅಲಂಕಾರಿಕ ಅರ್ಥದಲ್ಲಿ ಕವಿ ಎನಿಸಲಿಲ್ಲ. ಜನಮಾನಸದಲ್ಲಿ ಶಾಸ್ವತವಾದ ಆದರವನ್ನು ಪಡೆದ ಜನಪದ ಅನುಭಾವಿ ಕವಿ ಇವರು. ಅಂದಿನ ಪರಿಸರದ ಜನಪದ ಸಮಾಜದ ಚಿತ್ರಣಗಳಾದ ಸಂತೆ, ಜಾತ್ರೆ, ಹಬ್ಬ-ಹುಣ್ಣಿಮೆಗಳ ಸಂಭ್ರಮಗಳು ಮತ್ತು ಅವರ ಸುತ್ತಮುತ್ತಲಿನ ವಸ್ತು.

ಪ್ರಾಣಿ, ಗಿಡ, ಮರ, ಬಳ್ಳಿ, ಪಕ್ಷಿ, ಪ್ರಕೃತಿ ಈ ಎಲ್ಲವು ಪದಗಳ ವಸ್ತುವಾಗಿ ಮೂಡಿವೆ.

ವಾಸ್ತವವಾಗಿ ಪರಸ್ಪರ ಸಂಬಂಧವಿಲ್ಲದಂತೆ ಕಾಣುವ ವಸ್ತು, ಸಂಗತಿ, ಘಟನೆಗಳ ನಡುವೆ ಇರುವ ಸಾಮಾನ್ಯ ಅಂಶಗಳ ರೂಪಕಗಳ ಪರಂಪರೆಯನ್ನೇ ಶರೀಫರ ಪದಗಳಲ್ಲಿ ಕಾಣಬಹುದಾಗಿದೆ.

"ಗುಡಿಯ ನೋಡಿರಣ್ಣಾ ದೇಹದ
ಗುಡಿಯ ನೋಡಿರಣ್ಣಾ"[೪೦]

ಈ ಪದವು ಸರ್ವಕಾಲಕ್ಕೂ ನಿಲ್ಲಬಲ್ಲ ಅಂತರಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ, ಮನೋವಲಯಕ್ಕೆ ಸೀಮಿತವಾದ ಕಾವ್ಯ ಚಿತ್ರವಾಗಿದೆ. ಸರಳವಾದ, ಮುಗ್ಧವಾದ ಭಕ್ತಿಭಾವವನ್ನು ಸುಂದರವಾಗಿ ಚಿತ್ರಿಸುತ್ತದೆ. ಸಮರ್ಪಣಾ ಭಾವದ ಸುಂದರ ಸಂಕೇತವಾಗಿದೆ. ಅರಿವಿಗೆ ಬರುವ ಭಾವಗಳನ್ನು ಬಿಂಬಿಸುವ ಶಬ್ದ ಚಿತ್ರಗಳ ವೈವಿಧ್ಯತೆಯನ್ನು ಸಾಮಾಜಿಕ ಹಾಗೂ ಧಾರ್ಮಿಕ ಪ್ರತಿಮೆಗಳಲ್ಲಿ ಕಾಣಬಹುದಾಗಿದೆ.

"ಇದು ಭಾಳ ದಿವಸಕ ಬಂದಂಥ
ಬೆಳಿಯೋ ತಮ್ಮಾ ತಿಳಿಯೋ
ಭವಗಳಿಯೋ
ಮಾಡಿದಂಗಿ ಮೂರು ದಿವಸಕ ಕಳಿಯೋ
ನೀ ಕಳಿದಿದ್ರ ಅದರಲ್ಲೇ ಕೊಳಿಯೋ
ನೀ ಯಮನವರ ಕೈಯಾಗ ಸಿಕ್ಕ
ಆಗ್ತಿ ನೀ ಹುಳಿಯೋ..."[೪೧]

"ಏನ ಕೊಡ ಏನ ಕೊಡವ್ವಾ
ಹುಬ್ಬಳ್ಳಿ ಮಾಟಾ ಎಂಥಾ
ಧಂವದ ಕೊಡವ್ವಾ
ತಿಕ್ಕಿಲ್ಲ ತೊಳದಿಲ್ಲ
ಥಳಾ ಥಳಾ ಹೊಳಿತದ
ಕಂಚಲ್ಲಾ ತಾಮ್ರಲ್ಲ
ಮಿರಿ ಮಿರಿ ಮಿರಿ ಮಿಂಚತದ..."[೪೨]

೪೦. ಅದೇ, ಪು. ೫೩.
೪೧. ಅದೇ, ಪು. ೧೪೭
೪೨. ಅದೇ, ಪು. ೫೫.

ಈ ಪದಗಳಲ್ಲಿ ಶರೀಫ ಸಾಹೇಬರು ದೇಹವನ್ನು ದೇವಾಲಯಕ್ಕೆ ಕೊಡಕ್ಕೆ ಹೋಲಿಸುತ್ತಾ, ವ್ಯವಸಾಯವನ್ನು ಭಕ್ತಿಗೂ ಹೋಲಿಸಿದಾರೆ. ಸ್ವಚ್ಛಗೊಳಿಸದೇ ಇದ್ದರೂ, ಸದಾ ಥಳ ಥಳಿಸುವ, ಅರಿಷಡ್ವರ್ಗಗಳನ್ನು ಗೆದ್ದ ಈ ಮಾನವ ಘಟವನ್ನು 'ಮಿರಿ ಮಿರಿ ಮಿಂಚುವ ಕೊಡ' ಎಂದು ಕರೆದಿದ್ದಾರೆ.

"ಸೋರುತಿಹುದು ಮನೆಯ ಮಾಳಿಗೆ ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗಿ
ಮುರುಕು ತೊಲೆಯ ಹುಳುಕು ಜಂತಿ
ಕೊರೆದು ಸರಿದು ಕೀಲು ಸಡಲಿ
ಹರಕ ಚಪ್ಪರ ಜರಗುಂಡಿ
ಮೇಲಕೇರಿ ಮಟ್ಟಲಾರೆ..."[೪೩]

ಶರೀಫರು ಮನದ ಅಜ್ಞಾನವನ್ನು ಮುರುಕ ಮನೆಗೆ ಹೋಲಿಸುವ ರೂಪಕದ ಮಹತ್ವವನ್ನು ಇಲ್ಲಿ ಕಾಣಬಹುದು. ತಮ್ಮ ಸುತ್ತಲಿನ ಪರಿಸರದಿಂಧಾದ ರೂಪಕಗಳಲ್ಲದೇ ಆಧುನಿಕತೆಯಿಂದ ಉಂಟಾದ ವಾಸ್ತವಿಕ ಬದಲಾವಣೆಯನ್ನು ವೈಜ್ಞಾನಿಕ, ವೈಚಾರಿಕ ಹಿನ್ನೆಲೆಯನ್ನು ಒಳಗೊಂಡ ವಸ್ತು, ವಿಷಯಗಳನ್ನು ಪುರಸ್ಕರಿಸುತ್ತ ನೂಲಿನ ಗಿರಣಿ, ಸರ್ಕಾರಿ ಶಾಲೆ, ಸೂಜಿಯ ಮೊದಲಾದವುಗಳನ್ನು ಕುರಿತು ಹಾಡಿದ್ದಾರೆ.

ಸೃಷ್ಟಿಕರ್ತನ ಸೃಷ್ಟಿಯ ಈ ದೇಹವೆಂಬ ಅದ್ಭುತ ಗಿರಣಿ ಯಂತ್ರವನ್ನು ಕುರಿತು ಈ ರೀತಿ ಹಾಡಿದ್ದಾರೆ.

"ಗಿರಣಿ ವಿಸ್ತಾರ ನೋಡಮ್ಮ ಇದಕ
ಪರಾಕು ಮಾಡಮ್ಮ
ಜಲ ಅಗ್ನಿ ವಾಯು ಒಂದಾಗಿ
ಕಲೆತು ಒಳ್ಳೆ ಚಂದಾಗಿ
ನೆಲದಿಂದ ಗಗನಕ್ಕೆ ಮುಟ್ಟಿದಂತೆ ಕಾಂಬುದು
ಚೆಲುವ ಮಧ್ಯದ ಕಂಬವು ಹೊಗೆ ದಿಂಬವು..."[೪೪]

ಶಾಲೆ ಮತ್ತು ಸೂಜಿ ಇವುಗಳ ರೂಪಕದ ಮೂಲಕ ಆಧುನಿಕತೆಯನ್ನು ತತ್ತ್ವಪದಗಳಲ್ಲಿ ಗುರುತಿಸಬಹುದಾಗಿದೆ.

"ಸಾಲೆಯ ನೋಡಿದಿಯಾ ಸರಕಾರದ
ಸಾಲೆಯ ನೋಡಿದಿಯಾ
ಕಂಬ ಆರು ಮಧ್ಯದಿ ತುಂಬಿರುತಿಹ

---

೪೩. ಅದೇ. ಪು. ೧೬೩
೪೪. ಅದೇ. ಪು. ೧೪೦.

ಒಂಭತ್ತು ದ್ವಾರದಲಿ
ಸಂಬ ಸದಾಶಿವ ಧ್ಯಾನಕೆ ಇಂಬಾಗಿ
ಸಂದಿಕೊಂಡು ನಿಜ ಅಕ್ಷರ ಕಲಿಸುವ..."[೪೫]

ಮತ್ತು

"ಸೂಜಿಯೇ ನೀನು ಸೂಜಿಯೇ ಈ
ರಾಜ್ಯದೊಳಗೆಲ್ಲ ತೇಜ ಕಾಣಿಸುವಂಥ
ಹರಿಯ ಶಿರದ ಮೇಲೆ ಮೆರೆವಂಥ ಸೂಜಿಯೇ
ಹರನ ಕಪಾಲದಿ ಬೆರೆತಂಥ ಸೂಜಿಯೇ
ಮರೆವೆಯ ಅರಿವೆಯ ಹೊಲಿವಂಥ ಸೂಜಿಯೇ
ಮರೆ ಮೋಸವಾಗಿ ಮಾಯವಾದಂಥ ಸೂಜಿಯೇ"[೪೬]

ಎಂಬ ರೂಪಕದ ಆಧುನಿಕತೆ ವಸ್ತು, ಉಪಕರಣಗಳ ಬಳಕೆಯನ್ನು ತತ್ತ್ವಪದದಲ್ಲಿ ಗುರುತಿಸಬಹುದಾಗಿದೆ.

ಪ್ರತಿಮೆ

ಪ್ರತಿಮೆಯು ಸುಂದರವಾದ ಭಾವನಾತ್ಮಕವಾದ ಒಂದು ಶಬ್ದ ಚಿತ್ರವಾಗಿದೆ. ಅನುಭವ, ಭಾಷೆ, ಅಭಿವ್ಯಕ್ತಿಗಳ ಸುಂದರ ಸಾಮರಸ್ಯವನ್ನು ಸಾಧಿಸಿರುವ ಶರೀಫರ ತತ್ತ್ವಪದಗಳ ಈ ಶಬ್ದ ಚಿತ್ರಗಳು ಕಾವ್ಯ ಪ್ರಪಂಚದಲ್ಲಿ ಅವಿಸ್ಮರಣೀಯ ಸೃಷ್ಟಿಗಳಾಗಿವೆ. ಪ್ರತಿಮೆಯಲ್ಲಿ ಶಬ್ದಗಳು ಸಂಕ್ಷಿಪ್ತವಾಗಿದ್ದು, ಅರ್ಥ ಅಪಾರವಾಗಿರುತ್ತವೆ. ಅಂತರದರ್ಶನಕ್ಕೆ ಕಾರಣೀಭೂತವಾಗುತ್ತದೆ. ಪ್ರತಿಮೆಯ ವಿಶಿಷ್ಟತೆ ಎಂದರೆ ಅದರ ಅರ್ಥವ್ಯಾಪ್ತಿಯು ಓದುಗನ ಅನುಭವದೊಂದಿಗೆ ಬೆಳೆಯುತ್ತಾ ಹೋಗುತ್ತದೆ.

ಶರೀಫರ ತತ್ತ್ವಪದಗಳಲ್ಲಿ ಪ್ರತಿಮೆಗಳು ಪ್ರಮುಖವಾಗಿ ಮಾನವ ಜೀವನದ ಸ್ವಾಭಾವಿಕತೆ ಹಾಗೂ ಜೀವಂತಿಕೆಯ ಸಂಕೇತಗಳಾಗಿ ಮೂಡಿಬಂದಿವೆ. ಒಂದೇ ವಸ್ತುವನ್ನು ಹಲವು ಅರ್ಥಗಳಿಗೆ ಬಳಸಿಕೊಳ್ಳುವುದು ತತ್ತ್ವಪದಗಳ ಸೃಜನಶೀಲತೆಗೆ ಕುರುಹಾಗಿದೆ. ನಿಸರ್ಗದ ಲೋಕ ವ್ಯಾಪಾರಗಳು, ಭಕ್ತಿ, ಜ್ಞಾನ, ಆಚರಣೆ, ವಿಡಂಬನೆ ಹಾಗೂ ಆತ್ಮ ನಿವೇದನಗಳ ಭಾವಾಭಿವ್ಯಕ್ತಿಯು ಪ್ರತಿಮೆಗಳಾಗಿ ಪ್ರತಿಬಿಂಬಿತವಾಗುತ್ತವೆ. ಶರೀಫರು ತಮ್ಮ ಅನುಭಾವಿಕ ಸತ್ಯವನ್ನು ಪ್ರತಿಮೆಗಳ ಮೂಲಕ ಬೆಡಗಿನ ಭಾಷೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

---

೪೫. ಅದೇ, ಪು. ೧೬೧.
೪೬. ಅದೇ, ಪು. ೧೫೫.

"ಕೋಡಗನ್ನ ಕೋಳಿ ನುಂಗಿತ
ನೋಡವ್ವ ತಂಗಿ
ಆಡು ಆನೆಯ ನುಂಗಿ
ಗೋಡೆ ಸುಣ್ಣವ ನುಂಗಿ
ಆಡಲು ಬಂದ ಪಾತರದವಳ ಮದ್ದಲೆ ನುಂಗಿತ್ತ..."

ಬೆಡಗಿನ ರೂಪದ ಪ್ರತಿಮಾಸೃಷ್ಟಿಯನ್ನು ಈ ಪದದಲ್ಲಿ ಕಾಣುತ್ತೇವೆ. ಮಂಗನನ್ನು ಕೋಳಿ ನುಂಗುವುದು ಹೊರನೋಟಕ್ಕೆ ವಿರೋಧಾಭಾಸವಾದ ಬೆಡಗಿನಂತೆ ಕಂಡರೂ ಇದು ಆಧ್ಯಾತ್ಮಿಕ ಸಂಕೇತದ ಕವನವಾಗಿದೆ. ಕೋಡಗವು ಚಂಚಲ ಮನಸ್ಸಿನದಾಗಿದ್ದು, ಪುಟ್ಟ ಕೋಳಿಯು ಜ್ಞಾನಕ್ಕೆ ಮತ್ತು ಏಕಾಗ್ರತೆಗೆ ಸಂಕೇತವಾಗಿದೆ.

"ಗುಡ್ಡ ಗಂವ್ಹರ ನುಂಗಿ
ಗಂವ್ಹರ ಇರುವೆ ನುಂಗಿ
ಗುರು ಗೋವಿಂದನ ಪಾದಾ ನನ್ನನುಂಗಿತ"

ಕೊನೆ ಸಾಲಿನಲ್ಲಿ ಹೇಳಿರುವ ಸತ್ಯವನ್ನು ಬಲಪಡಿಸುವ ಸಲುವಾಗಿ ಮೊದಲಿನ ಪ್ರತಿಮೆಗಳು ಮೂಡಿ ಬಂದಿವೆ. ಅವು ಒಂದೊಂದು ಬೇರೆ ಬೇರೆ ಚಿತ್ರಗಳನ್ನು ಕೊಡುತ್ತಾ ಹೋದರೂ ಒಂದೇ ಅನುಭವವನ್ನು ತೀವ್ರಗೊಳಿಸುವಲ್ಲಿ ಸಾರ್ಥಕವಾಗುತ್ತವೆ. ಆಡು ಸರಳತೆ, ಆನೆ ಅಹಂಕಾರಕ್ಕೆ, ಗೋಡೆಯು, ಮಣ್ಣಿನ ಶರೀರ ಸಂಕೇತವಾಗಿಯೂ ಹಾಗೂ ಚಿನ್ಮಯತೆಯು ಸುಣ್ಣವಾಗಿಯೂ, ಪಾತರದವಳು ಮೋಹ, ಮಾಯೆ, ಅಜ್ಞಾನದ ಸಂಕೇತವಾಗಿದ್ದು, ಮದ್ದಳೆಯು ಸಂಗೀತಪ್ರಜ್ಞೆಯ ಪರಮಾರ್ಥ ಸಾಧನೆಯಾಗಿದೆ. ಸರಳತೆಯು ಅಹಂಕಾರವನ್ನು ನುಂಗಿ, ದೇಹಾಭಿಮಾನ ತೊರೆದು ಬ್ರಹ್ಮಾನಂದದಲ್ಲಿ ಲೀನವಾಗುವದು ಮತ್ತು ಮೋಹ ಮಾಯೆಯನ್ನು ಗೆದ್ದು ಪರಮಾರ್ಥ ಗುರಿ ಹೊಂದುವುದು ಪದದ ಸಾಂಕೇತಿಕ ಅರ್ಥವಾಗಿದೆ. ಗುರುಗೋವಿಂದನ ಪಾದವು ಶರೀಫರಿಗೆ ಸಾಕ್ಷಾತ್ ದೇವರ ಪಾದವಾಗಿದೆ. ಅದರಲ್ಲಿ ಅಡಗಿ ಹೋದ ಶಿಷ್ಯರ ಉದಾತ್ತ ಧ್ಯೇಯವನ್ನು ಪ್ರತಿಮಾ ರೂಪದ ಈ ಪದವು ಅರ್ಥಪೂರ್ಣವಾಗಿ ಧ್ವನಿಸುತ್ತದೆ.

ಕೆಲವೊಮ್ಮೆ ಒಂದು ನುಡಿಗಟ್ಟು ಅಥವಾ ಲೋಕೋಕ್ತಿ ಅಥವಾ ಒಂದು ವಾಕ್ಯದಲ್ಲೂ ಪೂರ್ಣ ವಿವರಣವನ್ನು ನೀಡಬಹುದು.

"ಕುಂಟ ಕುಪುಡರೆಂಟು ಮಂದಿ ಕೆಂಟೆ ಹೊಡೆಯಲೋ..."

ಈ ಒಂದೇ ಪಾದದಲ್ಲಿ ಪ್ರತಿಮೆಯು ಮೈದೋರಿ ಅಷ್ಟಮದಗಳನ್ನು, ಅರಿಷಡ್ವರ್ಗಗಳನ್ನು ಹೆಂಟೆಯಂತೆ ಒಡೆದು ನಾಶಗೊಳಿಸಿ ಸುಜ್ಞಾನ, ಪ್ರಜ್ಞಾನ, ಅರಿವು ಆಚಾರಗಳ ಅಳವಡಿಕೆಗಾಗಿ ಉಪದೇಶಿಸಿದ ಪುಟ್ಟ ಪದವಾಗಿದೆ.

"ಮುದುಕ್ಯಾಡಿ ಮಾಯದ ಮರವೇರಿದೆಪ್ಪ.."[೫೦]

ಈ ಒಂದು ಪಾದದಲ್ಲಿ ರೂಪಕವು ಪ್ರತಿಮೆಯಾಗಿ ಮುಂದುವರೆದು 'ಮದುವೆ' ಎನ್ನುವುದು ಮಾಯದ ಮರವಾಗಿರುವುದನ್ನು, ಇಡೀ ಪದ್ಯದ ಕೇಂದ್ರ ವಸ್ತು ಈ ಸಾಲಿನಲ್ಲಿಯೇ ಅಡಗಿರುವುದನ್ನು ಕಾಣುತ್ತೇವೆ.

"ತರವಲ್ಲ ತಗೀ ನಿನ್ನ ತಂಬೂರಿಸ್ವರ
ಬರದೇ ಬಾರಿಸದಿರು ತಂಬೂರಿ...."[೫೦ಎ]

ಈ ಪದದ ಪ್ರಾರಂಭದ ಸಾಲಿನಲ್ಲಿಯೇ ಪ್ರತಿಮೆ ಮೈ ಎತ್ತಿದೆ.

ತಂಬೂರಿಯನ್ನು ದೇಹಕ್ಕೆ ಹೋಲಿಸುತ್ತ, ದೇಹದ ಪರಮ ಪ್ರಯೋಜನವಾದ ಪುರುಷಾರ್ಥ ಸಾಧನೆ, ಆಧ್ಯಾತ್ಮ ಸಾಧನೆಯನ್ನು ತಂಬೂರಿ ನುಡಿಸುವ ಕಲೆಗೆ ಸಮದೂಗಿಸಿದ್ದಾರೆ. ಬದುಕನ್ನು ಸಾರ್ಥಕಗೊಳಿಸಿಕೊಳ್ಳುವುದನ್ನು ಸರಸ ಸಂಗೀತದ ಕುರುಹನ್ನಾಗಿ, ಸುಮಧುರ ನಾದ ಹೊರಡಿಸುವ ತಂಬೂರಿಯನ್ನ ಕಾವ್ಯಮದ್ದಕ್ಕೂ ಪ್ರತಿಮೆಯಾಗಿಸಿದ್ದಾರೆ.

ಮಾನವ ಸ್ವಭಾವವನ್ನು ಸೂಕ್ಷ್ಮವಾಗಿ ಬಿಂಬಿಸುವ ವಿಶೇಷವಾದ ಭಾವಾತ್ಮಕ ಭಾವವನ್ನು ಹೊಂದಿರುವ ಕಾವ್ಯ ಪ್ರತಿಮೆಯನ್ನು ಶರೀಫರ ಪದಗಳಲ್ಲಿ ಉದಾಹರಿಸ ಬಹುದು.

"ಮನವೆಂಬೋ ಹೆಣ್ಣಿನ ಕಣ್ಣ ಸನ್ನೆಗೆ ಕಾಮ
ತಾನು ದೇಹದೊಳು ಸುಳಿದಾಡುತಿರೆ
ನಿನಗೆ ವಿಷಯ ಸುಖವಾಕ್ಷಣದೊಳು
ಎನಗೆ ಸುರತ ಸುಖಭೋಗವ ಬೇಡುವರೆ?"[೫೧]

ಮನಸೇ ಒಂದು ಹೆಣ್ಣಾಗಿ ಪ್ರತಿಮೆಯ ರೂಪ ತಾಳಿ ಚಿತ್ರದಂತೆ ಕಣ್ಣಮುಂದೆ ನಿಲ್ಲುವುದು. ದೇಶಿ ಪ್ರತಿಮೆಗಳಿಂದ ಅಮೂರ್ತ ವಿಷಯಗಳ ಮೂರ್ತ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ.

---

೫೦. ಅದೇ, ಪು. ೧೩೪.
೫೦ಎ. ಅದೇ, ಪು. ೧೩೪.
೫೧. ಅದೇ, ಪು. ೮೮.

'ಆಲ್ಲಿಕೇರಿ' ಪದವನ್ನು ಶರೀಫರ ಪರಮಾರ್ಥದಾನಂದವನ್ನು ಪಡೆಯುವ ಮಾರ್ಗಸೂಚಿಯಾಗಿ ವಿವರಿಸಿದ್ದಾರೆ.

"ಆಲ್ಲಿಕೇರಿಗೆ ಹೋಗುನು ಬರ್ತೀರೇನ್ರೇ। ನೀವು
ಒಲ್ಲದಿದ್ದರೆ ಇಲ್ಲೆ ಇರತೀರೇನ್ರೇ..."
ಊರ ಹೊರಗಿನ ಸಾರಿ ಮೀರಿದ ಸ್ಥಳವನೋಡ್ರೆ ಆದಕ
ಸೇರದಿದ್ದರೆ ನಿಮ್ಮ ಸ್ನೇಹ ನಮಗೆ ಬ್ಯಾಡ್ರೇ
ಮೂರು ಗಿರಿಯ ಮರೆಯಲ್ಲಿರುವ
ನೀರು ತರುವ ಕೆರೆಯ ಬದಿಗೆ
ಜಾಣತನದ ಬಡಜನೊಳು ಬಾಜಾರ್ ಹೂಡ್ರೇ ಮುಂದ
ಜಾದುಗಾಣಜವಂಥ ಪಸರಿ ತಂದು ಇಡ್ರೆ..."[illegible]

ಗ್ರಾಮೀಣ ಸಂಪ್ರದಾಯದ ಸಾಂಸ್ಕೃತಿಕ ಆಚರಣೆಯನ್ನು ಕಾವ್ಯಾಲಂಕಾರವನ್ನಾಗಿ ಮಾಡಿಕೊಂಡು ಭಕ್ತಿಯ ಪಥವನ್ನು ಹೀಗೆ ತೋರಿಸಿದ್ದಾರೆ.

ಹೀಗೆ ಉಪಮೆ ರೂಪಕಗಳಂತೆ ದೃಷ್ಟಾಂತಗಳು ಸಹ ಶರೀಫರ ಕಾವ್ಯದಲ್ಲಿ ತಮ್ಮ ಅನುಭವದ ಸಿದ್ಧಿಯನ್ನು ಪ್ರಕಟಿಸಿವೆ.

"ಬಲು ನಾತಾ ಬಲು ನಾತಾ ಮನ
ಮಲಿನ ತೊಳೆಯದಿರೆ ಹೊಲಸಾಯ್ತಪ್ಪ
ನಾಯಿ ಸತ್ತು ಕೊಳೆತರೆ ನಾತಲ್ಲ
ಕಾಯಿ ಕೆಟ್ಟು ಮಳೆತರೆ ನಾತಲ್ಲ
ಮಂಗಳಾತ್ಮಕ ಗುರು ಗೋವಿಂದನ
ಸಂಗ ಮಾಡದಿರುವುದು ನಾತಪ್ಪ"[illegible]

ಬಾಹ್ಯ ಮಲೀನತೆಯನ್ನು ಅನೇಕ ದೃಷ್ಟಾಂತಗಳ ಮೂಲಕ ವಿವರಿಸುತ್ತ ಇದಾವುದು ನಿಜವಾದ ಮಾಲಿನ್ಯವಲ್ಲವೆಂದು, ಗುರುವಿನ ಸಂಗ ಮಾಡದ ಮನವೇ ಬಲು ಹೊಲಸಾದುದು ಮತ್ತು ಕೆಟ್ಟ ವಾಸನಾಯುಕ್ತವಾಗಿರುವ ಮಲಿನವೆಂದು ಹಾಡುವರು. ಹಾಗೆಯೇ–

"ಹೌದಪ್ಪ ಹೌದು ನೀನೇ ದೇವರು
ನಿಂದ ನೀ ತಿಳಿದರ ನಿನಗಿಲ್ಲೋ ದೂರ
ನೀರಿಲ್ಲದ ಜಳಕ ಮಾಡಿರಬೇಕು
ಆರಿವೆ ಇಲ್ಲದ ಮಡಿಯ ಉಟ್ಟಿರಬೇಕು

ಊಟವಿಲ್ಲದೆ ಹೊಟ್ಟೆ ತುಂಬಿರಬೇಕು
ಎಬಡಾ ತಬಡಾ ನಾಲಿಗೆ ಬಿದ್ದಿರಬೇಕು
ಹೋಜಲಿ ಹೋಗಿ ಶಿಶುನಾಳಧೀಶನ ಪಾದಕೆ ಬಿದ್ದಿರಬೇಕು."[೫೪]

ಲೌಕಿಕದ ಪರಿವೆಯನ್ನು ಮರೆತು ಬ್ರಹ್ಮಾನಂದದಲ್ಲಿ ಶಿಶುನಾಳಧೀಶನ ಪಾದದಲ್ಲಿ ಲೀನವಾದ ಮನಸ್ಸಿನ ಸ್ಥಿತಿಯನ್ನು ಪ್ರತಿ ಸಾಲಿನಲ್ಲಿ ಬರುವ ದೃಷ್ಟಾಂತಗಳಿಂದ ವ್ಯಕ್ತವಾಗುತ್ತದೆ. ಸಾಧಕನಲ್ಲಿಯ ದೇವರ ಅಸ್ತಿತ್ವವನ್ನು ಗಟ್ಟಿಗೊಳಿಸುತ್ತ ಹೋಗುತ್ತವೆ. ಉಪಮೆಗಳಂತೆ ಬರುವ ದೃಷ್ಟಾಂತಗಳು ಅರ್ಥಪೂರ್ಣವಾಗಿದ್ದು ಧ್ವನಿಪೂರ್ಣವೂ ಆಗಿರುತ್ತವೆ. ದೃಷ್ಟಾಂತ ಪ್ರಪಂಚವು ಪ್ರಕೃತಿ, ವ್ಯವಹಾರ, ಜೀವನ ಮುಂತಾದೆಡೆಗಳಲ್ಲಿ ವ್ಯಾಪಿಸಿರುವುದನ್ನು ಕಾಣಬಹುದು.

ಪ್ರತೀಕ

ಪ್ರತೀಕವು ವಿಷಯಗಳನ್ನು ಪ್ರತಿನಿಧಿಸುವಂತಹ ಆವಿಷ್ಕಾರವಾಗಿದೆ. ಪ್ರತೀಕದಲ್ಲಿ ಕನಿಷ್ಠ ಪಕ್ಷ ಎರಡು ಅರ್ಥಗಳಾದರೂ ಇದ್ದೇ ಇರುತ್ತವೆ. ಒಂದು ವಸ್ತುವಿನ ಯಾವುದಾದರೊಂದು ಸ್ತರದ ಅರ್ಥದ ಮೂಲಕ, ಸಮಾನ ರೂಪದ ಅನ್ಯ ವಸ್ತು ವಿಷಯಗಳನ್ನು ಪ್ರತಿನಿಧಿಸುವಂತಹ ಅವಿಷ್ಕರಣವೇ ಪ್ರತೀಕವಾಗಿದೆ. ಪ್ರತೀಕಗಳು ಒಂದು ದೃಷ್ಟಿಯಿಂದ ಪ್ರತಿಮೆಗಳಾಗಿವೆ. ಏಕೆಂದರೆ ಅಲ್ಲಿ ಉದ್ಧೃತವಾದ ಪದ್ಯದಲ್ಲಿ ಒಗಟಿನ ನೆಲೆಯಲ್ಲಿ ಒಂದು ಅರ್ಥ ಪ್ರಕಟಿಸಿದರೆ, ಪ್ರತಿಮಾ ರೂಪದಲ್ಲಿ ಇನ್ನೊಂದು ಅರ್ಥವನ್ನು ಅರ್ಥೈಸುತ್ತದೆ.

ಶರೀಫರ ತತ್ತ್ವಪದಗಳಲ್ಲಿ ಪ್ರತೀಕವು ಭಾವನೆಗಳನ್ನು ಸಶಕ್ತವಾಗಿ ಪ್ರತಿಕ್ರಮಿಸುವ ಅನನ್ಯ ವಿಧಾನವಾಗಿದೆ. ಕಾಲ, ಮೃತ್ಯು, ಕರ್ಮ, ಪ್ರಕೃತಿ ಮುಂತಾದ ಗಹನ ತತ್ತ್ವಗಳನ್ನು ವಿವರಿಸುವಾಗಲೆಲ್ಲ ಕವಿಯು ಸಹಜವಾದ ಪ್ರತೀಕ ವಿಧಾನಗಳನ್ನು ಬಳಸಿಕೊಂಡಿರುವುದನ್ನ ಕಾಣುತ್ತೇವೆ.

"ಬಿದ್ದಿಯಬ್ಬೇ ಮುದುಕಿ
ಬಿದ್ದಿಯಬ್ಬೇ
ಸದ್ಯಕಿದು ಹುಲಗೂರ ಸಂತಿ
ಗದ್ದಲದಾಗ್ಯಾಕ ನಿಂತಿ..."[೫೫]

---

೫೪. ಅದೇ, ಪು. ೧೭೫.
೫೫. ಅದೇ, ಪು. ೧೪೪.

ಈ ಪದದಲ್ಲಿ ಸಂತೆಯ ಪ್ರತೀಕವು ಸಂಸಾರವನ್ನು ಪ್ರತಿನಿಧಿಸುತ್ತಿದೆ. ಮುದುಕಿಯ ಸಂಕೇತವು ಮುಕ್ತಿ ಕಾಣದ ಜೀವದ ಪ್ರಾಪಂಚಿಕತೆಯನ್ನು ಧ್ವನಿಸುತ್ತದೆ.

"ಬಟ್ಟೆ ಕಟ್ಟಿಸಿದಿ ರುದ್ರವ್ವ ನಿನ್ನ
ಹೊಟ್ಟೆಯ ಕೂಸಿಗಿನ್ನೆಷ್ಟುಪದ್ರವ್ವ
ಹೊಕ್ಕಳ ಕೆಳಗೆ ಐತವ್ವ ಎರಡು
ಪಕ್ಕಡಿ ಎಲುಬಿನೊಳು ಮನೆ ಮಾಡೇತವ್ವ
ಹುಕ್ಕಿ ಕಾಳಜಕ್ಕೇರಿತವ್ವ ಆದಸ
ತಿಕ್ಕಿ ನಿಲ್ಲಿಸ ನನ್ನ ತಾಯವ್ವ..."

ಎಂಬ ಪದದಲ್ಲಿ ಬಟ್ಟೆ ಕಟ್ಟಿ ಹೊಟ್ಟೆ ನೋವನ್ನು ಕಡಿಮೆ ಮಾಡಿದ ವಾಚ್ಯಾರ್ಥ ಒಂದಾದರೆ, ಪಾರಮಾರ್ಥಿಕ ಅರ್ಥದಲ್ಲಿ ಶಿವಶಕ್ತಿಯ ಸಹಾಯದಿಂದ ಕುಂಡಲೀನಿ ಶಕ್ತಿಯನ್ನು ಜಾಗೃತಿಗೊಳಿಸುವುದು ಪ್ರತೀಕವಾಗಿದೆ. ಹೊಲ, ಹಕ್ಕಿ, ಪ್ರಾಣಿ, ಮಣ್ಣು, ಹೆಣ್ಣು, ಸಂತೆ... ಮುಂತಾದ ಉಪದಾನಗಳ ಮೂಲಕ ಗೂಢವಾದ, ಗಾಢವಾದ ಅರ್ಥವಲಯಗಳನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ವಸ್ತು ಸಂಗತಿಗಳ ಸರ್ವಮುಖಗಳನ್ನು ತೆರೆದು ಅವುಗಳಿಂದಲೇ ದಿವ್ಯ ಪಾರಮಾರ್ಥಿಕತೆಯನ್ನು ಪಡೆಯುವ ಅಭಿವ್ಯಕ್ತಿಯಾಗಿದೆ.

ಭಕ್ತಿ, ಜ್ಞಾನ, ವೈರಾಗ್ಯದಿಂದ ತುಂಬಿದಶರೀಫರ ಪದಗಳು ಅನುಭಾವದ ಸಂಪತ್ತಿನಿಂದ, ಸರಳವಾದ ಅಭಿವ್ಯಕ್ತಿಯಿಂದ, ಸಹಜವಾದ ಸ್ಫೂರ್ತಿಯಿಂದ ಜನರ ಹೃದಯಕ್ಕೆ ಹತ್ತಿರವಾಗಿವೆ. ಅತೀಂದ್ರಿಯದ ಅನುಭವವನ್ನು ಹೇಳುವಲ್ಲಿ ಈ ಕವಿ ಬಳಸುವ ಉಪಮೆ, ರೂಪಕ, ಪ್ರತಿಮಾ ವಿಧಾನ ಹೇಳುವ ದೃಷ್ಟಾಂತಗಳು ನಿತ್ಯ ಜನಜೀವನದ ಪರಿಸರ, ಸನ್ನಿವೇಶದಿಂದ ಎತ್ತಿಕೊಂಡಿರುವುದರಿಂದ ಇಡೀ ಮಾನವ ಸಮಾಜದ ಚಿತ್ರಣವನ್ನು ಶರೀಫರ ತತ್ತ್ವಪದಗಳಲ್ಲಿ ಕಾಣುತ್ತೇವೆ. ಆಧ್ಯಾತ್ಮಿಕ ಭಾವಗೀತೆಗಳಾದ ಇವರ ಪದಗಳಲ್ಲಿ ಅಮೂರ್ತವಾದ ಸೂಕ್ಷ್ಮಭಾವಗಳನ್ನು ಮೂರ್ತ ರೂಪದ ಪರಿಚಿತ ಪ್ರಾಣಿ, ಪಕ್ಷಿ ಅಥವಾ ಪ್ರಾಪಂಚಿಕ ಸನ್ನಿವೇಶಗಳ ಪ್ರತೀಕ ಪ್ರತಿಮೆಗಳ ಮೂಲಕ ಚಿತ್ರವತ್ತಾಗಿ ಸಾಕಾರಗೊಳಿಸಿರುವುದನ್ನು ಕಾಣುತ್ತೇವೆ. ಒಟ್ಟಾರೆಯಾಗಿ ಶರೀಫರ ಪದಗಳ ಅಲಂಕಾರವು ಮನಸ್ಸಿನ ಚಾಂಚಲ್ಯವನ್ನು ನಿರೂಪಿಸುವ ಕೋಡಗ, ಮದದಿಂದ ಮೆರೆವ ಸಲಗ, ಸುಪ್ತ ಪ್ರಜ್ಞೆಯನ್ನು ಬಿಂಬಿಸುವ ಕೋಳಿ, ಕಾಮವನು, ಸೂಚಿಸುವ ಹಾವು, ಇಲಿ, ಮೂರು ಕಬಕಿಗಳು

ಎಂದರೆ ಅರಿಷಡ್ವರ್ಗಗಳು ಇವೆಲ್ಲವು ಮಾಯೆಗಳಾಗಿ ಇಂದ್ರಿಯ ಚಂಚಲತೆಯನ್ನು ವರ್ಣಿಸಿವೆ.

ಸಸ್ಯ ಪ್ರತಿಮೆಗಳಲ್ಲಿ ಕಂಡು ಬರುವ ಕುಂಬಳಕಾಯಿ, ಹಿರೇಕಾಯಿ, ತೆಂಗಿನಕಾಯಿ, ಮೆಣಸಿನಕಾಯಿ, ಬಳ್ಳಿ, ಹೂವು, ಫಲ, ಹಣ್ಣು, ಕಾಯಿ, ಬೀಜ, ತರು, ವೃಕ್ಷ, ಬಾಳೆ, ನಿಂಬೆ ಮುಂತಾದವುಗಳು ಸ್ವಾಭಾವಿಕತೆಯ ಮತ್ತು ಜೀವಂತಿಕೆಯ ಸಂಕೇತಗಳಾಗಿವೆ.

ಇಡೀ ಮಾನವ ಸಮಾಜವನ್ನು ಅಲಂಕಾರಿಕ ಪ್ರಜ್ಞೆಯಲ್ಲಿ ಚಿತ್ರಿಸುವ ಶರೀಫರ ಪದಗಳು ಮೊಹರಮ್ ಪರಿಭಾಷೆಯನ್ನು ರೂಪಕವಾಗಿ ಬಳಸಿವೆ. ಜೊತೆಗೆ ಅನುಭಾವದ ತತ್ತ್ವಗಳನ್ನು ನೆಲೆಗೊಳಿಸಿವೆ.

ಬೆಡಗು

ಬೆಡಗು ಸಾಹಿತ್ಯ ಪ್ರಪಂಚದಲ್ಲಿ ನೂತನ ಪ್ರತಿಮಾ ವಿಧಾನವಾಗಿದೆ. ಆಧ್ಯಾತ್ಮದ ಚೌಕಟ್ಟಿನಲ್ಲಿ ರಚಿತಗೊಂಡ ತತ್ತ್ವಪದಗಳು ನಿಗೂಢಾರ್ಥವನ್ನು ಹೊಂದಿದ ಸಂದರ್ಭದಲ್ಲಿಯ ಪದಗಳನ್ನು ಬೆಡಗಿನ ಪದಗಳು ಎನ್ನುತ್ತಾರೆ. ಬೆಡಗಿನ ಪದಗಳಲ್ಲಿ ತಾತ್ವಿಕ ಸತ್ಯ ಸಿದ್ಧಾಂತಗಳು ಹುದುಗಿರುವುದನ್ನು ಕಾಣುತ್ತೇವೆ. ಸಂಪ್ರದಾಯದ ಅರಿವು, ಶಾಸ್ತ್ರದ ಪರಿಚಯ, ಆಧ್ಯಾತ್ಮಿಕ ವಿವೇಕವಿಲ್ಲದಿದ್ದರೆ ಬೆಡಗನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಸಾಧ್ಯ.

ಡಾ. ಎಂ. ಚಿದಾನಂದಮೂರ್ತಿಯವರು, "ಬೆಡಗು ಎಂದರೆ ಚೆಲುವು, ಸರಳವಲ್ಲದ್ದು ಎಂದರ್ಥ. ಯಾವುದನ್ನು ಹಲವಾರು ಮಾತುಗಳಲ್ಲಿ ಬಿಚ್ಚಿ ಹೇಳಬಹುದಿತ್ತೋ, ಅದನ್ನು ಕಡಿಮೆ ಮಾತುಗಳಲ್ಲಿ ಮುಚ್ಚಿ ಹೇಳುವುದು ಬೆಡಗಿನ ವಚನಗಳ ವೈಶಿಷ್ಟ್ಯವಾಗಿದೆ" ಎಂದಿದ್ದಾರೆ.

ಡಾ. ಎಲ್. ಬಸವರಾಜರವರು ಬೆಡಗನ್ನು ಕುರಿತು, "ವಿರೋಧಾಭಾಸವೇ ಅವೆಲ್ಲಕ್ಕೂ ಜೀವಾಳ, ಪ್ರಕೃತಿಗೆ, ಸಮಾಜಕ್ಕೆ, ಸಂಪ್ರದಾಯಕ್ಕೆ ವಿರುದ್ಧವೆಂಬುವಂತಹ ಗೌಣವಾದ ಅರ್ಥ ಬರುವ, ಮಾತುಗಳನ್ನಾಡಿ, ಅದಕ್ಕೆ ಬಳಸಿರುವ ಪದಗಳಿಗೆ ಬೇರೊಂದು ಮುಖ್ಯ ಅಂತರಾರ್ಥವು ಬರುವಂತಾಗಿಸುವುದೇ ಇವುಗಳ ಮುಖ್ಯ ತಂತ್ರ" ಎನ್ನುತ್ತಾರೆ.

'ಬೆಡಗು' ಎಂಬ ಪದಕ್ಕೆ ಸೌಂದರ್ಯ, ಬಿನ್ನಾಣ, ರಹಸ್ಯ, ಸೊಕ್ಕು ಎಂದೆಲ್ಲಾ ಅರ್ಥಗಳಿರುತ್ತವೆ.

ಹೀಗೆ ಶಬ್ದಗಳ ಮಡಿಲಲ್ಲಿರುವ ಅರ್ಥವನ್ನು ಹುಡುಕಿ ಅರುಹುವುದು ಬೆಡಗಿನ ಪದಗಳ ಆಶಯವಾಗಿದೆ. ಹೊರನೋಟಕ್ಕೆ ಅಸಂಬದ್ಧ ಶಬ್ದಾರ್ಥಗಳ ಜೋಡಣೆ ಇದ್ದಂತೆ ಕಂಡುಬಂದರೂ ಒಳಗೆ ಅಡಗಿದ್ದ ಅರ್ಥ, ವಿಶಿಷ್ಟವಾದ ಅನುಭವವನ್ನು ತಂದುಕೊಡುತ್ತದೆ.

ಅಧ್ಯಾತ್ಮ ಸಿದ್ಧಾಂತ ವಿಷಯಗಳನ್ನು ನಿರೂಪಿಸುವಲ್ಲಿ ಅದಕ್ಕೆ ವಿರುದ್ಧಾರ್ಥವುಳ್ಳ ಶಬ್ದ ಸಂಯೋಜನೆಯಿಂದ ಪದದ ಅರ್ಥವನ್ನು ನಿಗೂಢವಾಗುವಂತೆ ಮಾಡುವುದರಿಂದ ಉಂಟಾಗುವ ಮಾನಸಿಕ ಪರಿಣಾಮ ಕವಿಯ ಬೆಡಗಿನ ತಂತ್ರದಲ್ಲಿ ಒಂದಾಗಿರುತ್ತದೆ. ಇದು ಕುತೂಹಲವನ್ನು ಉಂಟು ಮಾಡುವುದರಿಂದ, ಅರ್ಥದ ಆನಂದ ಪರಿಣಾಮ ಹೆಚ್ಚಾಗಿರುತ್ತದೆ. ಬೆಡಗಿನ ಶಬ್ದಗಳ ಗೂಡಾರ್ಥವಾದಾಗಲೇ ಆನಂದವಾಗುವುದು.

ಸಾಮಾನ್ಯವಾಗಿ ಚಮತ್ಕಾರಿಕವಾದ ಬೆಡಗಿನ ನುಡಿಗಳನ್ನು ಹಳ್ಳಿಗರು ಮೆಚ್ಚಿ ಪುರಸ್ಕಾರ ಕೊಡುತ್ತಾರೆ. ಜನಪದ ಸಾಹಿತ್ಯದಲ್ಲಿ ಇಂತಹ ಬೆಡಗಿನ, ಒಗಟಿನ ನುಡಿಗಳು ಸಹಜವಾಗಿರುತ್ತವೆ. ಅವರು ಬಳಸುವ ಬೆಡಗಿನ ನುಡಿಗಳಿಂದ ಕೂಡಿದ ಒಗಟುಗಳನ್ನು ಬಿಡಿಸುವುದು ಎಂತಹ ಪಂಡಿತನಿಗೂ ಕಷ್ಟವಾಗಿ ಬಿಡುತ್ತದೆ. ಹಳ್ಳಿಗರಿಗೆ ಅದರಲ್ಲೇನೋ ವಿನೋದ, ಸಂತೃಪ್ತಿ.

ಗ್ರಾಮೀಣ ಪರಿಸರದಲ್ಲಿ ಬೆಳೆದ ಶರೀಫ ಸಾಹೇಬರು ಬೆಡಗಿನ ಪದ ಪ್ರಯೋಗಗಳ ಹಾಡುಗಳನ್ನು ರಚಿಸಿ ಸಾಮಾನ್ಯರ ಅಂತರಂಗದಲ್ಲಿ ಹಾಸ್ಯ, ವಿನೋದ, ಮನರಂಜನೆಯ ಜೊತೆಗೆ ಅಧ್ಯಾತ್ಮದ ಬೆಳಕನ್ನು ಹಚ್ಚಿದ್ದಾರೆ. ಬೆಡಗು ಶರೀಫರಿಗೆ ಕಾವ್ಯ ತಂತ್ರವಾಗಿರದೆ ಜನಪದ ಸಾಹಿತ್ಯ ಸಂಸ್ಕೃತಿಯಲ್ಲಿಯ ಒಂದು ಭಾವಾಭಿವ್ಯಕ್ತಿಯಾಗಿದೆ.

ಶರೀಫರ ಬೆಡಗಿನ ಪದಗಳು ಅಧ್ಯಾತ್ಮದ ಅಂತರಂಗವನ್ನು ಬಚ್ಚಿಟ್ಟುಕೊಂಡ ನಿಧಾನದಂತಿವೆ. ಹೇಳಬೇಕಾದುದ್ದನ್ನು ನೇರವಾಗಿ ಹೇಳದೇ, ಗೂಡಾರ್ಥದ ಯಾವ ಒಂದು ಸುಳುವನ್ನು ಬಿಟ್ಟು ಕೊಡದೇ ಸಮಸ್ಯೆಯ ರೂಪದಲ್ಲಿಯೋ, ಒಗಟಿನ ರೂಪದಲ್ಲಿಯೋ ಬೆಡಗಿನ ಪದ ಹಾಡಿದ್ದಾರೆ. ಹಾಡುಗಳಲ್ಲಿಯ ಶಬ್ದಗಳ ಅರ್ಥವೇ ಒಂದು ಬಗೆಯಾಗಿದ್ದರೆ. ಪದಗಳಲ್ಲಿ ಅಡಗಿರುವ ಅರ್ಥವೇ ಇನ್ನೊಂದು ಬಗೆಯದಾಗಿರುತ್ತದೆ. ಹೀಗೆ ಶಬ್ದಗಳ ಮರೆಯಲ್ಲಿ ಅಡಗಿರುವ ಅರ್ಥವನ್ನು ಅರುಹುವುದು ಬೆಡಗಿನ ಪದಗಳ ಆಶಯವಾಗಿವೆ. ಕೆಲವೊಮ್ಮೆ ಅಸಂಬದ್ಧ ಶಬ್ದಾರ್ಥಗಳ ಜೋಡಣೆ ಇದಂತೆ ಕಂಡುಬಂದರೂ ಒಳಗೆ ಅಡಗಿದ ಅರ್ಥ

ವಿಶಿಷ್ಟವಾದ ಅನುಭವವನ್ನು ತಂದುಕೊಡುತ್ತದೆ. ಇಂದ್ರಿಯಾತೀತವಾದ ಅನುಭವಗಳಿಗೆ ಅಮೂರ್ತವಾದ, ಅವ್ಯಕ್ತವಾದ ದೈವೀಭಾವಗಳಿಗೆ ಶರೀಫರು ಸುತ್ತಮುತ್ತಲಿನ ಮೂರ್ತವಸ್ತುಗಳನ್ನೇ ಸಂಕೇತವಾಗಿ ಕೊಡುವುದುಂಟು. ವಿರುದ್ಧಾರ್ಥವುಳ್ಳ ಪದಗಳಿಂದ ಹೆಣೆದ ಶರೀಫರ ಬೆಡಗಿನ ಪದಗಳು ಅರ್ಥಕ್ಕಾಗಿ ತಡಕಾಡಿಸುವಂತೆ ಮೂಡಿವೆ.

"ಕೋಡಗನ್ನ ಕೋಳಿ ನುಂಗಿತ್ತ
ನೋಡವ್ವ ತಂಗಿ ಕೋಡಗನ ಕೋಳಿ ನುಂಗಿತ್ತ
ಆಡು ಆನೆಯ ನುಂಗಿ
ಗೋಡೆ ಸುಣ್ಣಾವ ನುಂಗಿ
ಆಡಲು ಬಂದ ಪಾತರದವಳ ಮದ್ದಿ ನುಂಗಿತ್ತ
ಒಳ್ಳು ಒನಕಿಯ ನುಂಗಿ
ಬೀಸುಕಲ್ಲು ಗೂಟವ ನುಂಗಿ
ಕುಟ್ಟಲಿಕ್ಕೆ ಬಂದ ಮುಮಕಿಯ ನೊಣವು ನುಂಗಿತ್ತ..."[೫೭]

ಸಹಜವಾದ ಓದುವಿಕೆಯಿಂದಾಗಲಿ, ಕೇಳುವಿಕೆಯಿಂದಾಗಲಿ ಗೂಡಾರ್ಥವನ್ನು ಬಿಟ್ಟುಕೊಡದ ಪದವು ಬೆಡಗಿನ ಸಾಲನ್ನು ಸೃಷ್ಟಿಸುತ್ತದೆ. ಈ ಪದವು ಒಂದು ಕಡೆ ಸಮಗ್ರ ಆಧ್ಯಾತ್ಮಿಕ ಸಾಧನೆಯ ವೈಚಾರಿಕತೆಯ ನಿಲುವನ್ನು, ಇನ್ನೊಂದು ಕಡೆಯಲ್ಲಿ ಮಾತಿಗೆ ಮೀರಿದ ಅನುಭವವನ್ನು ಮಾತಿನಲ್ಲಿ ಹಿಡಿದಿಡುವ ಸಾಹಸದ ಸಾಹಿತ್ಯ ಪ್ರತಿಭೆಯನ್ನು ಏಕಕಾಲದಲ್ಲಿ ಅಳವಡಿಸಿಕೊಂಡಿದೆ. ಅಸಾಧ್ಯವಾದುದನ್ನು ನಿಶ್ಚಲ ಮನಸ್ಸಿನಿಂದ, ಸತತ ಪ್ರಯತ್ನದಿಂದ ಸಾಧ್ಯಮಾಡಿಕೊಳ್ಳುವ ಸಾಧನೆಯನ್ನು ಶರೀಫರು ಪದದಲ್ಲಿ ಹಾಡಿದ್ದಾರೆ. ಕೋಡಗದಂತೆ ಚಂಚಲವಾದ ತಮ್ಮ ಮನಸ್ಸನ್ನು ಕೋಳಿಯಂತೆ ಜ್ಞಾನಪೂರ್ಣವಾದ ಗುರುಗಳು ಅಮೂಲಾಗ್ರವಾಗಿ ಆಕ್ರಮಿಸಿಕೊಂಡದ್ದನ್ನು ಈ ಬೆಡಗಿನಲ್ಲಿ ಹಾಡಿದ್ದಾರೆ.

ಒಗಟಿನ ರೂಪದ ಬೆಡಗಿನ ಪದಗಳನ್ನೂ ಶರಿಫರು ರಚಿಸಿದ್ದಾರೆ. ಒಗಟನ್ನು ಬಿಡಿಸಿ ಹೇಳುವುದಲ್ಲದೆ ಬೆಡಗಿನ ರೂಪದಲ್ಲಿ ಅಸಂಬದ್ಧ ಹೋಲಿಕೆಯೊಂದಿಗೆ ರಹಸ್ಯವನ್ನು ಕಾಪಾಡಿಕೊಳ್ಳುವ ಪದವನ್ನು ಕುರಿತು ಹೀಗೆ ಹೇಳಿದ್ದಾರೆ:

"ಗುರುತ ಹೇಳರಿ ಪಕ್ಷಿ ಜಾತಿಯ
ಬಲ್ಲವರ ನೀವು..."

---

೫೭ ಅದೇ, ಪು. ೨೧೦.

ಗುರುವಿನ ಧ್ಯಾನ ಮಾಡತೈತಿ, ಹರನ ನುಂಗಿ, ಹರಿಯ ಉಗುಳಿ
ಅಜನ ಶಿರವ ಹರಿದು ಚೆಲ್ಲಿ
ಮೂರು ಕಣ್ಣು ಒಂದು ನಾಲಿಗಿ
ಬಾಯೊಂದು ಕೂಡಿ ದೇಹ ಮೂರು ಕಲ್ಲತಿಂಬುದು
ಎಲ್ಲರಿಗೆ ಕೂಡಿ ಶರಣು ಎಂದು ಕೈಯ ಮುಗಿವದು.
ಛಾಯೆ ಮಿಂಚು ಗಗನದಲ್ಲಿ ಮಾದ ಮಿಂಚು ಮುಗಿಲ ಪ್ರಭೆಯು
ಸಾಯ ಹೊಡೆದು ಹೆಣವ ಕೆಡವಿ ಗಾಯ ಮಾಡಿ ಹೋಗತೈತಿ.
ಕಡಲ ಮಥನ ಮಾಡಿ ದಣಿವುದು ಏಳೆಂಟು ದಿನಕ
ಕಡರ ಬೆಣ್ಣೆ ನೀರ ತೆಗೆವುದು, ಮಡದಿಯರ ಹಾಗೆ
ದಣಿದು ಹರಕ ಸೀರಿ ಉಡುವುದು
ಅಡವಿಯಲ್ಲಿ ಮಡದ ನೀರು ಕುಡಿದು ಒಡಲೊಳ್ ತುಂಬಿಕೊಂಡು
ನಾದ ತಿರುಗುವವರ ಕೂಡ ಜೋಡಾಗಿ ಹೋಗತೈತಿ
ಪಕ್ಕವಿಲ್ಲದಂತೆ ಕಾಣ್ತದು ತಾ ಹಡೆದ ಎಲ್ಲ
ಮಕ್ಕಳಿಗೆ ಮಲಿಯ ಕೊಡುವುದು
ಊರ ಅಗಸಿಯೊಳಗ ಹೊಕ್ಕು ತಿರುಗ್ವದು
ದಿಕ್ಕಿನೊಳಗೆ ಶಿವನಾಳಧೀಶನ ಅಕ್ಕರೆಯ ಪಕ್ಷಿ"[೨೫]

ಶರೀಫರ ಸಾಹಿತ್ಯದಲ್ಲಿಯ ಬೆಡಗು ಮನರಂಜನೆಯ ಜೊತೆಗೆ ಗಹನವಾದ ತತ್ತ್ವವನ್ನು, ಚಿಂತನೆಯನ್ನು ಒಳಗೊಂಡಿರುವುದು ವ್ಯಕ್ತವಾಗಿದೆ.

ಕೆಲವು ಪದಗಳ ಭಾಷೆ ಸರಳವಾಗಿದ್ದರೂ ಅರ್ಥವು ತಕ್ಷಣಕ್ಕೆ ಹೊಳೆಯುವುದಿಲ್ಲ. ಬೆಡಗಿನ ಅರ್ಥ ಸಹಜವಾಗಿ ಆಗದ ಪ್ರಯುಕ್ತ ಮೊದ ಮೊದಲು ಬೆಡಗಿನ ಪದಗಳು ಜನಸಾಮಾನ್ಯರಿಂದ ದೂರವಾಗಿ ಉಳಿಯಲು ಕಾರಣವಾದವು.

ಶರೀಫರು ಇಸ್ಲಾಮೀ ಪುರಾಣದ ಅದರಲ್ಲೂ ಮೊಹರಮ್ ಪುರಾಣದ ನೆನಪನ್ನು ಆಗಿಂದಾಗ್ಗೆ ರಾಮಾಯಣ, ಮಹಾಭಾರತ ಘಟನೆಯೊಂದಿಗೆ ಸುಲಭವಾಗಿ ಹೋಲಿಸುತ್ತಾರೆ. ಇದರಿಂದಾಗಿ ಬೆಡಗಿನ ರೂಪಕಗಳನ್ನು ನಿರ್ಮಿಸುವ ಕೌಶಲ್ಯ ಶರೀಫರದಾಗಿತ್ತು. ತತ್ತ್ವಗಳು ಪುರಾಣ ರೂಪಕಗಳನ್ನು ಪಡೆದುಕೊಂಡಿರುವುದಕ್ಕೆ ಶರೀಫರಲ್ಲಿದ್ದ ಸಾಂಸ್ಕೃತಿಕ ಸೃಜನಶೀಲತೆಗೆ ಸಾಕ್ಷಿ.

ಶರೀಫರ ಕಾವ್ಯದಲ್ಲಿಯ ನಿಗೂಢತೆ, ಭಾವುಕತೆ ಅವರ ಕಾವ್ಯಾಕರ್ಷಣೆಗೆ ಕಾರಣವೆನ್ನಬಹುದು.

೪.೫ ಛಂದೋವಿಲಾಸ, ಸಂಗೀತ

ಛಂದಸ್ಸು: ಕಾವ್ಯಕ್ಕೆ ಭಾಷೆ ದುಡಿತದ ಜೊತೆಗೆ ಛಂದಸ್ಸು ಮುಖ್ಯ. ಸಹಜವಾಗಿ ಕಾವ್ಯವನ್ನು ರಚಿಸುವ ಕವಿಗೆ ತನ್ನ ವಿಷಯಕ್ಕೆ ಹೊಂದಿಕೆಯಾಗುವ ಛಂದಸ್ಸು ತಾನಾಗಿಯೇ ಸೂಚಿತವಾಗುತ್ತದೆ. ಶರೀಫರ ಭಾವಬಂಧುರಕ್ಕೆ ಅನುಕೂಲಕರವಾದ ಛಂದಬಂಧವು ಅವರಿಂದ ರೂಪಿತವಾಗಿದೆ.

ಜಾನಪದ ನೆಲೆಗಟ್ಟಿನ ಮೇಲೆ ರಚಿತವಾದ ಶರೀಫರ ಎಲ್ಲ ಬಗೆಯ ಪವಗಳು ಗೇಯಗುಣವನ್ನು ಹೊಂದಿ ಹೆಚ್ಚಾಗಿ ದೇಶೀ ಛಂದಸ್ಸನ್ನೇ ಒಳಗೊಂಡಿವೆ. ಕಂಠಸ್ಥ ಪರಂಪರೆಯ ಪ್ರವಾಹದಲ್ಲಿ ಹರಿದುಬರುವ ಈ ಪದಗಳಲ್ಲಿ ಪಾಠಾಂತರದ ಜೊತೆಗೆ ಲಯ, ತಾಳ, ಮಟ್ಟುಗಳ ವ್ಯತ್ಯಾಸದಿಂದಾಗಿ ಎಲ್ಲ ಪಾದಗಳು ಸಮಾನ ಛಂದಸ್ಸಿನಲ್ಲಿ ಸಾಗದೇ ಏಕ ಛಂದೋರೂಪಕ್ಕೆ ಒಳಗಾಗದೆ, ಸಂಗೀತಾತ್ಮಕ ಲಯವನ್ನು ಹೊಂದಿದ ಶರೀಫರ ಪವಗಳಲ್ಲಿ ಕೆಲವು ನಿರ್ದಿಷ್ಟ ಛಂದಸ್ಸಿನ ನಿಯಮಕ್ಕೆ ಬದ್ಧವಾಗಿರದೆ ಅಲ್ಲಲ್ಲಿ ಮುಕ್ತತೆಯಿಂದ ಕೂಡಿವೆ.

ಗೇಯತೆಯುಳ್ಳ ತತ್ತ್ವಪದಗಳಲ್ಲಿ ಮಾತ್ರಾಗಣ, ಅಂಶಿಗಣಗಳಿದ್ದು, ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿಯೊಂದಿಗೆ ರಗಳೆ, ಸಾಂಗತ್ಯಗಳ ರಚನೆಯನ್ನು ಕಾಣುತ್ತೇವೆ. ಜಾನಪದ ಮಟ್ಟುಗಳಾದ ಹೋಳಿಪದ, ಕೋಲುಪದ, ಬುಡಬುಡಕ್ಯಾ, ಲಾವಣಿ, ರಿವಾಯತ್, ದೇವಿಸ್ತುತಿ, ಶಕ್ತಿಸ್ತುತಿ, ದಂಡಕ ಮಂಗಳಾರತಿ ಸೇರಿದಂತೆ ಕಾಲಜ್ಞಾನ, ಕಾರಣೀಕ, ಕಣಿಸ್ವರೂಪದ ಹಾಡುಗಳು ಜನಪದ ಧಾಟಿಯಲ್ಲಿರುತ್ತವೆ ಹೊರತು ಯಾವ ಛಂದಸ್ಸಿನ ಹೆಸರನ್ನು ಸೂಚಿಸುವಂತಿರುವುದಿಲ್ಲ.

ದೇಶಿ ಛಂದಸ್ಸಾದ ಛಂದೋವತಂಸದ ನಡಿಗೆಯ ಶರೀಫರ ಹಲವಾರು ಕಾವ್ಯಗಳಿಗೆ ಛಂದಸ್ಸಿನ ಚೌಕಟ್ಟನ್ನು ಹಾಕಲು ಪ್ರಯತ್ನಿಸಿದೆ. ಛಂದೋವತಂಸವೂ ನಾಲ್ಕು ಪಾದಗಳನ್ನು ಹೊಂದಿದ್ದು, ಪ್ರತಿಪಾದದಲ್ಲೂ ಮೂರು ವಿಷ್ಣುಗಣಗಳನ್ನು ಮತ್ತು ಒಂದು ಬ್ರಹ್ಮ ಗಣವನ್ನು ಹೊಂದಿರುತ್ತದೆ.

ವಿ	ವಿ	ವಿ	ಬ್ರ
"ಬಲ್ಲಿದ		ಯಜ್ಞಕ್ಕೇ		ಸಲ್ಲದ		ಕೋಳಿ
ವಿ	ವಿ	ವಿ	ಬ
ಎಲ್ಲಾರು		ಕೊಯಕೊಂಡು		ತಿನ್ನುವ		ಕೋಳಿ
ವಿ	ವಿ	ವಿ	ಬ್ರ
ಮುಲ್ಲಾನ		ಕೈಯೊಳು		ಮೃತವಾದ		ಕೋಳಿ"

ವಿ	ವಿ	ವಿ	ಬ್ರ
ಕೆಂಪಾದ		ಉಕ್ಕಿನೊಳು		ಹುಟ್ಟಿದ		ಸೂಜಿ
ವಿ	ವಿ	ವಿ	ಬ್ರ
ತಂಪಾಗಿ		ದಾರದಿ		ಸೇರಿದ		ಸೂಜಿ
ವಿ	ವಿ	ವಿ	ಬ್ರ
ಸಿಂಪಿಗ		ರಣ್ಣಗೆ		ಹೊನ್ನಾದ		ಸೂಜಿ
ವಿ	ವಿ	ವಿ	ಬ್ರ
ಕುಂಪನಿ		ಸರಕಾರ		ಕರೆಸಿದ		ಸೂಜಿ"

ಶರೀಫರ ಇನ್ನೂ ಕೆಲವು ಪದಗಳಲ್ಲಿ ಮೂರನೇ ಗಣದ ಮುಕ್ತಾಯದಲ್ಲಿ ತುಸು ನಿಂತು ಸಾಗುವ ಲಯದ ಧಾಟಿಯಲ್ಲಿ ಮೂರನೆಯ ಗಣ ಬ್ರಹ್ಮಗಣವಾದರೂ ಎಳೆದು ಹೇಳುವಾಗ ವಿಷ್ಣುಗಣವಾಗಿಯೇ ಪರಿಣಮಿಸುತ್ತದೆ ಮತ್ತು ಆ ಮೂಲಕ ಛಂದೋವತಂಸದ ಲಕ್ಷಣವನ್ನೇ ಹೊಂದುತ್ತದೆ.

ವಿ	ವಿ	ವಿ	ಬ್ರ
"ಮುಕ್ತಿ ಕಾ		ಮಿನಿ ನಿನ್ನ		ಕಾಡೀ		ಮೋಹ
ವಿ	ವಿ	ವಿ	ಬ್ರ
ಮತ್ತ ಸು		ರತ ಸುಖ		ಸುಡುವಂತೆ		ಕೂಡಿ
ವಿ	ವಿ	ವಿ	ಬ್ರ
ಹುಟ್ಟೆನ್ನ		ಕಳೆದುಕೋ		ತೋಡಿ		ದೇವ
ವಿ	ವಿ	ವಿ	ಬ್ರ
ಶಿಶುನಾಳ		ಧೀಶನ		ಪಾದಕೆ		ದೂಡಿ"

ರಗಳೆಯ ಪ್ರಭಾವ ಶರೀಫರ ಮೇಲಿದೆ. ಲಲಿತ, ಮಂದಾನಿಲ, ಉತ್ಸಾಹದ ಲಯಗಳನ್ನು ಬಳಸಿದರೂ ಪ್ರತಿ ಸಾಲಿನಲ್ಲೂ ನಿಯಮಿತವಾದ ಛಂದಸ್ಸಿಲ್ಲದಿರುವುದರಿಂದ ಉದಾಹರಿಸಲು ಕಷ್ಟವಾಗುತ್ತದೆ. ಒಟ್ಟಾರೆಯಾಗಿ ಶರೀಫರ ಪದಗಳನ್ನು 'ಅಂಶಿಗಣದ ಮಟ್ಟುಗಳ' ಗುಂಪಿಗೆ ಸೇರಿಸಬಹುದು.

ಪ್ರಾರಂಭದಲ್ಲಿ ಪಲ್ಲವಿ, ಒಮ್ಮೊಮ್ಮೆ ಅನುಪಲ್ಲವಿಯಿಂದ ಆರಂಭಗೊಳ್ಳುವ ಶರೀಫರ ಪದಗಳಲ್ಲಿ ಪಲ್ಲವಿಯು ಆವರ್ತಕ ಪದವಾಗಿ ಇಡೀ ಪದ್ಯದ ಸಾರವನ್ನು ಹಿಡಿದಿಡುತ್ತದೆ. ಶರೀಫರು ಪಲ್ಲವಿಯಲ್ಲಿಯೇ ಪದದ ತತ್ತ್ವವನಿರಿಸಿ ಅಥವಾ ಅನುಭಾವವನ್ನು ನಿರೂಪಿಸಿ, ಮುಂದಿನ ಚರಣಗಳಲ್ಲಿ ಅಕ್ಷರಗಳನ್ನು, ಪದಗಳನ್ನು ಕುಶಲತೆಯಿಂದ ಆರಿಸಿ, ಜೋಡಿಸಿ, ಚಿತ್ರಕವಿತ್ವವನ್ನು ಉಂಟು ಮಾಡುವರು. ಕವಿಗಳು ಸೃಷ್ಟಿಸುವ ಈ ಶಬ್ದವೈಚಿತ್ರಕ್ಕೆ 'ಚಿತ್ರ ಕವಿತ್ವ' ಎನ್ನುತ್ತಾರೆ. ಪಲ್ಲವಿ, ಅನುಪಲ್ಲವಿಯಲ್ಲಿರುವ ತತ್ತ್ವವನ್ನು ಉಪಮೆ, ದೃಷ್ಟಾಂತ, ಪ್ರತಿಮೆ, ಪ್ರತೀಕಗಳ ಮೂಲಕ ಪುಷ್ಟೀಕರಿಸುವುದರಿಂದ ಕಾವ್ಯದ ಸಾರವೆಲ್ಲಾ ಚಿತ್ರಿತ ರೂಪದಲ್ಲಿ ಗೋಚರವಾಗುವದು. ಪದದ ಕೊನೆಯಲ್ಲಿ ಪದಕಾರರ ಮುದ್ರೆ ಅಥವಾ ಅಂಕಿತನಾಮವಿರುತ್ತದೆ.

ಶರೀಫರು ಶಿಕ್ಷಿತರಾದರೂ ಕೋಲಾಟ, ಲಾವಣಿಗಳಂಥ ಪ್ರಚಲಿತ ಛಂದಸ್ಸಿನ ಧಾಟಿಯನ್ನು ಬಳಸಿದರು. ಛಂದಸ್ಸಿನ ಅಧ್ಯಯನದ ಮೂಲಕ ಅವುಗಳ ಯುಕ್ತತೆಯನ್ನು ಅರಿತು ಅಳವಡಿಸದೇ ತಮ್ಮದೇ ಆದ ಧಾಟಿಯ ಸಹಜ ಛಂದಸ್ಸಿನ ಜಾಣ್ಮೆಯನ್ನು ತೋರಿದ್ದಾರೆ. ದಂಡಕದಂತಹ ಛಂದಸ್ಸಿನ ಆಯ್ಕೆಯ ಹಿಂದೆ ಗುರು ಗೋವಿಂದಭಟ್ಟರ ಮೂಲಕ ಪರಿಚಿತವಾದ ಸಂಸ್ಕೃತ ಸ್ತೋತ್ರಗಳ ಪ್ರಭಾವವಿರುವುದನ್ನು ಕಾಣುತ್ತೇವೆ.

ಸಂಗೀತ

ನಾದೋಪಾಸನೆ ನಿಸರ್ಗದತ್ತವಾದ ದೇಣಿಗೆಯಾದುದರಿಂದ ಮನುಷ್ಯನು ಸಂಗೀತಪ್ರಿಯನಾಗಿದ್ದಾನೆ. ದೈವಶಕ್ತಿಯ ಸಂಗೀತವು ಮನಸ್ಸನ್ನು ಮುಗ್ಧವಾಗಿಸುತ್ತದೆ. ಮನುಷ್ಯನನ್ನು ದುಃಖದಿಂದ ಪಾರು ಮಾಡಿ ಆನಂದದಲ್ಲಿ ತೇಲಿಸುತ್ತದೆ.

ಸಂಗೀತವನ್ನು ಅದರ ಸಾಹಿತ್ಯ ಮೌಲ್ಯಗಳಿಗಾಗಿ ಮಾತ್ರ ಆಶ್ರಯಿಸದೇ ಅಧ್ಯಾತ್ಮ ಸಾಧನೆ, ಅಧ್ಯಾತ್ಮ ಚಿಂತನೆ, ಬೋಧ ಪ್ರಸಾರಕ್ಕೆಂದು ಬಳಸಲಾಗಿದೆ. ಸಂಗೀತದ ಮೆರಗನ್ನು ಪಡೆದ ತತ್ತ್ವವು ಹೃದಯದಲ್ಲಿ ಚಿರಂತನವಾಗಿ ನೆಲೆಯೂರಿದೆ. ನಾಲಿಗೆಯ ಮೇಲೆ ಗುನಗುನಿಸುತ್ತದೆ. ನಿಸರ್ಗದ ಈ ಸಹಜ ತತ್ತ್ವವನ್ನರಿತ ಶರೀಫರು ವೇದಾಂತ ತತ್ತ್ವಜ್ಞಾನವನ್ನು ಸಂಗೀತಬದ್ಧ ಹಾಡುಗಬ್ಬದ ತತ್ತ್ವಪದಗಳಲ್ಲಿರಿಸಿ

ಹಾಡಿದ್ದಾರೆ. ಜನಪದ ಧಾಟಿಯಲ್ಲಿ ಮೂಡಿ ಬಂದ ಪದಗಳು ಸಂಗೀತ ಸೌರಭದೊಂದಿಗೆ ಕಾವ್ಯಮಯವಾಗಿ ಆಧ್ಯಾತ್ಮ ವಿಷಯದ ಬೆಡಗಿನಿಂದ ಆಕರ್ಷಕ ವಾಗಿರುವುದನ್ನು ಕಾಣುತ್ತೇವೆ. ಜನಪದ ಮಟ್ಟು, ಸಂಪ್ರದಾಯಿಕ, ಪರಿಚಿತ ಬಂಧಗಳ ಗಾಢಪ್ರಭಾವದಲ್ಲಿಯೇ ರಚನೆಯಾದ ಪದಗಳು ಪಲ್ಲವಿ, ಅನುಪಲ್ಲವಿಗಳನ್ನು ಆರಂಭಿಕ ಸಾಲುಗಳನ್ನಾಗಿ ಹೊಂದಿವೆ. ಆವರ್ತಕಗೊಂಡ ಪಲ್ಲವಿಯ ಪದದಲ್ಲಿಯೇ ವಿಷಯವನ್ನು ಆರಂಭದಲ್ಲಿಯೇ ಸ್ಪಷ್ಟಪಡಿಸುತ್ತವೆ. ಪ್ರತಿಚರಣದಲ್ಲಿ ಪುನರುಕ್ತಿ ಹೊಂದುವುದರಿಂದ ಗೇಯತೆಯನ್ನು ಮುಂದುವರಿಸುತ್ತದೆ.

ಶರೀಫರ ಪದಗಳನ್ನು 'ಏಕತಾರಿ' ಪದಗಳೆಂದೂ ಕರೆಯುತ್ತಾರೆ. ಆಶುಕವಿಯಾದ ಶರೀಫರ ಸದಮಲಜ್ಞಾನವು ಉಕ್ಕಿ ಬರುವಾಗ ಪದಗಳು ಮೂರ್ತಗೊಳ್ಳುತ್ತಿದ್ದವು. ಪದಗಳ ಮೂರ್ತಿಯ ಪರಿಪೂರ್ಣತೆಗಾಗಿ ಏಕತಾರಿಯ ನಾದದ ಧ್ಯಾನವು ಆಧಾರವಾಗಿ ಸಹಕರಿಸುತ್ತಿರುವುದರಿಂದ 'ಏಕತಾರಿ ಪದಗಳೆಂದು ಕರೆಯುತ್ತಾರೆ. ಪದರಚನಾಕಾರರೇ ಗಾಯಕರಾಗಿ ಹಾಡುತ್ತಾರೆ. ಹಳ್ಳಿಗಳಲ್ಲಿ ಭಜನಕಾರರು ಮೇಳಕಟ್ಟಿಕೊಂಡು ಪಕ್ಕವಾದ್ಯಗಳಾದ ಡಗ್ಗಾ, ದಮಡಿ, ತಾಳ, ಕೊಳಲು ಇತ್ಯಾದಿಯೊಂದಿಗೆ ಪೂಜೆ, ಪ್ರಾರ್ಥನೆ, ಗೋಷ್ಠಿಗಳಲ್ಲಿ ಹಾಡುತ್ತಾರೆ. ಭಜನಾ ಪದಗಳನ್ನು ಹೊರತುಪಡಿಸಿ ಲಾವಣಿ, ರಿವಾಯತ್, ಸಾಹಿರ್ ಇವುಗಳಲ್ಲೂ ರಚನಾಕಾರರು ಗಾಯಕರು ಒಬ್ಬರೇ ಇರುತ್ತಾರೆ.

ಪಿ.ಸಿ. ಶಾಬಾದಿಮಠ ಇವರು ಗದುಗಿನವರು. ಶರೀಫರ ಪದಗಳಿಗೆ ಪಂತುಮೇಳಿ, ಮುಖಾರಿ, ಯಮಕ, ಸಾವೇರಿ, ತೋಡಿ, ಜಿಲಾವಲ್, ಪನ್ನಂಗ ತೋಡಿ, ಪೂರ್ವಿ, ಗೌಳಸಾರಂಗ, ಕಾಂಬೋಧಿ, ಮೋಹನ, ಆನಂದ ಭೈರವಿ ಮುಂತಾದ ರಾಗ-ತಾಳಗಳನ್ನು ಸಂಯೋಜಿಸಿ ಪುಸ್ತಕ ಪ್ರಕಟಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶಿಷ್ಟ ಸಾಹಿತ್ಯವಲಯದಲ್ಲೂ ಭಾವಗೀತಾತ್ಮಕ ಪದಗಳಾಗಿ ಶರೀಫರ ಪದಗಳು ಜನಪ್ರಿಯಗೊಳ್ಳುತ್ತಿವೆ.

ಹೀಗೆ ಸಂಗೀತ, ಸಾಹಿತ್ಯದಿಂದೊಡಗೂಡಿದ ಸುಂದರ, ಗಂಭೀರ ತತ್ತ್ವದ ನಾದವು ಕಿವಿಗೆ ಇಂಪನ್ನೂ ತತ್ತ್ವವು ಹೃದಯಕ್ಕೆ ತೃಪ್ತಿಯನ್ನು ನೀಡಿ ಜನರನ್ನು ತಣಿಸುತ್ತಿವೆ. ಭಾವೈಕ್ಯತೆ, ತತ್ತ್ವದ ಸತ್ವ, ನಾದ ಮಾಧುರ್ಯ, ಉತ್ಕೃಷ್ಟ ಸಾಹಿತ್ಯದಿಂದಾಗಿ ಶಿಷ್ಟ ಸಾಹಿತ್ಯ, ಸಂಗೀತಕ್ಕೆ ಮುಖಾಮುಖಿಯಾಗಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿರುವುದನ್ನು ಕಾಣಬಹುದಾಗಿದೆ.

ಅಧ್ಯಾಯ ೫

ಶರೀಫರ ಪದಗಳಲ್ಲಿ ಕೋಮುಸೌಹಾರ್ದತೆ ಮತ್ತು ಪ್ರಸ್ತುತತೆ

ಕೋಮು ಸೌಹಾರ್ದತೆ ಎಂದರೆ ಜಾತಿ ಜಾತಿಗಳ ನಡುವಿರುವ ಸ್ನೇಹ, ಪ್ರೀತಿ, ಸಹಕಾರ ಮತ್ತು ಸಹೃದಯತೆ. ಧರ್ಮ ಧರ್ಮಗಳ ನಡುವಿರುವ ಗೌರವಾದರ ಕೋಮು ಸೌಹಾರ್ದತೆ. ಇದೇ ಸಮನ್ವಯದ ಮನೋಭಾವವಾಗಿದೆ.

ಅನೇಕ ಮತ ಧರ್ಮಗಳ ನೆಲೆಯಾಗಿರುವ ನಮ್ಮ ದೇಶದಲ್ಲಿ 'ಧರ್ಮ' ಎಂಬ ಪದಕ್ಕೆ ಅತ್ಯಂತ ವಿಶಾಲವಾದ ಅರ್ಥವಿದೆ. ಉದಾತ್ತವಾದ ಪರಿಕಲ್ಪನೆಯಿದೆ. ಆಧ್ಯಾತ್ಮಿಕ ಹಿನ್ನೆಲೆ ಇದೆ. ಮಾನವನನ್ನು ದೇವಮಾನವನನ್ನಾಗಿಸಿ ರೂಪಿಸುವ ದಿವ್ಯಶಕ್ತಿಯೂ, ಸಾಧನವೂ ಧರ್ಮವಾಗಿದೆ. ತನ್ನ ಆತ್ಮೋದ್ಧಾರದೊಂದಿಗೆ ಅನ್ಯರ ಆತ್ಮ ವಿಕಾಸಕ್ಕೆ ಅನುವು ಮಾಡಿಕೊಡುವ ಆದರ್ಶ ನಡವಳಿಕೆಯು ಧರ್ಮದ ಗುರಿಯಾಗಿದೆ. ವ್ಯಕ್ತಿಯಿಂದ ಸಮಷ್ಟಿಯ ಪ್ರಗತಿಯನ್ನು ಸಾಧಿಸುವ ಧರ್ಮವು ವ್ಯಕ್ತಿಯನ್ನು, ಸಮಾಜವನ್ನು ಕಾಪಾಡಿ ಘನತೆ ಗಾಂಭೀರ್ಯಗಳನ್ನೀಯುವ ಶಕ್ತಿಯಾಗಿದೆ. ಧರ್ಮವು ಸಾರ್ವಭೌಮ ಮತ್ತು ಸರ್ವಕಾಲಿಕವಾದ ಏಕಮಾತ್ರ ತತ್ತ್ವವಾಗಿದ್ದು, ಜೀವಾತ್ಮನು ಪತಿತವಾಗದಂತೆ ಎತ್ತಿ ಹಿಡಿಯುವುದಾಗಿದೆ.

ಧರ್ಮವು ಬಾಹ್ಯಾಚರಣೆಯ ಕ್ರಿಯೆಗಳಾದ ವ್ರತ, ಪೂಜೆ, ಸಂಪ್ರದಾಯದ ವಿಧಿ ವಿಧಾನಗಳು ಅರ್ಥವಿಹೀನವಾದ ಆಚರಣೆಗಳ ಸಮೂಹವಲ್ಲ. ನೀತಿ, ಪ್ರೀತಿ, ಸಂಯಮ, ಸಹಕಾರ, ಸ್ನೇಹ, ಸಹೃದಯತೆಗಳಂಥ ಮೌಲ್ಯಗಳನ್ನು ಹೊಂದಿದ್ದ ಧರ್ಮವು ಮಾನವನ ಹೃದಯವನ್ನು ಸಂಸ್ಕಾರಗೊಳಿಸುವುದಾಗಿದೆ. ಅಂತರಂಗ ಬಹಿರಂಗ ಶುದ್ಧಗೊಳಿಸಿ ನಡೆ-ನುಡಿಯನ್ನು ಏಕವಾಗಿಸುವ ತತ್ತ್ವಭರಿತ ಜೀವನ ಪದ್ಧತಿಯಾಗಿದೆ. ನಂಬಿಕೆ, ಶ್ರದ್ಧೆಗಳನ್ನು ಬದುಕಿನಲ್ಲಿ ತುಂಬುತ್ತಾ, ಮಾನವ ಜನಾಂಗಕ್ಕೆ ಅತ್ಯುತ್ತಮ ಸಾಂಸ್ಕೃತಿಕ ಜೀವನವನ್ನು ನೀಡುವುದರ ಜೊತೆಗೆ ಆತ್ಮಘಾತುಕವಾದ ವಿಚಾರಗಳಿಂದ ಜನರನ್ನು ವಿಮುಖಗೊಳಿಸಿ ಮುಕ್ತಗೊಳಿಸುವುದೇ ಧರ್ಮದ ವಿಶೇಷ ಕಾರ್ಯವಾಗಿದೆ. ಸಮಾಜವನ್ನು, ದೈವವನ್ನು ಕುರಿತು ಆದರ್ಶವಾಗಿ, ಆಧ್ಯಾತ್ಮವಾಗಿ ನಡೆದುಕೊಳ್ಳುವ ಶಿಸ್ತಿನ ಮಾರ್ಗವಾಗಿದೆ ಎನ್ನಬಹುದು.

ಮಾನವನ ಶ್ರೇಷ್ಠತೆಯು ಕೇವಲ ಭೌತಿಕೋನ್ನತಿಯಲ್ಲಿರದೇ ಆತ್ಮೋನ್ನತಿಯಲ್ಲಿರುವುದು. ಆಧ್ಯಾತ್ಮಿಕತೆಯೆ ನಿಜವಾದ ನಾಗರೀಕತೆ. ಅದನ್ನು ಸಾಧಿಸಿಕೊಡುವುದೇ ಧರ್ಮ. ಪರವನ್ನು ಗುರಿಯಾಗಿಟ್ಟುಕೊಂಡು ಇಹವನ್ನು ಹದಗೊಳಿಸುವುದು. ಮಾನವನ ಆತ್ಮವಿಕಾಸಗೊಳಿಸಿ ಶ್ರೇಷ್ಠವಾದ ಸುಖದ ಅನುಭವವನ್ನು ಕೊಡುವುದು ಧರ್ಮವಾಗಿದೆ.

ದೇವರು ಧರ್ಮಗಳ ಪರಿಕಲ್ಪನೆ ಇಲ್ಲದಿದ್ದರೆ, ಮನುಷ್ಯ ಸ್ವೇಚ್ಛಾಚಾರಿಯಾಗಿ ಅನೀತಿ, ಅನ್ಯಾಯ, ದ್ವೇಷ, ಮೋಸದಿಂದ ಮಾನವಕುಲವೇ ನಾಶವಾಗುತ್ತಿತ್ತು. ಆತ್ಮದೌರ್ಬಲ್ಯದಿಂದ ಮನಸಿನೊಳಗಿನ ತುಚ್ಛ ವಿಷಯ ವಾಸನೆಗೆ ದಾಸನಾಗಿ ಪಶುಸದೃಶ್ಯ ಜೀವನ ಸಾಗಿಸಬೇಕಾಗಿತ್ತು. ಮನಸ್ಸಿನ ಸ್ವಭಾವವನ್ನು ಸರಿಯಾಗಿ ತಿಳಿದುಕೊಂಡು ಅದರ ಚಂಚಲತೆಯನ್ನು ಸ್ವಾರ್ಥವಿಷಯ ವಾಸನೆಯನ್ನು ಹೋಗಲಾಡಿಸಲು ಮಾಡುವ ತಕ್ಕ ಉಪಾಯವೇ ಧರ್ಮವಾಗಿದೆ. ಮನೋನಿಗ್ರಹದ ಸದುಪಾಯಗಳನ್ನು ತಿಳಿಸಿ ಆತ್ಮಾಭಿವೃದ್ಧಿಯನ್ನು ಪಡೆಯಲು ಸಹಕರಿಸುವುದೇ ಧರ್ಮವಾಗಿದೆ. ಧರ್ಮವೆಂಬುದು ಬೌದ್ಧಿಕ ಸಾಧನ ಮಾತ್ರವಾಗಿರದೇ ಮಾನವನು ಸಾಧಿಸಬೇಕಾದ ಮಾನವೀಯತೆಯ ವಿಷಯವಾಗಿದೆ. ಮಾನವನು ತನ್ನ ಪರಿಪೂರ್ಣತೆಯನ್ನು ಸಾಧಿಸಲಿಕ್ಕೆ ಧರ್ಮದ ಮೊರೆ ಹೋಗಬೇಕಾಗುತ್ತದೆ. ಸಹಜೀವನದೊಂದಿಗೆ ಸಹಕಾರ ಮನೋಭಾವ, ಏಕತೆಗೆ ಪ್ರೇರಣೆ ನೀಡಬಲ್ಲ ಶಕ್ತಿಯೇ ಧರ್ಮ. ಆತ್ಮಸಂಸ್ಕಾರವೇ ನಿಜವಾದ ಮಾನವ ಧರ್ಮವಾಗಿದೆ ಎನ್ನಬಹುದು.

ಭಿನ್ನ ಭಿನ್ನ ಮತ, ಧರ್ಮಗಳು ತಮ್ಮದೇ ಆದಂಥ ತತ್ತ್ವಗಳನ್ನು, ಭಿನ್ನ ಭಿನ್ನ ಧರ್ಮಾಚರಣೆಗಳನ್ನು ಹೊಂದಿದ್ದರೂ ಅವುಗಳ ತಿರುಳು, ಉದ್ದೇಶ ಒಂದೇ ಆಗಿದೆ. ಮಾನವರನ್ನು ಪರಸ್ಪರ ಪ್ರೀತಿಯಿಂದ ಕಾಣಬೇಕೆಂಬ ಸೌಹಾರ್ದತೆಯ ಇಂಗಿತವನ್ನೇ ಎಲ್ಲ ಧರ್ಮಗಳು ಒಪ್ಪುತ್ತವೆ.

ವೇದಗಳಲ್ಲಾಗಲಿ ಯಾವುದೇ ಧರ್ಮಗಳಲ್ಲಾಗಲಿ ಸುಖ ಸಮಾಜ ನಿರ್ಮಾಣಕ್ಕೆ ಅಗತ್ಯವಾದ ವಿಷಯಗಳ ಕುರಿತಾದ ಚಿಂತನೆ ಇದೆ. ನೀತಿ, ಪುಣ್ಯಕಾರ್ಯ, ಪುರುಷಾರ್ಥ ಸಾಧನೆ, ಕರ್ತವ್ಯ, ನ್ಯಾಯ, ಸೌಹಾರ್ದತೆ, ಸಮನ್ವಯತೆ ತತ್ತ್ವಗಳು ಎಲ್ಲ ಮತಧರ್ಮಗಳ ಬಂಧನವನ್ನು ಮೀರಿ ಸಾರ್ವತ್ರಿಕವೆನಿಸುತ್ತವೆ. ತತ್ತ್ವವಿಚಾರವು ಎಲ್ಲ ಮತಗಳ ಆಚಾರಕ್ಕೆ ಮುಖ್ಯ ಆಧಾರವಾಗಿರುವುದು. ಇದು ಮಾನವ ಧರ್ಮವಾಗಿ ಎಲ್ಲ ಧರ್ಮಗಳ ಮೂಲವಾಗಿದೆ.

ಹೀಗೆ ಧರ್ಮವೆಂಬುದು ಗುಣದ ಅಳತೆಗೋಲಾದರೆ, ಜಾತಿಯು ತತಾಥಿವಟಿಗೆ ಅಡಿಯಾಗಿದೆ. ಅದು ವಿಶಾಲತೆಯನ್ನು ಬೋಧಿಸುವುದಿಲ್ಲ. ತಾನು

ತನ್ನ ಜನಾಂಗ ಎಂಬ ಸೀಮಿತ ವಲಯದಲ್ಲಿ ಬೆಳೆಯುತ್ತ, ದ್ವೇಷ, ಕ್ರೌರ್ಯವನ್ನು ಪ್ರೇರೇಪಿಸುತ್ತಿದೆ. ಜಾತಿಪಂಥಗಳೇ ಸಮಾಜದಲ್ಲಿಯ ವಿಷಬೀಜಗಳು. ಇತಿಹಾಸದುದ್ದಕ್ಕೂ ಹಲವಾರು ಮಹಾಪುರುಷರು ಅನುಭಾವಿ ಸಂತರು ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿದ್ದಾರೆ.

ಸಂತರು ಜ್ಞಾನಿಗಳು ಮತ ಧರ್ಮ ಪ್ರಿಯರಲ್ಲ; ತತ್ತ್ವಪ್ರಿಯರು, ಜ್ಞಾನಪ್ರಿಯರು ಮತ್ತು ಸತ್ಯಪ್ರಿಯರು. ಇಂಥ ಮಹಾತ್ಮರಿಗೆ ಜಾತಿಧರ್ಮಗಳು ಇರುವುದಿಲ್ಲ. ಅವರು ಯಾವುದೇ ಧರ್ಮಕ್ಕೆ ಸೀಮಿತಗೊಂಡವರಲ್ಲ. ಅವರು ಪಂಥಾತೀತ ಮತ್ತು ಮತಾತೀತರಾಗಿದ್ದಾರೆ. ಅವರಿಗೆ ಮಾನವ ಕುಲವೆಲ್ಲಾ ಒಂದೇ ಜಾತಿ, ಒಂದೇ ಮತವಾಗಿದ್ದು ಮಾನವರೆಲ್ಲರೂ ಒಂದೇ ಆಗಿರುತ್ತಾರೆ. ಸಮಾನತೆ, ಸರ್ವಧರ್ಮ ಸಮನ್ವಯತೆ ಇವರ ಬದುಕಿನ ಆಶಯವಾಗಿದೆ.

ಜಾತಿವ್ಯವಸ್ಥೆ ವಿರುದ್ಧ ಹೋರಾಡುತ್ತಲೇ ಸಮಾಜ ನಿರ್ಮಾಣ ಮಾಡಿದ್ದಾರೆ. ವಿಭಿನ್ನ ಸಾಹಿತ್ಯ ರೂಪಗಳನ್ನು ಸೃಷ್ಟಿಸಿದ್ದಾರೆ. ಸಮಾಜದಲ್ಲಿ ಅಪರೂಪ, ಆದರ್ಶವಾಗುವಂತಹ ಭಿನ್ನ ಭಿನ್ನ ಮತೀಯ ಗುರು-ಶಿಷ್ಯ ಪರಂಪರೆಗಳನ್ನು ಬೆಳೆಸಿದ್ದಾರೆ. ಸಮಾಜ ವ್ಯವಸ್ಥೆಯ ಮತೀಯ ಚೌಕಟ್ಟನ್ನು ಮೀರಿ ಮಾನವತಾ ಧರ್ಮವನ್ನು ಸಾರುತ್ತ ಮತೀಯ ಸೌಹಾರ್ದತೆಯನ್ನು ಸಾಧಿಸಿದ್ದಾರೆ. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಜಾತಿ ತೃಣ ಸಮಾನವೆಂದು ನಿರೂಪಿಸಿದ್ದಾರೆ. ಸಮಾನತೆಯ ತತ್ತ್ವವನ್ನು ಬೋಧಿಸಿದ್ದಾರೆ. ಯಾವ ಮತಧರ್ಮವನ್ನು ಟೀಕಿಸದೆ ವ್ಯಕ್ತಿ ತನ್ನ ಸಂಸ್ಕಾರ ಹಾಗೂ ಮನೋಧರ್ಮವನ್ನು ಅವಲಂಬಿಸಿ ಪ್ರಗತಿಪಥದಲ್ಲಿ ಸಮಾನ ಧರ್ಮವೆಂದು ಒಪ್ಪಿಕೊಳ್ಳುವುದು ಔದಾರ್ಯವೆಂದು ಹೇಳಿದ್ದಾರೆ. ಇಂಥ ಸಮಾನ ಮಾನವೀಯ ಧರ್ಮ ಮಥನಕ್ಕೆ ತಮ್ಮ ತತ್ತ್ವವನ್ನು ನಿವೇದಿಸಿ, ಸೌಹಾರ್ದತೆಯ ಸತ್ಯವನ್ನು ಸಾರಿದ್ದಾರೆ.

ವಿವಿಧ ಜನಾಂಗಗಳಲ್ಲಿ ಹುಟ್ಟಿ ಬಂದ ಬ್ರಾಹ್ಮಣ, ಮುಸ್ಲಿಂ, ಲಿಂಗಾಯತ, ಕಬ್ಬಲಿಗ, ಕುರುಬ, ಹರಿಜನ ಮುಂತಾದ ಧರ್ಮ, ಜಾತಿ, ಪಂಗಡಗಳಿಗೆ ಸೇರಿದವರೆಲ್ಲರೂ ತತ್ತ್ವಪದ ರಚನೆಯಲ್ಲಿ ಮತೀಯ ಸಾಮರಸ್ಯ ಹಾಗೂ ಸಮನ್ವಯತೆಯನ್ನು ಸಾಧಿಸಿದ್ದು ನಾಡಿನ ವಿಶೇಷವಾಗಿದೆ.

ಕರ್ನಾಟಕದಲ್ಲಿ ಪರಧರ್ಮ ಮತ್ತು ಪರಧರ್ಮ ತತ್ತ್ವಗಳನ್ನು ಆದರಿಸುವುದು, ಆಚರಿಸುವುದು ತುಂಬಾ ಸಹಜವಾದ ಪ್ರಕ್ರಿಯೆಯಾಗಿದೆ. ಹಿಂದೂ-ಮುಸ್ಲಿಂ ಧರ್ಮಗಳೆರಡೂ ಒಂದಾಗಿ ನಡೆಸುವ ಆಚರಣೆ, ಆರಾಧನೆ, ಹಬ್ಬ, ಉತ್ಸವ,

ಉರುಸುಗಳು ನಮ್ಮಲ್ಲಿವೆ. ಇವು ಜನಪದ ಬದುಕಿನ ವೈವಿಧ್ಯಮಯ ಸಾಮಾಜಿಕತೆಗೆ ಸಾಕ್ಷಿಯಾಗಿವೆ. ಈ ಆಚರಣೆಗಳು ಕೇವಲ ಭಕ್ತಿ ಪ್ರದರ್ಶನದ ಮಾಧ್ಯಮವಾಗಿರದೇ ಸಮನ್ವಯ ಸೌಹಾರ್ದತೆಯ ಸಾಧನಗಳಾಗಿವೆ. ಹಿಂದೂ–ಮುಸ್ಲಿಂ ಬಾಂಧವ್ಯ ಕನ್ನಡನಾಡಿನಲ್ಲಿ ರಕ್ತಗತವಾಗಿದೆ. ಕನ್ನಡ ಸಾಹಿತ್ಯ ಇತಿಹಾಸವನ್ನು ಅವಲೋಕಿಸಿದರೆ ಅನೇಕ ಸೂಫಿ ಸಂತರಿಗೆ ಹಿಂದು ಶಿಷ್ಯರಿರುವುದು ಕಂಡುಬರುತ್ತದೆ.

ಸುಮಾರು ೫೦೦ ವರ್ಷಗಳ ಹಿಂದೆ ಕಲಬುರ್ಗಿ ಮತ್ತು ಇತರ ಜಿಲ್ಲೆಗಳಲ್ಲಿ ರಾಜ್ಯವಾಳಿದ ದೊರೆ ಸುಲ್ತಾನ ಅಹಮದ್‌ಷಾಹನಿಗೆ ಮುಸಲ್ಮಾನರು 'ವಲಿ'ಯೆಂದು ಕರೆದರು. ಲಿಂಗಾಯತರು ತಮ್ಮ ಧರ್ಮದ ಜ್ಞಾನಶಿಖರವಾಗಿದ್ದ ಪ್ರಭುದೇವನಿಗೆ ಹೋಲಿಸಿ 'ಅಲ್ಲಮಪ್ರಭು' ಎಂದು ಕರೆದರು. ಅಷ್ಟೂರೆಯಲ್ಲಿ ಇವನ ಗೋರಿಯಿದ್ದು, ಗುಮ್ಮಟದ ಬಾಗಿಲಿನ ಮೇಲೆ ಉರ್ದು ಲಿಪಿಯಲ್ಲಿ 'ದರಗಾಹೆ ಸುಲ್ತಾನುರ್ ಮಷಾಯಖ್' ಎಂದು, ದೇವನಾಗರ ಲಿಪಿಯಲ್ಲಿ 'ಅಲ್ಲಮಪ್ರಭು' ಎಂದೂ ಬರೆಯಲಾಗಿದೆ. ಈ ಪುಣ್ಯ ಪುರುಷನ ಗೋರಿಗಳು ಅನೇಕ ಕಡೆಗಳಲ್ಲಿದ್ದು, ಅವುಗಳನ್ನು 'ಚಿಲ್ಲಾ'ಗಳೆಂದು ಕರೆಯುತ್ತಾರೆ. ಈ ಚಿಲ್ಲಾಗಳಲ್ಲಿ ನಡೆಯುವ ವಾರ್ಷಿಕ ಸಮಾರಂಭಗಳಿಗೆ ಹಿಂದೂಗಳು ಜಾತ್ರೆಯೆಂದೂ, ಮುಸಲ್ಮಾನರು 'ಉರುಸ' ಎಂದೂ ಕರೆಯುತ್ತಾರೆ. ಹಿಂದೂ–ಮುಸ್ಲಿಂ ಎರಡೂ ಧರ್ಮದ ಭಕ್ತರು ಶಿಷ್ಯರು ಇವರಿಗೆ ಇರುವುದರಿಂದ ತಮ್ಮ ತಮ್ಮ ಧರ್ಮದಂತೆ ಪೂಜೆ ಸಲ್ಲಿಸುತ್ತಾರೆ. ಇದರಂತೆ ಸಾವಳಗಿ, ಕೊಡೇಖಲ್, ಶಿರಹಟ್ಟಿ ಮೊದಲಾದ ಸ್ಥಳಗಳಲ್ಲಿ ಹಿಂದೂ–ಮುಸ್ಲಿಂರು ಕೂಡಿ ನಡೆದುಕೊಳ್ಳುವ ಮಠ, ಮಸೀದಿಗಳು, ಗದ್ದುಗೆ–ಗೋರಿಗಳಿವೆ.

ವಿಜಾಪುರದ ಸೂಫಿ ಅಮೀನುದ್ದೀನರಿಗೆ 'ಚೆನ್ನಯ್ಯ' ಎಂಬ ಹಿಂದು ಶಿಷ್ಯನಿದ್ದ. ಅವರ ಗರಡಿಯಲ್ಲಿ ಪಳಗಿದ ಆತ ಹಿಂದೂ–ಮುಸ್ಲಿಂ ಎರಡೂ ಮಾರ್ಗದಲ್ಲಿ ನಡೆದು ಸಿದ್ಧ ಪುರುಷನಾದ. ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿ 'ಫಕೀರೇಶ್ವರ' ಎಂಬ ಹೆಸರಿನಿಂದ ಪ್ರಸಿದ್ಧನಾದ. ಮೋಟ್ನಳ್ಳಿ ಹುಸೇನ್‌ಸಾಬ ಮತ್ತು ಚೆನ್ನೂರಿನ ಜಲಾಲಸಾಬ ಇವರು ಕಡುಕೋಳ ಮಡಿವಾಳಪ್ಪನ ಶಿಷ್ಯರು. ಹಿಂದೂ ಸ್ಮಾರ್ತ ಕಳಸದ ಗೋವಿಂದಭಟ್ಟರಿಗೆ ಶಿಶುನಾಳದ ಮುಸ್ಲಿಂ ಶಿಷ್ಯ ಶರೀಫರಾಗಿದ್ದರು. ಗುಲಬರ್ಗಾ ಜಿಲ್ಲೆಯ ತಿಂಥಣಿಯಲ್ಲಿಯ ಮೌನೇಶ್ವರನನ್ನು ಮುಸ್ಲಿಂ ಖ್ವಾಜಾ ಅಮೀನುದ್ದೀನರ ಅವತಾರವೆಂದೇ ಪೂಜಿಸುವರು. ಕೊಡೇಕಲ್ ಬಸವಣ್ಣನನ್ನು ಮೊಹಮ್ಮದ್ ಪೈಗಂಬರರ ಅವತಾರವೆಂದೇ ಕರೆಯುತ್ತಾರೆ. ಹೀಗೆ ಹಿಂದೂ–ಮುಸ್ಲಿಂರು ತಮ್ಮ ಭಾವೈಕ್ಯತೆಯನ್ನು ಸಾಧಿಸುತಲೇ ಬಂದಿದ್ದಾರೆ.

ತಿಂಥಣಿ ಮೌನೇಶ್ವರ, ಕೊಡೇಕಲ್ ಬಸವಣ್ಣ, ಶಿರಹಟ್ಟಿ ಫಕೀರೇಶ್ವರ ಇವರ ಮಠ, ದೇವಾಲಯಗಳು, ಸಮನ್ವಯದ ಸಂಕೇತಗಳಾಗಿವೆ. ಹೊರಗೆ ಹಿಂದು ದೇವಸ್ಥಾನದಂತೆ ಕಂಡರೂ ಗರ್ಭಗುಡಿಯಲ್ಲಿ ಗೋರಿಯ ಆಕಾರದ ಗದ್ದುಗೆಗಳಿವೆ. ಹಿಂದೂ-ಮುಸ್ಲಿಂ ಎರಡೂ ಧರ್ಮದವರಿಂದ ಈ ಸ್ಥಳಗಳು ಪೂಜಿಸಲ್ಪಡುತ್ತವೆ. ಹಳ್ಳಿಗಳಲ್ಲಿ ಮುಸ್ಲಿಂ ದರ್ಗಾಗಳಿಗೆ ಹಿಂದೂಗಳು ಹೋಗಿ ತಮ್ಮ ಧರ್ಮದ ಪ್ರಕಾರ ಕಾಯಿ, ಕರ್ಪೂರದಿಂದ ಸೇವೆ, ಪೂಜೆ ಸಲ್ಲಿಸಿದರೆ, ಮುಸ್ಲಿಮರು ಹಿಂದೂ ದೇವಸ್ಥಾನಗಳಲ್ಲಿ ಸಕ್ಕರೆ ನೈವೇದ್ಯ ಮಾಡಿ ಸಾಂಬ್ರಾಣಿ ಹಾಕುತ್ತಾರೆ. ಈ ಕ್ಷೇತ್ರಗಳಲ್ಲಿ ನಡೆಯುವ ಜಾತ್ರೆ, ಉರುಸ್‌ಗಳಲ್ಲಿ ಹಿಂದೂ-ಮುಸ್ಲಿಂರು ಇಬ್ಬರೂ ಉತ್ಸಾಹದಿಂದ ಭಾಗವಹಿಸುತ್ತಾರೆ. ಮತ, ಧರ್ಮ, ಜಾತಿ, ಕುಲ, ಆಚಾರ, ಸಂಪ್ರದಾಯಗಳ ಯಾವ ಲಕ್ಷ್ಮಣ ರೇಖೆಯೂ ಇವರನ್ನು ತಡೆಯುವುದಿಲ್ಲ. ಇವರಲ್ಲಿರುವ ಮುಖ್ಯ ತುಡಿತವೆಂದರೆ ಭಕ್ತಿ, ದೇವರಲ್ಲಿ ಶರಣಾಗತಿ ಹೊಂದುವುದು. ಈ ಪರಿಸರದ ಜನರ ಉಡಿಗೆ, ತೊಡಿಗೆಗಳು, ನಡೆ, ನುಡಿ, ರೀತಿ, ನೀತಿಗಳನ್ನು ಗಮನಿಸಿದರೆ ಅವರು ಯಾವ ಧರ್ಮದವರೆಂದು ಹೇಳುವುದು ಕಷ್ಟ ಸಾಧ್ಯವಾಗುತ್ತದೆ. ಹೆಸರುಗಳಲ್ಲಿಯೂ ಭಾವೈಕ್ಯತೆಯನ್ನು ಸಾಧಿಸಿದ್ದಾರೆ. ಉದಾ: ಫಕೀರೇಶ್ವರ, ಭದ್ರುದ್ದೀನ್ (ಭದ್ರೇಶ್ವರ), ಮೌನುದ್ದೀನ್ (ಮೌನೇಶ್ವರ) ಹುಚ್ಚು ಸಾಹೇಬ (ಹುಚ್ಚಪ್ಪಾ), ದೌಲತರಾಯ, ಖಾದರಲಿಂಗ, ಇವು ಧರ್ಮ ಸಾಮರಸ್ಯದ ಸಂಕೇತಗಳಾಗಿವೆ. ಇವರ ದೇವಾಲಯಗಳು ಹಿಂದೂ-ಮುಸ್ಲಿಂರ ಸಮನ್ವಯದ ಸಂಕೇತಗಳಾಗಿವೆ. ಇವರ ಪದಗಳು ಕೋಮು ಸೌಹಾರ್ದತೆಗೆ ಪೂರಕವಾಗಿವೆ.

ಸಮಾನತೆ, ಸರ್ವಧರ್ಮ ಸಮನ್ವಯವು ಸಂತರ ಧ್ಯೇಯವಾಗಿದೆ. ಅವರು ಚಿಂತಿಸಿದ ಮಾರ್ಗ, ರಚಿಸಿದ ತತ್ತ್ವ ಸಾಹಿತ್ಯದಿಂದ ತತ್ತ್ವಪದಕಾರರನ್ನು ಅರಿಯಬೇಕು. ಮತವನ್ನು ಮೀರಿದ ಅವರ ತತ್ತ್ವಗಳು ಜನಸಾಮಾನ್ಯರ ಕಾವ್ಯವಾಗಿವೆ. 'ಖಾದರಲಿಂಗ' ಇತ್ಯಾದಿ ಹಿಂದೂ-ಮುಸ್ಲಿಂ ಎರಡು ನಾಮಪದಗಳನ್ನೊಳಗೊಂಡ ಹೆಸರುಗಳು ಕೋಮುಸೌಹಾರ್ದಕ್ಕೆ ಸಾಕ್ಷಿಯಾಗಿವೆ. ಸೂಫಿ ಸಂತರ, ಶರಣರ, ಗುರು ಶಿಷ್ಯರ ದೇವಾಲಯಗಳು, ಸಮಾಧಿಗಳು, ಹೆಸರುಗಳು, ಧರ್ಮ ಸಮನ್ವಯ ಸಾಧಿಸಿದಂತೆ ಅವರ ಅನುಭಾವ ಪದಗಳು ಹಿಂದೂ-ಮುಸ್ಲಿಂ ಸಾಮರಸ್ಯವನ್ನು ನಿರೂಪಿಸುತ್ತವೆ.

ಶರೀಫರ ತತ್ತ್ವಪದಗಳು ಮತೀಯ ವಿರೋಧಕ್ಕೆ ಸವಾಲಾಗಿ ಕೋಮು ಸೌಹಾರ್ದತೆಗೆ ಬೇಕಾಗುವ ಸಾಂಸ್ಕೃತಿಕ ತಿಳುವಳಿಕೆಯನ್ನು, ಜೀವನಾದರ್ಶವನ್ನು ನೀಡುತ್ತವೆ. ಜಾತಿ ಮತ ಭೇದವಿಲ್ಲದೆ ಕೂಡಿ ಬಾಳುವ ಅನುಭಾವ ಪಂಥದ ಸಂತ

ಶರೀಫರ ಜೀವನ, ಯಾವ ಪ್ರತಿಷ್ಠೆಗೂ ಒಳಗಾಗದೆ ಸಾಮಾಜಿಕ ಚೌಕಟ್ಟುಗಳನ್ನು ಮೀರಿ ನಿಲ್ಲುತ್ತದೆ. ಜನರ ಮನಸ್ಸನ್ನು ಅಲೌಕಿಕ ಚಿಂತನೆಯ ನೆಲೆಯಲ್ಲಿ ನಿಲ್ಲಿಸುವುದು ಅವರ ಆಶಯವಾಗಿತ್ತು. ಮೌಲ್ಯಾಧಾರಿತ ಸಮಾಜ ನಿರೂಪಕರಾಗಿ, ಜನರ ಮನಸ್ಸು ದುಷ್ಟ ಪ್ರವೃತ್ತಿಗಳಿಗೆ ಒಲಿಯದಂತೆ ಮಾಡಲು ದೈವ ಚಿಂತನೆಯ ದಾರಿಯನ್ನು ತತ್ತ್ವಪದಗಳಲ್ಲಿ ತೋರಿಸಿದರು. ಕ್ರಾಂತಿಯಿಂದ ಆದರ್ಶವಾದ, ಸಮಾಜ ನಿರ್ಮಾಣಕ್ಕಾಗಿ ಸಾಮಾಜಿಕ ಆಂದೋಲನ ಮಾಡುವಷ್ಟು, ಅವರು ಕ್ರಿಯಾತ್ಮಕವಾಗಿ ನೀತಿಬೋಧೆಗಳ ರೂಪದಲ್ಲಿ, ಹೃದಯ ಮನಸ್ಸುಗಳಲ್ಲಿಯ ಅಹಿತಕರ ವಾಸನೆಗಳನ್ನು ಮೂಲಭೂತವಾಗಿ ಬೆನ್ನಟ್ಟಿ ಬೇಟೆಯಾಡಿರುವರು. ಮನುಷ್ಯ ಹೃದಯ ನೀತಿಯನ್ನು ಹೊಂದಿ, ಸದ್ಭಾವನೆ, ಸದಾಚಾರಗಳಿಂದ ಕೂಡಿರಬೇಕಾದುದು ಶರೀಫರ ಪದಗಳ ಆಶಯವಾಗಿದೆ.

ಶರೀಫರ ಜೀವನವು ಕೋಮು ಸೌಹಾರ್ದತೆಗೆ ಮಾದರಿಯಾಗಿ, ಆದರ್ಶವಾಗಿ, ಅನನ್ಯವಾಗಿದೆ. ಮುಸ್ಲಿಂ ಮನೆತನದಲ್ಲಿ ಹುಟ್ಟಿದ ಶರೀಫರು, ಬೆಳೆಯುತ್ತ ಲಿಂಗಾಯತ ಧರ್ಮದ ಪ್ರಭಾವಕ್ಕೆ ಒಳಗಾಗಿದ್ದಾರೆ. ಅವರಿಗೆ ಧರ್ಮಧರ್ಮಗಳಲ್ಲಿ ಯಾವ ಸಾಂಕೇತಿಕ ವ್ಯತ್ಯಾಸಗಳು ಗೋಚರವಾಗದೇ, ಅವೆಲ್ಲವೂ ಪರಿಪೂರ್ಣ ಮಾನವೀಯತೆಯ ಹಾದಿಯ ಸಾಧನೆಯ ಪರಿಕರಗಳಂತೆ ತೋರಿದವು. ಈ ಮನೋಭಾವನೆಯಿಂದ ಶರೀಫರಿಗೆ ಧರ್ಮಗಳ ಬಾಹ್ಯಾಚರಣೆಯು ಗೌಣವಾಗಿ ತತ್ತ್ವದರ್ಶನವಾದುದರಿಂದಲೇ ಯಾವ ಧರ್ಮಕ್ಕೂ ಅಂಟಿಕೊಳ್ಳದೇ ಮಹಾ ಮಾನವತಾಧರ್ಮಿಯಾದರು.

ಶರೀಫರು ಅನುಭಾವದ ಪದ ಮತ್ತು ಕಾಲಜ್ಞಾನ ಪದಗಳನ್ನು ರಚಿಸುವುದರ ಮೂಲಕ ಹಿಂದೂ-ಮುಸ್ಲಿಂರಲ್ಲಿ ಸಾಮರಸ್ಯವನ್ನುಂಟುಮಾಡಿದ್ದಾರೆ. ತನ್ನ ಸುತ್ತಲಿನ ಪರಿಸರದಲ್ಲಿ ನಡೆಯುವ ಅನ್ಯಾಯ, ಅಸಮಾನತೆ, ಜಾತಿಭೇದ, ಶೀಲ ಮತ್ತು ಮಡಿ-ಮೈಲಿಗೆ ಇರುವ ಅಡ್ಡಿ ಆತಂಕಗಳನ್ನು ತಮ್ಮ ಪದಗಳಲ್ಲಿ ವಿಡಂಬಿಸಿದ್ದಾರೆ. ತಮ್ಮ ಜಾತಿಯವರು, ಅನ್ಯಧರ್ಮೀಯರು ಕಷ್ಟಕೊಟ್ಟು ಕಾಡಿಸಿ ಅವಮಾನಿಸಿದ ಪ್ರಸಂಗಗಳಿಂದ ನೊಂದು ತೀವ್ರವಾಗಿ ವಿರೋಧಿಸುತ್ತ ಜೊತೆಗೆ ಮನಮುಟ್ಟುವಂತೆ ಪದಗಳ ಮೂಲಕ ತಿಳಿಸಿ ಸೌಹಾರ್ದತೆಯನ್ನು ಬೆಳೆಸಲು ಹೆಣಗಿದ್ದಾರೆ.

ಜಾತಿಭ್ರಷ್ಟರೆಂದು ಗುರು ಶಿಷ್ಯರನ್ನು ಅವಮಾನಿಸಲೆಂದೇ ಬಿನ್ನಹಕ್ಕೆ ಆಮಂತ್ರಿಸದ ಪ್ರಸಂಗಗಳಲ್ಲಿ ತನ್ನಿಂದ ಗುರುವಿಗೆ ತೊಂದರೆಯಾಯಿತೆಂದು ಕನಲಿ ತೀವವಾಗಿ ಪತಿಕಿಯಿಸಿದಾರೆ.

ಕೋಮು ವೈಷಮ್ಯಕ್ಕೆ ಕಾರಣವಾಗುವ ಮೇಲು-ಕೀಳೆಂಬ ತಾರತಮ್ಯ, ಜಾತಿ, ಕುಲವೆಂಬ ವರ್ಗೀಕರಣವನ್ನು ಅಮೂಲಾಗ್ರವಾಗಿ ವಿಶ್ಲೇಷಿಸಿ ಅದರ ಅರಿವನ್ನು ನೀಡಿದ್ದಾರೆ. ಮನುಷ್ಯನ ಹುಟ್ಟನ್ನು ಕುರಿತು ಬುಡಬುಡಿಕ್ಯಾ ಪದದಲ್ಲಿ ವಿವರಿಸುತ್ತ ಸ್ವಾರ್ಥ ಮನಸ್ಸುಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಆಚರಣೆ ಮಾಡುವುದನ್ನು ಕಂಡು ಶರೀಫರು ಕನಲಿದ್ದಾರೆ.

"ತೊಗಲಮೊಲೆಯ ಹಾಲು ಕುಡಿದು ದೊಡ್ಡವರಾಗಿ
ಶೀಲ ಮಾಡತಿರಿ ನಾಡೆಲ್ಲ
ತೊಗಲಿನ ಆಟ ತಿಳಿಯದು ತಮ್ಮ
ತಗಲು ಮಾತು ಒಂದು ಚೂರಿಲ್ಲ
ತೊಗಲಿನೊಳಗೆ ತೊಗಲ್ಹುಟ್ಟಿತಲೈತಿ
ಕಾಮನಾಟ ಕೇಳು ಕಡೆ ಮಜಲ

ನಾ ಆದರೇನು ನೀ ಆದರೇನು
ಅರಸ ಪ್ರಧಾನಿ ಆದರೂ ತೊಗಲಾ

ಗಂಧ ವಿಭೂತಿ ತೊಗಲಿಗೆ ಧರಿಸಿ
ಜ್ಯಾತಿ ಜ್ಯಾತಿ ಬ್ಯಾರೆ ಎನಿಸಿ
ಜಪ-ತಪವೆಂದು ಸಂನ್ಯಾಸಿಯಾಗುತ
ಬೂದಿಯೆಲ್ಲ ಮೈಯಿಗೆ ಪೂಸಿ"[೧]

ಮನುಷ್ಯ ಮೂಲವನ್ನು ಶೋಧಿಸುತ್ತ ಮಡಿ, ಮೈಲಿಗೆಯಾಗುವುದು ದೇಹದ ಚರ್ಮಕ್ಕೆ ಗಂಧವನ್ನು, ವಿಭೂತಿಯನ್ನು ಚರ್ಮಕ್ಕೆ ಲೇಪಿಸಿಕೊಂಡು ಜಾತಿ, ಮತವೆಂದು ಚರ್ಮಕ್ಕೆ ಹೆಸರಿಡುತ್ತಾರೆ. ಎಲ್ಲ ಜಾತಿಯ ವ್ಯಕ್ತಿಗಳ ದೇಹದಲ್ಲಿ ಮಾಂಸಖಂಡ, ಮೂಳೆಗಳು ತುಂಬಿಕೊಂಡು ಚರ್ಮದ ಹೊದಿಕೆ ಇರುವುದರಿಂದ ಎಲ್ಲರೂ ಒಂದೇ ಎಂದು ಹೇಳುತ್ತಾರೆ.

"ಜೋಕಿ ಒಳಗ ಮೂರು ಲೋಕ ಹುಟ್ಟತು
ಆ ಕುಲ ಈ ಕುಲ ಎಲ್ಲಿತ್ತು"

ಜಾತಿ ಕುಲದ ಶ್ರೇಷ್ಠತೆಯ ಬಗ್ಗೆ ಕಚ್ಚಾಡುವ ಜನರಿಗೆ ಜಾತಿ ಕುಲಗಳು ಮೊದಲು ಎಲ್ಲಿದ್ದವು? ಹೇಗೆ ಹುಟ್ಟಿದವು? ಎಂದು ಪ್ರಶ್ನಿಸಿದ್ದಾರೆ.

ಜಗತ್ತಿನ ಸೃಷ್ಟಿಗೆ ಬ್ರಹ್ಮ ಮೂಲನಾದರೆ, ಜೀವಸೃಷ್ಟಿಗೆ ಪಂಚಭೂತಗಳು ಹಾಗೂ ಮನುಷ್ಯನ ಇಂದ್ರಿಯ ವಿಕಾರಗಳು ಕಾರಣವಾಗಿವೆ.

---

೧. ಅದೇ, ಪು. ೧೦೭

ಆದಿ ಬ್ರಹ್ಮನಿಂದಲಿ ಮುನ್ನ
ಪ್ರಕೃತಿಯು ಉತ್ಪನ್ನ
ಅಹಂಕಾರದ ಜನನ
ಅಹಂಕಾರದಿ ಹುಟ್ಟಿತು ಗಗನ
ಗಗನದಿಂದ ಪವನ ಪವನದಿಂದ ಅಗ್ನಿಯು ಆಯಿತಿನ್ನ
ಅಗ್ನಿಯಿಂದ ಜಲ ಕೇಳಿನ್ನ
ಪೃಥ್ವಿಯ ರಚನ
ಅದರೊಳು ಔಷಧಗಳಾದವಿನ್ನ
ಔಷಧದಿಂದ ಹುಟ್ಟಿತು ಅನ್ನ
ಅನ್ನದಿಂದ ವೀರ್ಯ ಉತ್ಪನ್ನ
ವೀರ್ಯದಿಂದ ಕ್ರಿಮಿ ಕೀಟಕ ಜನನ
ಈ ಪರಿಯಾಯಿತು ಚರಾಚರ.....
...ಬರಿಯ ತೇಜದಿ ಅಂಕುರ ನೇತ್ರ
ಜಲಕೆ ಜಿಹ್ವೆ ಪವಿತ್ರ
ಪೃಥ್ವಿ ಕೊಡಲು ಘ್ರಾಣ ವಿಚಿತ್ರ
ಗಗನ ಕೊಡಲಾಯಿತು ಶ್ರೋತ್ರ
ಪಾವನಾಂಶವೇ ಗಾತ್ರ’’

ಎಂದು ಹಾಡುತ್ತ ಸೃಷ್ಟಿಯ ಮೇಲೆ ಜೀವಿಯ ಉತ್ಪನ್ನದಂಥ ಗಹನ ವಿಚಾರವನ್ನು ತಿಳಿಸಿದ್ದಾರೆ. ಈ ಮೂಲಭೂತವಾದ ಅರಿವಿನ ಹಿನ್ನೆಲೆಯಲ್ಲಿ ಜಾತಿಮತಗಳ ಸೃಷ್ಟಿಯು ಹೇಗಾಯಿತು ಎಂದು ವೈಜ್ಞಾನಿಕವಾಗಿ ಪ್ರಶ್ನಿಸಿ, ಮನುಷ್ಯರೆಲ್ಲರೂ ಒಂದೇ ಎಂಬ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

ನಾಗರೀಕತೆ ಬೆಳೆದಂತೆಲ್ಲಾ ಮನುಷ್ಯ ಸುಳ್ಳು ಭ್ರಮೆಗಳ ಅಂತಸ್ತುಗಳನ್ನು ಏರಿ ನಿಂತನು. ಮನುಷ್ಯ-ಮನುಷ್ಯರಲ್ಲಿ, ದ್ವೇಷ, ವೈಷಮ್ಯಗಳು, ಮನೆಮಾಡ ತೊಡಗಿದವು. ಸಂಕುಚಿತ ಭಾವನೆ ಬೆಳೆದು ಮನುಷ್ಯ ಮನುಷ್ಯರ ನಡುವೆ ಗೋಡೆಗಳೆದ್ದವು. ವರ್ಗದ್ವೇಷ, ಜಾತಿದ್ವೇಷ, ರಾಗದ್ವೇಷ, ಭಾಷಾದ್ವೇಷ, ರಾಷ್ಟ್ರದ್ವೇಷ.. ಹೀಗೆ ನಾನಾ ದ್ವೇಷಗಳಿಂದ ಖಳನಾಯಕನಂತೆ ಮನುಷ್ಯ ವರ್ತಿಸತೊಡಗಿದನು.

ಮೂಲತಃ ಮನುಷ್ಯ ಒಬ್ಬನೇ ಅಲ್ಲವೆ? ಜೀವೋತ್ಪತ್ತಿಯ ವಿಜ್ಞಾನದ ಅಮೀಬದಿಂದ ಪರಾವರ್ತಿತನಾದ ಮನುಷ್ಯನ ಜಾತಿ ಒಂದೇ ಅಲ್ಲವೆ? ಸೃಷ್ಟಿ, ಸ್ಥಿತಿ, ಲಯಗಳಿಂದ ಮಾನವ ಒಬ್ಬನೇ ಅಂದ ಮೇಲೆ ಈ ಅನಿಷ್ಟ ನಡವಳಿಕೆಗಳು

ಅರ್ಥಹೀನವಾಗುವವು. ಎಲ್ಲರ ಹುಟ್ಟಿನ ಮೂಲ ಒಂದೇ ಆಗಿರುವಾಗ ಸಲ್ಲದ ಭೇದ ಭಾವಗಳಿಗೆ ಎಡೆ ಮಾಡಿಕೊಡಬಾರದು. ಹುಟ್ಟಿದ ಸತ್ಯವನ್ನು ನೆನಪು ಮಾಡಿಕೊಂಡು ಮನೋನಿಗ್ರಹದಿಂದ ಉತ್ತಮ ರೀತಿಯ ಬಾಳನ್ನು ನಡೆಸುವುದು ಸೃಷ್ಟಿಯ, ಮಾನವ ಹುಟ್ಟಿನ ಉದ್ದೇಶವಾಗಿದೆ.

ಶರೀಫರು ಜಾತೀಯತೆಯನ್ನು ನಿರಾಕರಿಸುವ ಕೆಲ ಪದಗಳನ್ನು ಬರೆದರೂ ಅವರ ಎಲ್ಲ ಪದಗಳು ಕೋಮು ಸೌಹಾರ್ದತೆಯ ಸಂದೇಶವನ್ನೇ ಹೊತ್ತಿವೆ. ಅನ್ಯ ಧರ್ಮಾಚರಣೆಯಲ್ಲಿ ತನ್ಮಯತೆಯಿಂದ ಭಾಗಿಯಾಗುತ್ತಿದ್ದ ಶರೀಫರ ಜಾತಿಮತೀಯ ಎಲ್ಲೆಯನ್ನು ಮೀರಿ ಧರ್ಮತತ್ತ್ವಗಳ ಬಗೆಗೆ ಚಿಂತನೆ ಮಾಡಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಆಚರಿಸಲ್ಪಡುವ ಮಾನವ ಕಲ್ಯಾಣದ ತತ್ತ್ವಗಳನ್ನು ಮೆಚ್ಚುತ್ತ ಅವುಗಳನ್ನು ತಾವು ಅನುಸರಿಸಿದ್ದಾರೆ. ಧರ್ಮಾಚರಣೆಯು ಸ್ವಾರ್ಥಕ್ಕಾಗಿ, ಡಂಭಾಚಾರಕ್ಕಾಗಿ, ತಾರತಮ್ಯಕ್ಕಾಗಿ, ಮಡಿ, ಮೈಲಿಗೆ, ಜಾತಿ, ವಿಜಾತಿಗಾಗಿ ದುಷ್ಟರ ಕೈಯಲ್ಲಿ ಸಿಕ್ಕು ಬಲಿಯಾದಾಗ, ಆತ್ಮೀಯ ರೀತಿಯಿಂದ ಶುದ್ಧೀಕರಿಸುವ ಕಾರ್ಯವನ್ನು ಮಾಡಿದ್ದಾರೆ.

ಪರಧರ್ಮ ತತ್ತ್ವಾಭಿಮಾನದ ಜೊತೆಯಲ್ಲಿ ಸ್ವಧರ್ಮದಲ್ಲಿಯ ಲೋಪದೋಷಗಳನ್ನು ಎತ್ತಿ ಹೇಳಿ ಜಾತಿಮತ ಧರ್ಮಗಳೆಲ್ಲವು ಸಮಾನತೆ, ಸಮನ್ವತೆಯನ್ನು ಸಾಧಿಸಬೇಕೆಂದು ಹಾಡಿದ್ದಾರೆ.

> "ಲಿಂಗದೊಳಗೆ ಮನವಿಡದಿನ್ನಷ್ಟಾವರಣದ
> ಇಂಗಿತ ತಿಳಿದರೇನು ಫಲ?
> ಜಂಗಮ ಜಂಗು ಕಟ್ಟಿ ಹಿಂಗದೆ ತಿರುಗಲು
> ಸಂಗನ ಶರಣರಿಗೇನು ಫಲ...?"[೩]

ಧರ್ಮದ ಹೆಸರಲ್ಲಿ ಅಜ್ಞಾನವ ಬೆಳೆಸಿಕೊಂಡು, ಶ್ರೇಷ್ಠ ಜಾತಿಯವರೆಂದು ತಿರುಗುವರು. ಸ್ವಾರ್ಥಿಗಳು, ಅಷ್ಟಾವರಣ ತತ್ತ್ವಗಳನ್ನು ಅರಿಯರು. ಶ್ರದ್ಧೆಯ ಮನಸ್ಸಿಲ್ಲದ್ದರಿಂದ ಅವರ ಆಶಯ ಮತ್ತು ಉದ್ದೇಶದಿಂದ ಫಲ ಸಿಗದೆ ಮಾನವ ಕಲ್ಯಾಣವನ್ನು ಸಾಧಿಸಲಾಗುವುದಿಲ್ಲ. ಶರೀಫರಿಗೆ ಲಿಂಗಾಯತ ಧರ್ಮದ ಬಗೆಗಿರುವ ಆಸಕ್ತಿಯೊಂದಿಗೆ 'ಜಂಗಮ' ಪದದ ಅವಹೇಳನದಿಂದ ನೊಂದಿದ್ದಾರೆ. ಪರಧರ್ಮ ಸಹಿಷ್ಣುತೆಯನ್ನು ಈ ಪದದಲ್ಲಿ ಕಾಣುತ್ತೇವೆ. ಇಸ್ಲಾಂ ಮತದ ಲೋಪದೋಷಗಳನ್ನು, ಪಂಜಾತಾಭೂತಗಳನ್ನಿಟ್ಟು ಮಾಡುವ ಮೂರ್ತಿಪೂಜೆಯನ್ನು ಖಂಡಿಸಿದ್ದಾರೆ.

---

೩. ಅದೇ, ಪು. ೮೫.

ಲಿಂಗಾಯತ ಧರ್ಮದ ಅಲ್ಲಮಪ್ರಭುವನ್ನು ಇಸ್ಲಾಂ ಧರ್ಮದ ಅಲ್ಲಾನಿಗೆ ಹೋಲಿಸಿದ್ದಾರೆ. "ಅಲ್ಲಮ ಪ್ರಭುವನು ಅರಿಯದ ತುರುಕರು ಪಂಚಾಶಾಬೂತ ಮಾಡುವುದು ವ್ಯರ್ಥ" ಎಂದಿದ್ದಾರೆ. ಶರೀಫರಿಗೆ 'ಅಲ್ಲಾ'–'ಅಲ್ಲಮ' ಬೇರೆ ಯಾಗಿರದೇ ಒಂದೇ ಆಗಿದ್ದರು. ಶುದ್ಧ ಮನಸ್ಸಿನ ಸೇವೆಯೇ ಮುಖ್ಯ ಹೊರತು ಧರ್ಮದ ದೇವರಲ್ಲ. ಇದು ಪರಧರ್ಮ ಸಹಿಷ್ಣುತೆ ಮತ್ತು ಕೋಮು ಸೌಹಾರ್ದತೆಯನ್ನು ತೋರಿಸುತ್ತದೆ. ತಮ್ಮ ಮತದ 'ಖಾದರಲಿಂಗ'ನ ದರ್ಗಾಕ್ಕೆ ಹೋಗಿ ಸೇವೆ ಸಲ್ಲಿಸುವಂತೆ, ಲಿಂಗಾಯತ, ವೈದಿಕ ಧರ್ಮದೇವತೆಗಳ ಬಗ್ಗೆಯೂ ಹಾಡಿದ್ದಾರೆ. ಖಾದರಲಿಂಗನಲ್ಲಿ ಇರುವಂತಹ ಭಕ್ತಿಯು ಅನ್ಯಧರ್ಮದ ದೇವರುಗಳಲ್ಲಿತ್ತು. ವೈದಿಕ ಗುರು ಗೋವಿಂದಭಟ್ಟರ ಸಂಪ್ರದಾಯದಂತೆ ಜನಿವಾರವನ್ನು ಹಾಕಿಸಿಕೊಳ್ಳುತ್ತಲೇ ಲಿಂಗಾಯತ ಧರ್ಮದ ಜಂಗಮರಾಗಿ ಊರೆಲ್ಲಾ ತಿರುಗುತ್ತಾರೆ.

> "ಹಾಕಿದ ಜನಿವಾರವಾ ಸದ್ಗುರುನಾಥಾ
> ಹಾಕಿದ ಜನಿವಾರವಾ..."[೯]

ಎಂದು ಭವಬಂಧನವನ್ನು ಕಳೆಯುವ ಜನಿವಾರದ ಮಹಿಮೆಯನ್ನು ಕೊಂಡಾಡುತ್ತಾರೆ.

> "ಮೈ ಜಂಗಮ ಹೋಕರ ಗಲ್ಲಿ ಗಲ್ಲಿ ಫಿರಿಯಾ
> ಅಂಗಬಹುತವು ಲಿಂಗ ಪಾಂವ್ ಮೆಂ
> ಕೋವಾಣ ಭಕ್ತಾ ಬೋಲಿಯಾ..."[೧೦]

ಹೀಗೆ ಶರೀಫರು ಅಲ್ಲಮನನ್ನು ಕಾಣುತ್ತಲೇ ಅಲ್ಲಾ ಎನ್ನುತ್ತಾರೆ. ಹಾಗೆಯೇ ಜನಿವಾರವನ್ನು ಹಾಕಿಕೊಂಡು ಜಂಗಮರು ಆಗುತ್ತಾರೆ. ಇದು ಶರೀಫರ ವಿಶಿಷ್ಟವಾದ ಧರ್ಮ ಸಮನ್ವಯದ ಬೆಸುಗೆಯಾಗಿದೆ. ಕೆಲವೊಮ್ಮೆ ಶರೀಫರ ಸೌಹಾರ್ದತೆಯು ಎತ್ತರಕ್ಕೇರಿ ಪಾರಮಾರ್ಥಿಕದಲ್ಲಿ ಒಂದಾಗುವುದನ್ನು ಕಾಣುತ್ತೇವೆ. ತನ್ನ ಪಾಪ ಪುಣ್ಯಗಳು, ಧರ್ಮ, ಕರ್ಮಗಳು, ಜಾತಿ–ಮತ–ಪಂಥಗಳು ಲಯವಾದಾಗಲೇ ಧರ್ಮಾತೀತವಾದ ಪರಮ ಸುಖ ಲಭಿಸುವುದು. ನಾನು, ನನ್ನ ಜಾತಿ, ನನ್ನ ಕುಲ, ನನ್ನ ಧರ್ಮ ಎಂಬ ಅಭಿಮಾನಗಳನ್ನು ಬಿಟ್ಟು ತನ್ನನ್ನು ತಾನು ಮರೆತು ಬಿಡುವುದು ಸಮನ್ವಯದ ಸಂಸ್ಕೃತಿ ಹಾಗೂ ಜೊತೆಗೆ ಪರಮಾರ್ಥ ಸಾಧನೆಗೆ ಪ್ರೇರಣೆ ದೊರೆತಂತಾಗುತ್ತದೆ.

"ನಾ ಬ್ರಹ್ಮ ನಾ ವಿಷ್ಣು ನಾ ರುದ್ರನೆಂಬಂತೆ
ನಾನಾದ ಭಾವ ಅಲಿಸುವದಿನ್ನೆಂದಿಗೆ?
ನಾ ಧರ್ಮ ನಾ ಕರ್ಮ ನಾ ಪಾಪ
ನಾ ರೂಪ ಅಳಿಸುವದಿನ್ನೆಂದಿಗೆ..."[೬]

ಎಂದು ತನ್ನ ಜಾತಿ, ಮತ, ಧರ್ಮದ ಅಹಂಕಾರವನ್ನು ಅಳಿಸಬೇಕೆಂದು ಶರೀಫರು ಹೇಳುತ್ತಾರೆ.

ಶರೀಫರು ಹಿಂದೂ-ಮುಸ್ಲಿಂ ಸಂಸ್ಕೃತಿಯ ಸಂಗಮವುಳ್ಳ ಅನೇಕ ಪದಗಳನ್ನು ಹಾಡಿದ್ದಾರೆ. ಕರ್ನಾಟಕದಲ್ಲಿ ರಿವಾಯತ್ ಪದಗಳನ್ನು ಮೊಹರಮ್ ಹಬ್ಬದ ಆಚರಣೆಯಲ್ಲಿ ಹಾಡಿ ಕುಣಿಯುತ್ತಾರೆ. ಮತ-ಬೇಧವಿಲ್ಲದೆ ಒಟ್ಟು ಆಚರಣೆಯಾಗಿ ಈ ಹಬ್ಬ ನಡೆಯುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಹಿಂದೂ-ಮುಸ್ಲಿಂ ಭಾವೈಕ್ಯದ ಪ್ರತೀಕವಾಗಿ, ಜಾನಪದ ಹಬ್ಬವಾಗಿ ಆಚರಣೆಗೊಳ್ಳುವ ಈ ಹಬ್ಬದ ಆಚರಣೆಯಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲದೆ, ಸರ್ವಧರ್ಮೀಯರು ಪಾಲ್ಗೊಳ್ಳುತ್ತಾರೆ. ರಿವಾಯತ್ ವಿಷಯದಲ್ಲಿಯ ಬಹು ಮುಖ್ಯ ಅಂಶವೆಂದರೆ, ಮತೀಯ ಸೌಹಾರ್ದತೆ, ಮತೀಯ ಎಲ್ಲೆಯನ್ನು ಮೀರಿದ ಸಮರಸ ಭಾವ ಸಮುದಾಯದ ಸೃಜನಕ್ರಿಯೆಯಾಗಿ ರೂಪಿತಗೊಂಡಿದೆ.

ಕುಲಧರ್ಮಕ್ಕಿಂತ ತತ್ತ್ವಾಭಿಮಾನಿಯಾದ ಶರೀಫರು ಅನೇಕ ಹಿಂದೂ ಪುರಾಣದ ಸಂದರ್ಭಗಳನ್ನು ರಿವಾಯತ್ ಹಾಡುಗಳಲ್ಲಿ ಸಮೀಕರಣಗೊಳಿಸಿದ್ದಾರೆ. ಎಲ್ಲ ಧರ್ಮಗಳು ಶಿಷ್ಟ ರಕ್ಷಣೆ ದುಷ್ಟ ಸಂಹಾರವನ್ನು ಮೂಲ ತತ್ತ್ವವಾಗಿಸಿವೆ ಎಂದು ಪುರಾಣದ ಘಟನೆಗಳನ್ನು ಕರ್ಬಾಲಾ ಕದನದೊಂದಿಗೆ ತಳಕು ಹಾಕಿದ್ದಾರೆ.

"ಅಂಬಾರ್ದಾರಾವಿಗೆ ಶಾಂಭವಿ
ಶಂಭು ನಿಶುಂಭರ ಸಂಹಾರ ಮಾಡಿದ
ತುಂಬಿದ ಶಾರ ಮದೀನದೊಳಗ
ಕಾತೂನ ರೂಢಿಯೊಳು ಬೆಳೆದಳು
ಪ್ರೀತಿಯಿಂದ ಭೂತಳಕೆ ಇಳಿದು
ಜಗನ್ಮಾತೆ ಮೊರಹಮ್ ಹಬ್ಬದೊಳಗೆ
ಅಸುರಾಧಿಪತಿಗಳ ಕೊಂದಳು
ದಸರೆ ವಿಸುರದಿ ಹೆಸರು ಪಡೆದು ಬಹು
ಕುಶಲದಿ ಭೂವಲಯದೊಳಗೆ ಮೆರೆದು

೬ ಅದೇ, ಪು. ೧೭೭

ಧಾಮಶಪುರದ ಯಜೇದನ
ಕ್ರಮದಿ ಕಡಿದು ಕಾಲೊಳಗೆ ತುಳಿದು ಆ
ಹಿಮಾಚಲ ಪರ್ವತ ಸೇರಿಕೊಂಡು
ಆಕಾರ ಬೆಳಸಿ ಆನಂದದಿ
ಸಾಕಾಗದೆ ಶಿಶುನಾಳಧೀಶನೊಳು
ಬೇಕೆಂದೆನುತಲಿ ಲೋಕಮಾತೆ"[೭]

ಮಹಾಭಾರತದ ಕರ್ಣಾರ್ಜುನರ ಯುದ್ಧದ ಸನ್ನಿವೇಶವನ್ನು ಕರ್ಬಲಾ ಯುದ್ಧಕ್ಕೆ ಹೋಲಿಸಿದ್ದಾರೆ.

"ವಸುಧಿಯೊಳಗ ಹೊಸದಾದ ರಿವಾಯತ್
ಕರ್ಣಪರ್ವ ಐದುರದಿ
ರಸಿಕರೆಲ್ಲರು ಕರ್ಬಲದಾಟಕ
ದಶದಿನ ಹಾಡಿ ಸಂತೋಷದಿ"[೮]

ಎಂದು ಹಾಡಿದ್ದಾರೆ. ಶರೀಫರು ಧರ್ಮದಲ್ಲಿನ ಉದಾತ್ತ ತತ್ತ್ವಗಳನ್ನು ಅನುಸಂಧಾನ ಮಾಡಿಕೊಂಡರು. ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯಲ್ಲಿ ಸಮನ್ವಯ ಸಿದ್ಧಾಂತವನ್ನು ಅನುಸರಿಸಿದರು.

ಶರೀಫರ ತತ್ತ್ವಪದಗಳಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಯನ್ನು, ಧರ್ಮ ಸಮನ್ವಯ ಭಾವನೆ ವ್ಯಕ್ತಗೊಂಡಿರುವುದನ್ನು ಕಾಣುವೆವು. ಮುಸ್ಲಿಂ ಮತಧರ್ಮಕ್ಕೆ ಸೇರಿದವರಾದರೂ ತಮ್ಮ ತತ್ತ್ವಪದಗಳಲ್ಲಿ ಜಾತಿ-ಮತಗಳ ಗೋಡೆಗಳನ್ನು ಕೆಡವಿ ಹಾಕಿ ಸಮಾನತೆಯನ್ನು ಸೋದರಭಾವನೆಯನ್ನು ಸಾರಿದ್ದಾರೆ. ಧರ್ಮ ಸಮನ್ವಯ ಭಾವನೆಯನ್ನು ಜನಸಾಮಾನ್ಯರಲ್ಲಿ ನೆಲೆಗೊಳಿಸಲು ಶರೀಫರ ತತ್ತ್ವಗಳು ಒತ್ತುಕೊಟ್ಟಿವೆ.

ವ್ಯಕ್ತಿ ಮತ್ತು ಸಮಾಜವನ್ನು ಕಾಪಾಡಿ, ಘನತೆ ಗಾಂಭೀರ್ಯಗಳನ್ನೀಯುವ ಶಕ್ತಿಯೇ ಧರ್ಮವಾಗಿದೆ. ಈ ಶಕ್ತಿಗೆ ಪೂರಕವಾಗುವ ತತ್ತ್ವಗಳನ್ನು ಮಾತ್ರ ಶರೀಫರು ಆಯಾ ಧರ್ಮಗಳಿಂದ ಆರಿಸಿಕೊಂಡರು. ಸದ್ಧರ್ಮಿಗಳಾದ ಶರೀಫರು ಯಾವ ಮತ ಧರ್ಮದ ಮೇಲೆ ಹೆಚ್ಚು ಆಸ್ಥೆಯನ್ನು ಹೊಂದದೆ ಆತ್ಮಾಭ್ಯುದಯಕ್ಕೆ ಯಾವ ಧರ್ಮದ ದಾರಿ ಸುಗಮವೆನಿಸಿದೆಯೋ ಅದನ್ನು ಆರಿಸಿಕೊಂಡಿದ್ದಾರೆ. ಧರ್ಮಾತೀತವಾದ ಮಾನವ ಧರ್ಮವನ್ನು ಎತ್ತಿ ಹಿಡಿದಿದ್ದಾರೆ.

---

೭. ಅದೇ, ಪು. ೩೬೧.
೮. ಅದೇ, ಪು. ೩೬೩.

ಶರೀಫರ ಪದಗಳಲ್ಲಿ ಜಾತ್ಯತೀತ, ಧರ್ಮಾತೀತ ಸಮಾಜ ರಚನೆಯ ಸಂದೇಶವಿದೆ. ಅನುಭಾವ ಪಂಥದ ಸಂತರ ಜೀವನವು ಯಾವ ಪ್ರತಿಷ್ಠೆಗೂ ಒಳಗಾಗದೇ ಎಲ್ಲ ಸಾಮಾಜಿಕ ಚೌಕಟ್ಟುಗಳನ್ನು ಮೀರಿ ನಿಲ್ಲುತ್ತವೆ.

ಎಲ್ಲ ಧರ್ಮಗಳ ಬುನಾದಿಯಾದ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ತಮ್ಮ ಜೀವನದಲ್ಲಿ ಸಮನ್ವಯವನ್ನು ಮಾಡಿ ತೋರಿಸಿದವರು ಶರೀಫರು. ಯಾವ ಮತಧರ್ಮವನ್ನು ಟೀಕಿಸದೆ ವ್ಯಕ್ತಿ, ಸಂಸ್ಕಾರ ಹಾಗೂ ಮನೋಧರ್ಮವನ್ನು ಅವಲಂಬಿಸಿ ಪ್ರಗತಿ ಪಥದಲ್ಲಿ, ಪ್ರತಿಯೊಬ್ಬ ವ್ಯಕ್ತಿಯು ಸಮಾನಧರ್ಮದವನು ಎಂಬುದನ್ನು ಒಪ್ಪಿಕೊಳ್ಳುವುದು ಔದಾರ್ಯ ಎಂದು ಹೇಳಿದರು. ಇಂಥ ಸಮಾನಧರ್ಮದ ಮಥನಕ್ಕೆ ತಮ್ಮ ತತ್ತ್ವವನ್ನು ನಿವೇದಿಸಿಕೊಂಡು ಸತ್ಯಾನ್ವೇಷಣೆಯನ್ನು ಮಾಡಿದರು.

ಪ್ರಸ್ತುತ ಮಾನವನು ಆತ್ಮವಿಕಾಸದ ಅರಿವನ್ನು ಕಳೆದುಕೊಂಡು ಆತ್ಮವಿನಾಶದ ನರಕದತ್ತ ಧಾವಿಸುತ್ತಿದ್ದಾನೆ. ಜೀವನವನ್ನು ಶಾಂತಿಯೆಡೆಗೆ ನಡೆಸಬಲ್ಲ ಅಧ್ಯಾತ್ಮದ ಬೆಳಕು ವಾಸ್ತವ ಜಗತ್ತಿನ ಜಂಜಾಟದಲ್ಲಿ ಮುಳುಗಿದೆ. ಗತಿಹೀನವಾದ ಆಧುನಿಕ ಮಾನವನನ್ನು ಉದಾತ್ತ ಮಾನವನನ್ನಾಗಿ ಮಾರ್ಪಡಿಸುವ ದಿವ್ಯ ಔಷಧಿಯೆಂದರೆ ಅಧ್ಯಾತ್ಮದ ಅಮರ ಸಂದೇಶ ಎಂಬುದನ್ನು ಪ್ರತಿಪಾದಿಸಿದರು.

ಜೀವ ದೇವರ ಸಾಮರಸ್ಯದ ರಹಸ್ಯವನ್ನರಿತ ಶರೀಫರು ತಮ್ಮ ಅನುಪಮವಾದ ಅನುಭಾವದ ಅಧ್ಯಾತ್ಮಿಕ ಸಂಪತ್ತನ್ನು ಅಖಂಡ ಮಾನವ ಕೋಟಿಯ ಕಲ್ಯಾಣಕ್ಕೆಂದು ತತ್ತ್ವಪದ ರೂಪದಲ್ಲಿ ನೀಡಿದ್ದಾರೆ. ಅವರು ತೋರಿಸಿದ ತತ್ತ್ವದರ್ಶನ, ಸದ್ಗುಣ ಪ್ರಚೋದಿಸುವ ಸನ್ಮಾರ್ಗ, ಆತ್ಮೋನ್ನತಿಗೆ ಸುಲಭ ಸಾಧನವಾದ ದಿವ್ಯ ಸಂದೇಶ. ಇವು ಎಂದಿಗಿಂತಲೂ ಹೆಚ್ಚಾಗಿ ಇಂದಿನ ಪ್ರಸ್ತುತ ಜನಾಂಗಕ್ಕೆ ಅಗತ್ಯವಾಗಿ ಬೇಕಾಗಿದೆ.

ಶರೀಫರ ತತ್ತ್ವಪದಗಳು ಮತೀಯ ವಿರೋಧಕ್ಕೆ ಸವಾಲಾಗಿ ಕೋಮು ಸೌಹಾರ್ದತೆಗೆ ಬೇಕಾದ ಸಾಂಸ್ಕೃತಿಕ ತಿಳುವಳಿಕೆಯನ್ನು ಕೊಡುತ್ತವೆ. ಕೋಮು ನಿವಾರಣೆಗೆ ಶರೀಫರು ಅವರ ಜೀವನದಲ್ಲಿ ಮಾಡಿದ ಬೌದ್ಧಿಕ ಪ್ರಯತ್ನವನ್ನು ಅವರ ತತ್ತ್ವಪದಗಳಲ್ಲಿ ಕಾಣಬಹುದಾಗಿದೆ. ಜಾತಿಮತ ಧರ್ಮಭೇದವಿಲ್ಲದೇ ಕೂಡಿ ಬಾಳುವುದು ಮಾನವ ಜೀವನದ ಪರಮಸಾಧನೆಯೆಂದು ಪ್ರತಿಯೊಂದು ಪದಗಳು ವೈಚಾರಿಕ ಮತ್ತು ವೈಜ್ಞಾನಿಕ ಹಿನ್ನೆಲೆಯಲ್ಲಿ ಹೇಳುತ್ತವೆ. ಪರಿಪೂರ್ಣ ಜೀವನದ ಧ್ಯೇಯಾದರ್ಶದ ಉದಾತ್ತ ಆಶಾವಾದವನ್ನು ನಿರ್ಮಿಸಿ, ಸಂಕುಚಿತತೆ, ಶೋಷಣೆಯ ಪ್ರವೃತ್ತಿಯನ್ನು ತೊಡೆದು ಹಾಕುವ ಚಿಕಿತ್ಸಕ ಮನೋಧರ್ಮವನ್ನು ನಿರ್ಮಿಸಿವೆ.

ದೇಶದ, ಜಗತ್ತಿನ ಎಲ್ಲ ಕಲಹದ, ಶೋಷಣೆಯ ಮತ್ತು ರಕ್ತಪಾತದ ಮೂಲಬೀಜವು ಮಾನವನ ಅಂತರಂಗದಲ್ಲಿನ ಸಂಕುಚಿತತನ ಎಂದರೆ ತಪ್ಪಾಗಲಾರದು. ಇದರ ನಿವಾರಣೆಗೆ ಕೋಮುಸೌಹಾರ್ದತೆ ಪ್ರತಿಯೊಬ್ಬ ವ್ಯಕ್ತಿಯ ಜೀವಮಿಡಿತವಾಗಬೇಕು. ಹಾಗಾದಾಗ ಮಾತ್ರ ಸಮಾಜ ಸುಸ್ಥಿತಿಯಲ್ಲಿರುತ್ತದೆ; ಮಾನವ ಪ್ರಗತಿಯತ್ತ ದಾಪುಗಾಲು ಹಾಕಲು ಸಾಧ್ಯ. ಕೋಮುಸೌಹಾರ್ದತೆಯ ಶರೀಫರ ಪದಗಳು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಮತ್ತು ತಾತ್ತ್ವಿಕನೆಲೆಗಟ್ಟಿನ ಪ್ರತೀಕವೆನ್ನಬಹುದು. ಮತ್ತು ಅವು ಶರೀಫರ ಜೀವನದ ಅತ್ಯಂತ ಮಹತ್ವದ ಆಶಯಗಳಾಗಿ ನಿರೂಪಿತವಾಗಿವೆ.

ಸಮಾರೋಪ

೧೮, ೧೯ನೇ ಶತಮಾನದ ತತ್ತ್ವಪದಕಾರರು ವಚನಕಾರರ ಮತ್ತು ಹರಿದಾಸರ ನಂತರ ಬಂದವರು. ಜೀವನದ ಉನ್ನತಿಗಾಗಿ ಮತ್ತು ಲೋಕಹಿತಕ್ಕಾಗಿ ಸಾಮಾನ್ಯರಿಗೆ ನಿಲುಕುವ ದೇಶಿ ನೆಲೆಗಟ್ಟಿನ ಮೇಲೆ ಮೌಲ್ಯಾಧಾರಿತ ತತ್ತ್ವಪದ ಸಾಹಿತ್ಯವನ್ನು ರಚಿಸಿದರು. ಭಕ್ತಿಪಂಥದ ದ್ವಂದ್ವ, ವೈರುಧ್ಯಗಳನ್ನು ಮೀರಿ ತತ್ತ್ವಪದ ಸಾಹಿತ್ಯವು ಸಮಷ್ಠಿ ಕಲ್ಯಾಣದ ಮಾಧ್ಯಮವಾಗಿರುವುದನ್ನು ಕಾಣುತ್ತೇವೆ.

ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ವಿಪ್ಲವದ ಸಂದರ್ಭದಲ್ಲಿ ಜೀವನಕ್ಕೆ ನೆಲ ಇರದೇ ಸಾಮಾನ್ಯ ಜನರ ಬದುಕು ನಿರಸವಾಗಿ, ಧರ್ಮ, ತತ್ತ್ವ, ವ್ಯಕ್ತಿ ಮತ್ತು ಸಮಾಜ ಅರ್ಥ ಕಳೆದುಕೊಳ್ಳುತ್ತಿದ್ದಂತಹ ಪರಿಸ್ಥಿತಿಯಲ್ಲಿ ತತ್ತ್ವಪದಕಾರರು ತಮ್ಮ ಆತ್ಮೀಯ ಮಾತುಗಳಿಂದ ಮತ್ತು ನೇರವಾದ ವಿಡಂಬನೆಯ ಪದಗಳಿಂದ ಸಾಮಾನ್ಯರಲ್ಲಿ ಸ್ವತಂತ್ರ ವಿಚಾರ ಶಕ್ತಿಯನ್ನು ಉದ್ದೀಪಿಸಿ ಆತ್ಮಾವಲೋಕನ ಮ್ಹಾಡಿಕೊಳ್ಳುವಂಥ ವ್ಯಕ್ತಿತ್ವವನ್ನು ರೂಪಿಸಿದರು.

ತತ್ತ್ವಪದಕಾರರಲ್ಲಿ ಭಿನ್ನವೆನಿಸುವ ಶರೀಫರ ತತ್ತ್ವಪದಗಳು ವ್ಯಕ್ತಿ ಚಿಂತನದ ಅಭಿಪ್ರಾಯಗಳಾಗಿರದೇ ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳ ಸಂಗ್ರಹದ ಸಮೀಕ್ಷೆಯಾಗಿದೆ. ಶರೀಫರ ತತ್ತ್ವಪದಗಳನ್ನು ದೇಶಿ ಮತ್ತು ಪ್ರಾದೇಶಿಕ ನೆಲೆಯ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ.

ಸ್ಮಾರ್ತಗೋವಿಂದ ಭಟ್ಟರ ಶಿಷ್ಯ ಮತ್ತು ಶಿಶುನಾಳಧೀಶ ಬಸವೇಶನ ಭಕ್ತರಾಗಿ, ಮುಸ್ಲಿಂ, ಬ್ರಾಹ್ಮಣ ಮತ್ತು ಲಿಂಗಾಯತ ಧರ್ಮಗಳ ಬೆಸುಗೆಯನ್ನು ಹೊಂದಿರುವ ಶರೀಫರ ತತ್ತ್ವಪದಗಳನ್ನು ಆಯಾ ಧರ್ಮಗಳ ಸಂಸ್ಕೃತಿಯ ನೆಲೆಯಲ್ಲಿ ಅಭ್ಯಸಿಸಲು ಪ್ರಯತ್ನಿಸಲಾಗಿದೆ. ಸಂಸ್ಕೃತಿಯು ಸಾಮಾಜಿಕ, ಸಾಹಿತ್ಯಕ, ತಾತ್ವಿಕ, ಪಾರಮರ್ಥಿಕ ಮೊದಲಾದ ಕ್ಷೇತ್ರಗಳನ್ನು ಒಳಗೊಳ್ಳುವುದರಿಂದ ಈ ಅಂಶಗಳ ಪ್ರಾಯೋಗಿಕ ನೆಲೆಯನ್ನು ಗುರುತಿಸಲಾಗಿದೆ. ಪ್ರಾಯೋಗಿಕ ನೆಲೆಗಾಗಿ ಶರೀಫರ ದೃಷ್ಟಿಯಲ್ಲಿ ಗ್ರಾಮೀಣ ಸಾಮಾಜಿಕ ಜೀವನವನ್ನು, ಸಮಕಾಲೀನ ರಾಜಕೀಯ ಪ್ರಜ್ಞೆಯನ್ನು ವಿವೇಚಿಸಲಾಗಿದೆ. ಅಲ್ಲಿಯ ಸಾಂಸ್ಕೃತಿಕ, ಧಾರ್ಮಿಕ ಆಚರಣಾ ವಿಶೇಷಗಳನ್ನು

ಗುರುತಿಸುತ್ತ ಅವುಗಳ ಬಗ್ಗೆ ಶರೀಫರ ಸಾಮಾಜಿಕ ವಿಡಂಬನೆಯನ್ನು ಮತ್ತು ವಿಡಂಬನಾ ತಂತ್ರವನ್ನು ವಿಶ್ಲೇಷಿಸಲಾಗಿದೆ. ಗ್ರಾಮ ಪರಿಸರದಲ್ಲಿ ನಡೆಯುವ ಹಬ್ಬ ಹರಿದಿನ, ಭಕ್ತಿ, ಸಂಪ್ರದಾಯ, ಆಚಾರ, ವಿಚಾರ, ಸಂತೆ, ಜಾತ್ರೆ, ಸುಗ್ಗಿ, ಬಯಲಾಟ, ಸಣ್ಣಾಟ, ದೊಡ್ಡಾಟ, ಹೆಜ್ಜೆಮೇಳ, ಉರುಸು, ಪ್ರವಚನ ಮುಂತಾದ ಸಂದರ್ಭಗಳಲ್ಲಿ ಶರೀಫರು ಭಾಗಿಯಾಗುತ್ತಿದ್ದರು. ಅವುಗಳ ರೀತಿ–ನೀತಿ, ಪದ್ಧತಿಗಳನ್ನು, ಅಂಕು–ಡೊಂಕುಗಳನ್ನು, ಮಾನ–ಸನ್ಮಾನಗಳನ್ನು, ಸೂಕ್ಷ್ಮ–ಸಂವೇದನೆಗಳನ್ನು ಗುರುತಿಸಿ, ತಮ್ಮ ಪದಗಳ ಮೂಲಕ ಸಾಂಸ್ಕೃತಿಕ ಚಿತ್ರಣವನ್ನು ನೀಡಿದ್ದಾರೆ.

ತತ್ತ್ವಗಳ ವಸ್ತು ಅಧ್ಯಾತ್ಮವೇ ಆದರೂ ಮೌಢ್ಯಗಳ ವಿರೋಧ, ಡಂಭಾಚಾರಗಳ ಖಂಡನೆ, ಸಮಾಜೋದ್ಧಾರದ ಕಳಕಳಿ, ಸಾಮಾಜಿಕ ಪ್ರಜ್ಞೆ ಮುಂತಾದ ವಿಷಯಗಳನ್ನುಳ್ಳ ಮಾನವ ಕಲ್ಯಾಣದ ಸಂಸ್ಕೃತಿಯನ್ನು ಪದಗಳು ಒಳಗೊಂಡಿವೆ. ಅನೇಕ ಸಮಸ್ಯೆಗಳಿಗೆ ಮುಖಾಮುಖಿಯಾಗಿ ಸ್ಪಂದಿಸುವ ಜೀವಗುಣದ ಧೈರ್ಯವನ್ನು ಮತ್ತು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಜಾಣ್ಮೆಯನ್ನು ಕಾಣಬಹುದಾಗಿದೆ. ಬ್ರಿಟಿಷ್ ಸರಕಾರದಿಂದ ಆಧುನಿಕರಣಕ್ಕೆ ಒಳಗಾಗುತ್ತಿರುವ ದೇಶದ ಸಂಸ್ಕೃತಿಗೆ ಸ್ಪಂದಿಸುತ್ತ ರಚಿತವಾದ ಶರೀಫರ ಪದಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ಅರ್ಥಪೂರ್ಣ ಒಡಂಬಡಿಕೆ ಮಾಡಿಕೊಳ್ಳುವ ಸಮಯಪ್ರಜ್ಞೆಯನ್ನು ಗುರುತಿಸಲಾಗಿದೆ. ಅಲ್ಲದೆ, ವೈಜ್ಞಾನಿಕ ಮತ್ತು ವೈಚಾರಿಕ ಹಿನ್ನೆಲೆಯಲ್ಲಿ ಒಳಗೊಂಡ ವಸ್ತು ವಿಷಯಗಳನ್ನು ಪುರಸ್ಕರಿಸುತ್ತ ಸಾಮಾನ್ಯರಲ್ಲಿ ವಿಚಾರ ಶಕ್ತಿಯನ್ನು, ದೈವಶಕ್ತಿಯನ್ನು ಶರೀಫರ ಸಾಹಿತ್ಯ ಉಂಟು ಮಾಡಿರುವುದನ್ನು ಕಾಣುತ್ತೇವೆ.

ಅಧ್ಯಾತ್ಮ, ಧರ್ಮ, ನೀತಿ, ಸಂಸ್ಕೃತಿ ಮತ್ತು ವೈಚಾರಿಕತೆ ಮನುಷ್ಯನ ಧ್ಯೇಯವಾಗಿರುವುದರಿಂದ ಅದು ಪ್ರಾಪ್ತವಾಗಬಲ್ಲ ಸಾಧನವನ್ನು ಕುರಿತು ಶರೀಫರು ತಮ್ಮ ತತ್ತ್ವಪದಗಳಲ್ಲಿ ಚಿಂತಿಸಿದ್ದಾರೆ. ಅಧ್ಯಾತ್ಮದ ಎತ್ತರಕ್ಕೇರಲು ಮನುಷ್ಯನ ಮನುಷ್ಯತ್ವವನ್ನು ಸಿದ್ಧ ಮಾಡಿ, ಅವನನ್ನು ದೇವಪದವಿಗೆ ಮುಟ್ಟಿಸಲು ಬೇಕಾಗುವ ಪೂರ್ವ ಸಿದ್ಧತೆಯ ಹಂತಗಳನ್ನು, ಅಸ್ವಾದಪೂರ್ಣ ಅನುಭಾವವನ್ನು ಶರೀಫರ ಪದಗಳಲ್ಲಿ ಗುರುತಿಸಬಹುದಾಗಿದೆ. ಭಕ್ತಿಯ ಪರಾಕಾಷ್ಠೆಯು ಅನುಭಾವವಾಗಿ, ಭಕ್ತಿಯ ಕಾತುರತೆ, ಭಗವಂತನನ್ನು ಕುರಿತ ಪ್ರಾರ್ಥನೆ, ಸತಿಭಾವ, ಭಕ್ತನ ಅಂತರಂಗದ ಕಳವಳ, ಒಳಗುದಿ, ವಿರಹ, ಜೀವನ ಅನಿತ್ಯತೆ, ಮುಕ್ತಿಯ ಹಂಬಲ, ದೇವರನ್ನು ಸೇರುವ ಉತ್ಕಟಭಾವವನ್ನು ಶರೀಫರ ಭಕ್ತಿಕಾವ್ಯ ಒಳಗೊಂಡಿದೆ.

ಭಕ್ತಿ ಸಾಹಿತ್ಯದಲ್ಲಿ 'ಆತ್ಮಶೋಧನೆ'ಯು ಬಹುಮುಖ್ಯವಾಗಿರುವುದರಿಂದ, ಶರೀಫರು ಸಮಾಜ ವಿಮರ್ಶೆಯ ಜೊತೆಗೆ ಸ್ವವಿಮರ್ಶೆಯನ್ನು ಮಾಡಿಕೊಳ್ಳುತ್ತ, ಆತ್ಮಶೋಧನೆ ಮಾಡಿಕೊಳ್ಳುವುದನ್ನು ಕಾಣುತ್ತೇವೆ.

ಆತ್ಮಜ್ಞಾನವು ವಿಶ್ವಜೀವನದ ಪ್ರತಿಯೊಂದು ಬಗೆಯ ಜ್ಞಾನವನ್ನು ಒಳಗೊಂಡಿರುವುದನ್ನು ಶರಿಫರು ತಮ್ಮ ಪದಗಳಲ್ಲಿ ಹೇಳಿದ ಬಗೆ ವಿಶಿಷ್ಟವಾದುದು. ಶರಿಫರ ಭಕ್ತಿ ಕೇವಲ ಭಾವನೆಯ ಆವೇಶವಾಗದೇ, ಭಾವಾವೇಶದೊಡನೆ ತತ್ತ್ವಚಿಂತನೆಯ ಜ್ಞಾನಮಾರ್ಗವೂ, ಲೋಕಹಿತಾಸಕ್ತಿಯ ಕರ್ಮಮಾರ್ಗವು ಆಗಿರುವುದನ್ನು ಕಾಣುತ್ತೇವೆ.

ಶರೀಫರ ಅಧ್ಯಾತ್ಮ ಮಾರ್ಗದಲ್ಲಿ ಗುರುಕೃಪೆಯನ್ನು ಅವರ ಪದಗಳ ಉದ್ದಕ್ಕೂ ಕಾಣಬಹುದಾಗಿದೆ. ಗುರುವನ್ನು ಅಧ್ಯಾತ್ಮಿಕ ಗಂಡನನ್ನಾಗಿ ಸ್ವೀಕರಿಸಿ, ಮುತ್ತಿನ ಮೂಗುತಿ ಧರಿಸಿದುದನ್ನು ಹೇಳುವ ಪದಗಳಲ್ಲಿ ಶರೀಫರ ಸತಿಭಾವ ಎದ್ದು ಕಾಣುತ್ತದೆ. ಗುರುಕಾರುಣ್ಯದಿಂದಲೇ ಮುಕ್ತಿ ಪಡೆದುದನ್ನು ಅವರ ಪದಗಳು ತಿಳಿಸುತ್ತವೆ.

ಶರೀಫರು ಯಾವುದೇ ವಂಶ, ಜಾತಿ ಮತ್ತು ಜನಾಂಗಕ್ಕೆ ನಿಷ್ಠೆಯನ್ನು ತೋರಿಸುವುದಿಲ್ಲ. ಅವರ ಶ್ರದ್ಧಾನಿಷ್ಠೆಗಳು ಆತ್ಮ ಜೀವನಕ್ಕೆ ಮೀಸಲು. ಅವರು ಸರ್ವಮಾನವರನ್ನು ಸರ್ವಸಮುದಾಯಗಳನ್ನು ಸಮತಾದೃಷ್ಟಿಯಿಂದ ನೋಡುವುದನ್ನು ಕಾಣುತ್ತೇವೆ.

ಯಾವ ಮತದ ನೆರಳನ್ನು ಅವಲಂಬಿಸದೇ ಎಲ್ಲ ಮತದ ಸಾರಗ್ರಾಹಿಯಾಗಿ, ಪರಮ ಭಕ್ತರಾಗಿ ಸಾಮಾನ್ಯ ಮನುಷ್ಯರು ಸಹ ಸರಳ ಸೂತ್ರಗಳನ್ನು, ಬದುಕಿನ ಅಂತರಾಳವನ್ನು, ಜೀವನದ ಮೌಲ್ಯಗಳನ್ನು ತಿಳಿದುಕೊಂಡು ಎಷ್ಟು ವಿಶಾಲವಾಗಿ, ಎತ್ತರವಾಗಿ ತಮ್ಮ ಜೀವಿತದ ಅವಧಿಯಲ್ಲಿ ಬೆಳೆಯಬಹುದೆಂಬ ವೈಚಾರಿಕತೆಯನ್ನು ಶರೀಫರು ತಮ್ಮ ಪದಗಳಲ್ಲಿ ತೋರಿಸಿಕೊಟ್ಟಿದ್ದನ್ನು ಕಾಣಬಹುದಾಗಿದೆ. ವೈಚಾರಿಕ ನೆಲೆಗಟ್ಟಿನ ಮೇಲೆ ಮಾನವನ ಚಾರಿತ್ರ್ಯವನ್ನು ಪ್ರಶ್ನಿಸಿ ಪ್ರತಿಕ್ರಮಿಸಿ ನಿರ್ದೇಶಿಸುವ ಶರೀಫರ ತತ್ತ್ವಪದಗಳಲ್ಲಿ ಅತ್ಯುತ್ತಮ ಜೀವನಾದರ್ಶಗಳನ್ನು, ಮೌಲ್ಯಗಳನ್ನು ವಿವೇಚಿಸಲಾಗಿದೆ. ಸರಳ ರೂಪದಲ್ಲಿ ಅಭಿವ್ಯಕ್ತಿಗೊಳ್ಳುವ ಅಧ್ಯಾತ್ಮದಲ್ಲಿ ಅತ್ಯುತ್ತಮ ರೂಪದ ಸಂಸ್ಕೃತಿಯನ್ನು ಗುರುತಿಸಲಾಗಿದೆ.

ಭಾವ-ಭಾಷೆ, ವಸ್ತು, ಶೈಲಿ ತತ್ತ್ವಗಳ ದೃಷ್ಟಿಯಿಂದ ದೇಶಿ ಸಾಹಿತ್ಯವಾದರೂ ಶ್ರೇಷ್ಠ ಸಾಹಿತ್ಯವಾಗಿದೆ. ಶರೀಫರು ತಮ್ಮ ತತ್ತ್ವಪದಗಳಲ್ಲಿ ಜನಪರಿಚಿತವಾದ ವಸ್ತು ವಿಷಯ, ಕಥೆ, ಬೆಡಗು, ಉಪಮೆ, ರೂಪಕ, ದೃಷ್ಟಾಂತ, ಪ್ರತೀಕ, ಪ್ರತಿಮೆ, ಛಂದಸ್ಸು,

ಪ್ರಾಸ, ಲಯ ಮೊದಲಾದ ಸಾಹಿತ್ಯಕ ಅಂಶಗಳನ್ನು ಬಳಸಿಕೊಂಡು ತಮಗಿರುವ ಅಪಾರವಾದ ಲೌಕಿಕಾನುಭವವನ್ನು ಪಾರಮಾರ್ಥಿಕವಾಗಿಸಿ ಸಾಮಾನ್ಯರ ಹೃದಯಕ್ಕೆ ಮುಟ್ಟುವ ರೀತಿಯಲ್ಲಿ ಹೇಳಿದುದನ್ನು ಕಾಣುತ್ತೇವೆ. ಬಾಹ್ಯ ಪ್ರಪಂಚದ ಸೌಂದರ್ಯದ ಮೂಲಕ ಅಂತರಂಗದ ಆತ್ಮ ಸೌಂದರ್ಯವನ್ನು ಕಂಡುಕೊಳ್ಳುವ ಬಗೆಯನ್ನು ವಿವೇಚಿಸಲಾಗಿದೆ. ತಮ್ಮ ಪರಿಸರದಲ್ಲಿ ಕಂಡು ಅನುಭವಿಸಿದ ಸತ್ಯವನ್ನು ಭಾಷಿಕ ಮತ್ತು ಸಾಹಿತ್ಯಕ ಅಂಶಗಳ ಮೂಲಕ ತತ್ತ್ವಪದ ರೂಪದಲ್ಲಿ ನಿರೂಪಿಸಿದರು. ಸಂಪ್ರದಾಯಿಕ ಅಲಂಕಾರಿಕ ಅರ್ಥದಲ್ಲಿ ಶರೀಫರು ಕವಿ ಎನಿಸದೇ, ಸಂದರ್ಭಾನುಸಾರವಾಗಿ ಅನುಭವ ಪಡೆದು ಹಾಡಿದ ಆಶುಕವಿಗಳು. ಭಾವನೆಗಳನ್ನು ಸಶಕ್ತವಾದ ಪ್ರತೀಕಗಳ ಮೂಲಕ ಪ್ರತಿಕ್ರಮಿಸುವ ಅವರ ತತ್ತ್ವಪದದ ಅನನ್ಯ ವಿಧಾನವನ್ನು ವಿಶ್ಲೇಷಿಸಿದೆ.

ಕಾಲ, ಮೃತ್ಯು, ಕರ್ಮ, ಪ್ರಕೃತಿ ಮುಂತಾದ ಗಹನ ತತ್ತ್ವಗಳನ್ನು ವಿವರಿಸುವಾಗಲೂ ಕವಿ ಸಹಜವಾದ ಪ್ರತೀಕ ವಿಧಾನಗಳನ್ನು ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಲೌಕಿಕ ಸನ್ನಿವೇಶಗಳನ್ನೋ, ಘಟನೆಯನ್ನೋ, ರೂಪಕವಾಗಿಯೋ, ಪ್ರತೀಕ ಅಥವಾ ಪ್ರತಿಮೆಯನ್ನಾಗಿಸಿ ಸುಲಭ ಸಾಧ್ಯವಾದ ಪಾರಮಾರ್ಥಿಕದಲ್ಲಿ ನೆಲೆಗೊಳ್ಳುವುದನ್ನು ಕಾಣುತ್ತೇವೆ. ಹೊಲ, ಹಕ್ಕಿ, ಪ್ರಾಣಿ, ಹೂ, ಹಣ್ಣು, ಹೆಣ್ಣು, ಸಂತೆ, ಜಾತ್ರೆ, ಹಬ್ಬ, ಹರಿದಿನ ಮುಂತಾದ ಉಪದಾನಗಳ ಮೂಲಕ ಗಾಢವಾದ, ಗೂಢವಾದ ಅರ್ಥವಲಯಗಳನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ಸಂತೆ ಪ್ರತೀಕದ ಮೂಲಕ ಸಂಸಾರವನ್ನು ಪಕ್ಷಿ ಪ್ರಾಣಿಗಳ ಮೂಲಕ ಮನುಷ್ಯ ಸ್ವಭಾವ ಮತ್ತು ಜೀವನತತ್ತ್ವಗಳನ್ನು ಸಿದ್ಧಿಸುವ ಪ್ರತೀಕಗಳನ್ನು ಅಭ್ಯಸಿಸಲಾಗಿದೆ. ರಾಮಾಯಣ ಮತ್ತು ಮಹಾಭಾರತಗಳಲ್ಲಿ ನಡೆದ ನ್ಯಾಯ-ಅನ್ಯಾಯ, ಸತ್ಯ-ಅಸತ್ಯದ, ಧರ್ಮ ಅಧರ್ಮದ ನಡುವಿನ ಹೋರಾಟವನ್ನು ಕರ್ಬಾಲಾ ಕದನದೊಂದಿಗೆ ಸಮೀಕರಿಸುತ್ತ ಮೊಹರಮ್ ನೀತಿ ಪದಗಳನ್ನು ಹಾಡಿದ್ದಾರೆ. ಈ ನೀತಿ ಪದಗಳು ಶರೀಫರ ರಿವಾಯತ್ ರಚನೆಗಳಾಗಿ ಹಿಂದೂ-ಮುಸ್ಲಿಂ ಸಂಸ್ಕೃತಿಯ ಬೆಸುಗೆಯನ್ನು ಸಂಕೇತಿಸುವ ವೈಶಿಷ್ಟ್ಯ ಹೊಂದಿದನ್ನು ಕಾಣಲಾಗಿದೆ.

ತತ್ತ್ವಪದ, ದಂಡಕ, ಕಾಲಜ್ಞಾನ, ಲಾವಣಿ, ಹೋಳಿಪದ, ರಿವಾಯತ್, ಮಂಗಳಾರತಿ ಈ ಎಲ್ಲ ಪ್ರಕಾರಗಳು ಜಾನಪದ ಕಾವ್ಯ ಪ್ರಕಾರಗಳು. ಇವುಗಳಲ್ಲಿಯ ಜಾನಪದೀಯ ಅಂಶಗಳನ್ನು ಅಭ್ಯಸಿಸಲಾಗಿದೆ. ವಸ್ತು, ಸಂಗತಿಗಳ ಸರ್ವಮುಖಿಗಳನ್ನು ತೆರೆದು ಅವುಗಳಿಂದಲೇ ದಿವ್ಯ ಪರಮಾರ್ಥಕತೆಯನ್ನು ತೋರಿಸುವ ಕವಿಯ ಅಭಿವ್ಯಕ್ತಿ ವಿಧಾನವನ್ನು ವಿವೇಚಿಸಲಾಗಿದೆ.

ಸಾಮಾನ್ಯವಾಗಿ ತತ್ತ್ವಪದಗಳಲ್ಲಿ ಛಂದೋಬಂಧದ ಪದಗಳು ಬೆಸ ಸಂಖ್ಯೆಯಲ್ಲಿ ಜೋಡಿಸಲ್ಪಟ್ಟಿರುತ್ತವೆ. ಗೇಯಪ್ರಧಾನವಾದ ಈ ಪದಗಳನ್ನು ಸಂಗೀತ ವಾದ್ಯದೊಂದಿಗೆ ಹಾಡುವುದನ್ನು ಕಾಣುತ್ತೇವೆ. ಏಳೆ, ತ್ರಿಪದಿ, ಉತ್ಸಾಹ, ಛಂದೋವಸಂತ, ಅಕ್ಕರಿಕೆ, ಅಕ್ಕರ, ಗೀತಿಕೆ, ಚೌಪದಿ, ಷಟ್ಪದಿ ಮುಂತಾದ ಬಂಧಗಳನ್ನು ಪದಗಳಲ್ಲಿ ಕಾಣುತ್ತೇವೆ.

ಶರೀಫರ ಪದಗಳಲ್ಲಿ ವಿರೋದಾಭಾಸ, ವಿವರಣಾತ್ಮಕ ರೂಪಕ ಮತ್ತು ಅನ್ಯೋಕ್ತಿ ಇವುಗಳನ್ನು ಅಭಿವ್ಯಕ್ತಿಯ ಮಾರ್ಗಗಳಾಗಿ ಕಾಣುತ್ತೇವೆ. ಶರೀಫರ ಸಾಹಿತ್ಯದಲ್ಲಿಯ ಬೆಡಗು ಮನರಂಜನೆಯ ಜೊತೆಗೆ ಗಹನವಾದ ತತ್ತ್ವ ಹೊಂದಿರುವುದನ್ನು ಅಭ್ಯಸಿಸಲಾಗಿದೆ. ಆಧುನಿಕತೆಯಿಂದ ಉಂಟಾದ ವಾಸ್ತವಿಕ ಬದಲಾವಣೆಗಳನ್ನು ನೂಲಿನ ಗಿರಣಿ, ಸರ್ಕಾರಿ ಶಾಲೆ, ಸೂಜಿ ಮುಂತಾದ ರೂಪಕ ಬಳಸಿ ಆಧುನಿಕತೆಗೆ ಪ್ರತಿಕ್ರಿಯಿಸಿದ್ದನ್ನು ಶರೀಫರ ತತ್ತ್ವಪದಗಳಲ್ಲಿ ಕಾಣುತ್ತೇವೆ.

ಶರೀಫರು ಕವಿ, ಸಂತ ಹಾಗೂ ತತ್ತ್ವಜ್ಞಾನಿಗಿಂತ ಮುಖ್ಯವಾಗಿ ಮಾನವತಾ ವಾದಿಗಳು. ವಚನಕಾರರಂತೆ, ಹರಿದಾಸರಂತೆ ಧಾರ್ಮಿಕ ನೆಲೆಯಲ್ಲಿ ನೆಲೆ ನಿಲ್ಲದೆ ಧರ್ಮಾತೀತರಾದ ಶರೀಫರ ಪದಗಳಲ್ಲಿ ಪ್ರಸ್ತುತ ಸಮಸ್ಯೆಗಳಿಗೆಲ್ಲಾ ಸ್ಪಂದಿಸಿ, ಪರಿಹಾರೋಪಾಯವನ್ನು ಕಂಡುಕೊಳ್ಳುವ ಚಿಂತನೆಗಳಿವೆ.

ವ್ಯಕ್ತಿ ಮತ್ತು ಸಮಷ್ಟಿ ಪ್ರಗತಿ ಸಾಧಿಸುತ್ತ ಬಂದ ಶರೀಫರ ಪದಗಳಲ್ಲಿ ನೀತಿಯು ಮುಖ್ಯವಾಗಿ ಸಾಮೂಹಿಕ ಕಲ್ಯಾಣವನ್ನು ಹೊಂದಿದೆ. ನೀತಿವಂತರ ಆಚಾರಕ್ಕೆ ಅರಿವೇ ಗುರು. ಅರಿವಿಲ್ಲದ ಆಚಾರಕ್ಕೆ ಬೆಲೆ ಇಲ್ಲ. ಅರಿವಿದ್ದೂ ಆಚಾರವಿಲ್ಲ ದಿದ್ದರೆ ಅದು ಗೊಡ್ಡು ವೇದಾಂತವಾದ್ದರಿಂದ ನೀತಿಯಿಂದ ಆಚಾರ ಸಂಪನ್ನರಾಗಿ ಬಾಳಬೇಕೆಂಬುದು ಶರೀಫರ ಮೂಲ ಧ್ಯೇಯವಾಗಿದೆ.

ಶರೀಫರ ಇಂತಹ ಧ್ಯೇಯ ಧೋರಣೆಗಳು ಮಾನವನ ಆತ್ಮಗೌರವವನ್ನು ಹೆಚ್ಚಿಸಿ ಪ್ರಸ್ತುತ ಸಮಾಜದಲ್ಲಿ ಘನತೆಯಿಂದ ಬಾಳಲು ಪ್ರೇರಕ ಶಕ್ತಿಯಾಗಿರುವುದನ್ನು ಕಾಣುತ್ತೇವೆ.

ವಿಶ್ವದಾದ್ಯಂತ ಹರಡಿರುವ ಅನೇಕ ಜ್ವಲಂತ ಸಮಸ್ಯೆಗಳನ್ನು ಎದುರಿಸಲು ಶರೀಫರ ಪದಗಳು ನೈತಿಕ ಧೈರ್ಯವನ್ನು ತುಂಬುವುದಲ್ಲದೆ ಜೀವನ ಸಾಧನೆ ಮತ್ತು ಸಾರ್ಥಕತೆಗೆ ಮಾರ್ಗದರ್ಶನವನ್ನು ನೀಡುತ್ತವೆ. ವ್ಯಕ್ತಿಯ ಅಧಃಪತನದ ಜೊತೆಗೆ ಸಮಾಜದ ಪ್ರಗತಿಗೆ ಕಂಟಕವಾಗುವ, ಜಾತೀಯತೆ, ಡಾಂಭಿಕತೆ,

ಶೋಷಣೆಗಳು, ಸಾಮಾಜಿಕ ಗೌರವಕ್ಕೆ ಕುಂದುತರುವ ಸಮಸ್ಯೆಗಳಾದ ಕುಡಿತ, ಸ್ತ್ರೀಶೋಷಣೆಗಳಂತಹ ಪ್ರಸ್ತುತ ಸಮಸ್ಯೆಗಳಿಗೆ ಶರೀಫರ ಪದಗಳಲ್ಲಿ ಪರಿಹಾರವಿದೆ. ನಿರುದ್ಯೋಗ, ಬಡತನದಂತಹ ಪರಿಸ್ಥಿತಿಯಲ್ಲಿ ಹುಟ್ಟಿಕೊಳ್ಳುವ ಹಲವಾರು ಸಮಸ್ಯೆಗಳಾದ ಕಳ್ಳತನ, ಮೋಸ, ದರೋಡೆ, ಕೊಲೆ ಸುಲಿಗೆಯಂತಹ ಕೃತ್ಯಗಳನ್ನು ವಿರೋಧಿಸುವ ಶರೀಫರ ಪದಗಳು ಬದುಕಿನಲ್ಲಿ ಪ್ರಾಮಾಣಿಕತೆ, ನೈತಿಕತೆ, ಸ್ವಾಭಿಮಾನ ಮತ್ತು ಕರ್ತವ್ಯ ಪ್ರಜ್ಞೆಯನ್ನು ತುಂಬುತ್ತಾ ವ್ಯಕ್ತಿವ್ಯಕ್ತಿಯಲ್ಲಿ ಮೌಲ್ಯಗಳನ್ನು ಬೆಳೆಸುವ ಸಂದೇಶವನ್ನು ಹೊಂದಿವೆ.

ವೈಚಾರಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಅವೈಚಾರಿಕ ಧಾರ್ಮಿಕ ಅಂಧಶ್ರದ್ಧೆ, ಮೂಢನಂಬಿಕೆಗಳು ಅರ್ಥವಿಲ್ಲದ ಸಂಪ್ರದಾಯಗಳನ್ನು ವಿರೋಧಿಸುವ ದೇಶಿ ನೆಲೆಗಟ್ಟಿನ ಪದಗಳು ವೈಜ್ಞಾನಿಕ ಮತ್ತು ವೈಚಾರಿಕತೆಯಲ್ಲಿ ನೆಲೆ ನಿಲ್ಲಿಸುವ ಗಟ್ಟಿಬೇರುಗಳಾಗಿವೆ.

ಧಾರ್ಮಿಕ ಸಂಕುಚಿತತೆಯಿಂದ ಭುಗಿಲೆದ್ದ ಭಯೋತ್ಪಾದನೆ, ಕೋಮು ಗಲಭೆಗಳಂತಹ ಸಮಸ್ಯೆಗಳಿಂದ ಜನಸಾಮಾನ್ಯರಿಗೆ ಸಾಮಾಜಿಕ ಭದ್ರತೆ ತಪ್ಪಿ ಹೋಗಿ, ಭಯ ಆತಂಕಗಳಲ್ಲಿ ನರಳುತ್ತಿರುವ ಪ್ರಸ್ತುತ ಸಮಾಜಕ್ಕೆ ಶರೀಫರ ಪದಗಳು ಸಾಂತ್ವನ ನೀಡುತ್ತವೆ.

ರಾಮ-ರಹೀಮ ಒಂದೇ ಎನ್ನುವ ಶರೀಫರು ತಮ್ಮ ಪದಗಳಲ್ಲಿ ರಾಮಜನ್ಮ ಭೂಮಿ ವಿವಾದ, ಬಾಬ್ರಿ ಮಸೀದಿಯಂತಹ ಸಮಸ್ಯೆಗಳಿಗೆ ಪರಿಹಾರೋಪಾಯ ನೀಡುವುದರ ಜೊತೆಗೆ ಮಾನವೀಯ ಧರ್ಮವನ್ನು ಬೋಧಿಸುವ ಸೌಹಾರ್ದತೆಯನ್ನು ಅರುಹಿದ್ದಾರೆ.

ಪಾಶ್ಚಾತ್ಯೀಕರಣ, ಜಾಗತೀಕರಣ ಮತ್ತು ಔದ್ಯೋಗೀಕರಣಗಳಿಂದಾಗಿ ಮಾನವನ ಜೀವನ ಶೈಲಿಯಲ್ಲಿ, ಸ್ವಭಾವ ವರ್ತನೆಯಲ್ಲಿ ಆಗುತ್ತಿರುವ ಏರುಪೇರಿನಿಂದಾಗಿ ನಾಡಿನ ಸಂಸ್ಕೃತಿಯು ಸಡಿಲಗೊಳ್ಳುತ್ತಿದೆ. ಪರಂಪರಾಗತವಾದ ಮೌಲ್ಯಗಳು ಅಪಮೌಲ್ಯಗೊಳ್ಳುತ್ತಿವೆ. ಚೇತನಶೀಲವಾದ ದೇಶಿ ಸಂಸ್ಕೃತಿ ನಶಿಸಿ ಹೋಗುತ್ತಿದೆ.


ಸಮಾಜದ ರಾಜಕೀಯ ಹಾಗೂ ಆರ್ಥಿಕ ಜೀವನ ಆಧ್ಯಾತ್ಮಿಕದಿಂದಲೇ ಸ್ಫೂರ್ತಿಯನ್ನು ಪಡೆಯಬೇಕು. ಪ್ರಕೃತಿದತ್ತವಾದ ಶಕ್ತಿಯನ್ನು ಶ್ರೇಯಸ್ಸಿಗಾಗಿ ಬಳಸಿಕೊಳ್ಳಲು ಸರ್ವರಿಗೂ ಸಮಾನ ಅವಕಾಶವಿದೆ ಎಂಬುದನ್ನು ತತ್ತ್ವಪದಗಳಲ್ಲಿ ಹೇಳಿದ್ದಾರೆ. ಮಾನವನ ಘನತೆ ಸಮಾಜದ ಅವಶ್ಯಕತೆಗೆ ತಕ್ಕಂತೆ ಕುಂಠಿತವಾಗ

ತಕ್ಕದ್ದಲ್ಲ. ತನ್ನ ಆತ್ಮನಷ್ಟವನ್ನು ಮಾಡಿಕೊಂಡು ಇಡೀ ಜಗತ್ತನ್ನು ಗಳಿಸಿದರೂ ಪ್ರಯೋಜನವಿಲ್ಲವೆಂದು ಪದಗಳಲ್ಲಿ ಹೇಳಿದ್ದಾರೆ.

ಪ್ರಸ್ತುತ ಜಾಗತಿಕ ಸಮಸ್ಯೆಗಳಿಗೆಲ್ಲಾ ಶಾಶ್ವತ ಪರಿಹಾರವನ್ನು ತನ್ನ ಗರ್ಭದಲ್ಲಿರಿಸಿಕೊಂಡ ಶರೀಫರ ಪದಗಳು ಪ್ರಾದೇಶಿಕ ಭಾಷಾ ತೊಡಕಿನಿಂದಾಗಿ ಸರಳಗ್ರಾಹ್ಯವಲ್ಲದ ಬೆಡಗಿನ ಅಧ್ಯಾತ್ಮಿಕ ಸಂಕೇತಗಳಿಂದಾಗಿ ಸುಲಭವಾಗಿ ಪ್ರಸಾರವಾಗದಿರಲು ಕಾರಣವಾಗಿದೆ. ಸಾಹಿತ್ಯಾಸಕ್ತರು ಶರೀಫರನ್ನು ಈ ತೊಡಕಿನಿಂದ ಬೇರ್ಪಡಿಸಿ ಅವರ ಪದಗಳು ಜಾಗತಿಕ ಮಟ್ಟದಲ್ಲಿ ಚರ್ಚಿತವಾಗುವಂತೆ ದುಡಿಯಬೇಕಾಗಿದೆ.

ಕ್ರೈಸ್ತ, ಪೈಗಂಬರ, ಬುದ್ಧ, ಬಸವ, ಕಬೀರ, ದಾಸರಂತಹ ಮಹಾಚೇತನ ಶಕ್ತಿಯಾದ ಶರೀಫರು ತಮ್ಮ ಪದಗಳಿಂದ ವ್ಯಕ್ತಿಶಕ್ತಿಯಾಗಿರದೆ ಸರ್ವಾಂತರಗಾಮಿ ಶಕ್ತಿಯಾಗಿದ್ದಾರೆ. ಶರೀಫರು ಒಂದು ಕೋಮಿಗೆ ಅಥವಾ ಧರ್ಮಕ್ಕೆ ಸೇರಿದ ವ್ಯಕ್ತಿಯಾಗಿರದೆ ಜಾತಿ-ಮತ ಮೀರಿನಿಂತ ಮಾನವತಾಶಕ್ತಿಯಾಗಿದ್ದಾರೆ. ಬದುಕಿನ ಮೌಲ್ಯವನ್ನು ಬಹಿರಂಗಗೊಳಿಸುವ ಮಾರ್ಗದರ್ಶನಾಶಕ್ತಿಯಾಗಿದ್ದಾರೆ. ಪರಮಾತ್ಮನಲ್ಲಿ ಒಂದಾಗಿಸುವ- ಪಾರಮಾರ್ಥಿಕಶಕ್ತಿ, ಅಮೂಲ್ಯವಾದ ವಿಶಿಷ್ಟವಾದ ಪದಗಳ ರಚನೆಯಿಂದ- ಸಾಹಿತ್ಯಕಶಕ್ತಿಯಾಗಿ, ತನ್ನ ಕಾಲದ ಎಲ್ಲ ಧರ್ಮಗಳ ಆಚರಣೆ, ಹಬ್ಬ ಸಡಗರ, ಮದುವೆ, ಜಾತ್ರೆ ಮುಂತಾದ ಆಗುಹೋಗುಗಳಿಗೆ ಪ್ರತ್ಯಕ್ಷ ಸನ್ನಿವೇಶಗಳ ಅಭಿವ್ಯಕ್ತಿಯಿಂದಾಗಿ ಸಾಂಸ್ಕೃತಿಕ ಶಕ್ತಿಯಾಗಿ ಹೀಗೆ ಸರ್ವತೋಮುಖ ಶಕ್ತಿಯಾಗಿ ಕಾಲದಿಂದ ಕಾಲಕ್ಕೆ ಪದಗಳ ಮುಖಾಂತರ ಪ್ರವಹಿಸುತ್ತಿರುವ ಕೋಮು ಸೌಹಾರ್ದತೆಯ ಶಕ್ತಿಯಾಗಿರುವುದನ್ನು ಪದಗಳಲ್ಲಿ ಕಂಡುಕೊಳ್ಳಲಾಗಿದೆ. ಅವರ ಪದಗಳ ಚಿಂತನೆಗಳು ಸಾಮೂಹಿಕ ಚಿಂತನದ ಅಭಿವ್ಯಕ್ತಿಗಳಾಗಿ ಸತ್ಯವನ್ನು ತೋರಿಸುವ ಗುರಿ ಹೊಂದಿದ್ದನ್ನು ಕಾಣುತ್ತೇವೆ.

ಆಧುನಿಕರಣದ ಮೋಹ, ಆಡಂಬರದ ನಟನೆ, ಮತಧರ್ಮ, ಕೋಮುಗಳ ಕಿತ್ತಾಟದಲ್ಲಿ ತನ್ನತನವನ್ನು ಕಳೆದುಕೊಳ್ಳುತ್ತಿರುವ ಇಂದಿನ ಸಮಾಜಕ್ಕೆ ಜಾತ್ಯತೀತ ನಿಲುವಿನ ಪ್ರೇಮಭಾವ ತತ್ತ್ವದ, ವಿಶ್ವಮಾನವನ ಆದರ್ಶದ ದಾರಿಯನ್ನು ಶರೀಫರ ಪದಗಳಲ್ಲಿ ಕಾಣುತ್ತೇವೆ.




ಶಿಶುನಾಳ ಶರೀಫಗಿರಿ







ಕಳಸದ ಗುರುಗೋವಿಂದಭಟ್ಟರ ಸಮಾಧಿ


(ಅರ್ಚಕ ಶ್ರೀಪಾದ- ಇವರು ಕಳಸದ ಗೋವಿಂದಭಟ್ಟರ ಸೋದರನಾದ ಬಂಡಿಭಟ್ಟರ ಮರಿಮೊಮ್ಮಗ)






ಗುರು ಗೋವಿಂದ ಮತ್ತು ಶರೀಫರ ಬೇಡಿಕೆಯ ಮೇರೆಗೆ ಕುಲಕರ್ಣಿಯವರು ತಮ್ಮ ಮನೆಯ ಈ ಗೂಡಿನಲ್ಲಿ ಪ್ರತಿದಿನ ನಾಲ್ಕಾಣೆಯನ್ನು ಇಡುತ್ತಿದ್ದರು.






ಚಿಕ್ಕನರ್ತಿ ಶರೀಫರ ಶಿಷ್ಯ
ಗುರುಪಾದಪ್ಪನ ಸಮಾಧಿ ಪಕ್ಕದಲ್ಲಿ ಶರೀಫರ ಗದ್ದುಗೆ




ಅಂದಿನ ಶಿಶುನಾಳ ಶರೀಫ ಗಿರಿಯ ಟ್ರಸ್ಟಿನ ಅಧ್ಯಕ್ಷರಾದಂತಹ ಡಾ. ಬೆಟ್ಟದೂರರ ಜೊತೆ



ಗೂಡಗೇರಿ ದ್ಯಾಮವ್ವ ದೇವಿಯ ಗರ್ಭಗುಡಿಯಲ್ಲಿಕರುವ ದೇವಿ– ಶರೀಫರಿಗೆ






ಶಿಶುನಾಳ ಶರೀಫರ ಛಾಯಾಚಿತ್ರ ಹಾಗೂ ಅವರ ಸಹಿ



ಕಳಸದ ಗುರುಗೋವಿಂದಭಟ್ಟರು



ಎಡದಿಂದ ಬಲಕ್ಕೆ ೧. ನಗರದ ಮಡಿವಾಳಪ್ಪ ಸ್ವಾಮಿಗಳು, ೨. ಹೊಸಳ್ಳಿಯ ಬೂದಿಸ್ವಾಮಿಗಳು, ೩. ಆದಿ ಸಿದ್ಧರು, ೪. ಬನಹಟ್ಟಿಯ ರುದ್ರಸ್ವಾಮಿಗಳು, ೫. ಸಿದ್ಧಾರೂಢ ಸ್ವಾಮಿಗಳು, ೬. ಆದಿಕೇಶವರು, ೭. ನವಲಗುಂದ ನಾಗಲಿಂಗಜ್ಜನವರು, ೮. ಶರೀಫ ಶಿವಯೋಗಿಗಳು, ೯. ಗೋವಿಂದಭಟ್ಟರು, ೧೦. ಉಗರಗೋಳ ನಿರ್ವಾಣಪ್ಪನವರು, ೧೧. ರೇವಣ್ಣ ಸಿದ್ದೇಶ್ವರ ಸ್ವಾಮಿಗಳು, ೧೨. ವೇದದಾಸರು,

ಡಾ. ಮಂಜುಳಾ ಮಲ್ಹಾರಿಯವರ ಕೃತಿ 'ಬೋಧ ಒಂದೇ ಬ್ರಹ್ಮನಾದ ಒಂದೇ' ಶಿಶುನಾಳ ಷರೀಫರ ಬಗ್ಗೆ ರಚಿಸಿರುವ ವಿದ್ವತ್ಪೂರ್ಣವಾದ ಕೃತಿ. ಕಳೆದ ಮೂರು–ನಾಲ್ಕು ದಶಕಗಳ ಹಿಂದೆ ಉತ್ತರ ಕರ್ನಾಟಕ ಭಾಗದಲ್ಲಿ ಮಾತ್ರ ಪರಿಚಿತವಾಗಿದ್ದ ಷರೀಫರು ಕನ್ನಡದ ಸುಗಮ ಸಂಗೀತಗಾರರು ಇಡೀ ನಾಡಿಗೆ ಪರಿಚಯಿಸಲಾಗಿ ಇಂದು ಇಡೀ ಕರ್ನಾಟಕದಲ್ಲಿ ಪ್ರಸಿದ್ಧರಾಗಿದ್ದಾರೆ. ಮುಸ್ಲಿಮರಾಗಿ ಜನಿಸಿ, ಹಿಂದೂ ಮುಸ್ಲಿಮರಲ್ಲಿ ಭಾವೈಕ್ಯತೆಯನ್ನು ತೋರಿದ ಮಹಾನುಭಾವರು ಷರೀಫರು. ಈ ಕೃತಿಯಲ್ಲಿ ಲೇಖಕಿ ತತ್ವಪದಗಳ ಉಗಮದಿಂದ ಹಿಡಿದು ಅದು ಬೆಳೆದು ಬಂದ ರೀತಿಯನ್ನು ಸಮಗ್ರವಾಗಿ ಕಟ್ಟಿಕೊಟ್ಟಿದ್ದಾರೆ. ಷರೀಫರ ಜೀವನ ಚರಿತ್ರೆಯಲ್ಲದೆ ಅವರ ತತ್ವಪದಗಳಲ್ಲಿರುವ ಧಾರ್ಮಿಕ, ರಾಜಕೀಯ, ವಿಡಂಬನಾ ಪ್ರಜ್ಞೆಯ ಜೊತೆಗೆ ದೇವರು, ಭಕ್ತಿ ಬದುಕುಗಳನ್ನು ಸಮರ್ಥವಾಗಿ ಚಿತ್ರಿಸುವುದರ ಜೊತೆಗೆ ಷರೀಫರ ಕೃತಿಗಳಲ್ಲಿರುವ ಕಾವ್ಯಗುಣಗಳನ್ನು ಪರಿಚಯಿಸಿದ್ದಾರೆ. ಅವರ ಕಾವ್ಯದಲ್ಲಿರುವ ಅಲಂಕಾರ, ಛಂದಸ್ಸು, ಭಾವ, ಭಾಷೆ, ಶೈಲಿ ಹೀಗೆ ಷರೀಫರನ್ನು ಎಲ್ಲ ದಿಕ್ಕಿನಿಂದ ನೋಡುವ ಲೇಖಕಿಯ ಪ್ರಯತ್ನ ಅಭಿನಂದನೀಯ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ